"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕರ್ನಾಟಕ ವಿಧಾನ ಪರಿಷತ್ತು**

20ನೇ ಫೆಬ್ರವರಿ 2020
ಗುರುವಾರ

**ವಿಷಯಾನುಕ್ರಮಣಿಕೆ**

**1. ನಿಯಮ 330–ಎ ಅಡಿ ವಿಶೇಷ ಪ್ರಸ್ತಾವಗಳು**

**(ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಉದ್ಯೋಗಿಗಳನ್ನು ರಾಜ್ಯ ಸರ್ಕಾರಿ ನೌಕರರನ್ನಾಗಿ ಪರಿಗಣಿಸುವಂತೆ ಕೋರಿರುವ ಬಗ್ಗೆ.**

– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**(ಆ) ಬಿ.ಪಿ.ಎಲ್. ಕಾರ್ಡ್ ದಂಥೆ ಹೆಚ್ಚಾಗಿ ಅರ್ಹ ಫಲಾನುಭವಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ.**

– ಶ್ರೀ ಎಸ್.ಎಲ್.ಭೋಜೇಗೌಡ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**(ಇ) ಕೇರಳ ರಾಜ್ಯದಿಂದ ಜೈವಿಕ ವೈದ್ಯಕೀಯ ತ್ಯಾಜ್ಯವನ್ನು ಗಡಿ ಜಿಲ್ಲೆಯ ಹಲವು ತಾಲ್ಲೂಕುಗಳಲ್ಲಿನ ಸ್ಥಳಗಳಲ್ಲಿ ಸುರಿಯುತ್ತಿರುವ ಬಗ್ಗೆ.**

– ಶ್ರೀ ಕೆ.ಎ.ತಿಪ್ಪೇಸ್ವಾಮಿ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**(ಈ) ಪದವಿ ಪ್ರಾಧ್ಯಾಪಕರ ವೇತನ ಪಾವತಿಯಾಗದಿರುವ ಬಗ್ಗೆ.**

– ಶ್ರೀ ಶರಣಪ್ಪ ಮಟ್ಟೂರ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**(ಉ) ಮಲೆನಾಡು ಭಾಗದಲ್ಲಿ ಸಹಕಾರ ಸಂಚಾರ ಸಾರಿಗೆ ಸ್ಥಗಿತಗೊಂಡಿರುವ ಬಗ್ಗೆ.**

– ಡಾ॥ ಜಯಮಾಲ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**(ಊ) ಗುಲ್ಬರ್ಗಾ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯ ಯೋಜನೆ ಅಡಿಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ.**

– ಶ್ರೀ ತಿಪ್ಪಣ ಕಮಕನೂರ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಖ) ಉಪನೋಂದಣಾಧಿಕಾರಿಗಳ ಕಚೇರಿಗಳ ಗಣಕೀಕರಣ ಅವ್ಯವಸ್ಥೆಯಿಂದ ಅನಾನುಕೂಲಗಳಾಗಿರುವ ಬಗ್ಗೆ.**

– ಶ್ರೀ ಆರ್.ಬಿ.ತಿಮ್ಮಾಪೂರ

– ಶ್ರೀ ಆರ್.ಅಶೋಕ(ಕಂದಾಯ ಸಚಿವರು)

**2. <u>ವರದಿಯನ್ನೊಪ್ಪಿಸುವುದು</u>**

– ಶ್ರೀ ಎಂ.ನಾರಾಯಣಸ್ವಾಮಿ

**3. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ.**

**ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯ ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ.**

ಶ್ರೀ ಅಬ್ದುಲ್ ಜಬ್ಬಾರ್
ಶ್ರೀ ಸಿ.ಎಂ.ಇಬ್ರಾಹಿಂ
ಶ್ರೀ ಎಸ್.ಎಲ್.ಭೋಜೇಗೌಡ
ಶ್ರೀ ಪುಟ್ಟಣ್ಣ
ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
ಡಾ॥ ವೈ.ಎ.ನಾರಾಯಣಸ್ವಾಮಿ
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
ಡಾ॥ಜಯಮಾಲ
ಡಾ॥ ವೈ.ಎ.ನಾರಾಯಣಸ್ವಾಮಿ
ಶ್ರೀ. ಜೆ.ಸಿ.ಮಾಧುಸ್ವಾಮಿ
ಶ್ರೀ ಎನ್.ರವಿಕುಮಾರ್
ಶ್ರೀ ಐವನ್ ಡಿ'ಸೋಜಾ
ಶ್ರೀ ಎಂ.ನಾರಾಯಣಸ್ವಾಮಿ
ಶ್ರೀ ಕೆ. ಅಬ್ದುಲ್ ಜಬ್ಬಾರ್
ಶ್ರೀ ನಸೀರ್ ಅಹ್ಮದ್
ಶ್ರೀ ಅರವಿಂದ ಕುಮಾರ್ ಅರಳಿ
ಶ್ರೀ ಪ್ರಕಾಶ್ ಕೆ.ರಾಥೋಡ್
ಶ್ರೀ ಎಸ್.ಆರ್.ಬೊಮ್ಮಾಯಿ(ಗೃಹ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**4. ನಿಯಮ 330 'ಎ' ಅಡಿ ಪ್ರಸ್ತಾಪಿಸಲಾಗಿದ್ದ ವಿಶೇಷ ಪ್ರಸ್ತಾವಕ್ಕೆ ಸರ್ಕಾರದಿಂದ ಉತ್ತರ**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
(ಮುಖ್ಯ ಮಂತ್ರಿಗಳ ಪರವಾಗಿ)

**5. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ.**

ಶ್ರೀ ಎನ್.ರವಿಕುಮಾರ್
ಶ್ರೀ ಬಸವರಾಜ ಲಿಂಗಪ್ಪ ಹೊರಟ್ಟಿ
ಡಾ॥ ವೈ.ಎ.ನಾರಾಯಣಸ್ವಾಮಿ
ಶ್ರೀ ನಸೀರ್ ಅಹ್ಮದ್
ಶ್ರೀ ಎಸ್.ಎಲ್.ಭೋಜೇಗೌಡ
ಶ್ರೀ. ಎಂ.ನಾರಾಯಣಸ್ವಾಮಿ
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**6. ಪ್ರಕಟಣೆ**

**7. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ.**

ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ಎನ್.ರವಿಕುಮಾರ್
ಡಾ॥ಜಯಮಾಲ
ಶ್ರೀ ಪಿ.ಆರ್.ರಮೇಶ್
ಡಾ॥ಕೆ.ಸುಧಾಕರ್(ವೈದ್ಯಕೀಯ ಶಿಕ್ಷಣ ಸಚಿವರು)
ಶ್ರೀ ಹೆಚ್.ಎಂ.ರೇವಣ್ಣ
ಶ್ರೀ ಐವನ್ ಡಿ'ಸೋಜಾ
ಶ್ರೀ ಎಸ್.ಎಲ್.ಭೋಜೇಗೌಡ
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
ಶ್ರೀ ಮರಿತಿಬ್ಬೇಗೌಡ
ಶ್ರೀ ವಿ.ಸೋಮಣ್ಣ(ವಸತಿ ಸಚಿವರು)

********

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(76) 20/02/2020/11:20/ಎಸ್‌ಪಿಆರ್/ಎಕೆ**

**ಕರ್ನಾಟಕ ವಿಧಾನ ಪರಿಷತ್ತು**

***ಗುರುವಾರ, 20ನೇ ಫೆಬ್ರವರಿ 2020***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 22 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 1. ನಿಯಮ 330–ಎ ಅಡಿ ವಿಶೇಷ ಪ್ರಸ್ತಾವಗಳು

**(ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಉದ್ಯೋಗಿಗಳನ್ನು ರಾಜ್ಯ ಸರ್ಕಾರಿ ನೌಕರರನ್ನಾಗಿ ಪರಿಗಣಿಸುವಂತೆ ಕೋರಿರುವ ಬಗ್ಗೆ.**

* * *

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನಾಲ್ಕು ನಿಗಮಗಳ ನೌಕರರುಗಳು ತಮ್ಮ ಬಹುದಿನಗಳ ಬೇಡಿಕೆಯಾದಂತಹ ತಮ್ಮನ್ನು ರಾಜ್ಯ ಸರ್ಕಾರಿ ನೌಕರರನ್ನಾಗಿ ಪರಿಗಣಿಸುವಂತೆ ಸರ್ಕಾರವನ್ನು ಆಗ್ರಹಿಸಿ ಇಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ನಾಡೋಜ ಡಾ॥ ಪಾಟೀಲ್ ಪುಟ್ಟಪ್ಪರವರ ನೇತೃತ್ವದಲ್ಲಿ ಶಾಂತಿಯುತವಾಗಿ ಉಪವಾಸ ಸತ್ಯಾಗ್ರಹವನ್ನು ನಡೆಸುತ್ತಿದ್ದಾರೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಮೂಲಭೂತ ಹಕ್ಕುಗಳ ವಿಚಾರ ವೇದಿಕೆಯ ನೇತೃತ್ವದಲ್ಲಿ ಈ ಉಪವಾಸ ಸತ್ಯಾಗ್ರಹ ನಡೆಯುತ್ತಿದೆ. ಲಿಂಗಾಯಿತ ಪಂಚಮಶಾಲಿ ಪೀಠದ ಜಯಮೃತ್ಯಂಜಯ ಸ್ವಾಮೀಜಿರವರು ಈ ಉಪವಾಸ ಸತ್ಯಾಗ್ರಹದಲ್ಲಿ ಪಾಲ್ಗೊಂಡು ನೌಕರರ ಬೇಡಿಕೆಗೆ ಬೆಂಬಲವನ್ನು ಸೂಚಿಸುತ್ತಾ ನೌಕರರ ಬೇಡಿಕೆಯನ್ನು ಈಡೇರಿಸುವಂತೆ ಸರ್ಕಾರವನ್ನು ಆಗ್ರಹಿಸುತ್ತಿದ್ದಾರೆ. ಈ ಹಿಂದೆಯೂ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರತಿಭಟನೆಗಳನ್ನು ನಡೆಸಿದ್ದನ್ನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಅಲ್ಲದೆ ಈ ರೀತಿಯ ಚಳುವಳಿ ಹಾಗೂ ಸತ್ಯಾಗ್ರಹದಂತಹ ಹೋರಾಟಗಳಿಂದ ಸಾರ್ವಜನಿಕರ ಪ್ರಯಾಣಕ್ಕೆ ತುಂಬಾ ದುಬಾರಿ ಹಾಗೂ ತೊಂದರೆಗಳಾಗುತ್ತಿವೆ. ಅಲ್ಲದೆ ಕೆ.ಎಸ್.ಆರ್.ಟಿ.ಸಿ.ಗೆ ಆರ್ಥಿಕ ನಷ್ಟ ಉಂಟಾಗುತ್ತದೆ. ಆದ್ದರಿಂದ ಈ ವಿಷಯವನ್ನು ಸರ್ಕಾರ ಕೂಡಲೇ ಗಂಭೀರವಾಗಿ ಕೈಗೆತ್ತಿಕೊಂಡು ಬಗೆಹರಿಸಬೇಕಾಗಿದೆ.

ಯಾವುದೇ ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಅಲ್ಲಿನ ಸಾರಿಗೆ ವ್ಯವಸ್ಥೆ ನರನಾಡಿಯಂತೆ ಕೆಲಸ ನಿರ್ವಹಿಸುತ್ತಿದ್ದು, ಈ ಸಾರಿಗೆ ವ್ಯವಸ್ಥೆಯಲ್ಲಿ ಕೆಲಸ ನಿರ್ವಹಿಸುವ ನೌಕರರ ಬೇಡಿಕೆಯನ್ನು ಈಡೇರಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿರುತ್ತದೆ. ಆದ್ದರಿಂದ ಈ ನೌಕರರ ಬಹುದಿನಗಳ ಬೇಡಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಇತರ ರಾಜ್ಯಗಳಂತೆ ರಾಜ್ಯದ ರಸ್ತೆ ಸಾರಿಗೆ ನಿಗಮದ ನೌಕರರುಗಳನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸಬೇಕಾಗಿ ಈ ಮೂಲಕ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಸ್ತೆ ಸಾರಿಗೆ ನಿಗಮದ ಉದ್ಯೋಗಿಗಳನ್ನು ರಾಜ್ಯ ಸರ್ಕಾರಿ ನೌಕರರನ್ನಾಗಿ ಪರಿಗಣಿಸುವಂತೆ ಮಾಡಿರುವ ಮನವಿಯನ್ನು ಹಾಗೂ ಅವರು ಮಾಡುತ್ತಿರುವ ಧರಣಿಯ ಬಗ್ಗೆ ಮಾನ್ಯ ಹಿರಿಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಪ್ರಸ್ತಾಪಿಸಿದ್ದಾರೆ. ಈ ವಿಷಯದ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

**(ಆ) ಬಿ.ಪಿ.ಎಲ್. ಕಾರ್ಡ್ ದಂಧೆ ಹೆಚ್ಚಾಗಿ ಅರ್ಹ ಫಲಾನುಭವಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ.**

* * *

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಅಕ್ರಮವಾಗಿ ಬಿ.ಪಿ.ಎಲ್. ಕಾರ್ಡ್ ದಂಧೆಯು ಹೆಚ್ಚಾಗಿ ಅರ್ಹ ಫಲಾನುಭವಿಗಳಿಗೆ ಬಿ.ಪಿ.ಎಲ್. ಕಾರ್ಡ್ ಸಿಗದೇ, ಸ್ಥಿತಿವಂತರಿಗೆ ಬಿ.ಪಿ.ಎಲ್. ಕಾರ್ಡ್ ದೊರಕುತ್ತಿರುವುದು ಇತ್ತೀಚೆಗೆ ಹೆಚ್ಚಾಗಿ ಕಂಡು ಬರುತ್ತಿರುವುದು ದುರ್ದೈವದ ಸಂಗತಿಯಾಗಿದೆ. ವಾರ್ಷಿಕ 1.20 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ವರಮಾನ, ಹಳ್ಳಿಗಳಲ್ಲಿ 7.5 ಎಕರೆಗಿಂತ ಹೆಚ್ಚು ಭೂಮಿ ಹೊಂದಿದ್ದರೆ, ನಗರದಲ್ಲಿ ಒಂದು ಸಾವಿರ ಚದರ ಅಡಿಗಿಂತ ಹೆಚ್ಚು ವಿಸ್ತೀರ್ಣದ ಮನೆ ಇದ್ದರೆ, ನಿವೃತ್ತ ಸರ್ಕಾರಿ ನೌಕರರು, ಬೈಕು, ಕಾರು ಇನ್ನಿತರೆ ಸೌಲಭ್ಯ ಹೊಂದಿರುವ ಕುಟುಂಬಗಳು ಬಿ.ಪಿ.ಎಲ್. ಕಾರ್ಡ್ ಹೊಂದಿದ್ದರೆ ಅವು ಅಕ್ರಮ ಎಂದು ಪರಿಗಣಿಸಲಾಗುತ್ತದೆ. ಇಂತಹವರುಗಳು ನಕಲಿ ದಾಖಲಾತಿಗಳನ್ನು ಸೃಷ್ಟಿಸಿ, ಬಿ.ಪಿ.ಎಲ್. ಕಾರ್ಡ್‌ಗಳನ್ನು ದಕ್ಕಿಸಿಕೊಳ್ಳುತ್ತಿರುವುದು ನಿಜಕ್ಕೂ ಸಮಾಜಕ್ಕೆ ಹಾಗೂ ಇಡೀ ರಾಜ್ಯಕ್ಕೆ ಮಾರಕವಾಗಿದೆ. ಇದರಿಂದ ಅರ್ಹ ಫಲಾನುಭವಿಗಳಿಗೆ ಅನ್ಯಾಯವಾಗುತ್ತಿದ್ದು, ಇದು ಮುಂದುವರೆದಲ್ಲಿ ಸಮಾಜಕ್ಕೆ ಹಾಗೂ ನಮ್ಮ ರಾಜ್ಯಕ್ಕೆ ಕೆಟ್ಟ ಹೆಸರು ಬರುವುದರಲ್ಲಿ ಯಾವುದೇ ಅನುಮಾನವಿಲ್ಲ. ಇದರಿಂದ ತಿಳಿದು ಬರುವುದು ಏನೆಂದರೆ, ಅರ್ಹ ಫಲಾನುಭವಿಗಳನ್ನು ಗುರುತಿಸುವಲ್ಲಿ ಸರ್ಕಾರದ ಮಟ್ಟದಲ್ಲಿನ ಅಧಿಕಾರಿಗಳ ವೈಫಲ್ಯತೆಯು ಎದ್ದು ಕಾಣುತ್ತದೆ. ಹಾಗಾಗಿ, ಬಿ.ಪಿ.ಎಲ್. ಕಾರ್ಡ್ ವಿತರಣೆ ಸಂದರ್ಭದಲ್ಲಿ ಪಾರದರ್ಶಕತೆ ಅಳವಡಿಸಿಕೊಳ್ಳುವುದು ನ್ಯಾಯಸಮ್ಮತವಾಗಿರುತ್ತದೆ ಎಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಬಿ.ಪಿ.ಎಲ್.ಕಾರ್ಡ್ ದಂಧೆ ಹೆಚ್ಚಾಗಿ ಅರ್ಹ ಫಲಾನುಭವಿಗಳಿಗೆ ಬಿ.ಪಿ.ಎಲ್.ಕಾರ್ಡ್ ದೊರೆಯದೇ,

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೊಂದರೆಯಾಗುತ್ತಿರುವ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡರು ಪ್ರಸ್ತಾಪಿಸಿದ್ದಾರೆ. ಈ ವಿಷಯದ ಬಗ್ಗೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

**(ಇ) ಕೇರಳ ರಾಜ್ಯದಿಂದ ಜೈವಿಕ ವೈದ್ಯಕೀಯ ತ್ಯಾಜ್ಯವನ್ನು ಗಡಿ ಜಿಲ್ಲೆಯ ಹಲವು ತಾಲ್ಲೂಕುಗಳಲ್ಲಿನ ಸ್ಥಳಗಳಲ್ಲಿ ಸುರಿಯುತ್ತಿರುವ ಬಗ್ಗೆ.**

* * *

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಅತೀ ಮಹತ್ವವಾದ ವಿಷಯವನ್ನು ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕಾಗಿ ವಂದನೆಗಳು.

ಕೇರಳ ರಾಜ್ಯದಿಂದ ಕರ್ನಾಟಕ ಗಡಿಭಾಗದ ಜಿಲ್ಲೆಗಳಾದ ಕೊಡಗು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ತಾಲ್ಲೂಕುಗಳಾದ ವಿರಾಜಪೇಟೆ, ನಂಜನಗೂಡು, ಗುಂಡ್ಲುಪೇಟೆ ಮತ್ತು ಹನೂರು ತಾಲ್ಲೂಕುಗಳಲ್ಲಿ ಕೇರಳ ರಾಜ್ಯದಲ್ಲಿ ಉತ್ಪತ್ತಿಯಾಗುವ ಜೈವಿಕ–ವೈದ್ಯಕೀಯ ತ್ಯಾಜ್ಯಗಳನ್ನು ಅಂದರೆ Bio-Medical Wasteನ್ನು ಕಾನೂನು ಬಾಹಿರವಾಗಿ ರಾತ್ರೋರಾತ್ರಿ ಲಾರಿಗಳಲ್ಲಿ ತುಂಬಿ ಸುರಿಯುತ್ತಿದ್ದಾರೆ.

ಈ ಕಾನೂನು ಬಾಹಿರ ಚಟುವಟಿಕೆ ರಾಜ್ಯದ ತಡಿ ಭಾಗದ ಕೇರಳ ರಾಜ್ಯದ ಮಲ್ಲಪುರ ಜಿಲ್ಲೆಯಿಂದ ರಾತ್ರಿ ಹೊತ್ತು ತಂದು ಗಡಿ ಭಾಗದ ಹಳ್ಳಿಗಳಲ್ಲಿರುವ ಖಾಲಿ ಜಾಗ ಮತ್ತು ಖಾಲಿ ನಿವೇಶನಗಳ ಮೇಲೆ ತಂದು ಸುರಿಯುತ್ತಿದ್ದಾರೆ. ಇಂತಹ ಕಾನೂನು ಬಾಹಿರ ಚಟುವಟಿಕೆ ಪ್ರಾರಂಭದಲ್ಲಿ ಸಣ್ಣ ಪ್ರಮಾಣದಲ್ಲಿದ್ದು ಕಳೆದ ಎರಡು ವರ್ಷಗಳಿಂದ ಭಾರಿ ಪ್ರಮಾಣದಲ್ಲಿ ನಡೆಯುತ್ತಿದೆ.

ಕೇಂದ್ರ ಸರ್ಕಾರದ The Environment (Protection) Act ಮತ್ತು Bio-Medical Waste Management Rules, 2016 ರ ಪ್ರಕಾರ ಜೈವಿಕ–ವೈದ್ಯಕೀಯ ತ್ಯಾಜ್ಯ ಸೃಷ್ಟಿಸಿದ ವ್ಯಕ್ತಿ ಅಥವಾ ಸಂಸ್ಥೆ ಈ ತ್ಯಾಜ್ಯವನ್ನು ಮಾನವ ಜೀವಕ್ಕೆ ಹಾನಿಯಿಲ್ಲದೆ ಮತ್ತು ಪರಿಸರ ಮಾಲಿನ್ಯಗೊಳಿಸದೆ ವಿಸರ್ಜನೆ ಮಾಡುವುದು ಆದ್ಯ ಕರ್ತವ್ಯ ಆಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ, ಈ ತ್ಯಾಜ್ಯ ಬೇರೆ ರಾಜ್ಯದಿಂದ ಬರುತ್ತಿರುವುದರಿಂದ ರಾಜ್ಯ ಸರ್ಕಾರ ಎಚ್ಚೆತ್ತು ಕೇರಳ ರಾಜ್ಯದೊಂದಿಗೆ ವ್ಯವಹರಿಸಿ, ಚರ್ಚಿಸಿ ಜೈವಿಕ-ವೈದ್ಯಕೀಯ ತ್ಯಾಜ್ಯವನ್ನು ಸುರಿಯುತ್ತಿರುವುದನ್ನು ತಡೆಯಿಡಿಯುವುದು ಮತ್ತು ಸಂಬಂಧಿಸಿದವರ ಮೇಲೆ ಕಾನೂನು ರೀತಿಯ ಸೂಕ್ತ ಕ್ರಮ ಕೈಗೊಳ್ಳಲು ಒತ್ತಾಯಿಸಬೇಕೆಂದು ಕೋರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕೇರಳ ರಾಜ್ಯದಿಂದ ಜೈವಿಕ ವೈದ್ಯಕೀಯ ತ್ಯಾಜ್ಯವನ್ನು ರಾಜ್ಯದ ಗಡಿ ಜಿಲ್ಲೆಯ ಹಲವು ತಾಲ್ಲೂಕುಗಳಲ್ಲಿನ ಸ್ಥಳಗಳಲ್ಲಿ ಸುರಿಯುತ್ತಿರುವಂತಹ ಗಂಭೀರ ವಿಚಾರದ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿರವರು ಪ್ರಸ್ತಾಪಿಸಿದ್ದಾರೆ. ಈ ವಿಷಯದ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರಿಂದ ಉತ್ತರವನ್ನು ಕೊಡಿಸಲಾಗುವುದು.

**(ಈ) ಪದವಿ ಪ್ರಾಧ್ಯಾಪಕರ ವೇತನ ಪಾವತಿಯಾಗದಿರುವ ಬಗ್ಗೆ**

* * *

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು.

ರಾಜ್ಯದಲ್ಲಿರುವ ಸರ್ಕಾರಿ ಪದವಿ ಕಾಲೇಜಿನ ಪ್ರಾಧ್ಯಾಪಕರಿಗೆ ವೇತನ ನೀಡಿ ಅನುದಾನಿತ ಪದವಿ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳಿಗೆ ತಾರತಮ್ಯ ಮಾಡಿ ಕಳೆದ ಎರಡು ತಿಂಗಳುಗಳಿಂದ ವೇತನವನ್ನು ಪಾವತಿಸಿರುವುದಿಲ್ಲ. ಇದರಿಂದ ಅವರು ವೇತನವಿಲ್ಲದೆ ಪರದಾಡುವಂತಾಗಿದೆ. ಆದ್ದರಿಂದ ಶೂನ್ಯ ವೇಳೆಯಲ್ಲಿ ಸದರಿ ವಿಷಯವನ್ನು ಪ್ರಸ್ತಾಪಿಸಿ, ಪ್ರಾಧ್ಯಾಪಕರುಗಳಿಗೆ ವೇತನ ಪಾವತಿಸುವಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಉ) ಮಲೆನಾಡು ಭಾಗದಲ್ಲಿ ಸಹಕಾರ ಸಂಚಾರ ಸಾರಿಗೆ ಸ್ಥಗಿತಗೊಂಡಿರುವ ಬಗ್ಗೆ.**

* * *

**ಡಾ॥ ಜಯಮಾಲ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು.

ಮಲೆನಾಡು ಭಾಗದ ಜೀವನಾಡಿಯಾಗಿ ಸಾರ್ವಜನಿಕರಿಗೆ ಸಂಪರ್ಕ ಕಲ್ಪಿಸಲು ಕಳೆದ 30 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದ ಸಹಕಾರ ಸಾರಿಗೆ ಬಸ್ಸುಗಳ ಸಂಚಾರ ಸ್ಥಗಿತಗೊಂಡಿರುವುದರಿಂದ, ಮಲೆನಾಡಿನ ಮತ್ತು ಕರಾವಳಿ ಭಾಗದ ಶಿವಮೊಗ್ಗ, ಚಿಕ್ಕಮಗಳೂರು, ಮಂಗಳೂರು, ಉಡುಪಿ ಮತ್ತು ಕೆಲವು ಭಾಗಗಳಲ್ಲಿರುವ ಗುಡ್ಡಗಾಡು ಪ್ರದೇಶಗಳಿಂದ ಶಾಲೆಗೆ/ಕಾಲೇಜ್‌ಗೆ ಹೋಗುತ್ತಿರುವ ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಹಾಗೂ ಕೂಲಿ ಕಾರ್ಮಿಕರಿಗೆ ಪ್ರಯಾಣಿಸಲು ಅನಾನುಕೂಲವಾಗಿರುವ ಸಂಗತಿಯನ್ನು ಪ್ರಸ್ತಾಪಿಸಲು ಈ ಸದನದಲ್ಲಿ ಅನುಮತಿಯನ್ನು ನೀಡಿದ್ದಕ್ಕಾಗಿ ಧನ್ಯವಾದಗಳನ್ನು ತಿಳಿಸುತ್ತೇನೆ.

ಸಹಕಾರ ತತ್ವದಡಿ ಸ್ಥಾಪಿತವಾಗಿರುವ ಸಹಕಾರ ಸಾರಿಗೆ ಸಂಸ್ಥೆ ಸುಮಾರು 70 ಬಸ್ಸುಗಳನ್ನು ಹೊಂದಿದ್ದು, ಅಲ್ಲಿನ 300ಕ್ಕೂ ಹೆಚ್ಚಿನ ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ. ಪುನಶ್ಚೇತನಕ್ಕೆ ಸರ್ಕಾರದ ನೆರವು ಕೋರಿ ಸಂಸ್ಥೆಯ ನೌಕರರು ದಿನಾಂಕ: 18/02/2020ರಂದು ಕೊಪ್ಪದಲ್ಲಿ ಅನಿರ್ದಿಷ್ಟಾವಧಿ ಧರಣಿಯನ್ನು ಆರಂಭಿಸಿದ್ದಾರೆ. ದಿನಾಂಕ: 17/02/2020ರಿಂದಲೇ ಸುಮಾರು 70 ಬಸ್ಸುಗಳು ಹೊಂದಿರುವ ಸಹಕಾರ ಸಾರಿಗೆ ಸಂಸ್ಥೆಯ ಬಸ್ಸುಗಳ ಸಂಚಾರ ಸ್ಥಗಿತವಾಗಿದೆ.

ಡಿಸೇಲ್ ದರ, ವಾಹನ ತೆರಿಗೆ, ವಾಹನ ವಿಮೆ, ವಾಹನ ಬಿಡಿ ಭಾಗಗಳ ದರ ಹೆಚ್ಚಳ, ವಾಹನಗಳ ದೈನಂದಿನ ನಿರ್ವಹಣೆ ವೆಚ್ಚ ಅಧಿಕವಾಗಿರುವುದರಿಂದ ಸಂಸ್ಥೆಯು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ. ಪ್ರಯಾಣ ದರದಲ್ಲಿ ವಿದ್ಯಾರ್ಥಿಗಳಿಗೆ, ಅಂಗವಿಕಲರುಗಳಿಗೆ ರಿಯಾಯಿತಿ ನೀಡಲಾಗಿದ್ದರಿಂದ 6 ಕೋಟಿ 60 ಲಕ್ಷ ರೂಪಾಯಿಗಳು ಸರ್ಕಾರದಿಂದ ಸಂಸ್ಥೆಗೆ ಪಾವತಿ ಮಾಡಬೇಕಾಗಿದ್ದು, ಸಂಬಂಧಪಟ್ಟ ಕಡತವು ಇನ್ನೂ ಸರ್ಕಾರದ ಆರ್ಥಿಕ ಇಲಾಖೆಯಲ್ಲಿಯೇ ಬಾಕಿ ಇದೆ ಹಾಗೂ ಇತರೆ ಕಾರಣಗಳಿಂದ ಸಂಸ್ಥೆಯು ಆದಾಯವು ಕುಂಠಿತವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಪ್ರಸ್ತುತ ಮಕ್ಕಳಿಗೆ ಪರೀಕ್ಷೆ ಸಮಯವಾಗಿರುವುದರಿಂದ, ಇಂತಹ ಪರಿಸ್ಥಿತಿಯಲ್ಲಿ ಹಾಗೂ ರೈತರು ಬೆಳೆದ ತರಕಾರಿಗಳನ್ನು ರವಾನೆ ಮಾಡಿ ಮಾರಾಟ ಮಾಡಲು, ಸಾರ್ವಜನಿಕರ ಆರೋಗ್ಯ ತಪಾಸಣೆ, ಕೂಲಿ ಕಾರ್ಮಿಕರ ದೈನಂದಿನ ಚಟುವಟಿಕೆಗಳಿಗೆ ಸಹಕಾರ ಸಾರಿಗೆ ಸಂಸ್ಥೆಗಳ ಬಸ್ಸುಗಳ ಸಂಪರ್ಕವಿಲ್ಲದಿರುವುದರಿಂದ, ಈ ಭಾಗದ ಜನರು ಆತಂಕಕ್ಕೀಡಾಗಿದ್ದಾರೆ.

ಆದ್ದರಿಂದ, ಈ ಬಗ್ಗೆ ಸರ್ಕಾರವು ಮಧ್ಯ ಪ್ರವೇಶಿಸಿ, ಮಲೆನಾಡಿನ ಜನರ ಆತಂಕವನ್ನು ನಿವಾರಣೆ ಮಾಡುವಂತೆ ಸೂಕ್ತ ಕ್ರಮ ಕೈಗೊಳ್ಳಲು ಈ ಸದನದ ಮೂಲಕ ಸರ್ಕಾರವನ್ನು ಕೋರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಕಳೆದ ಮೂವತ್ತು ವರ್ಷಗಳಿಂದ ಸುವ್ಯವಸ್ಥಿತವಾಗಿ ಮಲೆನಾಡು ಪ್ರದೇಶದಲ್ಲಿ ನಡೆಯುತ್ತಿದ್ದ ಸಹಕಾರ ಸಂಚಾರ ಸಾರಿಗೆ ಬಸ್‌ಗಳ ಸಂಚಾರ ಸ್ಥಗಿತಗೊಂಡಿರುವುದರಿಂದ ಮಲೆನಾಡು ಭಾಗದಲ್ಲಿನ ಜನಸಾಮಾನ್ಯರಿಗೆ ಮತ್ತು ಕಾರ್ಮಿಕರಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ಸದಸ್ಯೆ ಡಾ|| ಜಯಮಾಲರವರು ಪ್ರಸ್ತಾಪಿಸಿದ್ದಾರೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

(077)/20–2–2020/11–30/ಎಲ್‌ಎಂ/ಎಕೆ

**(ಊ) ಗುಲ್ಬರ್ಗಾ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯ ಯೋಜನೆ ಅಡಿಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ.**

--------

**ಶ್ರೀ ತಿಪ್ಪಣ್ಣ ಕಮಕನೂರ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಗುಲ್ಬರ್ಗಾ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿ ಸಸಿ ನೆಡುವ ಕಾರ್ಯಕ್ರಮದಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ಜರುಗಿದ್ದು, ಸರ್ಕಾರದ ಹಣ ದುರುಪಯೋಗವಾಗುತ್ತಿದೆ. ಈ ವಿಚಾರದಲ್ಲಿ ಸರ್ಕಾರ ತತಕ್ಷಣವೇ ಜರೂರು ಕ್ರಮ ಕೈಗೊಳ್ಳಬೇಕೆನ್ನುವ ವಿಷಯವನ್ನು ಮಾನ್ಯ ಅರಣ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಉಲ್ಲೇಖ ಮಾಡಿರುವ ಸಮಸ್ಯೆಗೆ ಮಾನ್ಯ ಅರಣ್ಯ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಋ) ಉಪನೊಂದಣಾಧಿಕಾರಿಗಳ ಕಚೇರಿಗಳ ಗಣಕೀಕರಣ ಅವ್ಯವಸ್ಥೆಯಿಂದ ಅನಾನುಕೂಲಗಳಾಗಿರುವ ಬಗ್ಗೆ,**

----------

**ಶ್ರೀ ಆರ್.ಬಿ.ತಿಮ್ಮಾಪೂರ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ರಾಜ್ಯದ ಉಪನೊಂದಣಾಧಿಕಾರಿ ಕಚೇರಿಗಳನ್ನು ಕಂಪ್ಯೂಟರೀಕರಣಗೊಳಿಸಿರುವುದು ಸರಿಯಷ್ಟೆ. ಆದರೆ, ಈ ಕಂಪ್ಯೂಟರ್‌ಗಳ ನಿರ್ವಹಣಾ ಜವಾಬ್ದಾರಿಯ ಗುತ್ತಿಗೆಯನ್ನು ಸರ್ಕಾರ ಯಾವುದೇ ಕಂಪನಿಗೆ ನೀಡದೆ ಇರುವುದರಿಂದ ದಸ್ತಾವೇಜುಗಳ ನೋಂದಣಿಯಾಗದೇ ಸಾರ್ವಜನಿಕರಿಗೆ ತೊಂದರೆಯಾಗಿದೆ. ಅಲ್ಲದೆ, ಎರಡು ತಿಂಗಳಿಂದ ಸರ್ವರ್‌ನಲ್ಲೂ ತೊಂದರೆಯಾಗಿದ್ದು ಸರ್ವಿಸ್ ಇಂಜಿನೀಯರ್‌ಗಳಿಲ್ಲದೆ ಇರುವುದರಿಂದ ಸಾರ್ವಜನಿಕರು ದಸ್ತಾವೇಜುಗಳ ನೋಂದಣಿಗೆ ಉಪನೋಂದಣಾ ಕಚೇರಿಗೆ ಅಲೆದಾಡುವ ಪರಿಸ್ಥಿತಿ ಉದ್ಭವವಾಗಿದೆ. ಇದರ ಜೊತೆಗೆ ನೋಂದಣಿ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಕಂಪ್ಯೂಟರ್ ಆಪರೇಟರ್‌ಗಳಿಗೂ ಸಹ ಕಳೆದ ಒಂದು ವರ್ಷದಿಂದ ವೇತನ ಬಿಡುಗಡೆ ಮಾಡಿರುವುದಿಲ್ಲ. ಈ ಎಲ್ಲಾ ತೊಂದರೆಗಳಿದ್ದರೂ ನೋಂದಣಿ ಇಲಾಖೆಯವರು ಓ.ಟಿ.ಪಿ. ವ್ಯವಸ್ಥೆಯನ್ನು ಜಾರಿಗೆ ತಂದು ಸಾರ್ವಜನಿಕರಿಗೆ ಮತ್ತಷ್ಟು ತೊಂದರೆ ಉಂಟು ಮಾಡಿರುವುದರಿಂದ ಸರ್ಕಾರದ ಆದಾಯಕ್ಕೆ ಧಕ್ಕೆಯಾಗುತ್ತಿರುವ ವಿಷಯವನ್ನು ವಿಶೇಷ ಪ್ರಸ್ತಾವನೆಯಡಿ ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಆರ್.ಅಶೋಕ(ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ತಿಳಿಸಿರುವ ರೀತಿಯಲ್ಲಿ ಸರ್ವರ್‌ಗಳ ತೊಂದರೆ ಇದೆ. ಸರ್ವರ್‌ಗಳನ್ನು ಸರಿ ಮಾಡಲು ಈಗಾಗಲೆ ಕ್ರಮ ತೆಗೆದುಕೊಳ್ಳಲಾಗಿದೆ. ಈ ವಿಷಯವನ್ನು ಚರ್ಚೆ ಮಾಡಲು ಮೊನ್ನೆ ಒಂದು ಸಭೆಯನ್ನು ಮಾಡಿದ್ದೇವೆ. ಒಂದು ವರ್ಷದಿಂದ ವೇತನವನ್ನು ಬಿಡುಗಡೆ ಮಾಡಿರುವುದಿಲ್ಲ ಎಂದು ಹೇಳಿರುವುದು ಸತ್ಯ. ಇದರ ಬಗ್ಗೆ ಹೋದ ವಾರವೇ ಕ್ರಮ ತೆಗೆದುಕೊಳ್ಳಲಾಗಿದೆ. ತಕ್ಷಣ ವೇತನವನ್ನು ಬಿಡುಗಡೆ ಮಾಡಲಾಗುತ್ತದೆ. ಸರ್ವರ್ ಸಮಸ್ಯೆ ಬಗೆಹರಿಸಲು ಅಧಿಕಾರಿಗಳ ಸಭೆಯನ್ನು ಕರೆದು ಚರ್ಚೆ ಮಾಡಲಾಗಿದೆ. ಈ ಸಮಸ್ಯೆಯನ್ನು streamline ಮಾಡಲು ಪ್ರಯತ್ನ ಮಾಡಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**02. ವರದಿಯನ್ನೊಪ್ಪಿಸುವುದು**

**ಶ್ರೀ ಎಂ.ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, 2019–20ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ ಸದಸ್ಯನಾದ ನಾನು ಸಮಿತಿ ನೀಡಿರುವ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿತ 29ನೇ (ಅನುಪಾಲನಾ) ವರದಿ ಮತ್ತು ಶಿಕ್ಷಣ ಇಲಾಖೆಗೆ ಸಂಬಂಧಿತ 30ನೇ ಮಧ್ಯಂತರ ವಿಶೇಷ ವರದಿಯನ್ನು ಸದನದಲ್ಲಿ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:–** ಒಪ್ಪಿಸಲಾಯಿತು.

**03. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ**

**ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯ ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ.**

– – – –

**ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಸಚಿವರು):–** ಮಾನ್ಯ ಸಭಾಪತಿಗಳೆ, ಸುಮಾರು 14 ಜನ ಗೌರವಾನ್ವಿತ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಿ ತಮ್ಮದೆ ಆದ ರೀತಿಯಲ್ಲಿ ವಿಷಯವನ್ನು ಪ್ರಸ್ತಾಪಿಸಿ ಬೆಳಕನ್ನು ಚೆಲ್ಲುವಂತಹ ಪ್ರಯತ್ನವನ್ನು ಮಾಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು, ಶ್ರೀ ಸಿ.ಎಂ.ಇಬ್ರಾಹಿಂ ರವರು, ಶ್ರೀ ಪ್ರಾಣೇಶ್‌ರವರು, ಶ್ರೀ ಆಯನೂರ ಮಂಜುನಾಥ್‌ರವರು, ಡಾ: ಜೈಮಾಲ ರಾಮಚಂದ್ರರವರು, ಶ್ರೀ ತಿಪ್ಪಣ್ಣ ಕಮಕನೂರರವರು, ಶ್ರೀ ಆರ್.ಬಿ.ತಿಮ್ಮಾಪೂರರವರು, ಶ್ರೀ ನಜೀರ ಅಹ್ಮದರವರು, ಶ್ರೀ ಪ್ರಕಾಶ್ ರಾಠೋಡರವರು, ಶ್ರೀ ಪಿ.ಆರ್.ರಮೇಶ್‌ವರು, ಶ್ರೀ ಬಿ.ಎಂ.ಫಾರೂಖ್‌ರವರು, ಶ್ರೀ ರಮೇಶ್‌ಗೌಡರು ಇತರ ಎಲ್ಲ ಪ್ರಮುಖ ಸದಸ್ಯರು ಈ ವಿಚಾರದಲ್ಲಿ ಮಾತನಾಡಿದ್ದಾರೆ. ರಾಜ್ಯದ ಪ್ರಗತಿಗಾಗಿ ಕಾನೂನು ಸುವ್ಯವಸ್ಥೆ ಮಹತ್ವದ ಪಾತ್ರ ವಹಿಸುತ್ತದೆ. ಎಲ್ಲಿ ಶಾಂತಿ ಇರುತ್ತದೆ ಅಲ್ಲಿ ಪ್ರಗತಿ ಇರುತ್ತದೆ. ಆದ್ದರಿಂದ ಇವತ್ತು ಕಾನೂನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸುವ್ಯವಸ್ಥೆಯನ್ನು ಕಾಪಾಡುವುದು ಮತ್ತು ಅಪರಾಧಗಳನ್ನು ತಡೆಗಟ್ಟುವಂತಹ ಗುರುತರವಾದ ಜವಾಬ್ದಾರಿ ಗೃಹ ಇಲಾಖೆ ಮೇಲೆ ಇದೆ. ಗೃಹ ಇಲಾಖೆ ದಿನನಿತ್ಯ ಸುದ್ದಿಯಲ್ಲಿರುತ್ತದೆ. ಸಮಾಜದಲ್ಲಿ ಬದಲಾಗುತ್ತಿರುವ ಸ್ಥಿತಿ-ಗತಿಗಳು ವ್ಯಕ್ತಿಗತ ಮೌಲ್ಯಗಳ ಏರುಪೇರುಗಳು, ಪರಿವಾರದಲ್ಲಿ ಆಗುತ್ತಿರುವಂತಹ ವ್ಯತ್ಯಾಸಗಳು. ಸಾಮಾಜಿಕವಾಗಿ ಆಗುತ್ತಿರುವ ಕ್ಷೋಭೆಗಳು ಇವೆಲ್ಲವನ್ನು ನಿಯಂತ್ರಣ ಮಾಡುವುದು ನಮ್ಮ ಇಲಾಖೆಯ ಕರ್ತವ್ಯವಾಗಿದೆ. ಆಗುತ್ತಿರುವ ಬದಲಾವಣೆಗಳಿಗೆ ಅನುಗುಣವಾಗಿ ನಾವು ಕಾರ್ಯಾಚರಣೆಯನ್ನು ಮಾಡಬೇಕಾಗುತ್ತದೆ. ಇರುವ ಪರಿಸ್ಥಿತಿಗೆ ಅನುಗುಣವಾಗಿ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ನಿರ್ಣಯಗಳನ್ನು ತೆಗೆದುಕೊಳ್ಳಲು ಹಲವಾರು ಕಾರ್ಯಸೂಚಿಗಳು, ಕಾರ್ಯಕ್ರಮಗಳು ಇವೆ. ಹೈಕೋರ್ಟ್, ಸುಪ್ರೀಮ್ ಕೋರ್ಟ್‌ನ ನಿರ್ದೇಶನಗಳಡಿಯಲ್ಲಿ ನಾವು ಕಾರ್ಯನಿರ್ವಹಿಸಬೇಕಾಗುತ್ತದೆ. ಇಂದು ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು, ಮಂಗಳೂರಿನ ಗೋಲಿಬಾರ್ ಪ್ರಕರಣದ ಬಗ್ಗೆ ಇಲ್ಲಿ ಚರ್ಚೆಯಾಗಿದೆ. ಅದರ ಜೊತೆಗೆ ಇತರೆ ಎರಡು-ಮೂರು ವಿಷಯಗಳು ಇಲ್ಲಿ ಚರ್ಚೆಯಾಗಿವೆ. ನಾನು ಮೊನ್ನೆ ಅರ್ಧ ದಿನ ಈ ಮನೆಯಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದೇನೆ. ನಮ್ಮ ಸರ್ಕಾರ ಬಂದ ಮೇಲೆ ಕಾನೂನು ಸುವ್ಯವಸ್ಥೆ ಯಾವ ರೀತಿ ಇದೆ ಎನ್ನುವುದನ್ನು ತಿಳಿದುಕೊಳ್ಳುವಂತಹ ಅವಶ್ಯಕತೆ ಇದೆ. ನಮ್ಮ ಸರ್ಕಾರ ಬಂದ ತಕ್ಷಣ ಹಲವಾರು ಬಂದೋಬಸ್ತ್ ಮಾಡುವಂತಹ ಸವಾಲುಗಳನ್ನು ನಾವು ಎದುರಿಸಬೇಕಾಯಿತು. ಕಾಶ್ಮೀರಕ್ಕೆ ಸಂಬಂಧಪಟ್ಟ ಹಾಗೆ ಅನುಚ್ಛೇದ 370 abolish ಮಾಡಿದಾಗ ಅದರ ಒಟ್ಟು ಪರಿಣಾಮ ರಾಷ್ಟ್ರದ ಮೇಲೆ ನಮ್ಮ ರಾಜ್ಯದ ಮೇಲೆಯೂ ಆಗಿದೆ. ಈ ಸಮಸ್ಯೆಯನ್ನು ಅತ್ಯಂತ ಸಮರ್ಥವಾಗಿ ಎದುರಿಸಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಎಲ್ಲ ಕೆಲಸ ಕಾರ್ಯಗಳನ್ನು ಮಾಡಲಾಗಿದೆ. ಪರ ಮತ್ತು ವಿರೋಧವಿರಬಹುದು, ಅದಕ್ಕೆ ಸಂಬಂಧಪಟ್ಟವರ ಜೊತೆಯಲ್ಲಿ ನಿಕಟವಾದ ಸಂಪರ್ಕವನ್ನು ಇಟ್ಟುಕೊಂಡು, ಅವರವರ ನಿಲುವು ಏನೇ ಇರಲಿ ಅದನ್ನು ಕಾನೂನು ಸುವ್ಯವಸ್ಥೆಗೆ ಧಕ್ಕೆ ಬರದೆ ಇರುವಂತಹ ರೀತಿಯಲ್ಲಿ ವ್ಯಕ್ತಪಡಿಸುವಂತೆ ಮಾಡಲಾಯಿತು. ಈ ಎಲ್ಲವನ್ನು ನಿಭಾಯಿಸಿರುವುದನ್ನು ತಾವೆಲ್ಲರೂ ನೋಡಿದ್ದೀರಿ ಎಂದು ನಾನು ಭಾವಿಸುತ್ತೇನೆ. ಈ ಸಮಸ್ಯೆ ಬಗೆಹರಿದ ತಕ್ಷಣ ರಾಮಜನ್ಮಭೂಮಿ ವಿಚಾರದಲ್ಲಿ ಸುಪ್ರೀಮ್ ಕೋರ್ಟ್‌ನ ತೀರ್ಪು ಬಂತು. ಆ ಸಂದರ್ಭದಲ್ಲಿಯೂ ಕೂಡ ಯಾವುದೇ ಒಂದು ಸಣ್ಣ ಘಟನೆಯಾಗದಂತೆ ನಿಭಾಯಿಸಲಾಗಿದೆ. ಇದಕ್ಕೆ ಎಲ್ಲ ವರ್ಗದ ಜನರು ನಮಗೆ ಸಹಕಾರವನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇಲ್ಲಿ

ತಿದ್ದುಪಡಿಯಾಗದ ಪ್ರತಿ - ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎರಡು ವಿಚಾರಗಳನ್ನು ಹೇಳಬೇಕಾಗುತ್ತದೆ. ನಮ್ಮ ಕರ್ನಾಟಕದ ಜನರು ಯಾವಾಗಲೂ ಹಿಂಸಾತ್ಮಕ ವಿಚಾರಗಳನ್ನು ಇಟ್ಟುಕೊಂಡವರಲ್ಲ.

(ಮುಂದು)

078/20-02-2020/11-40/ಬಿಎಸ್‌ಡಿ-ಆರ್‌ಎನ್

**ಶ್ರೀ ಬಸವರಾಜ ಬೊಮ್ಮಾಯಿ (ಮುಂದು)**

ಅದೇ ರೀತಿ ನಮ್ಮ ಪೊಲೀಸ್‌ರಲ್ಲಿ ದಕ್ಷತೆ, ಪರಂಪರೆ ಮತ್ತು ಸಾಮರ್ಥ್ಯತೆ ಬಗ್ಗೆ ತನ್ನದೇ ಆದ ಹಿರಿಮೆಯನ್ನು ಹೊಂದಿದ್ದಾರೆ ಮತ್ತು ಇಡೀ ರಾಷ್ಟ್ರದಲ್ಲಿ ಅತ್ಯಂತ ಗೌರವ ಸ್ಥಾನವನ್ನು ಹೊಂದಿದ್ದಾರೆ. ಹಲವಾರು ಕಠಿಣ ಪರಿಸ್ಥಿತಿಗಳನ್ನು ನಿಭಾಯಿಸಿದ್ದಾರೆ. ಹೀಗಿದ್ದರೂ ಅಹಿತಕರ ಘಟನೆಗಳು ನಡೆಯುತ್ತವೆ. ಪೊಲೀಸರು ಎಷ್ಟೇ ಸಮರ್ಥರಿದ್ದರೂ, ಸಮರ್ಥ ಆಡಳಿತ ಹಾಗೂ ಶಾಂತಿಯುತ ಸಮಾಜವಿದ್ದರೂ ಕೆಲವು ಸಂದರ್ಭಗಳಲ್ಲಿ ಘಟನೆಗಳು ನಡೆಯುತ್ತವೆ. ಕರ್ನಾಟಕದಲ್ಲಿ ಅತ್ಯಂತ ದೊಡ್ಡ ಚಳುವಳಿಗಳು ಶಾಂತಿಯುತವಾಗಿ ನಡೆದಿವೆ. ಕರ್ನಾಟಕ ಕಂಡಂತಹ ಹಾಗು ಮನೆಮನೆಗೂ ವ್ಯಾಪಿಸಿರುವ ಗೋಕಾಕ್ ಚಳವಳಿಯಲ್ಲಿ ಪ್ರತಿಯೊಂದು ಸಭೆಯಲ್ಲಿಯೂ ಸಾವಿರಾರು ಜನ ಭಾಗವಹಿಸಿದರೂ ಆಗ ಎಲ್ಲಿಯೂ ಸಣ್ಣ ಅಹಿತಕರ ಘಟನೆ ನಡೆದಿಲ್ಲ. ಇನ್ನೊಂದು ರೈತಾಪಿ ಚಳುವಳಿಯು ಶಾಂತಿಯುತವಾಗಿ ನಡೆದರೂ, ಪೊಲೀಸರು ಹಲವಾರು ಬಾರಿ ಬಲವನ್ನು ಉಪಯೋಗ ಮಾಡುವ ಸನ್ನಿವೇಶ ಬಂದಿತ್ತು. ನರಗುಂದ, ನವಲಗುಂದ, ಗೋಕಾಕ್, ನಿಪ್ಪಾಣಿ, ಹಾಸನ, ದೊಡ್ಡಹಳ್ಳಿ, ಮಂಡ್ಯ ಮತ್ತು ಮೈಸೂರು ಸೇರಿದಂತೆ ಹಲವಾರು ಕಡೆಗಳಲ್ಲಿ ಅನೇಕ ಘಟನೆಗಳು ನಡೆದಿವೆ. ಕಬ್ಬು ಬೆಳೆಗಾರರ ಚಳುವಳಿ ನಡೆದಿವೆ. ಹಲವಾರು ಪ್ರಸಂಗಗಳಲ್ಲಿ ಬಲವನ್ನು ಉಪಯೋಗ ಮಾಡಿರುವ ಇತಿಹಾಸ ಇದೆ. ಆದರೆ ಯಾವ ಸಂದರ್ಭದಲ್ಲಿ ಏನು ಮಾಡಿದ್ದಾರೆ ಎನ್ನುವುದಕ್ಕಿಂತ ಆ ಸಂದರ್ಭದಲ್ಲಿ ನಿಯಂತ್ರಿಸುವ ಮತ್ತು ನಿಭಾಯಿಸುವ ಕೆಲಸ ಆಗಿದೆಯೇ ಎನ್ನುವುದನ್ನು ನೋಡಬೇಕಾಗುತ್ತದೆ. ಈ ರೀತಿಯ ಘಟನೆಗಳಲ್ಲಿ ಎಲ್ಲಾ ಸರ್ಕಾರಗಳು ಗೋಲಿಬಾರ್ ಮಾಡಿರುವ ಕೆಲಸಗಳು ನಡೆದಿವೆ. ಗೋಲಿಬಾರ್ ನಡೆದ ಘಟನೆಗಳ ಬಗ್ಗೆ ಹಲವಾರು ನ್ಯಾಯಾಂಗ ತನಿಖೆಗಳು ಆಗಿದ್ದು, ಈ ತನಿಖೆಗಳ ಪರಿಣಾಮಗಳು ಏನಾಗಿವೆ? ಎಷ್ಟು ಬೆಳಕಿಗೆ ಬಂದಿವೆ? ಎಷ್ಟು ಅನುಷ್ಠಾನ ಆಗಿವೆ ಮತ್ತು ನ್ಯಾಯಾಂಗ ತನಿಖೆಗಳ ವರದಿಗಳಲ್ಲಿ ಆಗಿರುವ ಶಿಫಾರಸ್ಸುಗಳನ್ನು ಎಷ್ಟರಮಟ್ಟಿಗೆ ಪಾಲನೆ ಮಾಡುವುದಕ್ಕೆ ಆಗಿದೆ? ಒಂದು ಘಟನೆಯಿಂದ ಇನ್ನೊಂದು ಘಟನೆಗೆ ಎಷ್ಟು ವ್ಯತ್ಯಾಸಗಳಿವೆ ಎಂಬುದೆಲ್ಲವನ್ನು ಗಮನಿಸಬೇಕಾಗುತ್ತದೆ ಎಂದು ಈ ಸದನದ ಮೂಲಕ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಬಯಸುತ್ತೇನೆ. Law & Order situation ಅನ್ನು, heinous crimes ಎಷ್ಟಿವೆ ಎಂಬುದನ್ನು ನೋಡುತ್ತೇವೆ. Rioting, murders ಇತರ ಕ್ರೈಮ್‌ಗಳೆಲ್ಲವನ್ನೂ ನೋಡುತ್ತೇವೆ. 2014 ರಿಂದ ಪ್ರತಿವರ್ಷ ಸರಾಸರಿ 30 ಸಾವಿರ ಆಸುಪಾಸಿನಲ್ಲಿ ಇಂತಹ ಘಟನೆಗಳು ನಡೆಯುತ್ತಿವೆ. 2019 ರಿಂದ 2020ರ ಜನವರಿಗೆ ವರೆಗೆ ನಮ್ಮ ಸರ್ಕಾರದ ಅರ್ಧ ಭಾಗ ಮತ್ತು ಸಮ್ಮಿಶ್ರ ಸರ್ಕಾರದ ಅರ್ಧ ಭಾಗ ಅಧಿಕಾರದಲ್ಲಿದ್ದು, ಸುಮಾರು 22 ಸಾವಿರ ಆ ರೀತಿಯ ಘಟನೆಗಳು ನಡೆದಿವೆ. ಹೀಗಾಗಿ ವಿಶೇಷವಾದ ವ್ಯತ್ಯಾಸ ಮತ್ತು ಏರುಪೇರುಗಳು ಆಗದೇ ಇನ್ನೂ ಕಡಿಮೆ ಆಗಿದೆ. ಯಾವುದೇ ರೀತಿಯ ಕಾನೂನು–ಸುವ್ಯವಸ್ಥೆ ಹದಗೆಡುವ ಪರಿಸ್ಥಿತಿ ಆಗಿಲ್ಲ. I am not taking shelter under this. ಇದರ ಆಧಾರದ ಮೇಲೆ ನಾನು ನನ್ನ ಕೆಲಸ ಕಾರ್ಯಗಳಲ್ಲಿ ಉದ್ವೇಗ ಮಾಡಿಕೊಳ್ಳುವ ಕೆಲಸ ಮಾಡುತ್ತಿಲ್ಲ. ಆದರೆ ವಾಸ್ತವಾಂಶಗಳನ್ನು ಮಾತ್ರ ಸದನದ ಮುಂದೆ ಇಡುತ್ತಿದ್ದು, ಇದರಿಂದ I don’t want to take credit for this.

ಇನ್ನು ಸಿಎಎ ಬಂದ ನಂತರ ಈ ರೀತಿಯ ಘಟನೆಗಳು ಹೆಚ್ಚಾಗಿ, ಮಂಗಳೂರಿನ ಘಟನೆ ವಿಶೇಷವಾಗಿ ಇದಕ್ಕೆ ಸಂಬಂಧಪಟ್ಟಿದೆ ಎಂದು ಮಾತನಾಡುವುದನ್ನು ಕೇಳಿದ್ದೇನೆ. ಇಡೀ ಕರ್ನಾಟಕದಲ್ಲಿ ಸಿಎಎ ಜಾರಿಯಾದ ಮೇಲೆ 736 ಪ್ರತಿಭಟನೆಗಳು ನಡೆದಿವೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ನಡೆದಿದ್ದು, ಬೆಂಗಳೂರು ನಗರದಲ್ಲಿ ವಾರಕ್ಕೆ ಒಂದೂ–ಎರಡು ಪ್ರತಿಭಟನೆಗಳು ನಡೆಯುತ್ತಲೇ ಇವೆ. ಗುಲ್ಬರ್ಗ, ಬೀದರ್, ಹುಬ್ಬಳ್ಳಿ–ಧಾರವಾಡ, ಬಿಜಾಪುರ, ಮೈಸೂರು ಸೇರಿದಂತೆ ಎಲ್ಲಾ ಪ್ರಮುಖ ನಗರಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಕೆಲವು ಕಡೆ ಸಣ್ಣ ಪ್ರಮಾಣದಲ್ಲಿ ಮತ್ತು ಕೆಲವು ಕಡೆ ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆಗಳು ನಡೆದಿವೆ. ಬೆಂಗಳೂರಿನ ಈದ್ಗಾ ಮೈದಾನದಲ್ಲಿ ನಡೆದ ಸಭೆ ಬಹಳ ದೊಡ್ಡ ಪ್ರಮಾಣದಲ್ಲಿತ್ತು. ನಾನು ಅಲ್ಲಿಯ ಸಂಘಟಕರ ಜೊತೆ ನಿರಂತರ ಸಂಪರ್ಕದಲ್ಲಿದ್ದೆನು. ಅವರು “ಕಾನೂನು ಯಾವ ರೀತಿ ಸರಿಯಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಡುವ ಮತ್ತು ವಿರೋಧ ಮಾಡುವ ಕೆಲಸವನ್ನು ಮಾಡುತ್ತೇವೆಯೇ ಹೊರತು ಬೇರೆ ರೀತಿಯ ರಾಜಕೀಯ ಮಾತುಗಳಿಗೆ ಅವಕಾಶವಿರುವುದಿಲ್ಲ” ಎಂದು ಹೇಳಿದ್ದರು. ಅದೇ ಪ್ರಕಾರ ನಡೆದುಕೊಂಡರು. ದೊಡ್ಡ ಸಂಖ್ಯೆಯ ಜನ ಸೇರಿದ್ದರೂ ಯಾವುದೇ ಸಣ್ಣ ಅಹಿತಕರ ಘಟನೆ ಕೂಡ ನಡೆಯಲಿಲ್ಲ. ಎಲ್ಲವೂ ಶಾಂತಿಯುತವಾಗಿ ನಡೆದು, ಸಂಘಟಕರು ನಮ್ಮ ಬಂದೋಬಸ್ತ್‌ಗೆ ಸಹಕಾರವನ್ನು ನೀಡಿದರು. ವಾಹನ ಓಡಾಡುವುದರಿಂದ ಹಿಡಿದು ಎಲ್ಲದ್ದಕ್ಕೂ ಸಹಕಾರ ನೀಡಿದರು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ. ಇಬ್ರಾಹಿಂ:-** ರಾಜ್ಯದಲ್ಲಿ ಎಲ್ಲಿಯೂ ರಾಜಕೀಯವಾಗಿ ಭಾಷಣ ಆಗಲಿಲ್ಲ. ಕೇವಲ ಸಿಎಎ ವಿರೋಧಿಸಿ ಪ್ರತಿಭಟನೆಗಳು ನಡೆದವು. ರಾಜ್ಯ ಸರ್ಕಾರದ ವಿರುದ್ಧವೂ ಪ್ರತಿಭಟನೆ ನಡೆಯಲಿಲ್ಲ. ಆದರೆ ಮಂಗಳೂರಿನ ಪೊಲೀಸರು ನಡೆಸಿದ ಘಟನೆ ಬಗ್ಗೆ ಮಾತ್ರ ಪ್ರಸ್ತಾಪ ಮಾಡಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನಾನು ಹೇಳಿದ್ದನ್ನು ಅವರು ಹೇಳುತ್ತಿದ್ದಾರೆ. ನನ್ನ ಮಾತನ್ನು ಪೂರ್ತಿ ಕೇಳಬೇಕು. ಮಾತನಾಡುವಾಗ ಎಲ್ಲಾ ಊರುಗಳ ಬಗ್ಗೆ ಒಂದೇ ಸಾರಿ ಹೇಳುವುದಕ್ಕೆ ಆಗುವುದಿಲ್ಲ. ನಾನು ಬೆಂಗಳೂರಿನಿಂದ ಪ್ರಾರಂಭ ಮಾಡಿದ್ದೇನೆ. ನಂತರ ಗುಲ್ಬರ್ಗಕ್ಕೆ ಬರುತ್ತೇನೆ. ನಾನು ಹೇಳುವುದಕ್ಕೆ ಸ್ವಲ್ಪ ಅವಕಾಶ ಕೊಡಬೇಕು. ನಮ್ಮ ಮನಸ್ಸಿನಲ್ಲಿ ಏನಿದೆ ಎಂದು ಮಾನ್ಯ ಸದಸ್ಯರಿಗೆ ಬಹಳ ಬೇಗ ಗೊತ್ತಾಗಿದೆ. ನಾನು ಮತ್ತು ಮಾನ್ಯ ಸಿ.ಎಂ. ಇಬ್ರಾಹಿಂ ರವರು ಕೂಡಿಕೊಂಡು ಕರ್ನಾಟಕದ ಪ್ರಮುಖ ಸಮಸ್ಯೆಯನ್ನು ಬಹಳ ಶಾಂತಿಯುತವಾಗಿ ಬಗೆಹರಿಸಿದ್ದೇವೆ ಎಂಬುದು ಅವರಿಗೆ ತಿಳಿದಿದೆ. ಇದು ಇತಿಹಾಸದ ದಾಖಲೆಗೆ ಹೋಗುವ ವಿಚಾರವೂ ಆಗಿದೆ. ಗುಲ್ಬರ್ಗದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಬಹಳ ಶಾಂತಿಯುತವಾಗಿ ಪ್ರತಿಭಟನೆ ಆಯಿತು. ಎಲ್ಲಾ ಕಡೆಗಳಲ್ಲಿಯೂ ಶಾಂತಿಯುತವಾಗಿ ನಡೆದಿದೆ. ಮಂಗಳೂರಿನಲ್ಲಿಯೂ 16,17 ಮತ್ತು 18 ನೇ ತಾರೀಖುಗಳಂದು ಸಿಎಎ ವಿರುದ್ಧ ಸುಮಾರು 6 ಪ್ರತಿಭಟನೆಗಳು ನಡೆದವು. ಜಿಲ್ಲಾಧಿಕಾರಿ ಕಛೇರಿಯಲ್ಲಿ DYFI (Democratic Youth Federation of India), PFI (Popular Front of India), Congress Party and NSUI (National Students' Union of India) ಸೇರಿದಂತೆ 6 ಪ್ರತಿಭಟನೆಗಳನ್ನು ನಡೆಸಿದೆವು. ನಾವು ಎಲ್ಲರಿಗೂ ಅನುಮತಿ ಕೊಟ್ಟಿದ್ದೇವೆ. ಎಲ್ಲವೂ ಶಾಂತಿಯುತವಾಗಿದೆ. ಪ್ರತಿಭಟನೆ ಮಾಡುವುದು ಮೂಲಭೂತ ಹಕ್ಕು, ಅದನ್ನು ಹತ್ತಿಕ್ಕುವ ಪ್ರಯತ್ನ ಮಾಡುವುದಿಲ್ಲ. ಈ ಸದನದಲ್ಲಿ ಎಲ್ಲರೂ ಹೋರಾಟದಿಂದ ಬಂದವರಾಗಿದ್ದಾರೆ. ನಾವೆಲ್ಲರೂ ಒಂದಲ್ಲ ಒಂದು ಪ್ರತಿಭಟನೆಯಲ್ಲಿ ಭಾಗವಹಿಸುತ್ತಲೇ ಇರುತ್ತೇವೆ. ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯದ ಅವಶ್ಯಕತೆ ಇರುತ್ತದೆ. Dissent is an essence of democracy. ಹೀಗಾಗಿ ಎಲ್ಲಾ ರಾಜಕೀಯ ಪಕ್ಷಗಳಿಗೂ ಗೊತ್ತಿದ್ದು, ಯಾರಿಂದಲೂ ಯಾರೂ ಪಾಠ ಕಲಿಯಬೇಕಾಗಿಲ್ಲ. ನಾವು ಸುಮಾರು 776 ಕಡೆ ಪ್ರತಿಭಟನೆ ನಡೆಸಲು ಅನುಮತಿ ಕೊಟ್ಟಿದ್ದು, ಅದೇ ರೀತಿ ಮಂಗಳೂರಿನಲ್ಲಿಯೂ ಅನುಮತಿ ಕೊಟ್ಟಿದ್ದು,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯಾರನ್ನೂ ತಡೆಯುವ ಪ್ರಶ್ನೆ ಇಲ್ಲ. ಒಂದೊಂದು ಸಂದರ್ಭಗಳಲ್ಲಿ ಒಂದೊಂದು ರೀತಿ ಆಗುತ್ತದೆ. ಹುಬ್ಬಳ್ಳಿ ಈದ್ಗಾ ಮೈದಾನದಲ್ಲಿ ಧ್ವಜ ಹಾರಿಸುವ ವಿಷಯಕ್ಕೆ ಸಂಬಂಧಪಟ್ಟಂತೆ ಸುಮಾರು 6 ವರ್ಷಗಳು ನಡೆಯಿತು. ಕರ್ನಾಟಕ ಪೊಲೀಸ್ ಸಾಕಾಗುವುದಿಲ್ಲ ಎಂದು ಕೇರಳ ಮತ್ತು ತಮಿಳುನಾಡಿನಿಂದ ಪೊಲೀಸ್ ಬರುತ್ತಿದ್ದರು. ಎರಡು ವರ್ಷ ಮಿಲಿಟರಿ ಬಂದಿದೆ, ಹುಬ್ಬಳ್ಳಿಯಲ್ಲಿ ಟ್ಯಾಂಕರ್ ಸಹ ಓಡಾಡಿದೆ. ಸರ್ಕಾರ ಬದಲಾವಣೆ ಆಯಿತು. ಮಾಜಿ ಪ್ರಧಾನಿ ಮಾನ್ಯ ಹೆಚ್.ಡಿ. ದೇವೇಗೌಡರು ಮುಖ್ಯಮಂತ್ರಿಯಾದರು. ಆಗ ನಾವೆಲ್ಲರೂ ಈ ಸಮಸ್ಯೆಯನ್ನು ತೀರ್ಮಾನ ಮಾಡಲೇಬೇಕೆಂದು ತೀರ್ಮಾನ ಮಾಡಿ, ಮಾನ್ಯ ಹೆಚ್.ಡಿ. ದೇವೇಗೌಡರು ನಮಗೆ ಅನುಮತಿ ಕೊಟ್ಟು, ಫ್ರೀ-ಹ್ಯಾಂಡ್ ಕೊಟ್ಟರು. ನಾನು ಮತ್ತು ಮಾನ್ಯ ಸಿ.ಎಂ. ಇಬ್ರಾಹಿಂರವರು ಬೆಳಿಗ್ಗೆ 4 ಗಂಟೆಗೆ ಇಲ್ಲಿಂದ ಹೊರಟೆವು.

(ಮುಂದು)

(79)/20.02.2020/11.50/ಹೆಚ್‌ವಿ-ಆರ್‌ಎನ್

**ಶ್ರೀ ಬಸವರಾಜ ಬೊಮ್ಮಾಯಿ(ಮುಂದುವರೆದದ್ದು)**

ಸನ್ಮಾನ್ಯ ಸಭಾಪತಿಯವರೇ, ಶ್ರೀಯುತ ಇಬ್ರಾಹಿಂ ಎನ್ನುವವರ ಮಗ ಮೃತಪಟ್ಟು ಮೂರು ದಿನಗಳಾಗಿದ್ದವು. ನಾನು ಅವರ ಮನೆಗೆ ಹೋದೆ, ಅಲ್ಲಿಂದ ನೇರವಾಗಿ ನಾನು ಮತ್ತು ಮಾನ್ಯ ಸಿ.ಎಂ.ಇಬ್ರಾಹಿಂ ಸಾಹೇಬರು ಇಬ್ಬರು ಕಬ್ರಿಸ್ತಾನಕ್ಕೆ ಹೋಗಿ ಆ ಮಗುವಿನ ಶವಕ್ಕೆ ನಮಸ್ಕಾರ ಮಾಡಿ, ಹುಬ್ಬಳ್ಳಿಗೆ ಹೋದೆವು. ಹುಬ್ಬಳ್ಳಿಯ ಮೂರು ಸಾವಿರ ಮಠದಲ್ಲಿ ಮತ್ತು ಬೇರೆಲ್ಲ ಕಡೆಗಳಲ್ಲಿ ಹಿಂದೂ-ಮುಸಲ್ಮಾನರ ಸಭೆಗಳನ್ನು ಮಾಡಿದ್ದೆವು. ಪರಿಸ್ಥಿತಿ ಅತ್ಯಂತ ಗಂಭೀರವಾಗಿತ್ತು. ಹಲವಾರು ಜನ ಮುಸ್ಲಿಂ ನಾಯಕರ ಜೊತೆಗೆ ಚರ್ಚೆ ಮಾಡಿ ವಾತಾವರಣವನ್ನು ತಿಳಿಗೊಳಿಸುವ ಪ್ರಯತ್ನವನ್ನು ಮಾಡಲಾಗಿತ್ತು. ಎಲ್ಲ ಸರಿ ಹೋಗುತ್ತಿದೆ ಎನ್ನುವ ಸಂದರ್ಭದಲ್ಲಿ ಪುನಃ ಕುಮ್ಮಕ್ಕು ಕೊಟ್ಟು 'ಎಲ್ಲ ಜಮಾತ್‌ಗಳನ್ನು ಕೇಳಬೇಕು' ಎಂದು ಅವರು ಹೇಳಿದರು. ಅದರ ಪರಿಣಾಮವಾಗಿ ಸುಮಾರು 72 ಜಮಾತ್‌ಗಳನ್ನು ಅಲ್ಲಿನ ಉರ್ದು ಹೈಸ್ಕೂಲ್‌ನಲ್ಲಿ ಸೇರಿಸಿ ಮಾನ್ಯ ಸಿ.ಎಂ.ಇಬ್ರಾಹಿಂರವರ ನೇತೃತ್ವದಲ್ಲಿ ಸಭೆ ನಡೆಸಲಾಯಿತು. ಅವರುಗಳ ಮಧ್ಯೆ ನಾನೊಬ್ಬನೇ ಹಿಂದೂ. ಎಲ್ಲಾ ಜಮಾತ್‌ಗಳನ್ನು ಕೇಳಿ ಅವರುಗಳನ್ನು ಒಪ್ಪಿಸಿದೆವು. ಆದರೆ, ನಾಯಕರು ಒಪ್ಪುವುದಿಲ್ಲವೆಂದು ಹೇಳಿದರು. 'ಅಲ್ಲಿ ಧ್ವಜ ಹಾರಿಸುವುದರ ಬಗ್ಗೆ ಕಾನೂನು ಸಮರ ನಡೆಯುತ್ತಿದೆ, ನಾವು ಧ್ವಜ ಹಾರಿಸಿದರೆ ಅದು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಾರ್ವಜನಿಕವಾಗುತ್ತದೆ' ಎನ್ನುವ ಮಾತುಗಳನ್ನು ಅಲ್ಲಿನ ನಾಯಕರು ಹೇಳಿದರು. ಆಗ ನಾವು 'ನೀವು ಧ್ವಜ ಹಾರಿಸಬೇಡಿ, 'ಅಂಜುಮಾನ್ ಇಸ್ಲಾಂ' ಸಂಘಟನೆಯ ಮೂಲಕ ಧ್ವಜ ಹಾರಿಸಲು ಅನುಮತಿಯನ್ನು ಕೇಳಬೇಡಿ ರಕ್ಷಣೆಯನ್ನು ಕೇಳಿ' ಎಂದು ಹೇಳಿದ್ದೆವು. ಅಂದಿನ ಸಂದರ್ಭದಲ್ಲಿ ಮಾನ್ಯ ಹೆಚ್.ಡಿ.ದೇವೇಗೌಡರ ನೇತೃತ್ವದಲ್ಲಿ, ಅಂಜುಮಾನ್ ಇಸ್ಲಾಂ ಸಂಘಟನೆಯವರನ್ನು ಕರೆಯಿಸಿ, ಅವರನ್ನು ಒಪ್ಪಿಸಿ ಶಾಂತಿಯುತವಾಗಿ ಧ್ವಜಾರೋಹಣ ಮಾಡುವಂತಹ ಕೆಲಸವಾಯಿತು. ಸುಮಾರು 6 ವರ್ಷಗಳ ಕಾಲ ಆಗದೇ ಇದ್ದ ಕೆಲಸವನ್ನು ನಾವು 6 ದಿನಗಳಲ್ಲಿ ಮಾಡಿ ಮುಗಿಸಿದ್ದೆವು.

ಸನ್ಮಾನ್ಯ ಸಭಾಪತಿಯವರೇ, ಹಲವಾರು ಸಂದರ್ಭಗಳಲ್ಲಿ ಉದ್ರೇಕಗೊಂಡಿರುವ ವಾತಾವರಣಕ್ಕೆ ಸ್ವಲ್ಪ ಸಮಯ ನೀಡಿದರೆ ಆ ಸಮಸ್ಯೆಯನ್ನು ಶಾಂತಿಯುತವಾಗಿ ಬಗೆಹರಿಸಬಹುದು ಎನ್ನುವುದಕ್ಕೆ ಈದ್ಗಾ ಮೈದಾನದಲ್ಲಿನ ಧ್ವಜಾರೋಹಣ ಪ್ರಕರಣವನ್ನು ಉದಾಹರಣೆಯನ್ನಾಗಿ ನಾನು ಹೇಳಿದೆ. ಈ ವಿಚಾರ ರಾಷ್ಟ್ರೀಯ ಮಟ್ಟದಲ್ಲಿ ಸದ್ದು ಮಾಡಿತ್ತು. ಮಾನ್ಯ ಹೆಚ್.ಡಿ.ದೇವೇಗೌಡರು ಪ್ರಧಾನಮಂತ್ರಿಗಳಾದ ದಿನ ಟಿ.ವಿ.ಯಲ್ಲಿ ಅವರ ಬೇರೆ ಸಾಧನೆಗಳನ್ನು ಬದಿಗೊತ್ತಿ ಮೊದಲನೆಯದಾಗಿ 'ಈದ್ಗಾ ಮೈದಾನದ ವಿವಾದವನ್ನು ಬಗೆಹರಿಸಿದರು' ಎನ್ನುವುದೇ ಮುಖ್ಯ ಸುದ್ಧಿಯಾಗಿ ಪ್ರಚಾರವಾಗಿತ್ತು. ಈ ರಾಜ್ಯ ಹಲವಾರು ಸವಾಲುಗಳನ್ನು ಕಂಡಿದೆ, ಹಲವಾರು ಕೋಮು ವ್ಯತ್ಯಾಸಗಳನ್ನು ಕಂಡಿದೆ. ಆದರೂ ಸಹ ನಾವೆಲ್ಲರೂ ಒಟ್ಟಾಗಿ ಬಾಳಬೇಕೆನ್ನುವುದು ನಮ್ಮ ಜನರ ಹೆತ್ತಾಸೆಯಾಗಿದೆ. ಈ ಸಹಬಾಳ್ವೆಯ ಮನೋಭಾವ ನಮ್ಮನ್ನು ಮುಂದುವರೆಸಿಕೊಂಡು ಹೋಗುತ್ತಿದೆ. ಈಗಲೂ ಸಹ ಅದೇ ಭಾವನೆ ಮುಂದುವರೆಯಬೇಕಾಗಿದೆ.

ಸನ್ಮಾನ್ಯ ಸಭಾಪತಿಯರೇ, ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಮಾತನಾಡುತ್ತಾ, 'ಪ್ರತಿಭಟನೆಗೆ ಅನುಮತಿಯನ್ನು ಕೊಟ್ಟು ಹಿಂತೆಗೆದುಕೊಳ್ಳಲು ಕಾರಣವೇನು, ಸೆಕ್ಷನ್ 144ನ್ನು ಏತಕ್ಕೋಸ್ಕರ ಜಾರಿಗೊಳಿಸಲಾಯಿತು' ಎನ್ನುವ ಪ್ರಶ್ನೆಗಳನ್ನು ಕೇಳಿದ್ದಾರೆ. ಎಲ್ಲರಿಗೂ ಕೊಟ್ಟ ರೀತಿಯಲ್ಲಿಯೇ 'ಸಮಸ್ತ ಕೇರಳ ಸುನ್ನಿ ಸ್ಟೂಡೆಂಟ್ ಫೆಡರೇಶನ್' ಇವರಿಗೂ ಸಹ ಪ್ರತಿಭಟನೆ ನಡೆಸಲು ಅನುಮತಿಯನ್ನು ಕೊಟ್ಟಿದ್ದೆವು. ಇವರು ಇಡೀ ರಾಷ್ಟ್ರದಲ್ಲಿ ಭಾರತ್ ಬಂದ್‌ಗೆ ಕರೆಯನ್ನು ಕೊಟ್ಟಂಥ ಸಂದರ್ಭದಲ್ಲಿ ಉತ್ತರಪ್ರದೇಶ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಗಲಭೆಗಳಾಗಿದ್ದ ಬಗ್ಗೆ ಇಂಟೆಲಿಜೆನ್ಸ್ ರಿಪೋರ್ಟ್ ಬಂದಿತ್ತು. ಕರ್ನಾಟಕದ ಬಗ್ಗೆ ಶಾಂತಿಯುತ ರಾಜ್ಯ ಎಂದು ಎಷ್ಟೇ ಮಾತನಾಡಿದರೂ ಸಹ ಕರಾವಳಿ ಪ್ರದೇಶಕ್ಕೆ ತನ್ನದೇ ಆಗಿರುವ ಇತಿಹಾಸವಿದೆ. ಹಲವಾರು ಕೊಲೆ ಪ್ರಕರಣಗಳು ನಡೆದಿವೆ. ವಿಶೇಷವಾಗಿ 2012 ರಿಂದ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2018ನೇ ಇಸವಿಯವರೆಗೆ ಹಲವಾರು ಜನ ಕಾರ್ಯಕರ್ತರನ್ನು ಮತ್ತು ನಾಯಕರನ್ನು ಕೊಚ್ಚಿ ಕೊಂದಿರುವಂತಹ ಉದಾಹರಣೆಗಳಿವೆ ಹಾಗೂ ಹಲವಾರು ಸಂಘರ್ಷಗಳಾಗಿರುವ ಇತಿಹಾಸವಿದೆ. ಪಕ್ಕದ ರಾಜ್ಯದಲ್ಲಿಯೂ ಅತ್ಯಂತ ಸೂಕ್ಷ್ಮ ಸಾಮಾಜಿಕ ವ್ಯವಸ್ಥೆ ಇರುವುದನ್ನು ನಾವು ಗಮನಿಸಿದೆವು. ಈ ಎಲ್ಲ ಹಿನ್ನೆಲೆಯಲ್ಲಿ ಈ ಪ್ರಕರಣವನ್ನು ನೋಡಿದಾಗ, ಇಲ್ಲೂ ಗಲಭೆಗಳಾಗುವ ಸೂಚನೆ ಇತ್ತು. ಆದ್ದರಿಂದ ಸೆಕ್ಷನ್ 144ನ್ನು ಜಾರಿಗೊಳಿಸಿ ವ್ಯಾಪಕವಾದ ಪ್ರಚಾರವನ್ನು ನೀಡಿದ್ದೆವು. ಧ್ವನಿವರ್ಧಕಗಳ ಮೂಲಕ ಘೋಷಣೆ ಮಾಡಿದ್ದೇವೆ. ದಿನಪತ್ರಿಕೆಗಳಲ್ಲಿ, ದೂರದರ್ಶನದಲ್ಲಿ ಮತ್ತು ಇಂಟರ್‌ನೆಟ್‌ನಲ್ಲಿ ಸುದ್ದಿಯನ್ನು ನೀಡಲಾಗಿತ್ತು. ಇದಲ್ಲದೇ ಎಸ್.ಕೆ.ಎಸ್.ಎಸ್.ಎಫ್. ನ ಖಾಜಿಯವರು ಕಾಸರಗೋಡಿನಲ್ಲಿ ಇದ್ದರು. ಪೊಲೀಸಿನವರು ಅವರ ಮನೆಗೆ ಹೋಗಿ ಪ್ರತಿಭಟನೆಯನ್ನು ಕೈಬಿಡಬೇಕೆಂದು ಕೇಳಿದಾಗ ಅವರು, 'ಆಯಿತು ಇನ್ನೊಂದು ದಿನ ಮಾಡುತ್ತೇವೆ' ಎಂದು ಹೇಳಿ ಅವರು ಅಲ್ಲಿಂದಲೇ 'ಪ್ರತಿಭಟನೆ ನಡೆಸುವುದನ್ನು ವಿತ್‌ಡ್ರಾ ಮಾಡಿದ್ದೇವೆ' ಎಂದು ಎಲ್ಲಾ ಕಡೆಗೆ ಮೆಸೇಜ್ ಕಳುಹಿಸಿಕೊಟ್ಟರು. ಅವರು ಮೆಸೇಜ್ ಕಳುಹಿಸಿದ ಒಂದು ಗಂಟೆಯೊಳಗಾಗಿ ಅವರನ್ನು ಹೀನಾಯವಾಗಿ ಬೈದು ವಾಟ್ಸ್‌ಅಪ್ ಮೆಸೇಜ್‌ಗಳನ್ನು ಕಳುಹಿಸಿಕೊಡಲಾಯಿತು. ಆಗ ಖಾಜಿಯವರು 'ನಾನು ಮಾಡಿರುವ ನಿರ್ಣಯದಲ್ಲಿ ಯಾವುದೇ ಬದಲಾವಣೆ ಇಲ್ಲ, ಪ್ರತಿಭಟನೆ ಶಾಂತಿಯುತವಾಗಬೇಕು, ಬೇರೆ ಯಾರಿಗೂ ತೊಂದರೆಯುಂಟು ಮಾಡುವುದು ನಮ್ಮ ಉದ್ದೇಶವಲ್ಲ' ಎಂದು ಹೇಳಿದರು ಮತ್ತು ಸರಿಯಾದ ನಿರ್ಣಯವನ್ನು ಅವರು ತೆಗೆದುಕೊಂಡರು. ಆದರೂ ಕೂಡ ಕೆಲವರು ನಾವು ಪ್ರತಿಭಟನೆ ಮಾಡಿಯೇ ಮಾಡುತ್ತೇವೆಂದು ಹೇಳಿ Riyaz Farangipet, he is office bearer of SDPI (Social Democratic Party of India). 'ಪೊಲೀಸರಲ್ಲ ಇಂಡಿಯನ್ ಆರ್ಮಿ ಬಂದರೂ ಸಹ ಅವರ ಹೆಗಲ ಮೇಲೆ ನಿಂತು ಪ್ರತಿಭಟನೆ ಮಾಡಬೇಕು. ಯಾವುದೇ ಕಾರಣಕ್ಕೂ ನಾವು ಹಿಂದೆ ಸರಿಯಬಾರದು, ಎಲ್ಲರೂ ಬನ್ನಿ' ಎಂದು ಕರ್ನಾಟಕ ಮತ್ತು ಕೇರಳ ರಾಜ್ಯದವರಿಗಷ್ಟೇ ಅಲ್ಲ ಉತ್ತರಪ್ರದೇಶ ಮತ್ತು ಅಸ್ಸಾಂ ರಾಜ್ಯದವರಿಗೂ ಸಹ ಸಂದೇಶವನ್ನು ಕಳುಹಿಸಿದ್ದರು. ಇಂತಹ ಪ್ರಚೋದನಕಾರಿ ಶಕ್ತಿಗಳು ಈ ಘಟನೆಯ ಹಿಂದಿವೆ ಎನ್ನುವುದನ್ನು ನಾವು ಯಾರೂ ಮರೆಯಬಾರದು.

ಅಹಿತಕರ ಘಟನೆಗಳು ನಡೆಯಬಾರದೆನ್ನುವ ಹಿನ್ನೆಲೆಯಲ್ಲಿ ಸೆಕ್ಷನ್ 144 ನ್ನು ಜಾರಿಗೊಳಿಸಿ, ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅವರುಗಳು ಮೊದಲು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಜಮಾವಣೆಗೊಂಡು, ಸ್ಟೇಟ್ ಬ್ಯಾಂಕ್ ಸರ್ಕಲ್‌ನಲ್ಲಿ ಪೊಲೀಸರ ಮೇಲೆ ಕಲ್ಲು ತೂರಾಟವನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾರಂಭಿಸಿದರು. ಕಲ್ಲು ತೂರಾಟ ಮಾಡಿದವರು ಬಸ್ ನಿಲ್ದಾಣದ ಒಳಗೆ ಮತ್ತು ಅಂಗಡಿಗಳೊಳಗೆ ಹೋದರು. ನಮ್ಮ ಪೊಲೀಸರು ಅವರನ್ನು ಹಿಂಬಾಲಿಸಿದರು. ಸುಮಾರು 4-5 ಜನರು ಪೊಲೀಸರ ಕೈಗೆ ಸಿಕ್ಕಿ ಬಿದ್ದರು. ಉಳಿದವರು ಪ್ರತಿಭಟನೆ ಮಾಡುತ್ತಿದ್ದರು. ಸುಮಾರು 39 ಜನರನ್ನು ದಸ್ತಗಿರಿ ಮಾಡಿ, ಬಸ್‌ನಲ್ಲಿ ಕಳುಹಿಸಿಕೊಟ್ಟಿದ್ದೆವು. ಆದರೂ ಸಹ ಪರಿಸ್ಥಿತಿ ತಹಬದಿಗೆ ಬರಲಿಲ್ಲ. ಮತ್ತೆ ಕಲ್ಲು ತೂರಾಟ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಅವರನ್ನು ಬೆನ್ನತ್ತಿ ಹೋದಾಗ ಅವರು ಮಿಷನ್ ಸ್ಟ್ರೀಟ್‌ಗೆ ಹೋದರು. ಅಲ್ಲಿಂದ ನಾರ್ತ್ ಪೊಲೀಸ್ ಸ್ಟೇಷನ್ ಕಡೆಗೆ ಧಾವಿಸಿದರು. ಇಲ್ಲಿ ಆ ಸಂಘಟನೆಯಲ್ಲಿರುವವರು ಮಾತ್ರವಲ್ಲ ಬೇರೆ ಬೇರೆ ಕಡೆಗಳಿಂದ ಬಂದಂತಹವರು ಇದ್ದರು. ಸುಮಾರು 2 ರಿಂದ 3 ಸಾವಿರ ಜನ ಸೇರಿಕೊಂಡು ಎಲ್ಲ ಕಡೆಯಿಂದ ಕಲ್ಲು ತೂರಾಟ ಮಾಡುವುದಕ್ಕೆ ಪ್ರಾರಂಭಿಸಿದರು. ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸಿನವರು ಬರಬಾರದೆಂದು ಪೊಲೀಸ್ ವಾಹನಗಳಿಗೆ ಅಡ್ಡಿಪಡಿಸಲು ರಸ್ತೆಗಳಲ್ಲಿ ಪೈಪ್ ಮುಂತಾದವುಗಳನ್ನು ಹಾಕಿದ್ದರು. ಇದರ ಜೊತೆಗೆ ಮುಖಕ್ಕೆ ಬಟ್ಟೆ ಕಟ್ಟಿಕೊಂಡು ಪೆಟ್ರೋಲ್ ಬಾಂಬ್ ಅನ್ನು ಸಹ ಎಸೆಯುವುದಕ್ಕೆ ಪ್ರಾರಂಭಿಸಿದರು. ಪೊಲೀಸ್ ಸ್ಟೇಷನ್ ಒಳಗಡೆ ಒಂದು ಬಾಂಬ್ ಬಿತ್ತು ಮತ್ತು ಸುಮಾರು 50-60 ಜನ ಪೊಲೀಸ್ ಸಿಬ್ಬಂದಿ ಇದ್ದಂತಹ ಪೊಲೀಸ್ ಸ್ಟೇಷನ್ ಮೇಲೆ ಮೂರೂ ದಿಕ್ಕುಗಳಿಂದ ಕಲ್ಲು ತೂರಾಟ ಮಾಡಿದರು. ಟಯರ್‌ಗಳಿಗೆ ಬೆಂಕಿ ಹಚ್ಚಿ ಪೊಲೀಸ್ ಸ್ಟೇಷನ್ ಒಳಗೆ ನುಗ್ಗಿಸುವಂತಹ ಪ್ರಯತ್ನ ಮಾಡಿದರು. ಆಗ ಪೊಲೀಸ್‌ನವರು ಲಾಠಿಚಾರ್ಜ್ ಮಾಡಿದರು. ಸುಮಾರು 1 ರಿಂದ 3 ಗಂಟೆಯವರೆಗೆ ಪೊಲೀಸ್ ಮತ್ತು ಜನರ ಮಧ್ಯೆ ಈ ಸಂಘರ್ಷ ನಡೆಯುತ್ತಿತ್ತು. ಕಲ್ಲು ತೂರಾಟವಾಯಿತು. ಆಗ ಲಾಠಿ ಚಾರ್ಜ್ ಆಯಿತು. ಅತೀ ಹೆಚ್ಚು ಕಲ್ಲು ತೂರಾಟ ಮತ್ತು ಪೆಟ್ರೋಲ್ ಬಾಂಬ್‌ಗಳನ್ನು ಎಸೆಯುವುದಕ್ಕೆ ಪ್ರಾರಂಭಿಸಿದ ಮೇಲೆ ಪೊಲೀಸಿನವರು ಟಿಯರ್ ಗ್ಯಾಸ್ ಅನ್ನು ಪ್ರಯೋಗಿಸಿದರು. 'ಎಷ್ಟು ಟಿಯರ್ ಗ್ಯಾಸ್ ಶೆಲ್‌ಗಳನ್ನು ಬಳಕೆ ಮಾಡಲಾಗಿದೆ, ಅದರ ಲೆಕ್ಕ ಇದೆಯೇ ಮತ್ತು ಗೋಲಿಬಾರ್ ಮಾಡುವುದಕ್ಕೂ ಮೊದಲು ಬೇರೆಲ್ಲ ಆಯ್ಕೆಗಳನ್ನು ಉಪಯೋಗ ಮಾಡಿದ್ದೀರೋ ಇಲ್ಲವೋ' ಎನ್ನುವ ಪ್ರಶ್ನೆಯನ್ನು ಮಾನ್ಯ ವಿರೋಧ ಪಕ್ಷದ ಸದಸ್ಯರೊಬ್ಬರು ಕೇಳಿದ್ದಾರೆ.

(ಮುಂದುವರಿದಿದೆ)

(80) 20.2.2020 12.00 ಪಿಕೆ:ವಿಕೆ

**ಶ್ರೀ ಬಸವರಾಜ ಬೊಮ್ಮಾಯಿ(ಮುಂದುವರೆದಿದೆ)**

ಖಂಡಿತವಾಗಿ ಧ್ವನಿ ಮುದ್ರಿಕೆಯಲ್ಲಿ ಏನು ಹೇಳಬೇಕಿತ್ತೋ ಅದನ್ನು ಹೇಳಿದ್ದೇವೆ. ಆದಾದ ಮೇಲೆ ವಾರ್ನಿಂಗ್ ಕೊಟ್ಟು ಲಾಠಿ ಚಾರ್ಜ್ ಮಾಡಿದ್ದೇವೆ. ಅದರಿಂದ ನಿಯಂತ್ರಣಕ್ಕೆ ಬರದೇ ಇದ್ದಾಗ ಟಿಯರ್ ಗ್ಯಾಸ್ ಅನ್ನು ಬಳಕೆ ಮಾಡಲಾಗಿದೆ. 106 ಟಿಯರ್ ಗ್ಯಾಸ್ ಸೆಲ್‌ಗಳನ್ನು, 47 ರಬ್ಬರ್

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬುಲೆಟಗಳನ್ನು ಬಳಕೆ ಮಾಡಲಾಗಿದೆ. ಪಿಸ್ತೂಲ್‌ನಿಂದ 10 ಗುಂಡುಗಳನ್ನು ಗಾಳಿಯಲ್ಲಿ ಹಾರಿಸಲಾಗಿದೆ. 303 ರೈಫಲ್‌ನಲ್ಲಿ 10 ರೌಂಡ್ ಗಾಳಿಯಲ್ಲಿ ಗುಂಡು ಹಾರಿಸಿದ್ದೇವೆ. ಎಸ್‌ಎಲ್‌ಆರ್‌ನಿಂದ 36 ಸಲ ಗಾಳಿಯಲ್ಲಿ ಗುಂಡು ಹಾರಿಸಿದ್ದೇವೆ. ಇಷ್ಟೆಲ್ಲಾ ಆದಮೇಲೂ attack ಮಾಡುವುದು ಹೆಚ್ಚೇ ಆಯಿತು. ಏಕೆಂದರೆ ಅದು ಪೂರ್ವನಿಯೋಜಿತ ಆಗಿತ್ತು. ಸಿಸಿ ಕ್ಯಾಮೆರಾಗಳಿಗೆ ಕಲ್ಲು ಹೊಡೆದು ನಾಶ ಮಾಡಿದ್ದಾರೆ. ಕಟ್ಟಿಗೆ ಹಿಡಿದು ದಿಕ್ಕು ತಪ್ಪಿಸಿದ್ದಾರೆ. ಪೂರ್ಣ ನಿಯೋಜಿತ ತಯಾರಾಗಿ ಬಂದಿರುವ mob ಇದಾಗಿತ್ತು. ಇದರಲ್ಲಿ ಬಹಳ ದೊಡ್ಡ ಲೀಡರ್ಸ್ ಇದ್ದಾರೆ ಎಂದು ಹೇಳುವುದಿಲ್ಲ. ಆದರೆ ಈ ಪೂರ್ಣ ನಿಯೋಜಿತ mob ಯಾರ ನಿಯಂತ್ರಣದಲ್ಲೂ ಇರಲಿಲ್ಲ. ಇಷ್ಟೆಲ್ಲಾ ಆಗಿದ್ದರೂ ನಾವು ಒಂದೇ ಸಲ ಗೋಲಿಬಾರ್ ಮಾಡಲಿಲ್ಲ. ಹಿಂದಿನ ಮಂಗಳೂರು ಮೇಯರ್ ಆಗಿದ್ದಂಥ ಶ್ರೀ ಆಶ್ರಫ್ ಅವರನ್ನು ಕರೆಸಿದೆವು; ಅವರ ಜೊತೆ 10 ಜನ ಕೂಡ ಇದ್ದರು. ನಾವು ಅವರಿಗೆ, 'ನೀವಾದರೂ ಜನರಿಗೆ appeal ಮಾಡಿ' ಎಂದು ಹೇಳಿದಾಗ. ಅವರು ಅಪೀಲ್ ಮಾಡಲು ಮುಂದೆ ಹೋದರು. ಆದರೆ ಅವರನ್ನು ಅಡ್ಡಗಟ್ಟಲಾಯಿತು. ಅವರೇ ಪೊಲೀಸ್ ಜೀಪ್ ಇಳಿದು ನಾನೇ ಹೋಗುತ್ತೇನೆ ಎಂದು ಜನಗಳ ಮಧ್ಯೆ ಹೋದಾಗ ಅವರ ಹಣೆಗೆ, ಹೊಟ್ಟೆಗೆ ಕಲ್ಲೇಟು ಬಿದ್ದಿತು. ನಂತರ ಅವರನ್ನು ಆಸ್ಪತ್ರೆಗೆ ಸೇರಿಸುವಂತಹ ವ್ಯವಸ್ಥೆಯಾಯಿತು. ನಮ್ಮ ಪ್ರಯತ್ನವೆಲ್ಲವೂ ಕೈಮೀರಿ ಹೋಯಿತು. ಉದ್ರಿಕ್ತರಿಂದ ಅಲ್ಲೇ ಇದ್ದ ಕಿಣಿ ಗನ್ ಶಾಪ್‌ಗೆ ನುಗ್ಗುವಂತಹ ಪ್ರಯತ್ನ ಮಾಡಲಾಯಿತು. ಕಟ್ಟಿಗೆ ಬಾಗಿಲನ್ನು ಒಡೆದರೂ ಒಳಗೆ ಕಬ್ಬಿಣದ ಗ್ರಿಲ್ ಇದ್ದುದರಿಂದ ಅದನ್ನು ತೆಗೆಯಲಿಕ್ಕೆ ಆಗಲಿಲ್ಲ. ಅಲ್ಲಿ ಸುಮಾರು ಪಿಸ್ತೂಲ್‌ಗಳು, ರೈಫಲ್‌ಗಳು with bullets ಅಲ್ಲಿ deposit ಆಗಿತ್ತು. ಇಂತಹ ದುಷ್ಕರ್ಮಿಗಳ ಕೈಗೆ, ill-motivated crowd ಗೆ ಶಸ್ತ್ರಾಸ್ತ್ರಗಳು ಸಿಕ್ಕಿದರೆ ಏನು ಅನಾಹುತವಾಗುತ್ತಿತ್ತು ಎಂದು ಅರ್ಥ ಮಾಡಿಕೊಂಡು, warning ಕೊಟ್ಟಾಗಲೂ ಕೇಳದೇ ಇದ್ದಾಗ ಅನಿವಾರ್ಯವಾಗಿ ಗುಂಡನ್ನು ಹಾರಿಸುವಂತಹ ಪರಿಸ್ಥಿತಿ ಬಂತು. ಮಾನ್ಯ ಸಭಾಪತಿಯವರೇ, ನಿರ್ದಿಷ್ಟವಾಗಿ ಇಂಥವರಿಗೆಯೇ ಗುಂಡು ಹೊಡೆಯಬೇಕು, ಅಂಥವರಿಗೆಯೇ ಗುಂಡು ಹೊಡೆಯಬೇಕು ಎನ್ನುವ ಉದ್ದೇಶ ಇರುವುದಿಲ್ಲ. ಹುಬ್ಬಳ್ಳಿ ಈದ್ಗಾ ಮೈದಾನದ ಗಲಭೆ ಸಂದರ್ಭದಲ್ಲಿ ಗುಂಡೇಟು ತಿಂದು ಸತ್ತವರು ಯಾರೆಂದರೆ, ಇಸ್ತ್ರಿ ಮಾಡುವವನು, salon ಗೆ ಹೋದವನು ಇಂಥವರೇ ಆಗಿದ್ದರು. ಆದರೆ ಇಲ್ಲಿ ಅಬ್ದುಲ್ ಜಲೀಲ್ ಎನ್ನುವವರ್ಯಾರಿದ್ದರೋ ಅವರ ಮೇಲೆ ಈಗಾಗಲೇ ಒಂದು ಕೇಸ್ ಇತ್ತು,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಫ್‌ಐಆರ್ ಆಗಿದೆ, ಚಾರ್ಜ್ ಶೀಟ್ ಆಗಿದೆ, ಮಂಗಳೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 129/2014, ಕಲಂ 143, 147, 341, 353, 504, 506 ಮತ್ತು 149 ಐಪಿಸಿ ಈ ಸೆಕ್ಷನ್‌ಗಳ ಅಡಿ writing ಗೆ ಅವನ ಮೇಲೆ ಕೇಸುಗಳಿತ್ತು. ಈ ಕೇಸ್‌ಗಳಿತ್ತು ಎಂದ ಮಾತ್ರಕ್ಕೆ ಆತನೇ ಸಂಪೂರ್ಣ ಅಪರಾಧಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಆ ಸಂದರ್ಭಗಳಲ್ಲಿ ಅವರು ಮುಂಚೂಣಿಯಲ್ಲಿದ್ದರು. ಹೀಗಾಗಿ ಅವರಿಗೆ ಗುಂಡೇಟು ಬಿತ್ತು. ನೌಶೀನ್ ಎನ್ನುವವನೂ ಕೂಡ ಇದರಲ್ಲಿ ಭಾಗವಹಿಸಿದ್ದ. ಆತ ಬಟ್ಟೆ ಕಟ್ಟಿಕೊಂಡು ತಯಾರಿ ಮಾಡಿಕೊಂಡು ಹೋಗುತ್ತಿದ್ದ ಭಾವಚಿತ್ರಗಳು ಇವೆ. ಇವರು ಮುಂಚೂಣಿಯಲ್ಲಿ ಇದ್ದುದರಿಂದ ಗುಂಡೇಟು ಬಿದ್ದು ಗಾಯವಾಗಿತ್ತು, ನಂತರ ಆತ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾನೆ. ನಮಗೂ ಕೂಡ ದುಃಖ ಇದೆ. ಯಾರನ್ನೂ ಕೂಡ ಹಿಂಸಾತ್ಮಕವಾಗಿ ನೋಡುವಂತಹ ದೃಷ್ಟಿ ನಮ್ಮದಲ್ಲ; ನಮ್ಮ ಸರ್ಕಾರದ್ದಲ್ಲ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಭಾಪತಿಯವರೇ, ದೊಡ್ಡ ಪ್ರಮಾಣದಲ್ಲಿ ಆಗಬಹುದಾದಂತಹ ಅನಾಹುತವನ್ನು ತಪ್ಪಿಸಲು ಅನಿವಾರ್ಯವಾದ ಕ್ರಮ ಇದಾಗಿತ್ತು. ಹಿಂದೆ ರಾಜ್ಯದಲ್ಲಿ ಹಲವಾರು ಬಾರಿ ಪೊಲೀಸರು ಈ ಕೆಲಸ ಮಾಡಿದ್ದಾರೆ. ಆ ಕೆಲಸವನ್ನು ನಮ್ಮ ಸರ್ಕಾರ ಕೂಡ ಮಾಡಿದೆ. ಈಗ ತನಿಖೆ ನಡೆಯುತ್ತಿದೆ. ಮಂಗಳೂರು ಜಿಲ್ಲೆಯಲ್ಲಿ ಹಲವಾರು ಬಾರಿ ಘರ್ಷಣೆಗಳಾಗಿವೆ; ಗೋಲಿಬಾರ್ ಕೂಡ ಆಗಿವೆ. ನಾನಾ ಕಾರಣಗಳಿಂದ ಅಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿರುವ ಉದಾಹರಣೆಗಳಿವೆ. ಮುಲ್ಕಿಯಲ್ಲಿ ಕೋಮು ಸಂಘರ್ಷವಾದ ಸಂದರ್ಭದಲ್ಲಿ ಸುಕುಮಾರ್ ಶೆಟ್ಟಿ ಎನ್ನುವವರ ಮೃತ್ಯುವಾಗಿತ್ತು. ಅವರ ಅಂತಿಮ ಸಂಸ್ಕಾರ ಮುಗಿಸಿ ಬರುವಾಗ ಅಲ್ಲಿ ಪೊಲೀಸರಿಗೆ ಘೇರಾವು ಹಾಕಿದರು ಎಂದು ಗೋಲಿಬಾರ್ ಮಾಡಲಾಯಿತು. ಆಗ ಇಬ್ಬರು ತೀರಿಕೊಂಡರು. ಅಲ್ಲೂ ಕೂಡ magisterial enquiry ಆಯಿತು, ಯಾವುದೇ judicial enquiry ಆಗಲಿಲ್ಲ. 2007ರಲ್ಲಿ ಈ ಘಟನೆಯಾಯಿತು. ಬೆಂಗಳೂರಿನಲ್ಲಿ ಕಾವೇರಿ ವಿಚಾರವಾಗಿ ಸುಪ್ರೀಮ್ ಕೋರ್ಟ್‌ನ ಅಂತಿಮ ಆದೇಶ ಬಂದಾಗ ಆಗಲೂ ಗೋಲಿಬಾರ್ ಆಯಿತು. ITBP (Indo-Tibetan Border Police) ಯವರು ಗೋಲಿಬಾರ್ ಮಾಡಿದ್ದರು. ಅಂದರೆ ಕರ್ನಾಟಕ ಸರ್ಕಾರದ ಅಡಿಯಲ್ಲೇ ಪೊಲೀಸರು ನಿಯಂತ್ರಣ ಮಾಡುವ ಸಂದರ್ಭದಲ್ಲಿ 12.9.2016ರಲ್ಲಿ ಗೋಲಿಬಾರ್ ಆಗಿ ಒಬ್ಬ ಸತ್ತ. ಆಗಲೂ magisterial enquiry ಆಗಿದೆ, judicial enquiry ಆಗಲಿಲ್ಲ. ಕೂಡ್ಲಗಿಯಲ್ಲಿ ಪೊಲೀಸ್ ಫೈರಿಂಗ್ ಆದರೂ ಯಾರೂ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೀರಿಕೊಳ್ಳಲಿಲ್ಲ. ಆಗ ಆ ಸಂಬಂಧ ಯಾವುದೇ ರೀತಿಯ ವಿಚಾರಣೆ ಆಗಲಿಲ್ಲ. ಗಾರ್ಮೆಂಟ್ ಫ್ಯಾಕ್ಟರಿಯ ನೌಕರರು ದೊಡ್ಡ ಪ್ರಮಾಣದಲ್ಲಿ ಬೀದಿಗೆ ಬಂದರು. ಅಲ್ಲೂ ಫೈರಿಂಗ್ ಆದರೂ ಸುದೈವದಿಂದ ಯಾರು ತೀರಿಕೊಳ್ಳಲಿಲ್ಲ. ಆ ಸಂಬಂಧ magisterial inquiry ಕೂಡ ಆಗಲಿಲ್ಲ. ಕೊಡಗಿನಲ್ಲಿ ಟಿಪ್ಪು ಜಯಂತಿಯನ್ನು ವಿರೋಧ ಮಾಡಿದ ಸಂದರ್ಭದಲ್ಲಿ ಕುಟ್ಟಪ್ಪ ಎನ್ನುವವನ ಕೊಲೆಯಾಯಿತು, ಆತನಿಗೆ ಗುಂಡು ಬಡಿಯಿತು. ಆ ಸಂಬಂಧ magisterial enquiry ಮಾಡಿದರು. judicial enquiry ಆಗಲಿಲ್ಲ. ಆಗಿನ ಮೈಸೂರಿನ ಡಿಸಿಯಾಗಿದ್ದ ಶ್ರೀಮತಿ ಶಿಖಾರವರು enquiry ಮಾಡಿದರು. ಈಗ ಅವರು ಕೆಸ್‌ಆರ್‌ಟಿಸಿ ಎಂಡಿ ಆಗಿದ್ದಾರೆ. ಮಾನ್ಯ ಸಭಾಪತಿಯವರೇ, National Human Rights Commission ಅವರು ಒಂದು guidelines ಕೊಟ್ಟಿದ್ದಾರೆ. *Death* During the course of *Police Action* ನಲ್ಲಿ ಅವರೇನು ಹೇಳುತ್ತಾರೆ ಎಂದರೆ: "...*Investigation to some other independent investigation agency, such as State CB, CID."* ಇಲ್ಲಿ criminal angel ಅನ್ನು investigation ಮಾಡುವುದಕ್ಕೋಸ್ಕರ CID, CB ಗೆ ಕೊಡಬೇಕು ಎಂದು ಹೇಳುತ್ತಾರೆ. ಅವರು ಇನ್ನೊಂದು ಕಂಡೀಷನ್ ಹಾಕುತ್ತಾರೆ. "*Magisterial enquiry must be held in all the cases of death which occurs in the course of police action."* ಇವೆರಡನ್ನೂ ಕೂಡ ನಾವು ಮಾಡಿದ್ದೇವೆ. ಯಾವುದೇ ರಾಜ್ಯದಲ್ಲಿ ಏನೇ ಆದರೂ ಕೂಡ ಈ ನಾರ್ಮ್ಸ್‌ನ್ನು follow ಮಾಡಬೇಕಾಗುತ್ತದೆ. ಈ ಕೇಸ್‌ನಲ್ಲೂ ನಾವು ಇದನ್ನೇ follow ಮಾಡಿದ್ದೇವೆ; ಯಾವುದೂ ಕೂಡ ವ್ಯತ್ಯಾಸ ಮಾಡಿಲ್ಲ. Magisterial enquiry ಗೆ ನೇಮಿಸಿದ್ದೇವೆ ಮತ್ತು ಸಿಐಡಿ ತನಿಖೆಗೂ ಆದೇಶ ಮಾಡಿದ್ದೇವೆ. ಹಲವಾರು ದೂರುಗಳು ಪೊಲೀಸರ ಮೇಲೂ ಬಂದಿರುತ್ತವೆ, excess ಆಗಿದೆ ಎಂದು ಬಂದಿರುತ್ತವೆ. Offenders action ಗಳಿಗೆ questionable ಇರುತ್ತವೆ. ಪೊಲೀಸರು ಕೇಸ್ ಬುಕ್ ಮಾಡಿರುತ್ತಾರೆ. ಇವುಗಳೆಲ್ಲದರ enquiry ಮಾಡಬೇಕಾಗುತ್ತದೆ. Criminal activity ಯನ್ನು ತನಿಖೆ ಮಾಡಲು ಸಿಐಡಿಗೂ ಮತ್ತು ಘಟನೆ ನಡೆಯುವುದಕ್ಕೆ ಮುಂಚೆ, ಘಟನೆ ನಡೆದಾಗ, ಘಟನೆ ನಂತರ ಏನಾಗಿದೆ ಎನ್ನುವುದರ ಬಗ್ಗೆ ತನಿಖೆ ಮಾಡಲು Executive Magistrate ಇರುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಸಾಮಾನ್ಯವಾಗಿ ಇಂಥದ್ದನ್ನು Assistant Commissioner ಅವರಿಗೆ ವಹಿಸಲಾಗುತ್ತದೆ. ನಾವು ಡಿಸಿ ಉಡುಪಿಯವರಿಗೆ ಕೊಟ್ಟಿದ್ದೇವೆ; ಏಕೆಂದರೆ ಅವರಿಗೆ ಅಲ್ಲಿನ ವಾತಾವರಣ ಗೊತ್ತಿರುತ್ತದೆ. ಅವರು ಈಗ ತನಿಖೆ ನಡೆಸುತ್ತಿದ್ದಾರೆ. It is in very advance stage. ನಮ್ಮ ಹೈಕೋರ್ಟ್‌ನ ಸಿಜೆ ಮುಂದೆ 24 ನೇ ತಾರೀಖು ಒಂದು ಪಿಐಎಲ್ ಇದ್ದು, ಇದುವರೆಗೂ ನೀವು ಏನು ತನಿಖೆ ಮಾಡಿದ್ದೀರೋ ಆ ಮಾಹಿತಿಗಳನ್ನು sealed cover ನಲ್ಲಿ ಕೊಡಿ ಎಂದು ಕೇಳಿದ್ದಾರೆ. ಅದನ್ನು ನಾವು ಇವತ್ತು ಕೋರ್ಟ್‌ನ ಮುಂದೆ ಹಾಜರುಪಡಿಸುತ್ತೇವೆ. What is the progress of the enquiry ಎಂದು ಆ ವಿವರಗಳನ್ನು ಕೊಡುತ್ತಿದ್ದೇವೆ. ಹಲವಾರು ಪಿಐಎಲ್‌ಗಳು file ಆಗಿವೆ. ಒಂದು ಪಿಐಎಲ್ ಸಿಜೆ ಮುಂದೆ ಬಂದು ಅದು dismiss ಕೂಡ ಆಯಿತು. ಈಗ ಮತ್ತೊಂದು ಪಿಐಎಲ್‌ಗೆ ಸಂಬಂಧಪಟ್ಟಂತೆ ಹೀಯರಿಂಗ್ ಬಂದಿದೆ. Course of action ಆಗಿಯೇ ಆಗುತ್ತದೆ. ನಾವು ತನಿಖೆ ಮಾಡಿ ಚಾರ್ಜ್‌ಶೀಟ್ ಹಾಕಿದರೂ judicial enquiry ಆಗುತ್ತದೆ. ಈ ಮಧ್ಯೆ ಯಾರಾದರೂ acquittal party ಗಳು ಕೋರ್ಟ್‌ಗೆ ಹೋದರೂ ಕೂಡ judicial scrutiny ಆಗಿಯೇ ಆಗುತ್ತದೆ.

(ಮುಂದು)

(81)20-02-2020 12.10 ಡಿಎಸ್-ವಿಕೆ

**ಶ್ರೀ ಬಸವರಾಜ ಬೊಮ್ಮಾಯಿ(ಮುಂದು)**

It is bound to have a judicial scrutiny one way or the other. ಹಲವಾರು judicial enquiry ಗಳು ನಾನು ಈಗಾಗಲೇ ಹೇಳಿದಂತೆ they have not seen the light of the day. ಆಚೆಯೇ ಬಂದಿಲ್ಲ. ಆ ರೀತಿ ಎಲ್ಲಾ ಸರ್ಕಾರಗಳಲ್ಲೂ ಆಗಿವೆ. ಬಹುತೇಕವಾಗಿ ನನ್ನ ಪ್ರಕಾರ 1977 ರಿಂದಿಚೇಗೆ ಯಾವುದೂ ಕೂಡ ಬಂದಿಲ್ಲ. ಅದರ ಮೇಲೆ punitive actions ಆಗಲಿ ಅಥವಾ ಅವರ ಸಲಹೆಗಳನ್ನು ತೆಗೆದುಕೊಂಡು ಅಭಿವೃದ್ಧಿ ಮಾಡುವಂಥದ್ದಾಗಲಿ ನಾವು ಯಾವುದೂ ಕೂಡ ಇವತ್ತಿನವರೆಗೂ ಮಾಡಿಲ್ಲ. ಒಂದು ಕಾಲದಲ್ಲಿ ಒಂದು ಸರ್ಕಾರ, ನಾನು ಆ ಸರ್ಕಾರದ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಒಂದು ಸರ್ಕಾರದ ಅವಧಿಯಲ್ಲಿ ಅತೀ ಹೆಚ್ಚು ಗೋಲಿಬಾರ್ ಆಯಿತು. ಅತೀ ಹೆಚ್ಚು judicial enquiry ಕೂಡ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಯಿತು. ತನ್ನ ಸರ್ಕಾರದ ಎರಡು–ಮೂರೂವರೆ ವರ್ಷಗಳ ಅವಧಿಯಲ್ಲಿ ಸುಮಾರು 16 judicial enquiry ಯನ್ನು ನೇಮಿಸಿತ್ತು. But none of the cases have come out. Each Government has got their own reasons. ಕೆಲವೊಮ್ಮೆ ಸತ್ಯಾಂಶ ಹೊರಗೆ ಬಂದರೆ ಸಾಮಾಜಿಕವಾಗಿ ಕ್ಷೋಭೆ ಆಗಬಹುದು ಎನ್ನುವ ಸದುದ್ದೇಶವೂ ಇರಬಹುದು. ಕೆಲವೊಮ್ಮೆ ಈ ವಿಚಾರಗಳು ಬಹಿರಂಗ ಆಗಬಾರದೆನ್ನುವ ಉದ್ದೇಶದಿಂದಲೂ ಇರಬಹುದು. Magisterial enquiry ಬಂದರೆ ಏನಾಗಿದೆ, ಏನಾಗಿಲ್ಲ ಎಂಬುದು ಗೊತ್ತಾಗುತ್ತದೆ and the magisterial enquiry will undergo the judicial scrutiny also. ಅದೇ ರೀತಿ ಇವತ್ತು ಇದನ್ನು ಮಾಡಿದ್ದೇವೆ. ನಮ್ಮ ಪೊಲೀಸರು ಅತ್ಯಂತ ದಕ್ಷತೆಯಿಂದ, ಸಮರ್ಥವಾಗಿ ಆ ಸಮಯಕ್ಕೆ ಅನುಗುಣವಾಗಿ they have responded. ಇಲ್ಲಿ police action ಎನ್ನುವುದಕ್ಕಿಂತ police have responded to the situation. ಆದ್ದರಿಂದ ಆ ತನಿಖೆಯಲ್ಲಿ ಎಲ್ಲಾ ಅಂಶಗಳು ಹೊರಗಡೆ ಬರುತ್ತವೆ. ನಾವು ಎಲ್ಲಾ ರೀತಿಯ ತನಿಖೆಗೆ ಸಿದ್ಧರಿದ್ದೇವೆ. ನಾವು ಮಾನವೀಯತೆಯ ಆಧಾರದ ಮೇಲೂ ನೋಡಬೇಕಾಗುತ್ತದೆ. ಆದರೆ, ದುಷ್ಟ ಶಕ್ತಿಗಳಿಗೆ ನಾವು ಯಾರೂ ಕೂಡ ಬೆಂಬಲಿಸಬಾರದು. ನಮ್ಮ ನಮ್ಮ ವಾದವನ್ನು ಸಮರ್ಥನೆ ಮಾಡುವಂತಹ ಬರದಲ್ಲಿ ದುಷ್ಟ ಶಕ್ತಿಗಳಿಗೆ ನಾವು ದೊಡ್ಡ ಪ್ರಮಾಣದಲ್ಲಿ ಅವರಿಗೆ ಬೆಂಬಲವನ್ನು ಕೊಡುವುದು ಸಾಧುವಲ್ಲ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಂಗಳೂರು ಭಾಗದಲ್ಲಿ ಕೆಲವು ಸಂಘಟನೆಗಳು ಹಲವಾರು ವರ್ಷಗಳಿಂದ ಬಹಳ ಕ್ರಿಯಾಶೀಲವಾಗಿವೆ. ಇದು ಕೇವಲ ನಮ್ಮ ರಾಜ್ಯದಲ್ಲಿ ಅಲ್ಲ. ಕೇರಳ, ಉತ್ತರ ಪ್ರದೇಶ, ಬಿಹಾರದಲ್ಲಿಯೂ ಇವೆ. ಕೇರಳದ ಕಮ್ಯುನಿಸ್ಟ್ ಪಾರ್ಟಿಯ ಮುಖ್ಯಮಂತ್ರಿಗಳು ಮೊನ್ನೆ ವಿಧಾನಸಭೆಯಲ್ಲಿ SDPI (Social Democratic Party of India) and PFI (Popular Front of India) organisations ಗಳು CAA protest ನೆಪದಲ್ಲಿ violence create ಮಾಡುತ್ತಿದ್ದಾರೆ, ಅದನ್ನು ನಾವು tolerate ಮಾಡುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಸಮಾಜದಲ್ಲಿ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ನಾನು ನಿನ್ನೆ ಕೆಳಮನೆಯಲ್ಲಿ ಹೇಳಿದ್ದೇನೆ, ಮಾನ್ಯ ತನ್ವೀರ್ ಸೇಠ್‌ರವರು ಇದ್ದರು. ಅವರು ಮೈಸೂರು, ಹಾಸನ ಮತ್ತು ಶಿವಮೊಗ್ಗ, ಈ ಮೂರು ಕೋಮು ಗಲಭೆಗಳಲ್ಲಿ ನಡೆದಂತಹ ಪ್ರಕರಣಗಳನ್ನು ಹಿಂತೆಗೆದುಕೊಳ್ಳಬೇಕೆಂದು ಹಿಂದಿನ ಸರ್ಕಾರಕ್ಕೆ ಒಂದು ಪತ್ರವನ್ನು ಕೊಟ್ಟು ಹೇಳಿದರು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನು ನಮ್ಮ ಹಿಂದಿನ ಸರ್ಕಾರ ಹಿಂತೆಗೆದುಕೊಂಡಿತು. ಆ ಪ್ರಕರಣದಲ್ಲಿ ಹಿಂದೂ, ಮುಸ್ಲಿಂ ಎಲ್ಲರೂ ಇದ್ದರು. ಮಾನ್ಯ ತನ್ವೀರ್ ಸೇಠ್‌ರವರು ಸದುದ್ದೇಶದಿಂದಲೇ ಹೇಳಿದ್ದಾರೆ. ಅದರಲ್ಲಿ ಶೇಕಡ 20–25 ರಷ್ಟು PFI, SDPI ಹಿನ್ನಲೆ ಇದ್ದವರು ಇದ್ದರು. ಅವರೆಲ್ಲರಿಗೂ ಕೂಡ ಒಂದು ರೀತಿಯಲ್ಲಿ ಉತ್ತೇಜನ, ಪ್ರಚೋದನೆ ಕೊಟ್ಟ ಹಾಗೆ ಆಗಿದೆ. ಇವತ್ತೇನು ತನ್ವೀರ್ ಸೇಠ್‌ರವರು ಆ ಪ್ರಕರಣಗಳನ್ನು ಹಿಂತೆಗೆದುಕೊಳ್ಳಿ ಎಂದು ಹೇಳಿದರು ಅವರ ಮೇಲೆಯೇ ಧಾಳಿ ಆಯಿತು. ಧಾಳಿಯಾದ ಸಂದರ್ಭದಲ್ಲಿ ತನಿಖೆ ಮಾಡಿದಾಗ ಅದೇ ಸಂಘಟನೆಯಿಂದ ಬಂದಂಥವರು ಮಾಡಿದ್ದಾರೆ ಎನ್ನುವುದು ತಿಳಿದು ಬಂದಿದೆ. ಅಂದರೆ, ಯಾರಿಗೆ ಇದುವರೆಗೂ ಇದರ ಹಿನ್ನಲೆ ಇತ್ತು ಅವರು ಈಗ forefront ಗೆ ಬರುವಂತಹ ಸಾಹಸವನ್ನು ಮಾಡುತ್ತಿದ್ದಾರೆ. ಇವರ ಭವಿಷ್ಯ ಏನು ಎಂಬುದನ್ನು ನಾವೆಲ್ಲರೂ ಯೋಚನೆ ಮಾಡಬೇಕಾಗಿದೆ. ಮೈಸೂರು ನಗರದಲ್ಲಿ 40 ಪ್ರಕರಣಗಳು, ಶಿವಮೊಗ್ಗ ನಗರದಲ್ಲಿ 114 ಪ್ರಕರಣಗಳು, ಹಾಸನದಲ್ಲಿ 21 ಪ್ರಕರಣಗಳು, ಒಟ್ಟು 175 ಪ್ರಕರಣಗಳು ದಾಖಲಾಗಿವೆ. ಹಿಂದೂ, ಮುಸ್ಲಿಂ ಎಲ್ಲಾ ಸೇರಿ ಒಟ್ಟು 3000 ಜನರು ಇದ್ದರು. ಅದರಲ್ಲಿ 353 ಈ ಸಂಸ್ಥೆಗಳಿಗೆ ಸೇರಿರುವಂಥವರು ಎಂದು identify ಮಾಡಿದ್ದಾರೆ. ಸರ್ಕಾರ ಬಹಳ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕಾಗುತ್ತದೆ. ಪ್ರಕರಣಗಳನ್ನು ಹಿಂತೆಗೆದುಕೊಳ್ಳುವುದು ಸದುದ್ದೇಶವಿದ್ದರೂ ಕೂಡ ಅದರಲ್ಲಿ ಇಂತಹ elements ಗಳಿಗೆ ನಾವೇನಾದರೂ ಅವಕಾಶಗಳನ್ನು ಮಾಡಿಕೊಟ್ಟರೆ ಸಮಾಜದ ಮೇಲೆ ಬಹಳ ದೊಡ್ಡ ದುಷ್ಪರಿಣಾಮ ಆಗುತ್ತದೆ. ಸರ್ಕಾರ ಯಾರದ್ದೇ ಇರಬಹುದು, ಇವರು ಯಾರ ಸರ್ಕಾರದ ಪರವಾಗಿಯೂ ಇರುವುದಿಲ್ಲ, ಯಾರ ಸರ್ಕಾರದ ನಿಯಂತ್ರಣದಲ್ಲೂ ಇರುವುದಿಲ್ಲ. ಅವರದ್ದೇ ಅದಂತಹ ಅಜೆಂಡಾ ಇದೆ. ಅವರದ್ದೇ ಆದಂತಹ networking ಇದೆ, SIMI (Students' Islamic Movement of India) ಇತ್ತು, SIMI ಹೋಗಿ ಇದು ಬರುತ್ತದೆ, ಅದನ್ನು ಬ್ಯಾನ್ ಮಾಡಿ ಮತ್ತೊಂದು ಹೆಸರಿನಲ್ಲಿ ಬರುತ್ತದೆ. ಇನ್ನು ಹಲವಾರು ಪ್ರಕರಣಗಳಲ್ಲಿ ಇವರು ಸಿಕ್ಕಿಹಾಕಿಕೊಂಡರೂ ಕೂಡ ತಮ್ಮ ಚಟುವಟಿಕೆಗಳನ್ನು ಇವರೇನು ಕಡಿಮೆ ಮಾಡುವುದಿಲ್ಲ. ನನ್ನ ಹತ್ತಿರ ಒಂದು ದೊಡ್ಡ ಪಟ್ಟಿ ಇದೆ. ನಾನು ಆ ಪಟ್ಟಿಯನ್ನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಆ ಪಟ್ಟಿಯನ್ನು ಹೇಳುವುದಕ್ಕೆ ಹೋದರೆ ಅದರ ಪರಿಣಾಮ ಸರಿಯಾಗುವುದಿಲ್ಲ. ಬೇಕಾದರೆ ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕಳುಹಿಸಿಕೊಡುತ್ತೇನೆ. ಇಡೀ ದೇಶದಲ್ಲಿ ಅವರೇನು ಚಟುವಟಿಕೆಗಳನ್ನು ಮಾಡಿದರು, ಯಾವ್ಯಾವ ಪ್ರಸಂಗದಲ್ಲಿ ಏನೇನು ಆಯಿತು, ಯಾವ್ಯಾವ ಹೆಸರಿನಲ್ಲಿ ಕೊಲೆಯಾಯಿತು, ಗಲಭೆ ಆಯಿತು,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಏನೇನು ಆಯಿತು ಎನ್ನುವ ಸಂಪೂರ್ಣವಾದ ಮಾಹಿತಿ ಇಲ್ಲಿದೆ. For our own reasons, ಅದನ್ನು ನಾವು ಸಾರ್ವಜನಿಕವಾಗಿ ಹಂಚಿಕೊಳ್ಳುವುದು ಅಷ್ಟು ಸಮಂಜಸವಲ್ಲ. ನಾನು ತಯಾರಿದ್ದೇನೆ. But I don't mind sharing it with the Hon'ble Leaders. ಇದುವರೆಗೂ ನಾವು ನೋಡಿಕೊಂಡು ಬಂದಿರುವಂತಹ ಗಲಭೆಗಳು, ಸಂಘರ್ಷಗಳನ್ನು ಮೀರಿದೆ ಎಂಬುದನ್ನು ನಾನು ಒತ್ತಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅವರ ಹಿತದೃಷ್ಟಿಯಿಂದ, ನಮ್ಮ ಹಿತದೃಷ್ಟಿಯಿಂದ, ರಾಜ್ಯದ ಜನತೆಯ ಹಿತದೃಷ್ಟಿಯಿಂದ ಆ angle ನಲ್ಲಿ ಇದನ್ನು ನೋಡಬೇಕಾಗುತ್ತದೆ. ಮುಂಬರುವಂತಹ ದಿನಗಳಲ್ಲಿ ನಾವು, ಅವರು ಸೇರಿ ಹೋರಾಟ ಮಾಡಬೇಕೆನ್ನುವುದನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆ ಹಿನ್ನೆಲೆಯಲ್ಲಿ ಮಂಗಳೂರಿನಲ್ಲಿ ಪ್ರಯೋಗ ಆಗಿದೆ. ನಮ್ಮ Intelligence sources ಕೂಡ ಅದನ್ನೇ ಹೇಳುತ್ತಿವೆ. ಆದ್ದರಿಂದ ಇದು ಖಂಡಿತ ಹಿಂದೂ-ಮುಸ್ಲಿಂ ಕೋಮು ಗಲಭೆಯಲ್ಲ. ಇದು ವ್ಯವಸ್ಥಿತವಾಗಿ ಹಿಂಸೆ ಮಾಡಬೇಕು, ಪ್ರಚೋದನೆ ಮಾಡಬೇಕು, ರಾಜ್ಯದಲ್ಲಿ, ರಾಷ್ಟ್ರದಲ್ಲಿ ಭಯದ ವಾತಾವರಣ ನಿರ್ಮಾಣ ಮಾಡಬೇಕು ಎನ್ನುವಂತಹ ದುರುದ್ದೇಶದಿಂದ ನಡೆಯುತ್ತಿರುವ ಚಟುವಟಿಕೆಯ ಒಂದು ಭಾಗ. ಆದ್ದರಿಂದ ನಾವೆಲ್ಲರೂ ಕೂಡ ಇದನ್ನು ಯೋಚನೆ ಮಾಡುವಂಥದ್ದಾಗಿದೆ.

ಆ ಗಲಭೆಯಲ್ಲಿ ಪೊಲೀಸರಿಗೂ ಕೂಡ ಗಾಯಗಳಾಗಿದು, ಸುಮಾರು 73 ಪೊಲೀಸರಿಗೆ ಗಾಯವಾಗಿದೆ. Wound Certificate ನ್ನು ನಾನು ಸದನದ ಮುಂದೆ ಇಡುತ್ತೇನೆ. ಪೊಲೀಸರಿಗೆ ಗಾಯವೇ ಆಗಿಲ್ಲ. ಇಷ್ಟು ದೊಡ್ಡ ಪ್ರಮಾಣದಲ್ಲಿ ಗಲಾಟೆಯಾದಾಗ ಕಲ್ಲು ತೂರಾಟ, ಪೆಟ್ರೋಲ್ ಬಾಂಬ್‌ಗಳನ್ನು ಎಸೆದಾಗ ಖಂಡಿತವಾಗಿಯೂ ಎರಡು ಕಡೆ ಗಾಯವಾಗುತ್ತದೆ. ಕೆಲವು ಸಂದರ್ಭದಲ್ಲಿ ಪೆಟ್ರೋಲ್ ಬಾಂಬ್ ಎಸೆಯುವವನ ಕೈಯಲ್ಲೇ ಸ್ಫೋಟವಾಗುತ್ತದೆ. ಈ ತರಹ ಹಲವಾರು ಘಟನೆಗಳು ಕೂಡ ನಡೆದಿವೆ. ಅದರ ಜೊತೆಗೆ ಕೇರಳದವರು ಬಂದಿದ್ದರು ಎನ್ನುವ ವಿಚಾರದಲ್ಲಿ ಬಹಳಷ್ಟು ಚರ್ಚೆಗಳಾಗಿವೆ. ಅದಕ್ಕೆ ನಾನು ನಮ್ಮ ಅಧಿಕಾರಿಗಳಿಗೆ ಹೇಳಿದೆ. ಸತ್ಯಾಸತ್ಯತೆಯನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಅವತ್ತು ಸುಮಾರು 2500-3000 ಜನರು ಅಲ್ಲೇನು ಸೇರಿದ್ದರು, ಆ ಸ್ಥಳಗಳಲ್ಲಿ, ಆ ಸಮಯದಲ್ಲಿ ಆ ಎಲ್ಲಾ ಫೋನ್‌ಗಳ ಲೊಕೇಶನನ್ನು ನಾವು ಟ್ರ್ಯಾಕ್ ಮಾಡಿದಾಗ 1329 ಫೋನ್‌ಗಳು ಕಾಸರಗೋಡಿನಲ್ಲಿ ರಿಜಿಸ್ಟರ್ ಆಗಿರುವಂಥದ್ದು. ಕರ್ನಾಟಕಕ್ಕೆ ಏನೂ ಸಂಬಂಧವೇ ಇಲ್ಲ. ಸಿಮ್‌ಗಳು, ಫೋನ್‌ಗಳೆಲ್ಲಾ ಕಾಸರಗೋಡಿಗೆ ಸೇರಿರುವಂಥದ್ದು. ಅದರಲ್ಲಿ ನಾವು ಆ ಫೋಟೋದಲ್ಲಿ

ಇರುವುದು ಮತ್ತು ಸಿಮ್ ಕಾರ್ಡ್‌ನಲ್ಲಿರುವ ಅಡ್ರೆಸ್‌ನ್ನು ಮ್ಯಾಚ್ ಮಾಡಿ 373 ಜನರಿಗೆ ಈಗಾಗಲೇ ನೋಟೀಸ್ ಕಳುಹಿಸಿದ್ದೇವೆ.

(ಮುಂದು)

**(82) 20-02-20020 12-20 ಎಸ್‌ವಿ(ಬಿಕೆಪಿ)-ಬಿಎನ್‌ಎಸ್**

**ಶ್ರೀ ಬಸವರಾಜ ಬೊಮ್ಮಾಯಿ(ಮುಂದು)**

ಅವರಿಗೆ ನೋಟೀಸ್ ಕೊಟ್ಟು ನೀವು ಏತಕ್ಕಾಗಿ ಇಲ್ಲಿಗೆ ಬಂದಿದ್ದೀರಿ ಎಂದು ವಿವರಣೆಯನ್ನು ಕೊಡಿ ಎಂದು ಕೇಳಿದ್ದೇವೆ. If they satisfy us, then no problem. ಏನಾದರೂ ಅನುಮಾನ ಬಂದರೆ ಖಂಡಿತವಾಗಿಯೂ ಸಹ ನಾವು ಮೊಕದ್ದಮೆಯನ್ನು ನಾವು ಮಾಡುತ್ತೇವೆ. 373 ಜನರ ಮೇಲೆ ನಾವು ನೋಟೀಸ್ ಕೊಟ್ಟಿದ್ದೇವೆ. ಹೀಗೆ ನಾವು ಒಂದು ಸೂಕ್ತ ವ್ಯವಸ್ಥೆಯಲ್ಲಿ ಈ probe ಅನ್ನು ನಾವು ಮಾಡುತ್ತಿದ್ದೇವೆ. Vindictive ಆಗಿ ಅಲ್ಲ. ಅವರ ವಿರುದ್ಧವಾಗಿ ಕೆಲಸ ಮಾಡುತ್ತಿಲ್ಲ. ನಾವು ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಐವನ್ ಡಿ'ಸೋಜಾರವರು, ಶ್ರೀ ಯು.ಟಿ. ಖಾದರ್‌ರವರು, ಶ್ರೀ ಹರೀಶ್ ಕುಮಾರ್‌ರವರು, ಶ್ರೀ ಫರೀದ್‌ರವರು ಇದ್ದರು. ಮತ್ತೆ, ಸುಮಾರು 80 ವರ್ಷದ ಹಿರಿಯರಾದ ಶ್ರೀ ಮಸೂದ್‌ರವರು ಇದ್ದರು. ಇಲ್ಲಿ ವಿಧಾನ ಪರಿಷತ್ ಸದಸ್ಯರಾಗಿದ್ದಂತಹ ಅವರು ಮುಖ್ಯ ಸಚೇತಕರಾಗಿಯೂ ಸಹ ಸೇವೆ ಸಲ್ಲಿಸಿದ್ದಾರೆ. ಮತ್ತೆ ಅವರು ಸೆಂಟ್ರಲ್ ಮುಸ್ಲಿಂ ಕಮಿಟಿಯ ಅಧ್ಯಕ್ಷರೂ ಕೂಡ ಆಗಿದ್ದಾರೆ. ಅವರ ಜೊತೆ ಈ ವಿಚಾರವಾಗಿ ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ನಾವು ಕೂಡ ನಿಮ್ಮ ಜೊತೆ ಸಹಕಾರ ಕೊಡುತ್ತೇವೆಂದು ಹೇಳಿದರು. ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರು ಕ್ರಿಸ್‌ಮಸ್ ಹಬ್ಬದ ಪ್ರಯುಕ್ತ ಪ್ರಾರ್ಥನೆ ಮಾಡುವ ಉದ್ದೇಶದಿಂದ ಜಾರಿಯಲ್ಲಿದ್ದಂತಹ ಕರ್ಫ್ಯೂವನ್ನು ತಕ್ಷಣ ರಿಲ್ಯಾಕ್ಸ್ ಮಾಡಬೇಕೆಂದು ಹೇಳಿದರು. ಆಗ ಸ್ಥಳದಲ್ಲಿಯೇ ಮಾನ್ಯ ಮುಖ್ಯಮಂತ್ರಿಗಳು ಒಂದು ಆದೇಶ ಮಾಡಿ ಪೊಲೀಸ್ ಫೋರ್ಸ್ ಕಡಿಮೆ ಮಾಡಿ ಎಂದು ಹೇಳಿದರು. ಆಗ ಸಾಕಷ್ಟು ಪೊಲೀಸ್ ಫೋರ್ಸ್ ಅನ್ನು ವಿತ್‌ಡ್ರಾ ಮಾಡಿದೆವು. ಏಕೆಂದರೆ, ನಮಗೂ ಕೂಡ ಪರಿಸ್ಥಿತಿ ಸಾಮಾನ್ಯ ಸ್ಥಿತಿಗೆ ಬರಬೇಕೆನ್ನುವ ದೃಷ್ಟಿಯಿಂದ ಆ ಕೆಲಸವನ್ನೂ ಸಹ ನಾವು ಮಾಡಿದ್ದೇವೆ. ಮತ್ತೊಂದು ಬಾರಿ ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆ ಮಾಡಬೇಕೆಂದು ಮತ್ತು ದೊಡ್ಡ ಪ್ರಮಾಣದಲ್ಲಿ ಜನರು ಸೇರುತ್ತಾರೆಂದು ಹೇಳಿ, ಅದನ್ನು ನೆಹರು ಮೈದಾನದಲ್ಲಿ ಮಾಡಬೇಕೆಂದು ಸೆಂಟ್ರಲ್ ಮುಸ್ಲಿಂ ಕಮಿಟಿ ರವರು ಮತ್ತು ನಮ್ಮ ಪಕ್ಷದವರು ಸಹ ಅಲ್ಲಿಯೇ CAA (Citizenship

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Amendment Act) ಪರವಾಗಿ ಅಲ್ಲಿಯೇ ಸೇರಬೇಕೆಂದು ಹೇಳಿ ಒಂದು ಸಂಘರ್ಷ ಆಗುವಂತಹ ಪರಿಸ್ಥಿತಿ ಪುನಃ ನಿರ್ಮಾಣವಾಗಿತ್ತು. ಆ ಸಂದರ್ಭದಲ್ಲಿ ನಾನೇ ಹೋಗಿ 28 ಮೈನಾರಿಟಿ ಮುಸ್ಲಿಂ ಸಂಘಟನೆಗಳ ಜೊತೆ ಮತ್ತು PFI (Popular Front of India), SDPI (Social Democratic Party of India) ಜೊತೆಗೂ ಕೂಡ ಮಾತನಾಡಿದ್ದೇವೆ. ಆ ಸಂದರ್ಭದಲ್ಲಿ ಶ್ರೀಯುತ ಮಸೂದ್‌ರವರು ಮತ್ತು ಶಾಸಕರುಗಳು ಕೂಡ ಆ ಸಂದರ್ಭದಲ್ಲಿ ಇದ್ದರು. ಮಂಗಳೂರು ಜಿಲ್ಲೆಯ ಎಲ್ಲಾ ಶಾಸಕರುಗಳು ಮತ್ತು ಸಂಸತ್ ಸದಸ್ಯರೂ ಕೂಡ ಇದ್ದರು. ಆ ಸಂದರ್ಭದಲ್ಲಿ ಒಂದು ಸಭೆಯನ್ನು ಮಾಡಿ, ಆ ಸಮಸ್ಯೆಯನ್ನು ಬಗೆಹರಿಸಿ, ಎರಡು ಕಡೆಯವರ ದಿನಾಂಕವನ್ನು ಬದಲಾವಣೆ ಮಾಡಿ, ಜಾಗವನ್ನು ಬದಲಾವಣೆ ಮಾಡುವ ಸಂಬಂಧ ತೀರ್ಮಾನ ಮಾಡಲಾಯಿತು. ಅದಕ್ಕೆ ಪೋಲೀಸ್‌ನವರು ಅನುಮತಿ ಕೊಡುವುದಿಲ್ಲವೆಂದು ಹೇಳಿದಾಗ ಅದಕ್ಕೆ ನಾನು ಅನುಮತಿಯನ್ನು ಕೊಡಿಸಿ ಬಂದಿದ್ದೇನೆ. ಹೀಗಾಗಿ, ಯಾವುದೇ ಒಂದು ಪ್ರತಿಭಟನೆಯನ್ನು ಹತ್ತಿಕ್ಕಬೇಕೆನ್ನುವ ಉದ್ದೇಶ ನಮ್ಮ ಸರ್ಕಾರದ್ದು ಇಲ್ಲ. ಪ್ರಜಾಪ್ರಭುತ್ವದ ಅಡಿಯಲ್ಲಿ, ಶಾಂತಿಯುತ ರೀತಿಯಲ್ಲಿ ಎಲ್ಲೆಲ್ಲಿ, ಯಾವುದೇ ವಿಚಾರವಾಗಿ ಮಾಡಿದರೂ ಕೂಡ ನಾವು ಯಾವತ್ತೂ ಅಡ್ಡಿಪಡಿಸಿಲ್ಲ, ಪಡಿಸುವುದೂ ಇಲ್ಲ. ಆದರೆ, ಕಾನೂನನ್ನು ಕೈಗೆ ಎತ್ತಿಕೊಳ್ಳುತ್ತೇವೆ, ಜನರ ಆಸ್ತಿ-ಪಾಸ್ತಿಯನ್ನು ಹಾಳು ಮಾಡುತ್ತೇವೆ, ಪ್ರಾಣ ಹಾನಿಯಾಗುವಂತಹ ಕೆಲಸ ಮಾಡುತ್ತೇವೆ, ಪೋಲೀಸರ ಮೇಲೆ ಅಟ್ಯಾಕ್ ಮಾಡುತ್ತೇವೆ ಎನ್ನುವವರ ಮೇಲೆ ಖಂಡಿತವಾಗಿಯೂ ಸಹ ಕಠಿಣವಾದ ಕ್ರಮವನ್ನು ಇಲಾಖೆ ತೆಗೆದುಕೊಂಡೆ ತೆಗೆದುಕೊಳ್ಳುತ್ತದೆ ಎನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುತ್ತೇನೆ.

ಇನ್ನೊಂದು ಪ್ರಕರಣವಾದ ಬೀದರ್ ವಿಚಾರವಾಗಿ ಪ್ರಸ್ತಾಪವಾಗಿದೆ. ಬೀದರ್ ವಿಚಾರದಲ್ಲಿ ನಾನು ಇಷ್ಟೇ ಹೇಳಲಿಕ್ಕೆ ಬಯಸುತ್ತೇನೆ. ಈಗಾಗಲೇ ಏನು ಕ್ರಮವನ್ನು ಜರುಗಿಸಿದ್ದೇವೆ ಎನ್ನುವುದನ್ನು ನಾವು ಹೈಕೋರ್ಟ್ ಮುಂದೆ ಹೇಳಿದ್ದೇವೆ. ಅಲ್ಲಿ ಏನೇನು ನಡೆಯಿತು ಅದಕ್ಕೆ ನಮ್ಮವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ಹೇಳಿದ್ದೇವೆ. ಅದರಲ್ಲಿ ತಮ್ಮ ಎರಡು ಪ್ರಮುಖವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಒಂದು, Sedition Clause ಅನ್ನು ಏತಕ್ಕೆ ತಾವು ಬಳಕೆ ಮಾಡಿದ್ದೀರಿ ಮತ್ತು ಮಕ್ಕಳನ್ನು ವಿಚಾರಣೆ ಮಾಡುವಾಗ ಅದರ ಅವಶ್ಯಕತೆ ಇತ್ತಾ ಮತ್ತು ವಿಚಾರಣೆ ಮಾಡುವ ಸಂದರ್ಭದಲ್ಲಿ Juvenile safety procedure ಮತ್ತು ಆ್ಯಕ್ಟ್ ಅನ್ನು follow ಮಾಡಿದ್ದೀರಾ ಎನ್ನುವಂತಹ ಮೂಲಭೂತವಾದಂತಹ ಹಲವಾರು ಬೇರೆ ಬೇರೆ ರೂಪದಲ್ಲಿದ್ದರೂ ಸಹ ಈ ಎರಡು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರಗಳನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ತಮಗೆಲ್ಲಾ ಈ ವಿಚಾರ ಗೊತ್ತಿದೆ ಎಂದು ಭಾವಿಸುತ್ತೇನೆ. Lalita Kumari vs. State of Bihar ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನಿಂದ ಒಂದು ಆದೇಶ ಇದೆ. ಅಲ್ಲಿ ಬಹಳ ಸ್ಪಷ್ಟವಾಗಿ ಸುಪ್ರೀಂ ಕೋರ್ಟ್ ಹೇಳುತ್ತದೆ. ದೂರು ಏನು ಬರುತ್ತದೆ ಅದರ ಆಧಾರದ ಮೇಲೆ ಎಫ್.ಐ.ಆರ್. ಮಾಡಬೇಕು. Comma, full stop ಸಹ ಬದಲಾವಣೆಯಾಗಬಾರದು. ತದನಂತರ ವಿಚಾರಣೆಯಲ್ಲಿ ಏನಾದರೂ ಬದಲಾವಣೆಯಾಗಲಿ. ಆದರೆ, ದೂರನ್ನು ಎಲ್ಲಿಯೂ dilute ಮಾಡಬಾರದು ಎನ್ನುವಂತಹದ್ದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಆ ಪ್ರಕಾರ ಅಲ್ಲಿ ಬಂದಿರುವಂತಹ ದೂರಿನ ಆಧಾರದ ಮೇಲೆ ಇವತ್ತು 124 Clause ಅನ್ನು ಹಾಕಲಾಗಿದೆ. Section124A of Indian Penal Code reads thus:

*"Section 124A Sedition*

*Whoever, by words, either spoken or written, or by signs, or by visible representation, or otherwise, brings or attempts to bring into hatred or contempt, or excites or attempts to excite disaffection towards, the Government established by law in India, shall be punished with imprisonment for life, to which fine may be added, . . . . "*

ಎಂದು ಹೇಳಿ ಮುಂದಿನದ್ದು ಇದೆ. ಇವತ್ತು dissent ಆಗುವುದು ಯಾವುದೂ ಕೂಡ ಇದರಲ್ಲಿ ಬರುವುದಿಲ್ಲ. ಯಾವುದಾದರೂ ಒಂದು ಸರ್ಕಾರಿ ಪಾಲಿಸಿಯನ್ನು ವಿರೋಧ ಮಾಡುವಂತಹದ್ದು ಯಾವುದೂ ಸಹ ಇದರಲ್ಲಿ ಬರುವುದಿಲ್ಲ.

**ಡಾ॥ ಜಯಮಾಲ:–** ಮಕ್ಕಳಿಗೆ, ಅಂದರೆ, juvenile age ಗೆ ಮಾಡಬೇಕೆಂದು ಕೊಟ್ಟಿದೆಯೆ?

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ಒಂದು ನಿಮಿಷ ಹೇಳಲಿಕ್ಕೆ ಬಯಸುತ್ತೇನೆ. ನಾವು ಮಕ್ಕಳ ಮೇಲೆ ಕೇಸ್ ಹಾಕಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ಜಯಮಾಲ:-** ಇಲ್ಲ, ಕೇಸ್ ಹಾಕುವ ಬಗ್ಗೆ ಹೇಳಲಿಲ್ಲ. ಅವರಿಗೂ ಕೂಡ ಮಾಡಬಹುದು ಎಂದು ಇದೆಯಾ?

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಅದೇ ವಿಚಾರವಾಗಿ ಹೇಳಲಿಕ್ಕೆ ಬಯಸುತ್ತೇನೆ. ಇದರ ಸೂಕ್ಷ್ಮತೆಯನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಇದು Sedition Clause. ಈ Sedition Clause ಅನ್ನು ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಇದ್ದಂತಹ ಸಂದರ್ಭದಲ್ಲಿಯೂ ಉಪಯೋಗ ಮಾಡಿದ್ದಾರೆ. ಅದರ ಹಿಂದಿನ ಸರ್ಕಾರದಲ್ಲಿ ಉಪಯೋಗ ಮಾಡಿದ್ದಾರೆ. ಯುಪಿಎ ಸರ್ಕಾರದಲ್ಲಿ, ಎನ್‌ಡಿಎ ಸರ್ಕಾರದಲ್ಲಿ ಉಪಯೋಗ ಮಾಡಿದ್ದಾರೆ. ಯುಪಿಎ ಸರ್ಕಾರದ 5 ವರ್ಷದಲ್ಲಿ 9,000 such cases are filed. So, ಆಗಾಗ ಇದು ಉಪಯೋಗವಾಗಿದೆ ಎನ್ನುವ ಬಗ್ಗೆ ನಾನು ಹೇಳುತ್ತಿದ್ದೇನೆ. ಯಾವಾಗಲಾದರೂ ಸರ್ಕಾರದ ವಿರುದ್ಧ ಯಾರಾದರೂ ಮಾತನಾಡಿದಾಗ ಗಂಭೀರವಾಗಿ ಇತರರಿಗೆ ಪ್ರಚೋದನೆ ರೂಪದಲ್ಲಿ, ಇನ್ನೊಬ್ಬರಿಗೆ excite ಮಾಡುವ ಮೂಲಕ ಪ್ರಚೋದನೆ ಮಾಡುವಂತಹ ವಿಚಾರ ಬಂದಾಗ ಇದನ್ನು ಉಪಯೋಗ ಮಾಡಬೇಕೆಂದು ಇದೆ. ಅಲ್ಲಿ 'visible representation' ಎಂದು ಸಹ ಹೇಳಿದ್ದಾರೆ. ಅಂದರೆ ಡ್ರಾಮಾ. ಅಲ್ಲಿ ಅವರು ತಮ್ಮ ವಿರೋಧ ವ್ಯಕ್ತಪಡಿಸಿದ್ದಕ್ಕೆ ನಮ್ಮ ತಕರಾರಿಲ್ಲ. ಅವರು ಆ ಒಂದು ಡ್ರಾಮಾದಲ್ಲಿ ಅತ್ಯಂತ ಪ್ರಚೋದನಕಾರಿಯಾಗಿ ಮೋದಿಯವರು ಇಂತಹ ಒಂದು ಕಾನೂನನ್ನು ತಂದಿದ್ದಾರೆ, ಮೋದಿ ಅಪ್ಪನ ಎಲ್ಲಾ ವಿವರಗಳಿವೆಯೇ, ಅವುಗಳ ದಾಖಲೆಗಳು ಇವೆಯೇ, ನನ್ನನ್ನು ಕೇಳಲಿಕ್ಕೆ ಬಂದರೆ **XXX** ಎನ್ನುವಂತಹ ಈ ರೀತಿಯ ಅಂಶಗಳನ್ನು innocent ಮಕ್ಕಳ ಬಾಯಿಯಲ್ಲಿ, ನೂರಾರು ಜನ ವಿದ್ಯಾರ್ಥಿಗಳ ಮುಂದೆ excite ಆಗುವ ರೀತಿಯಲ್ಲಿ ಆಗಿದ್ದರಿಂದ, it comes under this Section. More than that, ದೂರಿನಲ್ಲಿ ಏನಿದೆ, ಅದು ಪ್ರಮುಖವಾಗುತ್ತದೆ. ದೂರಿನಲ್ಲಿ ಏನಿದೆ, ಅದನ್ನು ನಾವು ಮಾಡಿದ್ದೇವೆ. ಆ ಪ್ರಕರಣವನ್ನು ಮಕ್ಕಳ ಮೇಲೆ ಹಾಕಿಲ್ಲ.

---

**XXX ಸಭಾಪತಿಯವರ ಆದೇಶಾನುಸಾರ ತೆಗೆದು ಹಾಕಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ. ಅಬ್ದುಲ್ ಜಬ್ಬಾರ್:-** ಆ ದೂರನ್ನು ಯಾರು ಕೊಟ್ಟಿದ್ದಾರೆ?

**ಶ್ರೀ ಬಸವರಾಜ ಬೊಮ್ಮಾಯಿ:-** ದೂರನ್ನು ಒಬ್ಬರು ಕೊಟ್ಟಿದ್ದಾರೆ.

**ಶ್ರೀ ಕೆ. ಅಬ್ದುಲ್ ಜಬ್ಬಾರ್:-** ದೂರನ್ನು ಏನು ಕೊಟ್ಟಿದ್ದಾರೆ, ನಾಟಕ ಮಾಡಿದ್ದು ಮಗು. ಆದರೆ, ಅವರ ತಾಯಿಯನ್ನು ಅರೆಸ್ಟ್ ಮಾಡಬೇಕೆಂದು ಯಾವ ಕಾನೂನಿನಲ್ಲಿ ಇದೆ? ಮಗು ಮಾಡಿದ ನಾಟಕಕ್ಕೆ ಅವರ ತಾಯಿಯ ಮೇಲೆ Sedition case ಹಾಕಬೇಕೆಂದು ಯಾವುದಾದರೂ ಕಾನೂನಿನಲ್ಲಿ ಇದೆಯೇ? ನಿಮ್ಮ ಮೇಲೆ ಯಾರಾದರೂ ದೂರು ಬರೆದುಕೊಟ್ಟರೆ Sedition case ಹಾಕಲಿಕ್ಕೆ ಸಾಧ್ಯವೇ?

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಂದು ನಿಮಿಷ ನಾನು ಹೇಳುವುದನ್ನು ಕೇಳಬೇಕು. ದೂರಿನಲ್ಲಿ ಬಹಳ ಸ್ಪಷ್ಟವಾಗಿದೆ. ಅವರ ತಾಯಿ ಇದರ ಬಗ್ಗೆ ಟ್ರೈನಿಂಗ್ ಕೊಟ್ಟು ಮಕ್ಕಳಿಗೆ ಕೊಟ್ಟಿದ್ದಾರೆಂದು ದೂರು ಕೊಟ್ಟಿದ್ದಾರೆ. ಅದರ ಬಗ್ಗೆ ವಿಚಾರಣೆ . . . Listen to me. ನಾನು ಹೇಳುವುದನ್ನು ಕೇಳಿ.

**(ಗೊಂದಲ)**

**ಶ್ರೀ ಕೆ. ಅಬ್ದುಲ್ ಜಬ್ಬಾರ್:-** ಮಾನ್ಯ ಸಚಿವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರು ಕೂಲಿ ಮಾಡುವ ಹೆಣ್ಣು ಮಗಳು ಇದ್ದಾರೆ. ಮಾನ್ಯ ಸಚಿವರು ಮಾತನಾಡುವಾಗ ಸ್ವಲ್ಪ ಲಿಮಿಟ್ ಇರಬೇಕು. ಕೂಲಿ ಮಾಡುವ ಹೆಣ್ಣು ಮಗಳಿಗೆ ಏನು ಗೊತ್ತಿದೆ?

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಕೈಮುಗಿದು ನಾನು ಪ್ರಾರ್ಥನೆ ಮಾಡುತ್ತೇನೆ. ಸಚಿವರು ಒಳ್ಳೆಯ ತಂದೆಯವರ ಮಗ ಇದ್ದಾರೆ. ಸಚಿವರ ಮನಸ್ಸು ಏನಿದೆ ಎಂದು ನನಗೆ ಗೊತ್ತಿದೆ. ಇಲ್ಲಿ ಪೋಲೀಸ್‌ನವರು ತಪ್ಪು ಮಾಡಿದ್ದಾರೆ. ಇದನ್ನು ಪುನರ್ ಪರಿಶೀಲನೆ ಮಾಡುತ್ತೇವೆಂದು ಸಚಿವರು ಹೇಳಬೇಕು. ಮಾನ್ಯ ಸಚಿವರು ಮಂಗಳೂರು ಬಗ್ಗೆ ಸಾಕಷ್ಟು ಹೇಳಿದರು. ಆದರೆ, ನಾನು ಅದರ ಬಗ್ಗೆ ಏನೂ ಹೇಳಲಿಲ್ಲ. ನಡೆದಿರಬಹುದು, ನಡೆಯದೇ ಇರಬಹುದು. ಆದರೆ, ಬೀದರ್ ವಿಚಾರಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಆ ಹುಡುಗಿ ಕಡೆಯಿಂದ ಏನು ಮಾತನಾಡಿಸಿದ್ದಾರೆನ್ನುವುದನ್ನು ಮಾನ್ಯ ಸಚಿವರು ಈಗ ಹೇಳಿದರು. ಅದು ದೇಶದ್ರೋಹದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುತ್ತದೆಯೇ ಎನ್ನುವುದನ್ನು ಸಚಿವರು ಯೋಚನೆ ಮಾಡಬೇಕು. ಆ ಸಣ್ಣ ಮಗು ಏನು ಹೇಳಿದೆಯಲ್ಲ, ಅದರ ಬಗ್ಗೆ ನಾವು ಪುನರ್ ಪರಿಶೀಲನೆ ಮಾಡುತ್ತೇವೆಂದು ಹೇಳಿದರೆ ಅಲ್ಲಿಗೆ ವಿಷಯ ಮುಗಿದು ಹೋಗುತ್ತದೆ. ಆ ಮಗುವಿಗೆ ತಂದೆಯಿಲ್ಲ. ಅದು ಅನಾಥ ಮಗು.

**ಶ್ರೀ ಎಸ್.ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇನ್ನೊಂದು ಬಹಳ ಮುಖ್ಯವಾದ ವಿಷಯ ಇದೆ. ಮಾನ್ಯ ಗೃಹ ಸಚಿವರು ಗಮನಹರಿಸಬೇಕು. ಯಾವುದೇ ಶಾಲೆಗಳಲ್ಲಿ ಇಂತಹ ಡ್ರಾಮಾಗಳನ್ನು ಅಥವಾ ಮಿಮಿಕ್ರಿಗಳನ್ನು ತಯಾರು ಮಾಡುವಂತಹದ್ದು ಮತ್ತು ಆ ಮಕ್ಕಳಿಗೆ ಈ ನಿಟ್ಟಿನಲ್ಲಿ ತರಬೇತಿ ಕೊಡುವಂತಹದ್ದನ್ನು ಮನೆಯಿಂದ ಯಾರೂ ತಯಾರು ಮಾಡುವುದಿಲ್ಲ. ಮನೆಯಿಂದ ಡ್ರೆಸ್ ಕೊಡಬಹುದು, ಮೇಕಪ್ ಸಾಮಾನುಗಳನ್ನು ಕೊಡುವುದನ್ನು ಬಿಟ್ಟರೆ ತಯಾರು ಮಾಡುವಂತಹದ್ದು ಮಾತ್ರ ಆ ಶಾಲೆಯ ಸಂಬಂಧಪಟ್ಟ ಟೀಚರ್‌ಗಳೇ ಅಥವಾ ಡ್ರಾಮಾ ಟೀಚರ್‌ಗಳನ್ನು ಬಿಟ್ಟರೆ ಅದನ್ನು ತಾಯಿ ಹೇಳಿಕೊಟ್ಟಿದ್ದಾರೆನ್ನುವುದು ತಪ್ಪು.

**(ಗೊಂದಲ)**

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಘಟನೆಯನ್ನು ಟೀಚರ್ ಮೇಲೆ ತಿರುಗಿಸುವುದು ಬೇಡ. ಇದನ್ನು ಯಾರೇ ಮಾಡಿರಲಿ, ಅವರ ಮೇಲೆ ವಿಚಾರಣೆ ಮಾಡಿ, ಕ್ರಮ ತೆಗೆದುಕೊಳ್ಳಲಿ. ಟೀಚರ್ ಏತಕ್ಕೆ ಈ ರೀತಿ ಹೇಳಿಕೊಡುತ್ತಾರೆ?

**(ಗೊಂದಲ)**

**(ಮುಂದು)**

(083) 20.02.2020 12.30 ಎಸ್‌ವಿ-ಬಿಎನ್‌ಎಸ್

**(ಗೊಂದಲ)**

**ಸಭಾಪತಿಯವರು:-** ಯಾವುದೂ ದಾಖಲೆಗೆ ಹೋಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಿ.ಎಂ.ಇಬ್ರಾಹಿಂ, ಶ್ರೀ ಎಸ್.ಎಲ್.ಭೋಜೇಗೌಡ, ಶ್ರೀ ರಘುನಾಥರಾವ್ ಮಲ್ಕಾಪೂರೆ, ಶ್ರೀ ಪುಟ್ಟಣ್ಣ, ಡಾ:ತೇಜಸ್ವಿನಿಗೌಡ, ಶ್ರೀ ಎಸ್.ವ್ಹಿ.ಸಂಕನೂರ, ಶ್ರೀ ಆರ್.ಬಿ.ತಿಮ್ಮಾಪೂರ, ಶ್ರೀ ಶರಣಪ್ಪ ಮಟ್ಟೂರ ಹಾಗೂ ಇತರ ಸದಸ್ಯರು ಒಟ್ಟಾಗಿ ಮಾತನಾಡಲು ಪ್ರಾರಂಭಿಸಿದ ಕಾರಣ, ಮಾನ್ಯ ಸಭಾಪತಿಯವರ ಆದೇಶದಂತೆ ಯಾವ ಸದಸ್ಯರು ಮಾತನಾಡಿರುವುದನ್ನು ದಾಖಲಿಸಲಾಗಿರುವುದಿಲ್ಲ.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಸಭಾಪತಿಯವರು:–** ನಾನು ಈಗಾಗಲೇ ಹೇಳಿದ್ದೇನೆ. ನೀವು ಯಾರು ಏನು ಮಾತನಾಡಿದರೂ ದಾಖಲೆಗೆ ಹೋಗುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರು ಮಾತನಾಡಿರುವುದನ್ನು ಹೊರತುಪಡಿಸಿ ಇನ್ಯಾವುದೂ ದಾಖಲೆಗೆ ಹೋಗುವುದಿಲ್ಲ.

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು 'ಶಿಕ್ಷಕ ವಿರೋಧಿ ಸರ್ಕಾರಕ್ಕೆ ಧಿಕ್ಕಾರ' ಎಂದು ಕೂಗುತ್ತಾ ಸದನದ ಬಾವಿಗೆ ಬಂದು ಪ್ರತಿಭಟನಾ ನಿರತರಾದರು)**

**(ಮುಂದು)**

(84) 12. 02.2020 KG.KS 12.40

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾವು ಅನೇಕ ಇಲ್ಲಿರುವಂತಹ ಶಾಸಕರು ಪ್ರಾಂಜಲ ಮನಸ್ಸಿನಿಂದ ವಿದ್ಯೆಯನ್ನು ಪ್ರಸಾರ ಮಾಡಬೇಕು ಎನ್ನುವ ಸದುದ್ದೇಶದಿಂದ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಭಾಗದ ಮಕ್ಕಳಿಗೆ quality education ಸಿಗಲಿ ಎಂದು ಅನೇಕ ನಮ್ಮ ನಾಯಕರು ವಿದ್ಯಾ ಸಂಸ್ಥೆಗಳನ್ನು ತೆರೆದಿದ್ದಾರೆ. ಅದೇ ರೀತಿ ನಾನು ಸಹ ನನ್ನ ಹುಟ್ಟೂರಿನಲ್ಲಿ ಬಾಪುಜಿ ಹೆಸರಿನಲ್ಲಿ ದೊಡ್ಡ ವಿದ್ಯಾ ಸಂಸ್ಥೆಯನ್ನು ತೆರೆದಿದ್ದೇನೆ. ಅ ಶಾಲೆಯಲ್ಲಿ Annual Day ನಡೆಯುತ್ತದೆ. ಮಕ್ಕಳಿಗೆ Annual Day ಅಥವಾ ಯಾವುದಾದರೊಂದು ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತವೆ. ಬೀದರ್‌ನ ಶಾಹೀನ್ ಶಾಲೆಯಲ್ಲಿ ಆ ಶಾಲೆಯ ಅಧ್ಯಕ್ಷರ ಮೇಲೆ, ಶಾಲೆಯ ಆಡಳಿತ ಮಂಡಳಿಯ ಮೇಲೆ, ಅದನ್ನು Facebook ನಲ್ಲಿ ಬಿಟ್ಟಂತಹ ವ್ಯಕ್ತಿಯ ಮೇಲೆ ಒಂದು ಕೇಸ್‌ನ್ನು ಮತ್ತೊಂದು ಕೇಸ್‌ನ್ನು ಆ ಮಗುವಿನ ತಾಯಿಯ ಮೇಲೆ ಮತ್ತು ಆ ಶಾಲೆಯ ಮುಖ್ಯ ಶಿಕ್ಷಕಿಯ ಮೇಲೆ ಹಾಕಿದ್ದಾರೆ. ಅವಿದ್ಯಾವಂತ ತಂದೆ-ತಾಯಿ ನಾವು ಕಲಿಯಲಿಲ್ಲ, ನಮ್ಮ ಮಕ್ಕಳಾದರೂ ಕಲಿಯಲಿ ಎಂದು ಶಾಲೆಗೆ ಕಳುಹಿಸಿರುತ್ತಾರೆ. ಶಾಲೆಯಲ್ಲಿ ಟೀಚರ್‌ಗಳು homework ಅನ್ನು ಕೊಟ್ಟರೆ, ಆ ಮಕ್ಕಳ ತಾಯಿ ತಂದೆಯವರು ಅದನ್ನು ಕಲಿಸುವಂತಹ ಸಾರ್ಮಥ್ಯ ಅವರಿಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವುದಿಲ್ಲ. ಇವತ್ತು ಎಷ್ಟೂ ಮಂದಿ ಪೋಷಕರು ಮಕ್ಕಳನ್ನು ಹಾಸ್ಟೆಲ್‌ನಲ್ಲಿ ಇಟ್ಟುಕೊಂಡು ಬಿಡಿ, ನಾವು illiterate ಇದ್ದೀವಿ, ನಾವು ಕೂಲಿ ಕೆಲಸ ಮಾಡುವಂಥವರು ಎಂದು ಹೇಳುತ್ತಾರೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸಚಿವರು ಉತ್ತರವನ್ನು complete ಮಾಡಲಿ. ಆ ನಂತರ ನೀವು ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಹಿನ್ನೆಲೆಯನ್ನು ಹೇಳುತ್ತಿದ್ದೇನೆ. ನಾನು ಈಗ ಬೆಂಗಳೂರಿನಲ್ಲಿ ಇದ್ದೇನೆ. ಇಂತಹ ಸಂದರ್ಭದಲ್ಲಿ ನಮ್ಮ ಶಾಲೆಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಮಾಡುತ್ತಾರೆ. ನಮ್ಮ ಶಾಲೆಯಲ್ಲಿ ಸಾಂಸ್ಕೃತಿಕ ಚಟುವಟಿಕೆ ನಡೆದ ಕೂಡಲೇ ನನ್ನ ವಿರುದ್ಧ ದೇಶದ್ರೋಹ ಎಂದು ಕಲಂ 124 (ಎ) ಅಡಿಯಲ್ಲಿ ಕೇಸ್ ಹಾಕಿಬಿಡುತ್ತಾರೆ. ನಾನು ಇಲ್ಲೇ ಇರುತ್ತೇನೆ. ನನಗೆ ಶಾಲೆಯಲ್ಲಿ ಯಾವ ರೀತಿಯ ಚಟುವಟಿಕೆ ಮಾಡುತ್ತಾರೆಂದು ಗೊತ್ತಿರುವುದಿಲ್ಲ. ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರು ಏನು ಮಾಡುತ್ತಾರೆಂದು ಗೊತ್ತಿರುವುದಿಲ್ಲ. Now, you are the policy makers. ನಾವು ಶಾಲೆಯನ್ನು ನಡೆಸುವುದಕ್ಕೆ ಏನು infrastructure ಕೊಡಬೇಕು, ಟೀಚರ್‌ನ್ನು ಯಾವ ರೀತಿ ನೇಮಕಾತಿ ಮಾಡಬೇಕು ಇವುಗಳನ್ನು ಮಾಡಿರುತ್ತೇವೆ, ಆ ಮೇಲೆ ಪಠ್ಯದ ಜೊತೆಗೆ ಪಠ್ಯಯೇತರ ಚಟುವಟಿಕೆಗಳಲ್ಲಿಯೂ ಸಹ ಮಕ್ಕಳು ಬೆಳೆಯಬೇಕು. ನಾಲ್ಕು ಗೋಡೆಗಳ ಮಧ್ಯೆ ವಿದ್ಯೆ ನೀಡುವುದರ ಜೊತೆಗೆ extracurricular activities ನಲ್ಲಿಯೂ ಪರಿಪಕ್ವವಾಗಿ ಮಕ್ಕಳು ಬೆಳೆಯಬೇಕು. ಒಳ್ಳೆಯ ಪ್ರಜೆಯಾಗಿ, ಒಳ್ಳೆಯ ಜವಾಬ್ದಾರಿಯುತ ನಾಗರೀಕ ಮಗುವಾಗಿ ಈ ದೇಶವನ್ನು ಮುನ್ನಡೆಸುವಂತಹ ಸಾಮರ್ಥ್ಯ ಇರುವಂತಹ ಮಕ್ಕಳನ್ನು ತಯಾರು ಮಾಡುವಂತಹ ವಿದ್ಯಾ ಸಂಸ್ಥೆಗಳು. ನಮ್ಮ ದೇಶದಲ್ಲಿ ಲಕ್ಷಾಂತರ, ಕೋಟ್ಯಂತರ ವಿದ್ಯಾ ಸಂಸ್ಥೆಗಳು ಬೇರೆ ಬೇರೆ ಉದ್ದೇಶಕ್ಕೆ ಇವೆ. ನಿಜವಾಗಿಯೂ ದೇಶ ಸೇವೆ ಮಾಡುವಂತಹ ಸಂಸ್ಥೆಗಳು ಇವೆಯೆಂದರೆ, ಅವು ವಿದ್ಯಾ ಸಂಸ್ಥೆಗಳು. The Educational Institutions are actually rendering the service to the Society. ಅಂದರೆ, ವಿದ್ಯೆ ಮೂಲಕ ಜವಾಬ್ದಾರಿಯುತವಾದ ನಾಗರೀಕರನ್ನಾಗಿ ಸತ್ವಶಾಲಿ ಪ್ರಜೆಗಳನ್ನಾಗಿ ನಿರ್ಮಿಸಿ ದೇಶವನ್ನೇ ಪ್ರಗತಿ ಪಥದತ್ತ ಮುನ್ನಡೆಸುವಂತಹ ಕೆಲಸವನ್ನು ಈ ವಿದ್ಯಾ ಸಂಸ್ಥೆಗಳು ಮಾಡುತ್ತಿವೆ. ಇವತ್ತಿನ ದಿವಸ ವಿದ್ಯಾ ಸಂಸ್ಥೆಗಳನ್ನು ನಡೆಸುವುದು ಬಹಳ ಕಷ್ಟದ ಕೆಲಸ. ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ ವಿದ್ಯಾ ಸಂಸ್ಥೆಯ ಅಧ್ಯಕ್ಷರ ಮೇಲೆ ಮತ್ತು ಆಡಳಿತ ಮಂಡಳಿಯ ಮೇಲೆ ಕೇಸ್ ಹಾಕಿದ್ದಾರೆ. ಆ ವಿದ್ಯಾ ಸಂಸ್ಥೆಯಲ್ಲಿ ಪ್ರಾಂಜಲ ಮನಸ್ಸಿನಿಂದ ವಿದ್ಯೆ ನೀಡುವಂತಹ ವಿದ್ಯಾ ಗುರುಗಳ ಮೇಲೆ ಕೇಸ್ ಹಾಕಿದ್ದಾರೆ. ಅದು ಯಾವ ಕೇಸ್ ಅಂದರೆ, Sedition case (Section 124A) - Offences against the State ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ಆ ಮಗುವಿನ ತಾಯಿ ಅವಿದ್ಯಾವಂತೆ, ಕೂಲಿನಾಲಿ ಮಾಡಿಕೊಂಡು ಬದುಕುತ್ತಿದ್ದಾಳೆ, ಆಕೆಯ ಗಂಡನಿಗೆ cancer ರೋಗ ಬಂದು ಸತ್ತುಹೋಗಿದ್ದಾನೆ. ನನ್ನ ಮಗುವಾದರೂ ವಿದ್ಯೆ ಕಲಿಯಲಿ ಎಂಬ ಹಂಬಲ ಆಕೆಯದ್ದು. ಹಿಂದಿನ ಕಾಲದಲ್ಲಿ ಮಕ್ಕಳಿಗೆ ಆಸ್ತಿ ಮಾಡುತ್ತಿದ್ದರು. ಈಗ ಏನಾಗಿದೆ ಎಂದರೆ, ಮಕ್ಕಳಿಗೆ ಒಳ್ಳೆಯ ವಿದ್ಯೆಯನ್ನು ಕೊಟ್ಟು, ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡುವಂತಹ ಉದ್ದೇಶ ಹೊಂದಿದ್ದಾರೆ. ನಾವು ಕಲಿಯಲಿಲ್ಲ, ನಮ್ಮ ಮಕ್ಕಳಾದರೂ ಕಲಿಯಬೇಕೆಂದು ಹೇಳಿ ಶಾಲೆಗೆ ಕಳುಹಿಸಿ ಅಲ್ಲಿ ಯಾವುದೇ ಒಂದು ಸಾಂಸ್ಕೃತಿಕ ಚಟುವಟಿಕೆಯಲ್ಲಿ ಅಥವಾ ಯಾವುದಾದರೊಂದು ಪಠ್ಯಯೇತರ ಚಟುವಟಿಕೆಯ ಕಾರ್ಯಕ್ರಮದಲ್ಲಿ ಮಗು ಭಾಗವಹಿಸಿದರೆ ಆ ಮಗುವಿನ ತಾಯಿ ಏನು ಮಾಡಿದ್ದಾಳೆ, ಆ ಮಗು ಆ ಶಾಲೆಯಲ್ಲಿ ಏನು ಕಲಿಯುತ್ತಿದೆ ಎಂದು ತಿಳಿಯದಂತಹ ಎಷ್ಟೋ ಪಾಲಕರನ್ನು, ಪೋಷಕರನ್ನು ಪ್ರತಿನಿತ್ಯ ನಾನು ನೋಡುತ್ತಿದ್ದೇನೆ. ದೊಡ್ಡ ವಿದ್ಯಾಸಂಸ್ಥೆ. ಸಾವಿರಾರು ಪಾಲಕರು ಬರುತ್ತಾರೆ. ಅವರು ಅವರ ಬವಣೆಗಳನ್ನು ನಮಗೆ ಹೇಳಿಕೊಳ್ಳುತ್ತಾರೆ. ಇಲ್ಲಿ ಆ ಮಗುವಿನ ತಾಯಿಯ ವಿರುದ್ಧ Sedition case (Section 124A) - Offences against the State ಕೇಸ್ ಹಾಕಿದ್ದಾರೆ. Lawfully established Government ಅನ್ನು overthrow ಮಾಡುತ್ತಾಳೆಯೆ? ಕೂಲಿನಾಲಿ ಮಾಡುವಂತಹ ಹೆಣ್ಣು ಮಗಳು ಆಕೆ. ಇವರಿಗೆ ನಾಚಿಕೆ ಇದೆಯೋ ಇಲ್ಲವೋ ಗೊತ್ತಿಲ್ಲ. ಇಂತಹ ಭಂಡರನ್ನು ನಾನು ಎಲ್ಲಿಯೂ ನೋಡಿಲ್ಲ. ಇದು ಭಂಡತನದ ಪರಮಾವಧಿ. ಆ ಮಗುವಿನ ತಾಯಿ ಮುಗ್ದೆ. ತಾಯಿ ಮಗುವನ್ನು ಶಾಲೆಗೆ ಏಕೆ ಕಳುಹಿಸುತ್ತಾಳೆ? ಒಳ್ಳೆಯ ವಿದ್ಯೆಯನ್ನು ಕಲಿಯಲಿ ಎಂದು, ಒಳ್ಳೆಯ ನಾಗರೀಕರಾಗಲಿ, ಮುಂದಿನ ದಿವಸಗಳಲ್ಲಿ ದೇಶವನ್ನು ಮುನ್ನಡೆಸುವಂತಹ ಹಾಗೂ ನಮ್ಮ ಬದುಕಿಗೆ ಆಸರೆ ಆಗಲಿ ಎಂದು ಶಾಲೆಗೆ ಕಳುಹಿಸುತ್ತಾರೆ ಹೊರತು, ದೇಶದ್ರೋಹದ ಕೆಲಸ ಮಾಡಲಿ ಎಂದು ಶಾಲೆಗೆ ಕಳುಹಿಸಿರುತ್ತಾರೆಯೇ?

ಮಾನ್ಯ ಸಭಾಪತಿಯವರೇ, Indian Penal Code (IPC) ಯಲ್ಲಿ ಏನು ಸೆಕ್ಷನ್‌ಗಳಿವೆ, ಪೊಲೀಸರು ಅಧಿಕಾರಿಗಳು ಯಾವ ರೀತಿ... Whether they have applied their

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

mind or not? ಯಾರೋ ದೂರು ಕೊಡಬಹುದು. ಮಾನ್ಯ ಸಭಾಪತಿಯವರೇ, ತಾವು ಸಹ ಒಂದು ವಿದ್ಯಾ ಸಂಸ್ಥೆಯ ಛೇರ್ಮನ್ ಆಗಿದ್ದೀರಿ. ತಾವು ತಮ್ಮ ಊರಿನಲ್ಲಿ ಒಂದು ವಿದ್ಯಾಸಂಸ್ಥೆಯನ್ನು ತೆರೆದಿದ್ದೀರಿ. ಆ ಶಾಲೆಯಲ್ಲಿ ಒಂದು extracurricular activities ಒಳಗೆ ಒಂದು ಸಾಂಸ್ಕೃತಿಕ ಚಟುವಟಿಕೆಯಲ್ಲಿ ಆ ಮಗು ಏನಾದರೂ ಮಾಡಿದರೆ, ಅದು ನಿಮ್ಮ ಮೇಲೆ Sedition case - Offences against the State ಹಾಕುತ್ತಾರೆ and you will be directly taken to the custody. ಅವರಿಗೆ ಜಾಮೀನು ಸಿಕ್ಕಿಲ್ಲ. It is a very serious offence. It is a heinous Offence. ಮುಗ್ದ ತಾಯಿಯ ವಿರುದ್ಧ ಇಂತಹ ಕೇಸ್ ಹಾಕಿದ್ದಾರೆ. ಆ ಮಗುವನ್ನು ವಿದ್ಯಾವಂತರನ್ನಾಗಿ ಮಾಡಿ ಅವರ ಭವಿಷ್ಯವನ್ನು ರೂಪಿಸಿ ನಮ್ಮ ಬದುಕಿಗೆ ಆಸರೆಯಾಗಿ, ಅದರ ಮುಖಾಂತರ ನಮ್ಮ ನಾಡಿಗೆ, ನಮ್ಮ ರಾಷ್ಟ್ರಕ್ಕೆ ಆಧಾರವಾಗಲಿ ಎಂದು ಶಾಲೆಗೆ ಕಳುಹಿಸುವಂತಹ ಆ ಮಗುವಿನ ತಾಯಿಯ ವಿರುದ್ಧ ಕೇಸ್ ಹಾಕಿದ್ದಾರೆ. ಆ ಶಾಲೆಯ ಶಿಕ್ಷಕರು ಪ್ರಾಂಜಲ ಮನಸ್ಸಿನಿಂದ ಆ ಮಕ್ಕಳಿಗೆ ವಿದ್ಯೆ ಕಲಿಸುವಂತಹವರು, ಅಂತಹವರ ವಿರುದ್ಧ ಕೇಸ್ ಹಾಕಿದ್ದಾರೆ. ನನ್ನ 45 ವರ್ಷಗಳ ಸಾರ್ವಜನಿಕ ಬದುಕಿನಲ್ಲಿ ಶಿಕ್ಷಕರ ಮೇಲೆ sedition case ಹಾಕಿದ್ದು ಭಾರತದಲ್ಲಿ ಎಲ್ಲಿಯಾದರೂ ಇದೆ ಎಂದರೆ, ಅದು ಕರ್ನಾಟಕದಲ್ಲಿ ಬಿ.ಜೆ.ಪಿ.ಯವರಿಂದ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

**(ಈ ಹಂತದಲ್ಲಿ ಬಾವಿಯಲ್ಲಿ ಧರಣಿ ನಿರತರಾಗಿದ್ದ ವಿರೋಧ ಪಕ್ಷದ ಸದಸ್ಯರು ಆಡಳಿತ ಪಕ್ಷದ ವಿರುದ್ಧ 'ಶೇಮ್ ಶೇಮ್' ಎಂಬ ಘೋಷಣೆಗಳನ್ನು ಕೂಗಿದರು)**

ಮಾನ್ಯ ಸಭಾಪತಿಯವರೇ, ನಾನು ನನ್ನ ವಿದ್ಯಾ ಸಂಸ್ಥೆಯನ್ನು ಬಂದ್ ಮಾಡೋಣವೆಂದು ಚಿಂತನೆ ಮಾಡಿದ್ದೇನೆ. ಗ್ರಾಮಗಳಲ್ಲಿ ಶಿಕ್ಷಣದ ಬಗ್ಗೆ ಕಾಳಜಿ ಇರುವವರನ್ನು, ಗಣ್ಯರನ್ನು ಆ ಊರಿನ ಶಾಲೆಗೆ ಮೇಲುಸ್ತುವಾರಿಯ ಸದಸ್ಯರನ್ನಾಗಿ ನೇಮಕ ಮಾಡಿರುತ್ತಾರೆ. ನಾಳೆ ಸರ್ಕಾರಿ ಶಾಲೆಗಳಲ್ಲಿಯೂ ಏನಾದರೂ ಆದರೆ, ... ಮಾನ್ಯ ನಾರಾಯಣಸ್ವಾಮಿಯವರೇ, No, ನಾನು yield ಆಗುವುದಿಲ್ಲ.

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ ಮಗುವಿಗೆ ಹೇಳಿಕೊಟ್ಟವರು ಯಾರು?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು yield ಆಗುವುದಿಲ್ಲ. ಅವರು ಹೇಳಲಿ.,

(ಗೊಂದಲ)

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆ ಮಗುವಿಗೆ ಅಪ್ಪ ಹೇಳಿಕೊಟ್ಟಿಲ್ಲ. ಅಮ್ಮ ಹೇಳಿಕೊಟ್ಟಿಲ್ಲ. ಹಾಗಾದರೆ, ಆ ಮಗು ಕಲಿತಿದ್ದು ಎಲ್ಲಿಂದ? ಆ ಮಗುವಿನ ಮನಸ್ಸನ್ನು ವಿಷ ಮಾಡಿದವರು ಯಾರು?

(ಮುಂದು)

(85)20-02-2020(12-50)ಎಂವಿ-ಕೆಎಸ್

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಒಂದು ವಿದ್ಯಾಸಂಸ್ಥೆಯನ್ನು ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಹೆಸರಿನ ಮೇಲೆ ಮತ್ತು ಡಾ||ಎ.ಪಿ.ಜೆ.ಅಬ್ದುಲ್ ಕಲಾಂರವರ ವಿಚಾರಗಳನ್ನು ಇಟ್ಟುಕೊಂಡು, ಗ್ರಾಮಗಳು ಪಟ್ಟಣದ ಕಡೆ ಮುಖ ಮಾಡಬಾರದು, ಪಟ್ಟಣಗಳೇ ಗ್ರಾಮಗಳ ಕಡೆ ಮುಖ ಮಾಡಬೇಕು ಎಂಬ ಕಲ್ಪನೆಯಲ್ಲಿ ಮತ್ತು ಪಟ್ಟಣದಲ್ಲಿ ಇರುವಂತಹ ಮೂಲಭೂತ ಸೌಲಭ್ಯಗಳು ಗ್ರಾಮಗಳಲ್ಲಿ ದೊರೆಯಬೇಕೆಂದು ಈ ಇಬ್ಬರು ಮಹಾತ್ಮರ ವಿಚಾರದಿಂದ ನನ್ನ ಹುಟ್ಟೂರಿನಲ್ಲಿ ಒಂದು ಚಿಕ್ಕದಾದ ಗ್ರಾಮದಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಮತ್ತು ಡಾ||ಎ.ಪಿ.ಜೆ.ಅಬ್ದುಲ್ ಕಲಾಂರವರ ಹೆಸರಿನಲ್ಲಿ ಒಂದು ವಿದ್ಯಾಸಂಸ್ಥೆಯನ್ನು ಪ್ರಾರಂಭ ಮಾಡಿದ್ದೆವು. ಆ ಸಂಸ್ಥೆಯ ಉದ್ದೇಶವೇನೆಂದರೆ, ಅಲ್ಲಿನ ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಬೇಕು ಎಂಬುದು. ಏಕೆಂದರೆ, ಪಾಲಕರು ನಂಬಿಕೆ ಇಟ್ಟು ಈ ಸಂಸ್ಥೆಗೆ ಮಕ್ಕಳನ್ನು ಕಳುಹಿಸಿರುತ್ತಾರೆ ಮತ್ತು ಶಿಕ್ಷಕರು ವಿದ್ಯಾರ್ಥಿಗಳಿಗೆ ವಿದ್ಯೆ ಕಲಿಸಬೇಕೆಂದು ಸಂಸ್ಥೆಗೆ ಬಂದಿರುತ್ತಾರೆ. ಆ ವಿದ್ಯಾಸಂಸ್ಥೆಯನ್ನು ಪ್ರಾರಂಭ ಮಾಡಿದವರ ಮೇಲೆ ಮತ್ತು ಅಲ್ಲಿ ವಿದ್ಯೆ ಕಲಿಸುವಂತಹ ಪೂಜನೀಯ ಗುರು ವೃಂದದವರ ಮೇಲೆ ಮತ್ತು ಮಗುವನ್ನು ಹೆತ್ತು-ಹೊತ್ತು, ಸಾಕಿ-ಸಲುಹಿ ಶಾಲೆಗೆ ಕಳುಹಿಸಿದಂತಹ ತಂದೆ-ತಾಯಿಗಳ ಮೇಲೆ ಕೇಸ್ ಹಾಕುವುದು. ಇವರಿಗೆ ಹೃದಯ ಇಲ್ಲವೇ? ಮಾನ್ಯ ಗೃಹ ಮಂತ್ರಿಗಳು ನನ್ನ ಸ್ನೇಹಿತರು.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಸದನವನ್ನು ನಾನು ಮತ್ತು ಅವರು ಒಂದೇ ದಿವಸ ಪ್ರವೇಶ ಮಾಡಿದ್ದೇವೆ. You have to tell the Officers, bureaucrat's and police.

**ಡಾ॥ ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಫ್ಜಲ್‌ಗುರು ಕೂಡ ವಿಶ್ವವಿದ್ಯಾಲಯದಲ್ಲಿ teach ಮಾಡಿ, arrest ಆಗಿದ್ದಾನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು ಹೇಳುತ್ತೇನೆ. ಇವತ್ತು ಈ ರಾಜ್ಯದಲ್ಲಿ ದೊಡ್ಡ ದೊಡ್ಡ ವಿದ್ಯಾ ಸಂಸ್ಥೆಗಳಿವೆ. ಕೆ.ಎಲ್.ಇ. ಸಂಸ್ಥೆಗೆ ಮಾನ್ಯ ಪ್ರಭಾಕರ್ ಕೋರೆಯವರು ಅಧ್ಯಕ್ಷರಾಗಿದ್ದಾರೆ. ಈಗ ಕೆ.ಎಲ್.ಇ. ಸಂಸ್ಥೆಯಲ್ಲಿ ಒಂದು ಘಟನೆಯಾಗಿದೆ. ಅವರ ಮೇಲೂ ಕೇಸ್ ಹಾಕುವುದು...

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಬಸವರಾಜ ಹೊರಟ್ಟಿಯವರೇ, ತಾವೀಗ ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ನಾನು ಹೇಳುವುದನ್ನು ಕೇಳಿ. ಈ ರೀತಿಯಾದಂತಹ serious offence. It is a heinous offence. It is the Offence against the State. ದೇಶದ್ರೋಹ ಮಾಡುವವರು ಯಾರು? Lawfully established Government ಅನ್ನು overthrow ಮಾಡುವುದಕ್ಕೆ ಪ್ರಯತ್ನ ಮಾಡುವವರು, you precharge... ವಿದ್ಯೆ ಕೊಡಬೇಕೆಂದು ವಿದ್ಯಾ ಸಂಸ್ಥೆಯನ್ನು ಪ್ರಾರಂಭ ಮಾಡಿದವರ ಮೇಲೆ, ಮಕ್ಕಳಿಗೆ ಗುಣಾತ್ಮಕವಾದ ಶಿಕ್ಷಣ ಕೊಡಬೇಕು ಎನ್ನುವಂತಹ ಪೂಜನೀಯ ಗುರುಗಳ ಮೇಲೆ ಮತ್ತು ನಮ್ಮ ಮಕ್ಕಳು ವಿದ್ಯಾವಂತರಾಗಲಿ ಎಂದು ಕಳುಹಿಸಿದಂತಹ ಆ ಬಡ ತಂದೆ-ತಾಯಿಗಳ ಮೇಲೆ ಕೇಸ್ ಹಾಕುತ್ತಾರೆಂದರೆ, ಬಹುಶಃ ಇದು ಜಗತ್ತಿನ ಎಂಟನೇ ಅದ್ಭುತ. ಏಕೆಂದರೆ, ನಾನು ಏಳು ಅದ್ಭುತಗಳನ್ನು ಕೇಳಿದ್ದೇನೆ. ಆದರೆ, ಇದು ಜಗತ್ತಿನ ಎಂಟನೇ ಅದ್ಭುತ. ಅದಕ್ಕೆ ತತ್‌ಕ್ಷಣವೇ ತಮ್ಮ ಮೂಲಕ ಈ ಸರ್ಕಾರವನ್ನು ಕೇಳುತ್ತೇನೆ, ಈ ಪ್ರಕರಣವನ್ನು ವಾಪಸ್ಸು ಪಡೆಯಬೇಕು. Without any hesitation the prosecution should be withdrawn forthwith. Otherwise, ಈ ವಿದ್ಯಾ ಸಂಸ್ಥೆ ಪ್ರಾರಂಭ ಮಾಡತಕ್ಕಂಥವರು ಕಣ್ಣಿನಲ್ಲಿ ನೀರು ತುಂಬಿಕೊಂಡು, ಕಷ್ಟಪಟ್ಟು, ಅನೇಕ ತೊಂದರೆಗಳನ್ನು ಎದುರಿಸಿ ವಿದ್ಯಾ ಸಂಸ್ಥೆಗಳನ್ನು ಪ್ರಾರಂಭ ಮಾಡಿದಂತಹ ಆಡಳಿತ ಮಂಡಳಿಯವರು ಮತ್ತು ವಿದ್ಯೆ ನೀಡುವಂತಹ ಪೂಜನೀಯ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗುರುಗಳು. ಈಗ ನಮಗೂ ಗುರುಗಳಿದ್ದಾರೆ ಮತ್ತು ಅವರಿಗೂ ಸಹ ಗುರುಗಳಿದ್ದಾರೆ; ನಮ್ಮೆಲ್ಲರಿಗೂ ಸಹ ಗುರುಗಳು ಇದ್ದಾರೆ. ಆ ಗುರುಗಳ ಮೇಲೆ ಇರತಕ್ಕಂಥ ಮತ್ತು ಇವೆಲ್ಲಕ್ಕಿಂತ ಮಿಗಿಲಾಗಿ, ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂದು, ಹೆತ್ತು-ಹೊತ್ತು, ಸಾಕಿ-ಸಲುಹಿ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿದಂತಹ ಪೋಷಕರ ಮೇಲೆ ಇರುವಂತಹ ಪ್ರಕರಣಗಳನ್ನು ತತ್‌ಕ್ಷಣ without any discussion and hesitation the prosecution should be withdrawn forthwith.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಮೇಜು ತಟ್ಟುವುದರ ಮೂಲಕ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್ ರವರ ಮಾತುಗಳನ್ನು ಸ್ವಾಗತಿಸಿದರು)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಎಲ್ಲರೂ ಇಷ್ಟೆಲ್ಲಾ ವಾದ-ವಿವಾದಗಳನ್ನು ಮಾಡಿದ್ದಾರೆ. ಇದು ಆಡಳಿತ ಪಕ್ಷದ ಸ್ನೇಹಿತರ ಮನಸ್ಸಿನಲ್ಲಿಯೂ ಇದೆ. ಆದರೆ, ಅವರು ಅದನ್ನು ಹೇಳುವುದಕ್ಕೆ ಆಗುತ್ತಿಲ್ಲ. ನಾನು ಹೇಳುವುದು ಏನೆಂದರೆ, ವಿದ್ಯಾಸಂಸ್ಥೆಯಲ್ಲಿ ಕಲಿಯುತ್ತಿರುವಂತಹ ಮಕ್ಕಳ ತಂದೆ-ತಾಯಿಗಳಿಗೆ ಈ sedition case ಅನ್ನು ಹಾಕುವುದು ಬಹಳ ತಪ್ಪು. ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ಯಾವ ತಾಯಿಯು ಸಹ ತನ್ನ ಮಕ್ಕಳಿಗೆ ಕೆಟ್ಟದನ್ನು ಮಾಡು ಎಂದು ಹೇಳುವುದಿಲ್ಲ. Unknowingly, ಒಂದೊಂದು ಬಾರಿ ತಪ್ಪಾಗಿರುತ್ತದೆ. ಆ ತಪ್ಪನ್ನು ಸರಿಪಡಿಸುವುದಕ್ಕೆ ಸಂಬಂಧಪಟ್ಟಂತಹ ಇಲಾಖೆಗಳು ಇರುತ್ತವೆ. ಅದನ್ನು ಬಿಟ್ಟು ಪೋಲೀಸ್‌ನವರು ಮಾಡುವುದು ಸರಿಯಲ್ಲ. ದಯಮಾಡಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಆ ತಾಯಿ ಮತ್ತು ಶಿಕ್ಷಕರ ಮೇಲೆ ಹಾಕಿರುವಂತಹ ಈ ಕೇಸ್ ಒಳ್ಳೆಯದಲ್ಲ. ಅವರು ಏನೋ ಕಾರ್ಯಕ್ರಮಗಳನ್ನು ಮಾಡುತ್ತಿರುತ್ತಾರೆ, ಅದನ್ನು ಮಾಡಲಿ. ಈಗ ಹೆಚ್ಚು ಕಡಿಮೆಯಾದರೆ, ಇಲಾಖೆಯವರಿಗೆ ತಿಳಿಸಿ ಅದನ್ನು ಸರಿಪಡಿಸುವಂತಹ ಕೆಲಸ ಮಾಡಬೇಕು. ಅದನ್ನು ಬಿಟ್ಟು ಕ್ರಿಮಿನಲ್ ಕೇಸ್ ಹಾಕಿ ಜೈಲಿಗೆ ಹಾಕುವಂತಹ ಪದ್ಧತಿ ಯಾರಿಗೂ ಶೋಭೆ ತರುವಂಥದ್ದಲ್ಲ. ಬೇಕಾದರೆ ಅವರನ್ನು ಕೌನ್ಸಿಲಿಂಗ್ ಮಾಡಲಿ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡರು ತಮ್ಮ ಸ್ಥಾನಕ್ಕೆ ಬನ್ನಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಗೃಹ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಜಗತ್ತಿನಲ್ಲಿ ಏನೇನೋ ಆಗುತ್ತದೆ. ಅವರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಯಮಾಡಿ ಈ ಪ್ರಕರಣವನ್ನು ಹಿಂದಕ್ಕೆ ತೆಗೆದುಕೊಂಡರೆ ಒಳ್ಳೆಯದು. ಇವತ್ತು ಆ ಮಗು, ತಾಯಿ ಮತ್ತು ಶಿಕ್ಷಕರು ಇವುಗಳು ಒಂದಕ್ಕೊಂದು ಇಂಟರ್‌ಲಿಂಕ್ ಇದೆ. ಅದು ಅವರಿಗೆ ಗೊತ್ತಿದೆ. ಆ ಹಿನ್ನೆಲೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಎಸ್.ಆರ್.ಪಾಟೀಲ್‌ರವರು ಹೇಳಿದರು. ಹಾಗೆಯೇ ಒಂದೊಂದು ಸರ್ಕಾರಿ ಶಾಲೆಗಳಿಗೆ ನಾವು ಎಸ್.ಡಿ.ಎಂ.ಸಿ. ಅಧ್ಯಕ್ಷರಾಗಿರುತ್ತೇವೆ. ದಯಮಾಡಿ ಆ ಕೇಸ್ ಅನ್ನು ಹಿಂದಕ್ಕೆ ಪಡೆದುಕೊಳ್ಳಲಿ. ಇದೊಂದು ಮಾರ್ಗದರ್ಶನ ಮಾಡುವಂತಹ ಕೆಲಸವನ್ನು ಸರ್ಕಾರ ಮಾಡಲಿ. ದಯಮಾಡಿ ಶಿಕ್ಷಕರ ಮೇಲೆ, ತಾಯಿಯ ಮೇಲೆ ಮತ್ತು ಮಕ್ಕಳ ಮೇಲೆ ಹಾಕಿರುವಂತಹ ಈ sedition case ಅನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಒಂದು ಪಾಯಿಂಟ್ ಅನ್ನು ಹೇಳುವುದು ಇದೆ.

**ಸಭಾಪತಿಯವರು:–** ಮಾನ್ಯ ಕೆ.ಟಿ.ಶ್ರೀಕಂಠೇಗೌಡರೇ, ಕುಳಿತುಕೊಳ್ಳಿ. ಈಗ ಮಾನ್ಯ ಸಚಿವರು ಮಾತನಾಡಲಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಸಭಾಪತಿಯವರು:–** ಈಗ ಸದನವನ್ನು ಮಧ್ಯಾಹ್ನ 2.00 ಗಂಟೆಯವರೆಗೆ ಮುಂದೂಡಲಾಗಿದೆ.

**(86)20.02.2020/2.30/ಎಂ.ಎಂ–ಎಂ.ಡಿ**

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 12 ಗಂಟೆ 55 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 2 ಗಂಟೆ 31 ನಿಮಿಷಕ್ಕೆ ಸಮಾವೇಶಗೊಂಡಿತು, ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತು ಪಡಿಸಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಬಾವಿಗೆ ಬಂದು 'ಬೇಕೇ ಬೇಕು, ನ್ಯಾಯ ಬೇಕು' ಎಂದು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಬಾವಿಯಲ್ಲಿದ್ದ ಮಾನ್ಯ ಸದಸ್ಯರುಗಳು ಶಿಕ್ಷಕರ ಮತ್ತು ಪೋಷಕರ ಮೇಲಿರುವ ಮೊಕದ್ದಮೆಯನ್ನು ವಾಪಸ್ ಪಡೆಯಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದರು)**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ದಯಮಾಡಿ ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಹೋಗಲಿ ಎಂದು ತಮ್ಮ ಮುಖಾಂತರ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಗೃಹ ಸಚಿವರು ಹೇಳಿಕೆ ಕೊಡಲು ಬಿಡಲಿ. ಆಮೇಲೆ ಬೇಕಾದರೆ ಏನಾದರೂ grounds ಇದ್ದರೆ ಅವರು ಧರಣಿ ಮಾಡಲಿ, ನಮಗೆ ಹೇಳಿಕೆ ಮುಗಿಸುವುದಕ್ಕೆ ಬಿಡದೇ ಹೀಗೆ ಮಾಡಬಾರದು. ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ. The House is not in order. ಆದುದರಿಂದ ಈ ಹಂತದಲ್ಲಿ ಸರ್ಕಾರ ಉತ್ತರ ಕೊಡಬಾರದು.

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಬಾವಿಯಿಂದ ಮಾತನಾಡುತ್ತಿದ್ದರು)**

**SRI *J.C.MADHUSWAMY (Minister for Law and Parliamentary Affairs and Legislation):-*** Mr. Chairman, it will be a wrong precedent.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ ಈಗ ಮಾತನಾಡಿ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಮಾತನಾಡಲಿ. ನಾವು ಯಾರಾದರೂ ಶಿಕ್ಷಕರ ಮೇಲೆ ಮಾತನಾಡಿದ್ದೇವೆಯೇ? ನೀವೇ ಮಾತನಾಡುತ್ತೀರಿ, ನೀವೇ ಧರಣಿ ಮಾಡುತ್ತೀರಿ. ತಾವು ದಯಮಾಡಿ ತಮ್ಮ ಸ್ಥಾನಗಳಿಗೆ ತೆರಳಿ ಸಹಕಾರ ಕೊಡಿ.

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು 'ಬೇಕೇ ಬೇಕು, ನ್ಯಾಯ ಬೇಕು' ಎಂದು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**(ಈ ಹಂತದಲ್ಲಿ ಶ್ರೀ ಕೆ.ಟಿ.ಶ್ರೀಕಂಠೇಗೌಡರು ತಮ್ಮ ಸ್ಥಾನಕ್ಕೆ ತೆರಳಿದರು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಕೀಲರು ಇಲ್ಲದೇ ಹೋದರೆ ಕಾನೂನು ಪಾಲನೆಯಾಗುವುದಿಲ್ಲ, ವೈದ್ಯರಿಲ್ಲದೇ ಹೋದರೆ ಆರೋಗ್ಯ ಸರಿಯಾಗುವುದಿಲ್ಲ. ಇಂಜಿನಿಯರುಗಳು ಇಲ್ಲದೇ ಹೋದರೆ ಕಟ್ಟಡಗಳು ಇರುವುದಿಲ್ಲ ಹಾಗೆ ಶಿಕ್ಷಕರು ಇಲ್ಲದೇ ಹೋದರೆ ಇವರ್ಯಾರೂ ಇಲ್ಲ. ನಮಗೆ ಪಾಠ ಹೇಳಿಕೊಟ್ಟಂತಹ ಶಿಕ್ಷಕರನ್ನು, ಯಾರು ಈ ಶಿಕ್ಷಕರು? ಬಿ.ಜೆ.ಪಿ ಪಕ್ಷಕ್ಕೆ ಮೂಲ ಹುಟ್ಟನ್ನು ಕೊಟ್ಟಂತಹವರು ಈ ಶಿಕ್ಷಕರು. ಶಿಕ್ಷಕರ ಕ್ಷೇತ್ರದಲ್ಲಿ ಒಂದು ಕಾಲಕ್ಕೆ ಇದ್ದವರು ಬಿ.ಜೆ.ಪಿ ಯವರು. ಅಂತಹ ಶಿಕ್ಷಕರ ಮತ್ತು ಪೋಷಕರ ಮೇಲಿರುವ ಮೊಕದ್ದಮೆಯನ್ನು ತಾವು ದಯಮಾಡಿ ಹಿಂದಕ್ಕೆ ತೆಗೆದುಕೊಳ್ಳಬೇಕು. ಅದರ ಜೊತೆಗೆ ಸಾಹಿತಿಗಳಾದ ಶ್ರೀ ಸಿರಾಜ್ ಬಿಸರಳ್ಳಿ ಮತ್ತು ರಾಜಭಕ್ಷಿ ಅವರುಗಳು ಕವಿಗೋಷ್ಠಿಯಲ್ಲಿ ಕಾವ್ಯ ವಾಚನ ಮಾಡುವುದು ತಪ್ಪೇ? ಅವರ ಮೇಲೆ ಬಿ.ಜೆ.ಪಿ ಕಾರ್ಯದರ್ಶಿಯವರು ದೂರು ಕೊಟ್ಟರು ಎಂದು ಅವರ ಮೇಲೆ ಕೇಸ್ ಹಾಕಿ ಜೈಲಿಗೆ ಕಳುಹಿಸಿದ್ದಾರೆ. ಇವತ್ತು ಒಂದು ಕನ್ನಡ ಶಕ್ತಿ ಪತ್ರಿಕೆಯ ಸಂಪಾದಕರು ಮತ್ತು;

**ಸಭಾಪತಿಯವರು:-** ಈಗ ಏನೇ ಹೇಳುವುದಿದ್ದರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ. ಆಮೇಲೆ ನೋಡೋಣ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ದಯವಿಟ್ಟು ಶ್ರೀ ಸಿರಾಜ್ ಬಿಸರಳ್ಳಿ ಮತ್ತು ರಾಜಭಕ್ಷಿ, ಶಿಕ್ಷಕರು ಮತ್ತು ಪೋಷಕರು ಇವರ ಮೇಲಿರುವ ಮೊಕದ್ದಮೆಗಳನ್ನು ವಾಪಸ್ ಪಡೆದು ಸರ್ಕಾರ ಜನಪರ ಕಾಳಜಿಯನ್ನು ತೋರಿಸಬೇಕು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಇದು wrongly feed ಮಾಡಿದ್ದಾರೆ. ಈ ಕೇಸ್ ಹಾಕಿದ್ದೇ ತಪ್ಪಾಗಿದೆ. I will go through the provisions. ಈಗ ಸೆಕ್ಷನ್ 124 ಮೊದಲು ಇತ್ತು.

**ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಬಂದು ಮಾತನಾಡಿದರೆ ನಾವು ಬೇಡ ಎನ್ನುವುದಿಲ್ಲ. House ನ್ನು order ಗೆ ತೆಗೆದುಕೊಂಡು ಮಾತನಾಡಬೇಕು.

**SRI S.R.PATIL:-** I have to enlighten you.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಅವರು enlighten ಮಾಡಲಿ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಶಿಕ್ಷಕರ ಮೇಲೆ, ಆಡಳಿತ ಮಂಡಳಿಯ ಅಧ್ಯಕ್ಷರ ಮೇಲೆ, ಆಡಳಿತ ಮಂಡಳಿ ಸದಸ್ಯರ ಮೇಲೆ ಮತ್ತು ಪೋಷಕರ ಮೇಲೆ ಹಾಕಿರುವ ಕೇಸ್ apply ಆಗಬಾರದು. ಇದು wrong section ಹಾಕಿದ್ದಾರೆ. ಅವರಿಗೆ ಅನುಕೂಲವಾಗಲಿ ಎಂದು ಓದುತ್ತಿದ್ದೇನೆ. ನಾವು ಈ ಪ್ರಕರಣವನ್ನು ಹಿಂತೆಗೆದುಕೊಳ್ಳಿ ಎಂದು insist ಮಾಡುತ್ತಿದ್ದೇವೆ. ಈ ಸೆಕ್ಷನ್ ಅನ್ನು ಓದಿ ಹೇಳಿದರೆ ಆಗ ಅವರೇ ಈ ಕೇಸನ್ನು ಹಿಂತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಸೆಕ್ಷನ್ 124 ಏನು ಹೇಳುತ್ತದೆ ಎಂದರೆ, . . .

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ದಯಮಾಡಿ ಅವರವರ ಸ್ಥಾನಗಳಿಗೆ ತೆರಳಬೇಕೆಂದು ಕೋರುತ್ತೇನೆ.

**(ಗೊಂದಲ)**

**SRI S.R.PATIL:-** Mr. Chairman, Is there any bar to read the provisions of Indian Penal Code?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ವಿರೋಧಪಕ್ಷದ ನಾಯಕರೇ, ಮಾನ್ಯ ಸಚಿವರು ಇದರ ಬಗ್ಗೆ ಏನು ಹೇಳುತ್ತಾರೆ ನೋಡೋಣ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನನಗೆ ವಿಧಾನ ಪರಿಷತ್ತಿನ ಬಗ್ಗೆ ವಿಶೇಷವಾದ ಗೌರವವಿದೆ. ಏಕೆಂದರೆ, ನಾನು ಕೂಡ ಇಲ್ಲಿ 12 ವರ್ಷಗಳ ಕಾಲ ಇದ್ದವನು. ಇಲ್ಲಿಯ ಸದಸ್ಯರ ಬಗ್ಗೆಯು ಕೂಡ ನನಗೆ ಗೌರವವಿದೆ. ಈ ಸದನದ ಗೌರವವನ್ನು ಕಾಪಾಡಿಕೊಳ್ಳುವ ಸಲುವಾಗಿ ತಾವು ತಮ್ಮ ಸ್ಥಾನಕ್ಕೆ ಹೋಗಿ ಇದೇ ಮಾತುಗಳನ್ನು, ಇದೇ ವಾದವನ್ನು ಇನ್ನಷ್ಟು ಹರಿತವಾದ ಭಾಷೆಗಳಲ್ಲಿ ತಾವು ಹೇಳಬಹುದು. ಈ ಸದನದ ಪರಂಪರೆ ಹಾಗೆ ಇದೆ. ಮೊದಲನೆಯದಾಗಿ ನಾನು ಮಾನ್ಯ ಸದಸ್ಯರುಗಳು ತಮ್ಮ ಸ್ಥಳಕ್ಕೆ ಹೋಗಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡುತ್ತೇನೆ. ಇನ್ನು ತಮ್ಮ ವಿವೇಚನೆಗೆ ಬಿಟ್ಟದ್ದು. ಆಮೇಲೆ ನಮ್ಮ ಹೇಳಿಕೆಯಲ್ಲಿ ಆಕ್ಷೇಪಣೆಗಳು ಬಂದರೆ ನೀವು ಧರಣಿ ಮಾಡಿ ಅಥವಾ ಸಭಾತ್ಯಾಗ ಮಾಡಿ ಅಥವಾ ಏನು ಬೇಕಾದರೂ ಮಾಡಿ. ಅದು ನಿಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂಲಭೂತ ಹಕ್ಕು, ನಾವು ಅದಕ್ಕೆ ಅಡ್ಡಿ ಬರುವುದಿಲ್ಲ. ಕನಿಷ್ಠ ಪಕ್ಷ ಈ ಚರ್ಚೆಯಲ್ಲಿ ನಿಮ್ಮ ಕಡೆಯಿಂದ ನೀವು ಹೇಳಿ, ನಮ್ಮ ಕಡೆಯಿಂದ ನಾವು ಹೇಳುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಿ. ನಾವೆಲ್ಲರೂ ಒಟ್ಟಾಗಿ ಸೇರಿ ಕೆಲಸ ಮಾಡಬೇಕಲ್ಲವೇ? ಇದು ಇಲ್ಲಿಗೆ ಮುಗಿಯುವುದಿಲ್ಲ.

**ಸಭಾಪತಿಯವರು:-** ಬಾವಿಯಲ್ಲಿ ನಿಂತು ಮಾತನಾಡುವುದು ತಪ್ಪಾಗುತ್ತದೆ. ತಮ್ಮ ಸ್ಥಾನಗಳಿಗೆ ತೆರಳಿ demand ಮಾಡಿದರೆ ಉತ್ತರ ಬರುವುದಿಲ್ಲವೇ?

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಭೋಜೇಗೌಡರು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)**

ಮಾನ್ಯ ಭೋಜೇಗೌಡರೇ, ತಮಗೆ ಮಾತನಾಡಲು ಅವಕಾಶ ಕೊಡುತ್ತೇನೆ. ಎಲ್ಲರನ್ನೂ ಅವರವರ ಸ್ಥಾನಕ್ಕೆ ಕರೆದುಕೊಂಡು ಹೋಗಿ ಒಬ್ಬರೇ ಹೋಗುವುದಕ್ಕೆ ಆಗುವುದಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ಬಹಳ ಅನುಭವ ಇರುವವರು, ಅವರ ಬಗ್ಗೆ ಹೇಳುವುದಕ್ಕೂ ಬಿಡುವುದಿಲ್ಲ ಎಂದರೆ ಹೇಗೆ? ನೀವು ಅತ್ಯಂತ ನಿಪುಣರು, ಅನುಭವಸ್ಥರು, ಮುಖ್ಯಮಂತ್ರಿಗಳಿಗೆ ಸಲಹೆ ಕೊಡುವ ಶಕ್ತಿ ನಿಮಗಿದೆ. ನಾನು ಒಬ್ಬ ಸಣ್ಣ ಗೃಹ ಸಚಿವ. ಮುಖ್ಯಮಂತ್ರಿಯವರಿಗೆ ಸಲಹೆ ಕೊಡುವವರು ನೀವು. ನಿಮ್ಮ ಮಾತನ್ನು ನಾವು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತೇವೆ. ಈ ವಿಷಯದ ಬಗ್ಗೆ ಈಗಾಗಲೇ ಈ ಹಿನ್ನೆಲೆ ಏನಾಗಿದೆ ಎನ್ನುವ ಬಗ್ಗೆ ತಾವು ಹೇಳಿದ್ದೀರಿ, ನಾನು ಕೂಡ ಹೇಳಿದ್ದೇನೆ. ಇಲ್ಲಿ ಪ್ರಶ್ನೆ ಇರುವುದು; ತಾವು ಆ ತಾಯಿ ಬಗ್ಗೆ, ಟೀಚರ್ ಬಗ್ಗೆ ಮತ್ತು ಮ್ಯಾನೇಜ್‌ಮೆಂಟ್ ಬಗ್ಗೆ ಏನು ಭಾವನೆಗಳನ್ನು ವ್ಯಕ್ತಪಡಿಸಿದ್ದೀರಿ ಅದನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ. ಆ ಸನ್ನಿವೇಶಗಳನ್ನು ನಾವು ಅರ್ಥ ಮಾಡಿಕೊಂಡು, ನಾವು ಏನೇನು ಕ್ರಮಗಳನ್ನು ಜರುಗಿಸಿದ್ದೇವೆ ಎನ್ನುವಂತಹದ್ದನ್ನು ಹೈಕೋರ್ಟ್ ಮುಂದೆ PIL (Public Interest Litigation) ನಲ್ಲಿ affidavit ಮುಖಾಂತರ ಹಾಕಿದ್ದೆವು. ಅದನ್ನು ಹೈಕೋರ್ಟ್ ಒಪ್ಪಿ ಯಾರು PIL ಹಾಕಿದ್ದರು ಅವರಿಗೆ ನೋಟಿಸನ್ನು ನೀಡಿದ್ದಾರೆ. 9ನೇ ತಾರೀಖು ಅದರ ವಿಚಾರಣೆ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಇಲ್ಲಿ ಎರಡು ವಿಷಯಗಳಿಗೆ ಒಂದು ಸಂಸ್ಥೆಯನ್ನು ನಡೆಸುವಾಗ ಅದರ ಹಿಂದಿರುವ ಸದುದ್ದೇಶ ಮಕ್ಕಳ sensitivity ಮತ್ತು ಪಾಲಕರ ಒಂದು ನಿರೀಕ್ಷೆ, ಆ ಮಕ್ಕಳು ಒಳ್ಳೆಯವರಾಗಬೇಕೆಂಬ ಅಪೇಕ್ಷೆ ಅವೆಲ್ಲಾ ಪ್ರಶ್ನಾತೀತ. ತಮ್ಮ ವಿಚಾರಗಳನ್ನೆಲ್ಲಾ ನಾನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಸದುದ್ದೇಶದಿಂದಲೇ ಶಾಲೆಯನ್ನು ಮಾಡಿರುತ್ತಾರೆ, ಸದುದ್ದೇಶದಿಂದಲೇ ಶಿಕ್ಷಕರು ಪಾಠವನ್ನು ಕಲಿಸಿರುತ್ತಾರೆ.

(ಮುಂದು)

(87) 20–02–2020/ 02–40/ ಕೆಹೆಚ್–ಎಕೆ

**ಶ್ರೀ ಬಸವರಾಜ ಬೊಮ್ಮಾಯಿ (ಮುಂದು)**

ತಾಯಿ ಎಂದಿಗೂ ಕೂಡ ತಪ್ಪು ಮಾಡುವಂತೆ ಹೇಳುವುದಿಲ್ಲ ಎನ್ನುವಂತಹ ಮೂಲಭೂತ ಚಿಂತನೆಗೆ ನನ್ನ ಸಂಪೂರ್ಣವಾದಂತಹ ಒಪ್ಪಿಗೆ ಇದೆ. ಇವತ್ತು ಅಲ್ಲಿ ನಡೆದಿರುವಂತಹ ಘಟನೆ ಮತ್ತು ಬಳಸಿರುವಂತಹ ಶಬ್ದಗಳು ಅಲ್ಲಿನ ಶಾಲೆಗಳಿಗೆ ಸೀಮಿತವಾಗದೆಯೇ, ಫೇಸ್‌ಬುಕ್‌ನಲ್ಲಿ ಬಂದ ಮೇಲೆ ಈ ಸಮಸ್ಯೆ ಉದ್ಭವವಾಗಿದೆ. ಈ ಎಲ್ಲಾ ವಿಚಾರಗಳು ಉಚ್ಚ ನ್ಯಾಯಾಲಯದ ಮುಂದೆ ಇದೆ. ಆದುದರಿಂದ, ಉಚ್ಚ ನ್ಯಾಯಾಲಯದ ಮುಂದೆ ನಾವು ಅಫಿಡವಿಟ್ ಸಲ್ಲಿಸಿದಂತಹ ಸಂದರ್ಭದಲ್ಲಿ ಮತ್ತು ಪೋಲಿಸ್‌ನವರು ಇದರ ಬಗ್ಗೆ ಎಫ್.ಐ.ಆರ್., ಹಾಕಿ ತನಿಖೆ ಪ್ರಾರಂಭ ಮಾಡಿದಾಗ ಕಾನೂನಿನ ಪ್ರಕಾರ ಯಾರು ಕೂಡ ಮಧ್ಯಪ್ರವೇಶ ಮಾಡುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ಇದಕ್ಕೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದಿಂದ ನಿರ್ದೇಶನ ಬಂದ ನಂತರ, ಮಾನ್ಯ ಸದಸ್ಯರುಗಳೆಲ್ಲರೂ ಶಿಕ್ಷಕರ ಬಗ್ಗೆ, ಪಾಲಕರ ಬಗ್ಗೆ ಹಾಗೂ ಮ್ಯಾನೇಜ್‌ಮೆಂಟ್ ಬಗ್ಗೆ ವ್ಯಕ್ತಪಡಿಸಿರುವ ಭಾವನೆಗಳು ಮತ್ತು ಕಾಳಜಿಗಳು ಇವೆಲ್ಲವೂ ಕೂಡ ನಮ್ಮ ಗಮನದಲ್ಲಿ ಇರುತ್ತದೆ. We are sympathetic. ಇದರಲ್ಲಿ ಎರಡನೇ ಮಾತಿಲ್ಲ. ಆದ್ದರಿಂದ ಉಚ್ಚ ನ್ಯಾಯಾಲಯದಿಂದ ಆದೇಶ ಬಂದ ನಂತರ ಏನೇನು ಮಾಡಬೇಕೋ, ಅದನ್ನು ಮಾಡುತ್ತೇವೆ. ಇನ್ನು ಈ ಪ್ರಕರಣ initial stage ನಲ್ಲಿ ಇದೆಯೇ ಹೊರತು final stage ಗೆ ಬಂದಿರುವುದಿಲ್ಲ. ಈ ಪ್ರಕರಣದ ಬಗ್ಗೆ ಪೂರ್ಣವಾಗಿ ತನಿಖೆ ಮತ್ತು ಚಾರ್ಜ್‌ಶೀಟ್ ಆಗಿರುವುದಿಲ್ಲ. ಹೀಗಾಗಿ ಇದಕ್ಕೆ ಇನ್ನೂ ಅವಕಾಶಗಳು ಇವೆ. ನಮಗೆ ಇದರ ಸೂಕ್ಷ್ಮತೆಯ ಬಗ್ಗೆ ಅರ್ಥವಾಗಿದೆ. ಆ ಪ್ರೋಸಿಜರ್ ನ ಸೂಕ್ಷ್ಮತೆಯ ಬಗ್ಗೆ ತಾವು ಅರ್ಥ ಮಾಡಿಕೊಂಡಿದ್ದೀರಿ ಎಂದು ಭಾವಿಸುತ್ತೇನೆ. ಇವರು ಸಹ ಸರ್ಕಾರವನ್ನು ನಡೆಸಿದ್ದಾರೆ. ಇದೇ ಮೊದಲನೇ ಬಾರಿಗೆ ಶಿಕ್ಷಕರ ಮೇಲೆ ಪ್ರಕರಣ ದಾಖಲಾಗಿರುವುದಿಲ್ಲ, ಹಲವಾರು ಬಾರಿ ಶಿಕ್ಷಕರ ಮೇಲೆ ಪ್ರಕರಣ ದಾಖಲಾಗಿರುತ್ತದೆ ಮತ್ತು sedition ಅನ್ನು ಎಲ್ಲಾ ಸರ್ಕಾರದವರು ಸಹ ಕಾಲಕಾಲಕ್ಕೆ ಉಪಯೋಗ ಮಾಡಿಕೊಂಡಿದ್ದಾರೆ. WhatsApp ನಲ್ಲಿ ಮೆಸೇಜ್ ಬಂದಿದೆ ಎಂದು ಇವತ್ತು ಜೈಲಿಗೆ ಕಳುಹಿಸಿರುವಂತಹ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದಾಹರಣೆಗಳು ಹಿಂದಿನ ಸರ್ಕಾರದಲ್ಲಿ ಇದೆ. ಕೇವಲ WhatsApp ನಲ್ಲಿ ಮಂಗಳೂರಿನ ಶ್ರೀ ವಿಕ್ರಂ ಭಟ್ ಎಂಬುವವರು ವಿಚಾರವನ್ನು ಹೇಳಿರುವುದಕ್ಕೆ ಅವರನ್ನು ಜೈಲಿಗೆ ಕಳುಹಿಸಲಾಗಿದೆ. ಇಂತಹ 10-15 ಪ್ರಕರಣಗಳನ್ನು ನಾನು ಉದಾಹರಣೆಯಾಗಿ ಕೊಡಬಹುದು. ಅದರ ಬಗ್ಗೆ ನಾನು ವಿಮರ್ಶೆ ಮಾಡುವುದಕ್ಕೆ ಹೋಗುವುದಿಲ್ಲ. ಅಲ್ಲಿನ ಅಧಿಕಾರಿಗಳು ಸಂದರ್ಭಕ್ಕನುಗುಣವಾಗಿ ಮಾಡಿರಬಹುದು ಅಥವಾ ಮೇಲಿನ ಅಧಿಕಾರಿಗಳು ಹೇಳಿ ಮಾಡಿಸಿರಬಹುದು. ಆದರೆ, ಅದನ್ನೇ ನಾವು ಎತ್ತಿ ಹಿಡಿದು ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ಸಂದರ್ಭದಲ್ಲಿ ನಡೆದಿರುವಂತಹ ಘಟನೆಯ ಬಗ್ಗೆ ಮಾನ್ಯ ಸದಸ್ಯರು ಹೇಳಿರುವಂತಹ ವಿಚಾರಗಳು, ಭಾವನೆಗಳು ಮತ್ತು emotions ಬಗ್ಗೆ ನಮಗೂ ಕೂಡ ಅರಿವಿದೆ ಎನ್ನುವಂತಹ ಮಾತನ್ನು ಹೇಳಬಯಸುತ್ತೇನೆ. ಉಚ್ಚ ನ್ಯಾಯಲಯದ ಮುಂದೆ ಈ ಪ್ರಕರಣ ಇದ್ದು, ಇದರ ಬಗ್ಗೆ ಅಲ್ಲಿಂದ ನಿರ್ದೇಶನ ಬಂದ ನಂತರ ಮುಂದಿನ ಕ್ರಮವನ್ನು ಜರುಗಿಸುತ್ತೇವೆ. ಒಟ್ಟಾರೆಯಾಗಿ, ನಾನು ಒಂದು ಭರವಸೆಯನ್ನು ಕೊಡುತ್ತೇನೆ. ಈ ಪ್ರಕರಣದ ಬಗ್ಗೆ ತಮಗೆಲ್ಲಾ ಆಗಿರುವಂತಹ ಆತಂಕದ ಬಗ್ಗೆ, ಅಂತಿಮವಾದಂತಹ ತೀರ್ಮಾನಗಳಲ್ಲಿ ನಾವು ಯಾರಿಗೂ ಕೂಡ ಅನಗತ್ಯವಾಗಿ, unlawful ಆಗಿ, illegal ಆಗಿ ಅನ್ಯಾಯವಾಗುವುದಕ್ಕೆ ಅವಕಾಶವನ್ನು ಮಾಡಿಕೊಡುವುದಿಲ್ಲ. ಆದ್ದರಿಂದ ಇದಕ್ಕೆ ಮಾನ್ಯ ಸದಸ್ಯರುಗಳು ಸಹಕಾರವನ್ನು ಕೊಡಬೇಕು. ನಾವೆಲ್ಲರೂ ಉಚ್ಚ ನ್ಯಾಯಾಲಯದಿಂದ ಬರುವ ನಿರ್ದೇಶನಕ್ಕಾಗಿ ನಿರೀಕ್ಷೆ ಮಾಡೋಣ. ಉಚ್ಚ ನ್ಯಾಯಾಲಯದಲ್ಲಿ ಈ ಪ್ರಕರಣವು 8ನೇ ತಾರೀಖಿಗೆ ನಿಗದಿಯಾಗಿದೆ. ನಾವು ಏನು ಮಾಡಿದ್ದೇವೆ ಎಂದು ಅಫಿಡವಿಟ್ ಸಹ ಸಲ್ಲಿಸಿದ್ದೇವೆ. It's under the scrutiny of the High Court. None other than the High Court is looking into the whole thing. ಈ ಪ್ರಕರಣ C.J. (Chief Justice) ಯವರ ನ್ಯಾಯಾಲಯದಲ್ಲಿಯೇ ಹೊರತು ಬೇರೆ ಯಾವ ನ್ಯಾಯಾಲಯದಲ್ಲಿ ಕೂಡ ಇಲ್ಲ. ಅವರು ಸಹ ಸರ್ಕಾರವನ್ನು ನಡೆಸಿದ್ದಾರೆ. ಈ ಪ್ರಕರಣವು C.J. ನ್ಯಾಯಾಲಯದಲ್ಲಿದ್ದಾಗ ನಾವು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ನಾವೆಲ್ಲರೂ ಕೂಡ ನಡೆದುಕೊಳ್ಳೋಣ. ಈ ವಿಚಾರಕ್ಕೆ ತಾವು ದಯವಿಟ್ಟು ಬರಬೇಕು. ಈಗಾಗಲೇ ನಾನು ಶೇಕಡಾ 90 ರಷ್ಟು conclusion ಅನ್ನು ಕೊಟ್ಟಿದ್ದು, ಇನ್ನುಳಿದಂತಹ conclusion ಸಹ ಹೇಳುತ್ತೇನೆ. ಇಲ್ಲಿಗೆ ಮಾನ್ಯ ಸದಸ್ಯರುಗಳು ಈ ವಿಚಾರವನ್ನು ಮುಗಿಸಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**“ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ಡಾ॥ ಜಯಮಾಲ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಮಂತ್ರಿಗಳಲ್ಲಿ ಒಂದು ಬೇಡಿಕೆ ಏನೆಂದರೆ, ಆಫಿಡವಿಟ್ ಸಲ್ಲಿಸುವಾಗ ನ್ಯಾಯಾಲಯಕ್ಕೆ ಪೋಲಿಸ್‌ನವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ, ...

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಮಂತ್ರಿಗಳು):–** ಮಾನ್ಯ ಜಯಮಾಲ ರಾಮಚಂದ್ರರವರೇ, ಆಫಿಡವಿಟ್ ತಂದಾಗ ಈ ರೀತಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ನ್ಯಾಯಾಲಯದಲ್ಲಿರುವ matter sub judice ಆಗಿದೆ.

**ಡಾ॥ ಜಯಮಾಲ:–** ಮಾನ್ಯ ಸಚಿವರೇ ನಾನು ಹೇಳುವಂತಹ ಮಾತನ್ನು ಪೂರ್ತಿಯಾಗಿ ಕೇಳಿ. ಇವರು ನೀಡುವಂತಹ ಆಫಿಡವಿಟ್‌ನಲ್ಲಿ ಸುಳ್ಳು ಮಾಹಿತಿಗಳನ್ನು ಕೊಡುತ್ತಿದ್ದಾರೆ. ಪೊಲೀಸ್‌ನವರು ಆಫಿಡವಿಟ್‌ನಲ್ಲಿ ಸುಳ್ಳನ್ನು ಕೊಟ್ಟರೆ ಅದು ಕಾನೂನಿನ ಪ್ರಕಾರ ತಪ್ಪಲ್ಲವೇ? ಖಂಡಿತವಾಗಿಯೂ ಇದು ಕಾನೂನಿನ ಬಗ್ಗೆ ತಪ್ಪು ಸಂದೇಶವನ್ನು ಕಳುಹಿಸಿದಂತಾಗುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ತಿಳಿಸಿರುವಂತೆ sub judice ಆಗುವುದನ್ನು ನಾವು ಇಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. The hon. Member can’t debate on the affidavit which is filed before the High Court. ಇದು sub judice ಆಗಿರುವಂತಹ ವಿಚಾರವಾಗಿದೆ. ನಾವು ಇದಕ್ಕೆ ಉತ್ತರವನ್ನು ಕೊಡುವುದಕ್ಕೆ ಆಗುವುದಿಲ್ಲ. ಆಫಿಡವಿಟ್‌ನ್ನು ಯಾವ ರೀತಿ ಕೊಡಬೇಕೆಂದು ತಾವು dictate ಮಾಡುವುದಕ್ಕೆ ಆಗುವುದಿಲ್ಲ.

**ಡಾ॥ ಜಯಮಾಲ:–** ಮಾನ್ಯ ಸಭಾಪತಿಯವರೇ, ದಯವಿಟ್ಟು, ನಾವು ಇದರ ಬಗ್ಗೆ dictate ಮಾಡುತ್ತಿಲ್ಲ. ಪೊಲೀಸ್‌ನವರು ಯೂನಿಫಾರಂನಲ್ಲಿ investigate ಮಾಡಿರುವುದರ ಬಗ್ಗೆ ಮಾಹಿತಿ ಕೊಡುತ್ತಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಕೊಟ್ಟಿರುವಂತಹ ಆಫಿಡವಿಟ್ ಸರಿಯಿಲ್ಲವೆಂದು ಇವರು ಹೇಳಿದರೆ ನ್ಯಾಯಾಧೀಶರು ಏಕೆ ಬೇಕು, ಇದರ ಬಗ್ಗೆ ಮಾನ್ಯ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸದಸ್ಯರು ಹೇಳುವುದಕ್ಕೆ ಆಗುತ್ತದೆಯೇ, ಇದು sub judice ಆಗಿದೆ. This matter is sub judice.

**ಡಾ॥ ಜಯಮಾಲ:–** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ಯೂನಿಫಾರಂನಲ್ಲಿ ಮಕ್ಕಳ ಹಕ್ಕುಗಳು violate ಆಗಿದೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಂಗಳೂರಿನಲ್ಲಿ ನಡೆದಿರುವ ಪ್ರಕರಣವಾಗಿರಬಹುದು, ಬೀದರ್‌ನಲ್ಲಿ ನಡೆದಿರುವ ಪ್ರಕರಣವಾಗಿರಬಹುದು, ಇನ್ನಿತರ ಪ್ರಕರಣಗಳ ಬಗ್ಗೆ ನಮ್ಮ ಪೊಲೀಸ್‌ನವರು ನ್ಯಾಯಸಮ್ಮತವಾಗಿ ನಡೆದುಕೊಂಡಿದ್ದಾರೆ.

**ಸಭಾಪತಿಯವರು:–** ಮಾನ್ಯ ಜಯಮಾಲರವರೇ, ಒಂದು ನಿಮಿಷ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಡಾ॥ ಜಯಮಾಲರವರು ಬಾವಿಗೆ ಬಂದರು)**

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ನಮ್ಮ ಪೊಲೀಸ್‌ನವರು ದಕ್ಷತೆಯಿಂದ ಸಮರ್ಥವಾಗಿ ನಿರ್ವಹಣೆ ಮಾಡಿದ್ದಾರೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಹಿತದೃಷ್ಟಿಯಿಂದ ಅದನ್ನೆಲ್ಲಾ ಮಾಡಿದ್ದಾರೆ. ಕೆಲವು ಪ್ರಕರಣಗಳಿಂದ ಗಲಭೆಗಳು ನಡೆಯುವ ಸಾಧ್ಯತೆಗಳಿರುವುದರಿಂದ ಕೆಲವು ಕ್ರಮಗಳನ್ನು ನ್ಯಾಯಸಮ್ಮತವಾಗಿ ತೆಗೆದುಕೊಂಡಿದ್ದೇವೆ. Everything is in order. ಮುಂದೆ ನಡೆಯುವಂತಹ ಗಲಭೆಗಳನ್ನು ತಡೆಯುವ ದೃಷ್ಟಿಯಿಂದ ಪೊಲೀಸ್‌ನವರು ಅದನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಮಾನ, ಪ್ರಾಣ ಮತ್ತು ಆಸ್ತಿ–ಪಾಸ್ತಿ ಹಾನಿಯಾಗುವುದನ್ನು ತಡೆದಿದ್ದಾರೆ. ಅಪರಾಧಿಗಳನ್ನು ಗುರುತಿಸಿದ್ದು, ಇವರಿಗೆ ಯಾವ ರೀತಿ ಶಿಕ್ಷೆಯನ್ನು ಕೊಡಬೇಕೋ, ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಗೋಲಿಬಾರ್ ಪ್ರಕರಣಗಳಾಗಲಿ ಅಥವಾ ಇನ್ನಿತರ ಪ್ರಕರಣಗಳಾಗಲಿ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಯೋಚನೆ ಮಾಡುತ್ತೇವೆ. Magisterial Inquiry ಇರಬಹುದು ಮತ್ತು CoD Enquiry ಇರಬಹುದು, ಎಲ್ಲಾ ಪ್ರಕರಣಗಳನ್ನು ಕೂಡ ನ್ಯಾಯಸಮ್ಮತವಾಗಿ National Human Rights Commission ಪ್ರಕಾರ ಮಾಡಿದ್ದೇವೆ. ಇದಕ್ಕೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದ ಆದೇಶ ಇರಬಹುದು, National Human Rights Commission ಆದೇಶ ಇರಬಹುದು, ಆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದೇಶಗಳ ಪ್ರಕಾರ ಪಾಲನೆ ಮಾಡುತ್ತೇವೆ; ಇದನ್ನು ಕರ್ನಾಟಕದಲ್ಲಿ ಎತ್ತಿ ಹಿಡಿಯುತ್ತೇವೆಂದು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, the House is not in order. How can you expect a reply from a Minister when the House is not in order? House order ನಲ್ಲಿ ಇಲ್ಲ. ನಾವು ಈ ವಿಚಾರದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಮಾನ್ಯ ಸಚಿವರು ತಮ್ಮ ಭಾಷಣವನ್ನು ಅರ್ಥ ಮಾಡಿಕೊಂಡಿದ್ದಾರೆ ಎಂದು ಅಂದುಕೊಂಡಿದ್ದೇವೆ. ಮಾನ್ಯ ಗೃಹ ಮಂತ್ರಿಗಳು ಹೇಳಿರುವಂತಹ ಭಾವನೆಗಳು ನಮಗೆ ಅರ್ಥವಾಗಿದೆ ಮತ್ತು ವಿಚಾರಗಳು ನಮಗೆ ಮನವರಿಕೆಯಾಗಿದೆ. ಸಂಪೂರ್ಣವಾಗಿ ನಮ್ಮ ಬೇಡಿಕೆಯ line ನಲ್ಲಿಯೇ ಇದ್ದೇವೆ ಎನ್ನುವ ಹಾಗೆ ಮಾತನಾಡಿದ್ದಾರೆ. ಮಾನ್ಯ ಸಚಿವರ ಮೇಲೆ ನಮಗೂ ಕೂಡ ವಿಶ್ವಾಸ ಮತ್ತು ನಂಬಿಕೆ ಇದೆ. ನಮ್ಮ ಶಬ್ದಗಳಿಗೆ ಗೌರವ ಕೊಡುತ್ತೇನೆಂದು ಹೇಳಿದ್ದಾರೆ. ಮಾನ್ಯ ಸದಸ್ಯರುಗಳ ಬೇಡಿಕೆಗಳು ಏನಿವೆ ಎಂಬುದನ್ನು ತಿಳಿದುಕೊಂಡಿದ್ದೇನೆ ಎಂದು ಸಹ ಹೇಳಿದ್ದಾರೆ. ನನಗೆ ಆ ಬೇಡಿಕೆಗಳ ಬಗ್ಗೆ ಗೌರವ ಇದೆ ಎಂದು ಕೂಡ ಹೇಳಿದ್ದಾರೆ. ಮಾನ್ಯ ಸಚಿವರು ಹೇಳಿರುವಂತಹ ವಿಚಾರಗಳನ್ನು ನಾವು ನಂಬುತ್ತೇವೆ. ಅದಕ್ಕಿಂತ ಪೂರ್ವದಲ್ಲಿಯೇ ಇದರ ಜೊತೆಗೆ ಇನ್ನೊಂದು ಮಾತನ್ನು ಸೇರಿಸಬೇಕು. ಈ ಪ್ರಾವಿಜನ್ ಏನಿದೆ, it has been wrongly invoked. ಈ ಪ್ರಾವಿಜನ್ ಯಾರಿಗೂ ಅಪ್ಲೈ ಆಗುವುದಿಲ್ಲ. ಅದನ್ನು ಒಂದು ನಿಮಿಷದಲ್ಲಿ ಹೇಳಿ ಮುಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಮೊದಲು ಇದರ ಬಗ್ಗೆ ಹೇಳಿ. ಅದರ ಬಗ್ಗೆ ನಂತರದಲ್ಲಿ ಚರ್ಚೆ ಮಾಡೋಣ. ವಿರೋಧ ಪಕ್ಷದ ಸದಸ್ಯರನ್ನು ಅವರ ಸ್ಥಾನಗಳಿಗೆ ತೆರಳುವುದಕ್ಕೆ ಹೇಳಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳಿಗೆ ನಂತರ ಹೇಳುತ್ತೇನೆ. ಇದರ ಬಗ್ಗೆ ಸರ್ಕಾರಕ್ಕೆ ಅನುಕೂಲವಾಗಲಿ ಎಂದು ಮಾನ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ. ಈ ಸದನದಲ್ಲಿ Law and Parliamentary Affairs Minister ಇದ್ದಾರೆ. ಹಾಗೆಯೇ ಕಾನೂನು ತಜ್ಞರೂ ಇದ್ದಾರೆ. ನನಗೆ ಅವರ ಬಗ್ಗೆ ಗೌರವ ಇದೆ. ಮಾನ್ಯ ಬಸವರಾಜ ಬೊಮ್ಮಾಯಿಯವರ ತಂದೆ ಸನ್ಮಾನ್ಯ ಎಸ್.ಆರ್.ಬೊಮ್ಮಾಯಿಯವರು ಹಿಂದೆ ಮುಖ್ಯಮಂತ್ರಿಗಳಾಗಿದ್ದರು.

ಅವರು ಸಹ ಬಹಳಷ್ಟು ವಿಚಾರಗಳನ್ನು ನೋಡಿದ್ದಾರೆ. ಅದರ ಬಗ್ಗೆ ಅವರಿಗೆ ಅನುಭವ ಇದೆ. ಆದರೆ ಇಲ್ಲಿರುವ ಭಾವನೆಗಳು ಏನಿವೆ, ಆಡಳಿತ ಮಂಡಳಿಯ ಅಧ್ಯಕ್ಷರು, ಸದಸ್ಯರು, ಶಿಕ್ಷಕರು, ಪೋಷಕರ ಮೇಲೆ ದಾಖಲಿಸಿರುವಂತಹ ಪ್ರಕರಣಗಳ ಬಗ್ಗೆ ಅವರಿಗೆ ಶೇಕಡಾ 100 ರಷ್ಟು convince ಆಗಿದೆ; ಆದರೆ ಅದನ್ನು ಪೂರ್ತಿಯಾಗಿ ಹೇಳುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಗೌರವ ಇದೆ ಎಂದು ಅವರು ಹೇಳಿದ್ದಾರೆ ಎಂದರೆ, ಅವರು convince ಆಗಿದ್ದಾರೆ ಎಂದು ಅರ್ಥ. In my opinion, the hon. Home Minister has understood the feelings of all opposition members beyond reasonable doubt. And we have got faith in him. ಈ ದಿಸೆಯಲ್ಲಿ ಇವರು ಕೆಲಸ ಮಾಡುತ್ತಾರೆಂದು ನನಗೆ ವಿಶ್ವಾಸ ಇದೆ ಎಂದು ನಾನು ಒಪ್ಪುತ್ತೇನೆ. ಅದಕ್ಕಿಂತ ಮೊದಲು ಒಂದೇ ಒಂದು ಪ್ರಾವಿಷನ್ ಏನಿದೆ ಎಂದರೆ, ...

**ಸಭಾಪತಿಯವರು:-** ದಯಮಾಡಿ ಎಲ್ಲಾ ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ತೆರಳಬೇಕೆಂದು ಕೋರುತ್ತೇನೆ. ಏಕೆಂದರೆ, ಸಮಯ ಈಗಾಗಲೇ ಮಧ್ಯಾಹ್ನ 2 ಗಂಟೆ 45 ನಿಮಿಷಗಳಾಗಿದ್ದು, ಇಂದಿನ ಕಾರ್ಯಕಲಾಪಗಳ ಪಟ್ಟಿಯಲ್ಲಿನ ಇನ್ನುಳಿದ ವಿಷಯಗಳ ಬಗ್ಗೆ ನಾನು ಚರ್ಚೆಗೆ ಅವಕಾಶ ಕೊಡಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದನ್ನೇ ನಾನು ಸಹ ಹೇಳುತ್ತೇನೆ. ಮುಂದಿನ ಚರ್ಚೆಗೆ ತಾವು ಅವಕಾಶ ಕೊಡುವ ಸಲುವಾಗಿ ದಯಮಾಡಿ ಮಾನ್ಯ ಸದಸ್ಯರು ಸಹ ತಮ್ಮ ಸ್ಥಾನಗಳಿಗೆ ಮರಳಬೇಕೆಂದು ವಿನಂತಿಸುತ್ತೇನೆ.

**(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಪಕ್ಷದ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ತೆರಳಿದರು)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಮಂತ್ರಿಗಳ ಮೇಲೆ ನಮಗೆ ವಿಶ್ವಾಸ ಮತ್ತು ನಂಬಿಕೆ ಇದೆ. ಏಕೆಂದರೆ, ಅವರು ಈ ವಿಚಾರವನ್ನು ಮನಸ್ಸಿಗೆ ಬಹಳವಾಗಿ ತೆಗೆದುಕೊಂಡು ಹೇಳಿದ್ದಾರೆ. ನನಗೆ ಅನಿಸಿರುವ ಮಟ್ಟಿಗೆ ಅವರ ಈ ಮಾತುಗಳು ನಾಲಿಗೆ ತುದಿಯಿಂದ ಬಂದಿರುವಂತಹ ಶಬ್ದಗಳಲ್ಲ, ಅವರ ಹೃದಯದ ಅಂತರಾಳದಿಂದ ಬಂದಿರುವಂತಹ ಶಬ್ದಗಳಾಗಿವೆ. ನಮ್ಮ ಎಲ್ಲಾ ಮಾನ್ಯ ಸದಸ್ಯರುಗಳ ಭಾವನೆಗಳನ್ನು ಅವರು ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿದ್ದಾರೆ. ಇದರಲ್ಲಿ ಏನೋ ತಪ್ಪಾಗಿದೆ ಎಂದು ಅವರು ಸಹ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

convince ಆಗಿದ್ದಾರೆ. ಆದರೆ ಅವರಿಗೆ ಇದನ್ನು ಹೇಳುವುದಕ್ಕೆ ಕಷ್ಟ ಇದೆ. I can understand his feelings.

**Dr. Y.A. NARAYANASWAMY:** Yes, the hon. Leader of Opposition is right.

**ಶ್ರೀ ಐವನ್ ಡಿ’ಸೋಜಾ:–** ಮಾನ್ಯ ಸಭಾಪತಿಯವರೇ, ...

**ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಯಾವಾಗಲೂ ಸಭೆ–ಸಮಾರಂಭಗಳಲ್ಲಿ, ಕಮಿಟಿಗಳಲ್ಲಿ ಕಾನೂನು ವ್ಯಾಪ್ತಿಗೆ ಬರುವಂತಹ ವಿಚಾರಗಳನ್ನು ಬಹಳ ಸಮರ್ಥವಾಗಿ ನಿಭಾಯಿಸಿದ್ದಾರೆ. ನ್ಯಾಯಾಲಯಕ್ಕೆ ಗೌರವವನ್ನು ಕೊಟ್ಟಿದ್ದಾರೆ. ಮಾನ್ಯ ಗೃಹ ಮಂತ್ರಿಗಳು ಹೇಳಿರುವಂತಹ ವಿಚಾರಗಳನ್ನು ಸಹ ಅವರು ಒಪ್ಪಿಕೊಂಡಿದ್ದಾರೆ. ಅದಕ್ಕಾಗಿ ಅವರಿಗೂ ಸಹ ಧನ್ಯವಾದಗಳು.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಿಮ್ಮಿಂದಲೇ ಇಷ್ಟೆಲ್ಲಾ ಆಗಿರುವುದು.

**ಶ್ರೀ ಐವನ್ ಡಿ’ಸೋಜಾ:–** ಮಾನ್ಯ ಸಭಾಪತಿಯವರೇ, I will just clarify in a minute.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಅವರು ಗಂಭೀರವಾಗಿ ಮಾತನಾಡುತ್ತಿದ್ದರು. ಅದನ್ನು ನೀವೇ ಕೆಡಿಸಿರುವುದು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. Section 124A...

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಶಿಕ್ಷಕರ ಬಗ್ಗೆ ನಿಮಗಿಂತ ಮೂರು ಪಟ್ಟು ಹೆಚ್ಚು ಕಾಳಜಿ ನಮಗೆ ಇದೆ. ಶಿಕ್ಷಕರ ಬಗ್ಗೆ ಕಾಳಜಿಯನ್ನು ಇಟ್ಟುಕೊಂಡು ಅವರೇ ಬಾವಿಗೆ ಬೀಳುವುದಕ್ಕೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬಂದರು ಎಂದ ಮೇಲೆ ಇನ್ನು ನಮಗೆ ಶಿಕ್ಷಕರ ಬಗ್ಗೆ ಎಷ್ಟು ಕಾಳಜಿ ಇರುತ್ತದೆ ಎಂದು ನೀವೇ ಹೇಳಿ. ಮೊದಲು ಆಡಳಿತ ಪಕ್ಷದ ಸದಸ್ಯರೇ 'ಶಿಕ್ಷಕರನ್ನು ಏಕೆ ಅಪಮಾನ ಮಾಡುತ್ತೀರಿ, ಇದು ನಿಮ್ಮ ಕೆಲಸ ಅಲ್ಲ' ಎಂದು ಅವರೇ ಬಾವಿಗೆ ಬಂದರು. ಹಾಗಿರುವಾಗ ವಿರೋಧ ಪಕ್ಷದ ಸದಸ್ಯರು ಶಿಕ್ಷಕರ ಬಗ್ಗೆ ಇನ್ನು ಎಷ್ಟು ಕಾಳಜಿಯನ್ನು ತೋರಿಸಬೇಕು?

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಬಾವಿಗೆ ಬರಲಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಿಮಗೆ ಆ ಕಡೆಯಿಂದ ಕಾಣುವುದಿಲ್ಲ. ಈ ಕಡೆ ಕುಳಿತುಕೊಂಡವರಿಗೆ ಯಾರು ಬಾವಿಗೆ ಬಂದರು ಎಂದು ಹೇಗೆ ಕಾಣುತ್ತದೆ?

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಕಡತಕ್ಕೆ ತಪ್ಪು ಮಾಹಿತಿ ಹೋಗಬಾರದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಈ ಕಡೆ ಕುಳಿತುಕೊಂಡವರಿಗೆ ಮಾತ್ರ ತಾವು ಎಷ್ಟು ಹೆಜ್ಜೆ ಇಟ್ಟಿದ್ದೀರಾ, ಎಷ್ಟು ಮುಂದೆ ಬಂದಿದ್ದೀರಾ ಎಂದು ಕಾಣುತ್ತದೆ. ಇವೆಲ್ಲಾ ಇಲ್ಲಿ ನಡೆಯುವುದಿಲ್ಲ. ಮಾನ್ಯ ವಿರೋಧ ಪಕ್ಷದವರು ಸಹ ಗೌರವವನ್ನು ಕೊಡುತ್ತಾರೆ.

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮುಳ್ಳಿಗೆ ಮದ್ದು ಇಲ್ಲ. ಏನೂ ಇಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸದಸ್ಯರೇ, ಈ ನಾಟಕ, ಈ ಮೊಂಡುತನ ಇದ್ಯಾವುದೂ ಸಹ ನಡೆಯುವುದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, the hon. Member should take back that word. *(Interruptions)…* I have not blamed any teacher. I have just told what is the exact issue. *(Interruptions)…* Is it wrong to put the exact issue before the Minister?

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಬಿಜೆಪಿ ಶಾಸಕರು ಇಲ್ಲಿ ಆಟ ಆಡುತ್ತಿದ್ದಾರೆಯೇ, ಉಡಾಫೆ ಮಾಡುತ್ತಿದ್ದಾರೆಯೇ?

(ಗೊಂದಲ)

(ಮುಂದು)

**(88) 20/02/2020/2:50/ಎಸ್‌ಪಿಆರ್/ಎಕೆ**

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಸದನವನ್ನು ಲಘುವಾಗಿ ತೆಗೆದುಕೊಳ್ಳುತ್ತೀರಾ?

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಆಟ ಆಡುತ್ತಾರೆ. ಅವರ ಎಲೆಕ್ಷನ್...

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:-** ನೀವು ಏನು ಮಾತನಾಡಿದ್ದೀರೆಂದು ಕಡತದಿಂದ ತೆಗೆಸಿ. . . ಮಾತನ್ನು ವಾಪಸ್ಸು ತೆಗೆದುಕೊಳ್ಳಿ.

**(ಗೊಂದಲ)**

**Sri K.T. SRIKANTEGOWDA:** No, this is not good on the floor of the House...

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರು ಮಾತನಾಡುತ್ತಿರುವುದು ಕೇಳಿಸುತ್ತಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರಿಗೆ ಗೌರವ ಕೊಡಬೇಕು. ಅದಕ್ಕಾಗಿ ಕೊಡುತ್ತಿದ್ದೇವೆ ಅಷ್ಟೇ.

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರು ಶಿಕ್ಷಕರ ಮೇಲೆ ಆಪಾದನೆ ಮಾಡುತ್ತಿದ್ದಾರೆ. ಈ ಮಾತನ್ನು ವಾಪಸ್ಸು ತೆಗೆದುಕೊಳ್ಳಿ. ನಾವು ಶಿಕ್ಷಕರ ಪರವಾಗಿ ಇದ್ದೇವೆ. ವಿರೋಧ ಪಕ್ಷದ ಸದಸ್ಯರು ಶಿಕ್ಷಕರ ವಿರೋಧಿಗಳಾಗಿದ್ದಾರೆ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಾವು ನೋಡುತ್ತಿದ್ದೇವೆ.

**(ಗೊಂದಲ)**

**ಸಭಾಪತಿಯವರು:–** ಯಾವ ಸದಸ್ಯರು ಮಾತನಾಡಿದರೂ ಸಹ ಅದು ದಾಖಲೆಗೆ ಹೋಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ನಿರ್ದೇಶನದ ಮೇರೆಗೆ, ಮಾನ್ಯ ಸದಸ್ಯರುಗಳು ಮಾತನಾಡಿರುವುದನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರೇ ನೀವು ಏನೂ ಸ್ಪಷ್ಟೀಕರಣ ಕೇಳುವುದು ಬೇಡ. ಏನೇ ಸ್ಪಷ್ಟೀಕರಣ ಬೇಕಿದ್ದರೆ ಅದನ್ನು ನಾನೇ ಕೇಳುತ್ತೇನೆ.

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಯಾರು ಮಾತನಾಡಿರುವುದು ಸರಿ ಅಥವಾ ತಪ್ಪು ಎನ್ನುವುದನ್ನು ಕಡತ ತೆಗೆಸಿ.

**ಸಭಾಪತಿಯವರು:–** ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಹೀಗಾಗಿ ಅವರು ಮುಂದುವರೆಸಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಕಡತವನ್ನು ಏಕೆ ತೆಗೆಸಬೇಕು? ಶಿಕ್ಷಕರ ಬಗ್ಗೆ ಆಡಳಿತ ಪಕ್ಷದವರಿಗೆ ಎಷ್ಟು ಕಾಳಜಿ ಇದೆಯೋ ಅಷ್ಟೇ ಕಾಳಜಿ ನಮಗೂ ಸಹ ಇದೆ. ನೀವು ಎನು ಕಾಳಜಿಯನ್ನು ತೋರಿಸಿದ್ದರೋ ಅದೇ ಕಾಳಜಿಯನ್ನು ನಾವೂ ಸಹ ತೋರಿಸಿದ್ದೇವೆ.

**ಶ್ರೀ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, Mandya is India.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಾವೂ ಸಹ ಶಿಕ್ಷಕರಾಗಿದ್ದೇವೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, the case filed against Shaheen School of Bidar has been filed without properly understanding the provision of law and Section 124A of the IPC has been wrongly invoked. ಶ್ರೀ ಭೋಜೇಗೌಡರೇ ಒಂದು ನಿಮಿಷ ನಾವು ಹೇಳುವುದನ್ನು ಕೇಳಿ. ಬೀದರ್ ಜಿಲ್ಲೆಯ ಶಹೀನ್ ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷರು, ಸದಸ್ಯರು ಹಾಗೂ ಮುಖ್ಯೋಪಾದ್ಯಾಯ ರವರುಗಳ ಮೇಲೆ ಮತ್ತೂ ಆ ಮಗುವಿನ ತಾಯಿಯ ವಿರುದ್ಧ 124–ಎ ಐ.ಪಿ.ಸಿ. ಪ್ರಕಾರ ಪ್ರಕರಣವನ್ನು ದಾಖಲಿಸಿದ್ದಾರೆ. ಆದ್ದರಿಂದ ನಾನು 124 ಮತ್ತು 124–ಎ ಗಳಲ್ಲಿನ ಅಂಶಗಳನ್ನು ಇಲ್ಲಿ ಉಲ್ಲೇಖಿಸುತ್ತಾ, ಮಾನ್ಯ ಸಭಾಪತಿಯವರ ಮುಖಾಂತರ ಸದನದ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. Section 124 reads as follows:-

> *"Whoever, with the intention of inducing or compelling the President of India, or Governor of any State to exercise or refrain from exercising in any manner any of the lawful powers of such President or Governor, assaults or wrongfully restrains, or attempts wrongfully to restrain, or overawes, by means of criminal force or the show of criminal force, or attempts*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*so to overawe, such President or Governor, shall be punished with imprisonment of either description for a term which may extend to seven years, and shall also be liable to fine."*

124–ಎ ರಲ್ಲಿ ಬಹಳ ಸ್ಪಷ್ಟವಾಗಿ ತಿಳಿಸಿದ್ದಾರೆ. Section 124A reads as follows:-

*"Whoever by words, either spoken or written, or by signs, or by visible representation, or otherwise, brings or attempts to bring into hatred or contempt, or excites or attempts to excite disaffection towards the Government established by law in India, shall be punished with imprisonment for life, to which fine may be added, or with imprisonment which may extend to three years, to which fine may be added, or with fine."*

ಸೆಕ್ಷನ್ 124–ಎ ರೀತ್ಯ lawfully established government ವಿರುದ್ಧ ಮಾತನಾಡಿದರೆ ಎಂಬುದಾಗಿ ತಿಳಿಸುತ್ತದೆ. ಇಲ್ಲಿ ಪ್ರಧಾನ ಮಂತ್ರಿಯವರ ಬಗ್ಗೆ ವ್ಯಕ್ತಿಗತವಾಗಿ ಮಾತನಾಡಿದ್ದಾರೆ. ಹಾಲಿ ಶ್ರೀ ಬಿ.ಎಸ್.ಯಡಿಯ್ಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾರೆ. ಆದರೆ ಅವರೇ ಸರ್ಕಾರವಲ್ಲ. The Cabinet is government. ಈಗ ಮಾನ್ಯ ನರೇಂದ್ರ ಮೋದಿಯವರ Union Cabinet ಇದೆ, that is the government. The Head of the Constitution is the President of India. ಸೆಕ್ಷನ್ 124 ರೀತ್ಯ ಅರ್ಥ ಮಾಡಿಕೊಂಡಿದ್ದಾರೆ. The President of India is also the constitutional head. The Governor of a State is also a constitutional head in the State. ಇದರ ವ್ಯಾಖ್ಯಾನವನ್ನು ಮುಂದಿಟ್ಟುಕೊಂಡು ಸೆಕ್ಷನ್ 124–ಎ ಕರಡನ್ನು ಸಿದ್ಧಪಡಿಸಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲಿ ಸರ್ಕಾರದ ಒಬ್ಬ ಪ್ರತಿನಿಧಿಗೆ ಮಾತನಾಡಿದ್ದಾರೆ. ನಾನು ವಿಧಾನ ಪರಿಷತ್‌ನ ಒಬ್ಬ ಸದಸ್ಯ ಹಾಗೂ ವಿರೋಧ ಪಕ್ಷದ ನಾಯಕನಾಗಿದ್ದೇನೆ. ಈಗ ನನ್ನ ಮೇಲೆ ಯಾರಾದರೂ ದಾಳಿ ಮಾಡಿದರೆ, ಐ.ಪಿ.ಸಿ. ಕಲಂಗಳ ಪ್ರಕಾರ ಯಾವ ಕಲಂಗಳು ಅನ್ವಯಿಸುತ್ತವೆಯೋ ಅವುಗಳನ್ನು ಹಾಕಬಹುದು. ಒಂದು ವೇಳೆ ನನ್ನನ್ನು ಅವಮಾನಿಸಿದರೆ, defamation caseನ್ನು ದಾಖಲಿಸಬಹುದು. ನಾನು civil case ದಾಖಲಿಸಬಹುದು. I can even file a criminal case for defamation. For lowering my reputation in the public, I may file a criminal case against a person who has defamed me. ಅಥವಾ ನಾನು ಸಿವಿಲ್ ದಾವೆಯನ್ನು ಹೂಡಿ individually ನಷ್ಟವನ್ನೂ ಸಹ ಕೋರಬಹುದು. ಇಲ್ಲಿ ವ್ಯಕ್ತಿಗತವಾಗಿ ಮಾತನಾಡಿರುವಂತಹದ್ದಾಗಿದೆ. Lawfully established government ನ್ನು overthrow ಮಾಡುವಂತಹ ಯಾವ ಕೆಲಸ ಇಲ್ಲಿ ಆಗಿದೆ? We have got a lot of respect for our hon. Prime Minister of India. ಮಾನ್ಯ ಪ್ರಧಾನ ಮಂತ್ರಿಯವರು ಕೇವಲ ಆಡಳಿತ ಪಕ್ಷದ ಸದಸ್ಯರಿಗೆ ಮಾತ್ರವೇ ಪ್ರಧಾನ ಮಂತ್ರಿಗಳಲ್ಲ. ಅವರು ದೇಶದ 130 ಕೋಟಿ ಜನಕ್ಕೂ ಹಾಗೂ ನಮ್ಮ ಇಡೀ ದೇಶಕ್ಕೆ ಅವರೇ ಪ್ರಧಾನ ಮಂತ್ರಿಗಳಾಗಿದ್ದಾರೆ. ಕೇವಲ ಆಡಳಿತ ಪಕ್ಷದವರಿಗೆ ಮಾತ್ರವಲ್ಲದೇ ನಮ್ಮೆಲ್ಲರಿಗೂ ಸಹ ಅವರೇ ಪ್ರಧಾನ ಮಂತ್ರಿಗಳಾಗಿದ್ದಾರೆ. ಇಲ್ಲಿ ವ್ಯಕ್ತಿಗತವಾಗಿ ಮಾನ್ಯ ನರೇಂದ್ರ ಮೋದಿಯವರ ಬಗ್ಗೆ ಮಾತನಾಡಿದ ಘಟನೆಯಾಗಿದೆ. ಸರ್ಕಾರದಲ್ಲಿ ಎಲ್ಲಾ ಜನಪ್ರತಿನಿಧಿಗಳಿರುತ್ತಾರೆ, ಅಲ್ಲಿ ಪ್ರಧಾನ ಮಂತ್ರಿಗಳು, ಸಚಿವ ಸಂಪುಟದ ಸದಸ್ಯರು ಹಾಗೂ ಸಂಸದರುಗಳಿರುತ್ತಾರೆ. All put together, it is a government. ಹೀಗೆ ವ್ಯಕ್ತಿಗತವಾಗಿ ಮಾತನಾಡಿದಾಗ, whether it amounts to waging war against a lawfully established government? Is it waging a war against the government? Is it an act of overthrowing a lawfully established government? ಕಾನೂನುಬದ್ಧವಾಗಿ, ವಿಧಿಬದ್ಧವಾಗಿ ಹಾಗೂ ಸಂವಿಧಾನಾತ್ಮಕವಾಗಿ ಸ್ಥಾಪನೆಗೊಂಡ ಸರ್ಕಾರವನ್ನು ಕಿತ್ತೊಗೆಯುವಂತಹ ಯಾವ ಕೆಲಸ ಇಲ್ಲಿ ಆಗಿದೆ? ವೈಯಕ್ತಿಕವಾಗಿ ಅವರಿಗೆ ಅವಮಾನವಾಗುವಂತಹ ಮಾತುಗಳನ್ನಾಡಿರಬಹುದು. ಅದಕ್ಕಾಗಿ there are so many provisions in the Indian Penal Code. It has been drafted by

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Macaulay. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವ ಪೂರ್ವದಲ್ಲಿ ಬ್ರಿಟಿಷ್ ಸರ್ಕಾರವು ಆಡಳಿತದಲ್ಲಿದ್ದಾಗ ಐ.ಪಿ.ಸಿ.ಯನ್ನು ಮಾಡಲಾಗಿತ್ತು. ಅದನ್ನು Macaulay ಎನ್ನುವ ಬ್ರಿಟೀಷ್ ಅಧಿಕಾರಿ ಬಹಳ ಚೆನ್ನಾಗಿ ಸಿದ್ಧಪಡಿಸಿದ್ದರು. ಸ್ವಾತಂತ್ರ್ಯ ಬಂದ ನಂತರವೂ ಸಹ ನಾವು ಅದನ್ನೇ ಅಳವಡಿಸಿಕೊಂಡಿದ್ದೇವೆ. ಇದರಲ್ಲಿ 'waging war against the government' ಎಂಬುದಾಗಿ ಏಕೆ ಅಳವಡಿಸಿದ್ದರೆಂದರೆ, ಆಗಿನ ಸಂದರ್ಭದಲ್ಲಿ ಬ್ರಿಟೀಷರು ನಮ್ಮನ್ನು ಆಳುತ್ತಿದ್ದರು. ಆಗ ಸ್ವಾತಂತ್ರ್ಯ ಹೋರಾಟವು ತೀವ್ರತೆಯಲ್ಲಿತ್ತು. ಆ ಸಂದರ್ಭದಲ್ಲಿ ಯಾರಾದರೂ ಸರ್ಕಾರದ ವಿರುದ್ಧ ಮಾತನಾಡಿದರೆ ಅಂದರೆ ಬ್ರಿಟಿಷ್ ಸರ್ಕಾರವನ್ನು ಕಿತ್ತೊಗೆಯುವ ಪ್ರಯತ್ನವನ್ನು ಮಾಡಿದರೆ ಅಂತಹವರ ವಿರುದ್ಧ sedition case ನ್ನು ದಾಖಲಿಸುತ್ತಿದ್ದರು. ಈಗ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ ಹಾಗೂ ಪ್ರಜಾಪ್ರಭುತ್ವವು ಅಸ್ತಿತ್ವದಲ್ಲಿದೆ. ನಮ್ಮ ದೇಶವು ಗುಲಾಮಗಿರಿ ದೇಶವಾಗಿಲ್ಲ. India is a democratic country and it's the biggest democratic country in the world. ಇಡೀ ವಿಶ್ವದಲ್ಲಿಯೇ ಬಹಳ ದೊಡ್ಡದಾದ ಪ್ರಜಾಸತ್ತಾತ್ಮಕವಾದ ರಾಷ್ಟ್ರ ನಮ್ಮದಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯು ನಮ್ಮ ದೇಶದಲ್ಲಿದೆ. ಪ್ರಜಾಪ್ರಭುತ್ವದ ಮಾದರಿಯಲ್ಲಿ ಸಂವಿಧಾನಾತ್ಮಕವಾಗಿ ನಾವು ನಡೆದುಕೊಳ್ಳಬೇಕಾಗಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೇ ದಯಮಾಡಿ ಯೀಲ್ಡ್ ಆಗಿ. ನಾನು ಕಾನೂನು, ಸಂಸದೀಯ ವ್ಯವಹಾರಗಳ ಸಚಿವನಾಗಿ ಇಲ್ಲಿ ಕುಳಿತಿದ್ದೇನೆ. ಒಂದು ಸಂವಿಧಾನಾತ್ಮಕವಾದ ವ್ಯವಸ್ಥೆಯೊಳಗೆ ಐ.ಪಿ.ಸಿ.ನಲ್ಲಿ Sedition under Section 124A ಎಂಬುದಾಗಿ ಇದೆ. ಆ ಕಾನೂನನ್ನು ನಾವು ಅಳವಡಿಸಿಕೊಂಡ ಮೇಲೆ ಅಧಿಕಾರಕ್ಕೆ ಬಂದು ಹೋದ ಸುಮಾರು 13-14 ಸರ್ಕಾರಗಳು ಆ ಕಾನೂನಿಗೆ ತಿದ್ದುಪಡಿ ಮಾಡಬಹುದಾಗಿತ್ತು. ಮಾನ್ಯ ವಿರೋಧ ಪಕ್ಷದ ನಾಯಕರೇ, ನಾವು ತಿದ್ದುಪಡಿ ಮಾಡುವುದು ಬೇಡವೆಂದು ಹೇಳಿಲ್ಲ. ಆ ಪೈಕಿ ಸುಮಾರು ಶೇಕಡಾ 80 ಪ್ರತಿಶತದಷ್ಟು ನಿಮ್ಮ ಪಕ್ಷದ ಸರ್ಕಾರವು ಅಧಿಕಾರದಲ್ಲಿತ್ತು. ಯಾವಾಗಲಾದರೂ ಸರಿ ಭಾರತೀಯ ದಂಡ ಸಂಹಿತೆಯ ಕಾನೂನಿಗೆ ತಿದ್ದುಪಡಿ ಮಾಡಿ ಹಳೆಯ ಕಾನೂನನ್ನು ಬದಲಾವಣೆ ಮಾಡಿದ್ದರೆ, ನಾವು ವಿರೋಧ ಪಕ್ಷದವರಿಗೆ ಬಹಳ ಋಣಿಯಾಗಿರುತ್ತಿದ್ದೆವು. ನಮಗೆ ಇಂತಹ ಎಲ್ಲಾ ಸರ್ಕಸ್‌ಗಳು ಬೇಕಾಗಿರಲಿಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, CAA [Citizenship (Amendment) Act] ಗೆ . . . .

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಐ.ಪಿ.ಸಿ. ಕಾನೂನಿಗೆ ತಿದ್ದುಪಡಿಯನ್ನು ಮಾಡುವುದನ್ನು ಬಿಟ್ಟು ನಮ್ಮನ್ನು ಇಲ್ಲಿ ಅರೆಯುತ್ತಿದ್ದರೆ, ನಾವು ಯಾವ ರೀತಿಯಾದ ಉತ್ತರವನ್ನು ನೀಡಬೇಕು? Can I answer against the provisions of IPC in the Legislative Council? **(ಗೊಂದಲ)** ವಿರೋಧ ಪಕ್ಷದವರು ವಕೀಲರಾಗಿದ್ದಾರೆ. ಅದು ನಮ್ಮ ಜವಾಬ್ದಾರಿಯೇ? ನಮಗೆ ಯಾವ ರೀತಿಯಾದ ಹಕ್ಕು, ಶಕ್ತಿಗಳಿವೆ? Are we empowered to do anything in this behalf? ಭಾರತ ಸರ್ಕಾರವು ಅದನ್ನು ಸಂಸತ್ತಿನಲ್ಲಿ ಮಂಡಿಸಿ, ಐ.ಪಿ.ಸಿ. ಮತ್ತು ಸಿ.ಆರ್.ಪಿ.ಸಿ.ಗಳಿಗೆ ತಿದ್ದುಪಡಿ ತಂದಿದ್ದರೆ ನಮಗೆ ಯಾವುದೇ ರೀತಿಯಾದ ಸಮಸ್ಯೆ ಇರುತ್ತಿರಲಿಲ್ಲ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರೇ ಸಿ.ಎ.ಎ. ಕಾಯ್ದೆಗೆ ತಿದ್ದುಪಡಿ ತರುವುದರ ಬದಲಾಗಿ, ತಮ್ಮ ಪಕ್ಷದವರು ಐ.ಪಿ.ಸಿ., ಸಿ.ಆರ್.ಪಿ.ಸಿ., ಮತ್ತು ಇನ್ನಿತರೆ ಕಾಯ್ದೆಗೆ ತಿದ್ದುಪಡಿ ಮಾಡಬಹುದಿತ್ತಲ್ಲವೇ? ನೀವು ಏಕೆ ಸಿ.ಎ.ಎ. ಕಾಯ್ದೆಗೆ ತಿದ್ದುಪಡಿಯನ್ನು ಮಾಡಿದ್ದೀರಿ? ಈ ದೇಶವನ್ನು ವಿಭಜಿಸಬೇಕೆನ್ನುವ ಉದ್ದೇಶದಿಂದ ನೀವು ಸದರಿ ಕಾಯ್ದೆಯನ್ನು ತಂದಿದ್ದೀರಿ. ಹೌದಲ್ಲವೇ?

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, 1955 ನೇ ಇಸ್ವಿಯಲ್ಲಿ ಪೌರತ್ವ ಕಾಯ್ದೆಯನ್ನು ಜಾರಿಗೆ ತರಲಾಯಿತು. ಅದನ್ನು ನಮ್ಮ ಪಕ್ಷದವರು ಮಾಡಿದ್ದಲ್ಲ. ವಿರೋಧ ಪಕ್ಷದವರು ಸ್ವಲ್ಪ ಸಮಾಧಾನದಿಂದ ಕೇಳಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಯೀಲ್ಡ್ ಆಗಬೇಕು. ಕೇಂದ್ರ ಸರ್ಕಾರವು ಕೇವಲ naturalization ಮಾತ್ರವೇ ಮಾಡಿದ್ದು. ಯಾರೋ ಕೆಲವು ಅಶಕ್ತರಿಗೆ, ಬೇರೆ ರಾಷ್ಟ್ರಗಳಲ್ಲಿರುವ ಅಲ್ಪಸಂಖ್ಯಾತರಿಗೆ, without document, without passport, without VISA ಯಾವ ಅಮಾಯಕರು ನಮ್ಮ ದೇಶದಲ್ಲಿ ಕಳೆದ 8–12

ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ಅಂತಹವರಿಗೆ ಯಾವುದೇ ರೇಷನ್ ಕಾರ್ಡ್ ಇನ್ನೂ ದೊರೆತಿಲ್ಲ ಹಾಗೂ ಅವರಿಗೆ ವಾಸಿಸಲೂ ಸಹ ಸ್ಥಳವಿಲ್ಲ. ಈ ಕಾರಣಕ್ಕಾಗಿ ಸದರಿ ಕಾಯ್ದೆಗೆ ಕೇವಲ ನಮ್ಮ ಸರ್ಕಾರವು naturalization ಮಾತ್ರವೇ ಮಾಡಿದೆ. ಅಂತಹವರಿಗೆ ಯಾವುದೇ ನಿರ್ಬಂಧಗಳಿಲ್ಲದೇ ನಾಗರೀಕರು ಎನ್ನುವುದನ್ನು ನೀಡಿದ್ದನ್ನು ಹೊರತು ಪಡಿಸಿದರೆ, ನಾವು ಯಾವ ಪಾಪವನ್ನೂ ಮಾಡಿಲ್ಲ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, 1957 ನೇ ಸಾಲಿನಿಂದ ಪೌರತ್ವವನ್ನು ನೀಡಲಾಗುತ್ತಿದೆ. ನಿಮ್ಮ ಪಕ್ಷವೂ ಸಹ ಆರು ವರ್ಷಗಳವರೆಗೆ ಆಡಳಿತವನ್ನು ನಡೆಸಿದೆ. ಮುಸ್ಲಿಂರವರನ್ನು ಹೊರತು ಪಡಿಸಿ ಎಂಬುದಾಗಿ ಏಕೆ ಮಾಡಲಾಗಿದೆ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಪೌರತ್ವ ಪಡೆಯಲು ಈ ಹಿಂದೆ 11 ವರ್ಷಗಳವರೆಗೆ ಕಾಯಬೇಕಾಗಿತ್ತು. ಅದನ್ನು ನಾವು ಐದು ವರ್ಷಗಳಿಗೆ ಇಳಿಸಿದ್ದೇವೆ. Nobody is prohibited for entering or getting citizenship of India.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಮುಸ್ಲಿಂರವರನ್ನು ಹೊರತು ಪಡಿಸಿ ಎಂಬುದಾಗಿ ಮಾಡಲಾಗಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರು ಯೀಲ್ಡ್ ಆಗಲಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮಾತ್ರವೇ ಮಾನ್ಯ ಮಂತ್ರಿಗಳು ಮಾತನಾಡಲಿ.

(ಮುಂದು)

(089)/20–2–2020/3–00/ಎಲ್ಎಂ/ಆರ್ಎನ್ (ವಿಕೆ)

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಗಳೆ, ತಾವು ತಪ್ಪು ತಿಳಿದುಕೊಂಡಿದ್ದೀರಿ. Citizenship ಗೆ apply ಮಾಡಲು ಎಲ್ಲರೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅರ್ಹರು. Naturalization Scheme CAA ನಲ್ಲಿ ಯಾರು religious states ಎಂದು ಘೋಷಣೆ ಮಾಡಿದ್ದಾರೆ, ಅದು ಪಾಕಿಸ್ತಾನ, ಆಫ್ಘಾನಿಸ್ತಾನ, ಬಾಂಗ್ಲಾದೇಶವನ್ನು religious states ಎಂದು ಮಾಡಿ, ಅಲ್ಲಿ ಇರುವ religion minority ಯವರಿಗೆ ಬೇರೆ ಎಲ್ಲಿಯು ಹೋಗಲು ಅವಕಾಶವಿಲ್ಲ ಎನ್ನುವ ಜನಾಂಗದವರಿಗೆ ಇಲ್ಲಿ ನಾವು without document or without any proof of travel ಕೊಡಬಹುದು ಎನ್ನುವುದನ್ನು ರಿಲ್ಯಾಕ್ಸ್ ಮಾಡಿರುವುದನ್ನು ಬಿಟ್ಟರೆ original act ನಲ್ಲಿ ಏನು ಬದಲಾವಣೆಯಾಗಿರುವುದಿಲ್ಲ. ನಿಮ್ಮ apprehension.... ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಐವನ್ ಡಿ'ಸೋಜಾ:-** ಅದರಲ್ಲಿ ಮುಸ್ಲಿಂರನ್ನು ಏಕೆ exclude ಮಾಡಿದ್ದೀರಿ? Why are you excluding Muslims?

(ಗೊಂದಲ)

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಗಳೆ, What Mr.Khadar stated before the House yesterday, ನಿಮ್ಮ apprehension NRC ಅಂದರೆ N*ational Registration* ಗೆ ಹೋಗಬೇಕಾದರೆ, ನೀವು register ಆಗುವುದಿಲ್ಲ. ನಿಮ್ಮ ಹತ್ತಿರ ದಾಖಲೆಗಳು ಇಲ್ಲ. ಕೆಲವು ಸಮುದಾಯದವರು Naturalization Scheme ನಲ್ಲಿ ಬರುವುದಿಲ್ಲ. ನಾವು ಇನ್ನು ಆ ಹಂತಕ್ಕೆ ಹೋಗಿರುವುದಿಲ್ಲ ಎಂದು ಹೇಳಿದರೂ ತಾವು ಅರ್ಥ ಮಾಡಿಕೊಳ್ಳುತ್ತಿಲ್ಲ.

**ಶ್ರೀ ಐವನ್ ಡಿ'ಸೋಜಾ:-** ಇದರ ಬಗ್ಗೆ ಚರ್ಚೆ ಮಾಡಲು ಒಂದು ಸಮಯವನ್ನು ನಿಗದಿ ಮಾಡಿ.

**ಶ್ರೀ ಸಿ.ಟಿ.ರವಿ(ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಗಳೆ, 2003ನೇ ಸಾಲಿನಲ್ಲಿ ಒಂದು ರೀತಿ 2019ರಲ್ಲಿ ಒಂದು ರೀತಿ ಹೇಳುತ್ತಾರೆ ಎಂದು ನಾವು ನಿರೀಕ್ಷೆ ಮಾಡಿರಲಿಲ್ಲ. 2003ರಲ್ಲಿ ರಾಜ್ಯಸಭಾದಲ್ಲಿ religious minority ಯವರಿಗೆ citizenship ಕೊಡಬೇಕು ಎಂದು ಮಾನ್ಯ ಮಾಜಿ ಪ್ರಧಾನ ಮಂತ್ರಿಗಳೆ ಹೇಳಿದ್ದಾರೆ. ನಾಲಿಗೆ ಬದಲಾಯಿಸುತ್ತಾರೆ, ಎರಡು ನಾಲಿಗೆ ಇವೆ ಎಂದು ನಮಗೆ ಗೊತ್ತಿರಲಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಅದರ ಬಗ್ಗೆ ಇನ್ನೊಂದು ಸಾರಿ ಮಾತನಾಡೋಣ. ವಿಷಯ ಬೇರೆ ಕಡೆ ಹೋಗುತ್ತಿದೆ. ಈಗ ನಾನು ವಿಷಯಕ್ಕೆ ಬರುತ್ತೇನೆ.

**Sri S.L.BOJEGOWDA:-** That is not the issue before the House.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಗಳೆ, ಇವತ್ತಿನ CAA ದಿಂದ ಯಾವುದೇ ತೊಡಕಿಲ್ಲ ಎಂದು ಮಾನ್ಯ ಸಂಸದೀಯ ಸಚಿವರು ಬಹಳ ವಿಸ್ತಾರವಾಗಿ ಹೇಳಿದರು.

**ಸಭಾಪತಿಯವರು:–** ಅದರ ಬಗ್ಗೆ 4ನೇ ತಾರೀಖಿನಂದು ಮಾತನಾಡಬಹುದು. ಆಗ ಮಾತನಾಡಲು ಅವಕಾಶವಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಗಳೆ, ತಪ್ಪು ಸಂದೇಶ ಹೋಗಬಾರದು ಅದಕ್ಕಾಗಿ ನನಗೆ 5 ನಿಮಿಷಗಳ ಅವಕಾಶವನ್ನು ಕೊಡಿ. ಇವತ್ತು ಒಂದು ಪತ್ರಿಕೆಯಲ್ಲಿ ನಾನು ಓದಿದೆ, ಅಸ್ಸಾಂ ರಾಜ್ಯದಲ್ಲಿ 1967ನೇ ಸಾಲಿನಿಂದ ತಂದೆ–ಮಗಳು ಇಬ್ಬರು ಸತತವಾಗಿ ಮತದಾನ ಮಾಡುತ್ತಾ ಬಂದಿದ್ದಾರೆ. ಈಗ ತಂದೆ ಮತ್ತು ಗಂಡ ತೀರಿಕೊಂಡಿದ್ದಾರೆ. ಆ ಮಗಳಿಗೆ ಒಬ್ಬಳು ಮಗಳಿದ್ದಾಳೆ, ಆಸ್ತಿ, ಜಮೀನು ಎಲ್ಲಾ ಇದೆ. ಅವರಿಗೆ ಪೌರತ್ವವನ್ನು ನಿರಾಕರಣೆ ಮಾಡಿದ್ದಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಈ ಸಾರಿ amendment ನಲ್ಲಿ ಅಸ್ಸಾಂ, *Myanmar* ನ್ನು ಬಿಟ್ಟಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಬಿಡಿ ಸರ್, ಅದನ್ನು ಏಕೆ ಚರ್ಚೆ ಮಾಡುತ್ತೀರಾ ಈಗ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಈ ಸಾರಿ amendment ಮಾಡುವಾಗ 5–6 ರಾಜ್ಯಗಳನ್ನು ಬಿಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್.ಭೋಜೇಗೌಡ:-** ಇದು ಒಂದೇ ವಿಚಾರವನ್ನು ಚರ್ಚೆ ಮಾಡಲು ಒಂದು ಸಮಯವನ್ನು ನಿಗದಿ ಮಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ನನ್ನ ಮಾತುಗಳನ್ನು ಹೇಳಿ ಮುಗಿಸುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಕಾನೂನು ಸಚಿವರಿಗೆ ಒಂದು ವಿಷಯವನ್ನು ಹೇಳಬೇಕು ನಾನು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, I am capable and competent to give answer to the Law Minister. ಕಾನೂನು ಸಚಿವರು ನೀವು ಇಷ್ಟು ವರ್ಷ ಆಡಳಿತದಲ್ಲಿದ್ದು ಏನು ಮಾಡಿದ್ದೀರಿ ಎಂದು ಹೇಳಿದ್ದಾರೆ.

(ಗೊಂದಲ)

ಸೆಕ್ಷನ್ 124ಎ ಇಂತಹ ತಿದ್ದುಪಡಿಗಳನ್ನು ನೀವು ಏಕೆ ಮಾಡಲಿಲ್ಲ ಎಂದು ಕಾನೂನು ಮಂತ್ರಿಗಳು ಕೇಳಿದ್ದಾರೆ. Indian Penal Code section ಗಳನ್ನು ನಾವು as it is ಹಾಗೆ ಇಟ್ಟಿರುವುದಿಲ್ಲ. ಈ ದೇಶದಲ್ಲಿ ನಮ್ಮ ಕಾಂಗ್ರೆಸ್ ಸರ್ಕಾರ ಬಹಳಷ್ಟು ವರ್ಷಗಳ ಆಡಳಿತ ಮಾಡಿದೆ. ಏನು ತಿದ್ದಿರುವುದಿಲ್ಲ ಎಂದು ಹೇಳಿದರೆ ತಪ್ಪು ಸಂದೇಶ ಹೋದ ಹಾಗೆ ಆಗುತ್ತದೆ. ಆ ರೀತಿ ತಪ್ಪು ಸಂದೇಶ ಹೋಗಬಾರದು. 375 ಇದು ಬಲತ್ಕಾರಕ್ಕೆ ಸಂಬಂಧಪಟ್ಟ ಸೆಕ್ಷನ್. ಇದಕ್ಕೆ ಏನು ಶಿಕ್ಷೆ ಎನ್ನುವುದಕ್ಕೆ 376 ಸೆಕ್ಷನ್ ಇತ್ತು. ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಇಷ್ಟೆ ಇತ್ತು. ಬಲತ್ಕಾರದ ಬಗ್ಗೆ ಮೆಕಾಲೆ ಡ್ರಾಫ್ಟ್ ಮಾಡಿದ್ದಾಗ ಇಷ್ಟೆ ಇತ್ತು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 376(ಎ) ಸೇರಿಸಲಾಯಿತು. As per IPC section 376(A): "Intercourse by a man with his wife during separation...." ಬಲಾತ್ಕಾರದ ಬಗ್ಗೆ ವಿಸ್ತೃತವಾದ ವಿವರಣೆ 376(ಎ)ನಲ್ಲಿ ಇದೆ. 376(ಬಿ) incorporate ಮಾಡಲಾಗಿದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ಏಕೆ ಹೇಳುತ್ತಿದ್ದಾರೆ ಗೊತ್ತಾಗುತ್ತಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ನಿಮ್ಮ ಮಂತ್ರಿಗಳು ಕೇಳಿದ್ದರಿಂದ ಇದನ್ನು ಹೇಳುತ್ತಿದ್ದೇನೆ. ಬಲಾತ್ಕಾರದ ಬಗ್ಗೆ 375, 376 ಒಂದೇ ಸೆಕ್ಷನ್ ಇತ್ತು. ಅದಕ್ಕೆ ಎಬಿಸಿಡಿ ಸೇರಿಸಲಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ:**-ಮಾನ್ಯ ಸಭಾಪತಿಗಳೆ, ಏನೂ ಮಾಡಿಲ್ಲ ಎಂದು ನಾವು ಹೇಳಲು ಆಗುತ್ತದೆಯೇ. Sedition provision withdraw ಆಗಿರುವುದಿಲ್ಲ. It is existing in IPC. We are bound by the existing provisions of IPC ಎಂದಷ್ಟೇ ಹೇಳಿರುವುದು. ಅದು ಬಿಟ್ಟು Act amend ಆಗಿಲ್ಲ, insertion, deletion ಆಗಿಲ್ಲ ಎಂದು ನಾವು ಹೇಳಲು ಆಗುತ್ತದೆಯೇ? ಬೇಕಾದಷ್ಟು ತಿದ್ದುಪಡಿಗಳು ಆಗಿವೆ.

**ಶ್ರೀ ಎಸ್.ಆರ್.ಪಾಟೀಲ್:**- ಆ sedition clause amendment ಆಗಿರುವುದಿಲ್ಲ. ಅದನ್ನು ತಾವು wrongly invoke ಮಾಡಿದ್ದೀರಿ. You have wrongly invoked the clause; you have wrongly put the case against the innocent persons. ವ್ಯಕ್ತಿಗತವಾಗಿ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರ ಬಗ್ಗೆ ಮಾತನಾಡಿದರೆ ಅದು ಇಡೀ ಸರ್ಕಾರಕ್ಕೆ ಹೇಳಿದ ಹಾಗೆ ಅಲ್ಲ. Individual capacity ಮೇಲೆಯೂ ಹೇಳಿರುತ್ತಾರೆ. ನಂತರ ಅದಕ್ಕೆ defamation ಹಾಕಬಹುದು. ಈಗ ಮಾನ್ಯ ಪ್ರಧಾನಿಗಳಾದ ಮೋದಿಯವರ ಬಗ್ಗೆಯೂ ಹೇಳಿದ್ದೇವೆ.

(ಗೊಂದಲ)

**Sri J.C.MADHUSWAMY:-** Interpretation is not of the Houses. ಇಲ್ಲಿ interpretation of law ಅವರು ಮಾಡಬೇಕು, ನಾವು-ನೀವು ಅಲ್ಲ. The court is there to interpret the law. ಬಿಡಿ court interpretation ಮಾಡುತ್ತದೆ.

**Sri S.R.PATIL:-** I have got every right; as a Legislator, I have got an inherent power to express my views. ನಮ್ಮ ಭಾಗದ ಹಳ್ಳಿಗಳಲ್ಲಿ ಜನರು ಏನು ಇದು ಎಂತಹ ಕಾನೂನನ್ನು ತಂದಿದ್ದಾರೆ, ಇದರಿಂದ ಕಲ್ಯಾಣ ಆಗಲಿಲ್ಲ, ತೊಂದರೆಯೇ ಆಗಿದೆ ಎಂದು ಮಾತನಾಡಿದ ತಕ್ಷಣ ಅವರನ್ನು ತೆಗೆದುಕೊಂಡು ಬಂದು sedition act ನಲ್ಲಿ life imprisonment ಆಗುವ ಹಾಗೆ ಒಂದು ಸೆಕ್ಷನ್ ಹಾಕಿ, offence against state ಎಂದು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

sedition case ಅಡಿಯಲ್ಲಿ ತಂದು ನಾವು ಮಾಡಿರುವ ಕಾನೂನಿನ ಬಗ್ಗೆ ಹಳ್ಳಿಯಲ್ಲಿ ಕುಳಿತು ವಿರುದ್ಧವಾಗಿ ಮಾತನಾಡುತ್ತಾರೆ ಎಂದು ಹೇಳಿ ಅವನಿಗೆ life imprisonment ಮಾಡುವಂಥ ಒಂದು ಕಲಂ ಹಾಕಿ, ಅವನನ್ನು ಒದ್ದು ಒಳಗೆ ಹಾಕಿ ಬಿಟ್ಟರೆ ಏನಾಗುತ್ತದೆ ಹೇಳಿ. ಔಪಚಾರಿಕವಾಗಿ ಈ ಕಾಯಿದೆಯಿಂದ ನಮಗೆ ಸಹಾಯವಾಗಲಿಲ್ಲ, ನಮಗೆ ಅನಾನೂಕೂಲವೇ ಆಗಿದೆ ಎಂದು ಮಾತನಾಡುತ್ತಾರೆ. It is a democratic country. Freedom of speech and expression ಹಕ್ಕು ನಮಗಿದೆ. ಅದೇ ರೀತಿ freedom of press ಅವರಿಗಿದೆ. ಆದರೆ ಕಮ್ಯುನಿಸ್ಟ್ ದೇಶವಾಗಿದ್ದರೆ ಮಾತನಾಡಲು ಬರುತ್ತಿರಲಿಲ್ಲ. ಸರ್ವೇಸಾಮಾನ್ಯವಾಗಿ ಇದು ಎಂತಹ ಕಾನೂನು ತಂದರೂ ಇದರಿಂದ ನಮಗೆ ಒಳ್ಳೆಯದಾಗಲಿಲ್ಲ, ಇದು ನಮಗೆ ಶತ್ರುವಾಗಿದೆ ಎಂದು ಮಾತನಾಡುತ್ತಾರೆ. ಹಾಗೆ ಮಾತನಾಡಿದ ತಕ್ಷಣ sedition case ಹಾಕಿ ಬಿಡುವುದೇ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಬೆಂಬಲವಾಗಿಯೇ ನಾನು ಒಂದು ಮಾತನ್ನು ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, I will not yield to anybody. ರವಿಯವರು ನನ್ನ ಬೆಂಬಲಕ್ಕೆ ಬರುವವರಲ್ಲ ಎನ್ನುವ ವಿಶ್ವಾಸ ನನಗೆ ಇದೆ. ಅದು ರವಿಯವರಿಗೆ yield ಆದರೆ ಮತ್ತೆ ಗಲಾಟೆ ಏಳುತ್ತದೆ. ಒಂದು ನಿಮಿಷದಲ್ಲಿ ನನ್ನ ವಿಚಾರವನ್ನು ಹೇಳಿ ಮುಗಿಸುತ್ತೇನೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಗಳೆ, ಮಾನ್ಯ ಎಸ್.ಆರ್.ಪಾಟೀಲ್‌ರವರು ಈ act ಅಡಿಯಲ್ಲಿ ಕೇಸ್ ಹಾಕಬಾರದಿತ್ತು ಎಂದು ಬಹಳ ಚೆನ್ನಾಗಿ ಹೇಳಿದ್ದಾರೆ. ಆದರೆ ಕೇಸ್ ಹಾಕಬಹುದಿತ್ತು, ಈ ಕೇಸ್ ಹಾಕಬಾರದಾಗಿತ್ತು ಎನ್ನುವುದು ಅವರ ಮನಸ್ಸಿನಲ್ಲಿ ಇದೆ. ಇಲ್ಲಿ ನಡೆದಿರುವ ಚರ್ಚೆಯನ್ನು ಮಾಧ್ಯಮಗಳ ಮುಖಾಂತರ ಇಡೀ ರಾಜ್ಯದ ಜನತೆ ನೋಡುತ್ತಿದ್ದಾರೆ. ಮಾನ್ಯ ಎಸ್.ಆರ್.ಪಾಟೀಲ್‌ರವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಪ್ರಧಾನ ಮಂತ್ರಿಗಳು 130 ಕೋಟಿ ಜನರಿಗೆ ಪ್ರಧಾನ ಮಂತ್ರಿಗಳು, ಆದರೆ ಆ ಶಾಲೆಯಲ್ಲಿ ಏನು ನಾಟಕ ನಡೆದಿತ್ತು, ಆ ನಾಟಕದಲ್ಲಿ ಮಗು ಆ ಶಬ್ದವನ್ನು ಬಳಸಿರುವುದು ಸರಿಯೇ? ಮಾನ್ಯ ಎಸ್.ಆರ್.ಪಾಟೀಲ್‌ರವರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವವರು.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

090/20-02-2020/03-10/ಬಿಎಸ್‌ಡಿ-ವಿಕೆ

**(ಗೊಂದಲ)**

**ಶ್ರೀ ಎನ್. ರವಿಕುಮಾರ್‌ಃ-** ಅವರ ಶಾಲೆಯಲ್ಲಿ ಈ ರೀತಿ ಆಗಿದ್ದರೆ ಏನು ಮಾಡುತ್ತಿದ್ದರು.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ-** ಕಾನೂನು ಮಂತ್ರಿಗಳು ಸಮರ್ಥರಿದ್ದಾರೆ. ಮಾನ್ಯ ಸದಸ್ಯರು ಏಕೆ ಒದ್ದಾಡುತ್ತಿದ್ದಾರೆ. ಮಾನ್ಯ ಕಾನೂನು ಸಚಿವರು ಮಾತನಾಡುವುದು ಬೇಡ, ಎಲ್ಲವನ್ನು ಮಾನ್ಯ ರವಿಕುಮಾರ್ ರವರೇ ಹೇಳಿಬಿಡಲಿ.

**(ಗೊಂದಲ)**

**ಡಾ|| ತೇಜಸ್ವಿನಿಗೌಡಃ-** ಡ್ರಾಮ ಮಾಡುವುದಕ್ಕೆ ಹೇಳಿಕೊಟ್ಟಿದ್ದು ಯಾರು? ಮೇಷ್ಟ್ರು ಯಾರು ಎಂಬುದನ್ನು ತಿಳಿಸಿ.

**(ಗೊಂದಲ)**

**ಡಾ|| ವೈ.ಎ. ನಾರಾಯಣಸ್ವಾಮಿಃ-** ಡ್ರಾಮ ಮಾಡುವುದಕ್ಕೆ ಅವರು ಹೇಳಿಕೊಟ್ಟರೇ?

**(ಗೊಂದಲ)**

**ಸಭಾಪತಿಯವರುಃ-** ಮಾನ್ಯ ನಾರಾಯಣಸ್ವಾಮಿಯವರೆ, ತಾವು ಮಾತನಾಡುವುದು ರೆಕಾರ್ಡ್‌ಗೆ ಯಾವುದೂ ಹೋಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್‌ಃ-** ಮಾನ್ಯ ಸಭಾಪತಿಯವರೇ, ಗೊಂದಲ create ಮಾಡಿ ಉತ್ತರ ಕೊಡದಂತೆ ಮಾಡುತ್ತಿದ್ದಾರೆ. ನಾನು ಮುಕ್ತಾಯ ಮಾಡುತ್ತೇನೆ. IPC Section 124A wrongly quote ಆಗಿದೆ ಎಂದು ಹೇಳುವ ಸಲುವಾಗಿ ನಾನು ಎದ್ದು ನಿಂತಿದ್ದೆನು. ಮತ್ತೇ ಏನೂ ಇಲ್ಲ. ಅವರು ಹೇಳಿದ ನಂತರ clarification ನಾವು ಕೇಳುತ್ತೇವೆ. Clarification ಕೇಳಿದ ನಂತರ ಮುಕ್ತಾಯ ಮಾಡೋಣ. ಅವರ ಬಗ್ಗೆ ಎಲ್ಲರಿಗೂ ಗೌರವ ಇದೆ. ಮಾನ್ಯ ನರೇಂದ್ರ ಮೋದಿರವರ ಬಗ್ಗೆ ವೈಯಕ್ತಿಕವಾಗಿ ಮಾತನಾಡಿದಾಗ ಅದು lawfully established Government overthrow ಮಾಡಲಿಕ್ಕೆ, waging war against the

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Government ಎನ್ನುವ provision ಮಾಡಿರುವುದು that is wrong. ಅಘೋಷಿತವಾದ ಆಪಸ್ಥಿತಿ ಈ ದೇಶದಲ್ಲಿ ಇದೆ ಎನ್ನುವ ಭಾವನೆ ನಮಗೆ ಬರುತ್ತಿದೆ.

**(ಗೊಂದಲ)**

IPC Section 124A has been wrongly invoked. ಒಬ್ಬ ಪ್ರತಿನಿಧಿ ವ್ಯಕ್ತಿಗತವಾಗಿ ಮಾತನಾಡಿರುವುದನ್ನು ಇಡೀ Union Government ಕಾನೂನುಬದ್ಧವಾಗಿ, ವಿಧಿಬದ್ಧವಾಗಿ ಸ್ಥಾಪಿಸಿರುವುದರ ವಿರುದ್ಧ ಯುದ್ಧ ಘೋಷಣೆ ಮಾಡಿ, ಈ ಕೃತ್ಯಗಳಿಗೆ ಆ ಮಗು ಕಾರಣ, ಆ ಶಾಲೆಯವರು ಕಾರಣ ಮತ್ತು ಆ ಶಾಲೆಯ ಆಡಳಿತ ಮಂಡಳಿ ಮತ್ತು ಶಿಕ್ಷಕರು ಹಾಗೂ ಆ ಶಾಲೆಗೆ ತನ್ನ ಮಗುವನ್ನು ಕಳುಹಿಸಿದ ತಾಯಿ ಕಾರಣ ಎಂದು ಮಾಡಿರುವುದು, it is not waging war against the Government, It is not overthrowing the lawfully established Government (Union Government). ಆ ದೃಷ್ಟಿಯಿಂದ it has been wrongly quoted. ಈ provision apply ಆಗುವುದಿಲ್ಲ. ಈಗಾಗಲೇ ಮಾನ್ಯ ಗೃಹ ಮಂತ್ರಿಯವರು ಸ್ಪಷ್ಟವಾದ ಶಬ್ದಗಳಲ್ಲಿ ಹೇಳಿದ್ದಾರೆ. ಕಾಂಗ್ರೆಸ್ ಮತ್ತು ಜನತಾದಳದ ಪಕ್ಷದ ಸದಸ್ಯರೆಲ್ಲರೂ ಒಟ್ಟಾಗಿ ಬಾವಿಯಲ್ಲಿದ್ದ ಪರಿಸ್ಥಿತಿಯಲ್ಲಿ beyond reasonable doubt I have been convinced ಎಂದು ಮಾನ್ಯ ಗೃಹ ಮಂತ್ರಿಯವರು ಹೇಳಿದ್ದಾರೆ. ನಮಗೂ ಅವರ ಬಗ್ಗೆ ಬಹಳಷ್ಟು ವಿಶ್ವಾಸ ಮತ್ತು ನಂಬಿಕೆ ಇದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನಾನು convince ಆಗಿದ್ದೇನೆ ಎಂದು ಹೇಳಲಿಲ್ಲ. ನಾನು ಅವರ ಭಾವನೆಗಳನ್ನು ಅರ್ಥಮಾಡಿಕೊಂಡಿದ್ದೇನೆ ಎಂದು ಹೇಳಿದ್ದೇನೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮ್ಮ ಭಾವನೆಗಳು ಅರ್ಥವಾಗಿದೆ ಎಂದು ಹೇಳಿದ್ದಾರೆ. ಅಂದರೆ ನಮ್ಮ ಭಾವನೆಗಳು ಅರ್ಥವಾಗಿವೆ ಎಂದರೆ ಏನು? ಹೀಗೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಹೇಳಿದರೆ ಹೇಗೆ? ನಮಗೆ ಮಾನ್ಯ ಗೃಹ ಮಂತ್ರಿಗಳ ಮೇಲೆ ನಂಬಿಕೆ ಇದೆ. ನಮ್ಮ ಭಾವನೆಗಳು ಅರ್ಥವಾಗಿವೆ ಎಂದು ಹೇಳಿದ್ದಾರೆ. ನಿಶ್ಚಿತವಾಗಿಯೂ wrongly invoke

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿದ್ದಾರೆ. ಈ ಕೇಸ್ withdraw ಆಗುವುದರಲ್ಲಿ ಯಾವುದೇ ಸಮಸ್ಯೆ ಇಲ್ಲ ಎಂದು ಭಾವಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿಃ-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ವಿಚಾರ ಪ್ರಸ್ತಾಪವಾದ ಮೇಲೆ ಹಲವಾರು ಚರ್ಚೆಗಳಾಗಿದ್ದು, ಕೊನೆಗೆ ನಾನು Teachers, Management ಮತ್ತು ತಾಯಿಯ ಬಗ್ಗೆ ವ್ಯಕ್ತಪಡಿಸಿರುವ ಕಳಕಳಿ ಅರ್ಥವಾಗಿದೆ ಎಂದು ಹೇಳಿದ್ದೇನೆ. ಎರಡನೆಯದಾಗಿ ವಿಷಯವು ಹೈಕೋರ್ಟ್‌ನಲ್ಲಿದ್ದು, ನಾವು affidavit ಹಾಕಿದ್ದೇವೆ. PIL ಹಾಕಿರುವವರಿಗೆ ನೋಟೀಸ್ ಹೋಗಿದೆ. ಈ ಸಂದರ್ಭದಲ್ಲಿ ನಾವು interfere ಆಗುವುದಕ್ಕೆ ಅಥವಾ case withdraw ಮಾಡುವುದಕ್ಕೆ ಬರುವುದಿಲ್ಲ ಎನ್ನುವ ಮಾತುಗಳನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಕೋರ್ಟ್ ಆದೇಶ ಬಂದ ನಂತರ ನಾವು ಪಾಲನೆ ಮಾಡಬೇಕಾದ ವಿಷಯವನ್ನೂ ಹೇಳಿದ್ದೇನೆ. ಅವರು 124(ಎ) ಬಗ್ಗೆ ಬಹಳ ದೊಡ್ಡ ವ್ಯಾಖ್ಯಾನ ಮಾಡಿದ್ದಾರೆ. ಅವರು ಲಾರ್ಡ್ ಮೆಕಾಲೆ ರವರಿಂದ ಇಲ್ಲಿಯವರೆಗಿನ ವಿಷಯಗಳನ್ನು ಹೇಳಿದ್ದು, ಅವು ನಮಗೂ ಗೊತ್ತಿದೆ. ನನ್ನ ಹತ್ತಿರವೂ ಸೆಕ್ಷನ್ 124(ಎ) ಏನು ಹೇಳುತ್ತದೆ ಎಂಬ ಮಾಹಿತಿ ಇದೆ. ನಾನು ಈಗಾಗಲೇ ಸದನದಲ್ಲಿ ಓದಿದ್ದು, ಮತ್ತೊಂದು ಬಾರಿ ಓದಿ ಚರ್ಚೆಗೆ ಗ್ರಾಸವೊದಗಿಸಲು ಇಷ್ಟಪಡುವುದಿಲ್ಲ. ಆದ್ದರಿಂದ ನಾನು ಓದುವುದಿಲ್ಲ. ನಮ್ಮ ಅಧಿಕಾರಿಗಳು ಸೆಕ್ಷನ್ 124(ಎ) ಅನ್ನು ಸರಿಯಾಗಿ invoke ಮಾಡಿದ್ದಾರೋ ಅಥವಾ ಇಲ್ಲವೋ ಎನ್ನುವಂತಹ ವಿಚಾರ ಬಂದಿದೆ. It is the matter before the court, and it is sub judice. ನಾವ್ಯಾರೂ ಕೋರ್ಟ್‌ಗೆ influence ಆಗುವ ರೀತಿಯಲ್ಲಿ ಮಾತನಾಡಬಾರದು. ಮಾನ್ಯ ವಿರೋಧ ಪಕ್ಷದ ನಾಯಕರು ವಕೀಲರಾಗಿದ್ದು, ಅವರೇ ಕೋರ್ಟಿಗೆ ಹೋಗಿ ವಾದ ಮಾಡಿದರೂ ನಮ್ಮ ತಕರಾರೇನೂ ಇಲ್ಲ ಅಥವಾ ಅವರ ವಕೀಲರ ಮೂಲಕ ಸದನದಲ್ಲಿ ಪ್ರಸ್ತಾಪಿಸಿದ ವಿಚಾರಗಳನ್ನು ಕೋರ್ಟಿನಲ್ಲಿ ವಾದ ಮಾಡಿ, ನ್ಯಾಯವನ್ನು ಪಡೆದುಕೊಳ್ಳಲು ಎಲ್ಲಾ ರೀತಿಯ ಹಕ್ಕುಗಳು ಇವೆ. It is your right and you can use that. ಯಾವುದು ಸರಿಯಿಲ್ಲ ಎನ್ನುವ ಬಗ್ಗೆ ದಿನನಿತ್ಯ ಸರ್ಕಾರದ ಕೇಸ್‌ಗಳು ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ಮುಂದೆ ಬರುತ್ತವೆ. More than 50 per cent of the cases are in favour of the Government or against the Government. ಹಲವಾರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೀರ್ಪುಗಳು ಸರ್ಕಾರದ ಪರ ಮತ್ತು ವಿರೋಧವಾಗಿಯೂ ಆಗುತ್ತವೆ. Affiliate ಮಾಡಲು ಅವಕಾಶ ಇರುತ್ತದೆ. ಈ ಪ್ರಕ್ರಿಯೆ ನಡೆಯುತ್ತಲೇ ಇರುತ್ತದೆ. ಉದಾಹರಣೆಗೆ ಮಂಗಳೂರು ಕೇಸ್‌ನ ಬಗ್ಗೆ ಪಿಐಎಲ್ Chief Justice ಮುಂದೆ ಇದ್ದು ಅದು ವಜಾ ಆಯಿತು. ಈಗ ಇನ್ನೊಂದು ಪಿಐಎಲ್ ಪುನಃ Chief Justice ಮುಂದೆ ಬಂದಿದೆ. ಇದು ನಡೆಯುತ್ತಲೇ ಇರುತ್ತದೆ. ಹಾಗಾಗಿ ಅವರಿಗೆ ವಿಪುಲವಾದ ಅವಕಾಶಗಳಿವೆ. At all level of courts ಅವಕಾಶ ಇದ್ದು, ಅವರು ಮಂಡನೆ ಮಾಡಲಿ. ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಈ ಪ್ರಕರಣದಲ್ಲಿ ಸರಿಯೋ, ತಪ್ಪೋ ಎನ್ನುವ ಬಗ್ಗೆ judicial scrutiny ಯ ಪರಿಶೀಲನೆಯಲ್ಲಿದ್ದು, ನಾವು ಹೆಚ್ಚು ಮಾತನಾಡುವುದು sub judice ಆಗುತ್ತದೆ. ನಮ್ಮ ಅಧಿಕಾರಿಗಳು ಯಾರಾದರೂ ದೂರು ಕೊಟ್ಟರೆ ತೆಗೆದುಕೊಳ್ಳಲೇಬೇಕಾಗುತ್ತದೆ. ಆ content ಯಾವುದೇ ರೀತಿ ಚೇಂಜ್ ಆಗಬಾರದು ಎಂದು ಸುಪ್ರೀಂಕೋರ್ಟ್‌ನ ಲಲಿತಾಕುಮಾರಿ ಕೇಸ್‌ನಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

(ಮುಂದು)

(091)/20.02.2020/3.20/ಹೆಚ್‌ವಿ-ವಿಕೆ

**ಶ್ರೀ ಬಸವರಾಜ ಬೊಮ್ಮಾಯಿ(ಮುಂದುವರೆದದ್ದು)**

ಅದರನ್ವಯ ಆ ದೂರನ್ನು ತೆಗೆದುಕೊಂಡು, ಎಫ್.ಐ.ಆರ್. ದಾಖಲು ಮಾಡಿ ಅದರ ಬಗ್ಗೆ ವಿಚಾರಣೆ ಮಾಡಿ ಮುಂದಿನ ಕ್ರಮವನ್ನು ಸಹ ತೆಗೆದುಕೊಳ್ಳಲಾಗಿದೆ. As far as sedition case is concerned, law is very clear. Against the Government established... ಅದರ ವಿರುದ್ಧ ಏನಾದರೂ ಮಾತನಾಡಿದರೆ, sedition ಆಗುತ್ತದೆನ್ನುವುದು ಬಹಳ ಸ್ಪಷ್ಟವಾಗಿದೆ. Kedarnath Singh vs State of Bihar ಪ್ರಕರಣದಲ್ಲಿ sedition ಬಗ್ಗೆ ನೀಡಿರುವ ವ್ಯಾಖ್ಯಾನ ಬಹಳ ಸ್ಪಷ್ಟವಾಗಿದೆ.

**ಶ್ರೀ ಪಿ.ಆರ್.ರಮೇಶ್(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, Sedition ನಲ್ಲಿ ingredients ಏನಿರಬೇಕೆಂದು ಇದೆ. That ingredients should be very specific. Instigate ಮಾಡುವಾಗ ಅದನ್ನು ತರಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿಃ–** ಸನ್ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸದನದಲ್ಲಿ ಚರ್ಚೆಯಾದರೆ ಅದು ನ್ಯಾಯಾಂಗ ನಿಂದನೆಯಾಗುತ್ತದೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ. ಕೇಸ್ ವಿತ್‌ಡ್ರಾ ಮಾಡುವ ಪ್ರಶ್ನೆಯೇ ಇಲ್ಲ. ಆ ಉದ್ದೇಶ ಸರ್ಕಾರಕ್ಕಿಲ್ಲ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್‌ಃ–** ಸನ್ಮಾನ್ಯ ಸಭಾಪತಿಯವರೇ, ಚರ್ಚೆ ಮಾಡಬಾರದೆಂದರೆ ಹೇಗೆ? We are expressing our views.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತರು)ಃ–** ಸನ್ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯ ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆ ಹಾಗೂ ಪೊಲೀಸ್ ರಾಜ್ಯ ಸ್ಥಾಪನೆಯಾಗಿದೆ ಎನ್ನುವ ಬಗ್ಗೆ ನಾವು ತಂದಿರುವ ನಿಲುವಳಿ ಸೂಚನೆಯ ಮೇಲೆ ನಾವೆಲ್ಲರೂ ಸುಮಾರು ಒಂದೂವರೆ ದಿನಗಳ ಕಾಲ ಮಾತನಾಡಿದ್ದೇವೆ. ಈಗ ಸರ್ಕಾರ ಉತ್ತರ ಕೊಡುವ ಸಂದರ್ಭದಲ್ಲಿ ಮಾನ್ಯ ಗೃಹ ಸಚಿವರು, 'ಪೊಲೀಸರು ಏನೂ ತಪ್ಪು ಮಾಡಿಲ್ಲ, ಮಂಗಳೂರು ಗೋಲಿಬಾರ್ ಬಹಳ ವ್ಯವಸ್ಥಿತವಾಗಿ ನಡೆದಿದೆ, ಅದು ಕಾನೂನುಬದ್ಧವಾಗಿ ನಡೆದಿದೆ ಮತ್ತು ಪ್ರತಿಭಟನಾಕಾರರನ್ನು ತಡೆಯುವುದಕ್ಕಾಗಿ ಗೋಲಿಬಾರ್ ಮಾಡಲಾಗಿದೆ ಎನ್ನುವಂತಹ ವಾದವನ್ನು ಮಾಡಿದ್ದಾರೆ. ಯಾವಯಾವ ಪಕ್ಷಗಳ ಸರ್ಕಾರಗಳು ಅಧಿಕಾರದಲ್ಲಿದ್ದಾಗ ಗೋಲಿಬಾರ್‌ಗಳು ನಡೆದಿವೆ ಎನ್ನುವುದರ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಆದರೆ, ಯಾವ ಸರ್ಕಾರ ಗೋಲಿಬಾರ್ ನಡೆಸಿತ್ತು ಆ ಸರ್ಕಾರ ಪುನಃ ಅಧಿಕಾರಕ್ಕೆ ಬರಲಿಲ್ಲವೆನ್ನುವುದು ಈ ರಾಜ್ಯದ ಚರಿತ್ರೆಯ ಪುಟಗಳಲ್ಲಿ ನಮೂದಾಗಿದೆ.

**(ಈ ಹಂತದಲ್ಲಿ ಉಪ ಸಭಾಪತಿಗಳಾದ ಮಾನ್ಯ ಎಸ್.ಎಲ್.ಧರ್ಮೇಗೌಡರು ಸಭಾ ಪೀಠವನ್ನು ಅಲಂಕರಿಸಿದರು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎರಡನೆಯದಾಗಿ, 19ನೇ ತಾರೀಖಿನಂದು ಮಂಗಳೂರಿನಲ್ಲಿ ಯಾವ ರೀತಿಯಲ್ಲಿ ಗಲಭೆ ನಡೆಯಿತು ಎನ್ನುವುದರ ಬಗ್ಗೆ ಮಾನ್ಯ ಗೃಹ ಸಚಿವರು ವಿವರಣೆಯನ್ನು ನೀಡಿದ್ದಾರೆ ಅದರ ಬಗ್ಗೆ ನನ್ನ ತಕರಾರಿಲ್ಲ. 18ನೇ ತಾರೀಖಿನ ರಾತ್ರಿ ಸೆಕ್ಷನ್ 144ನ್ನು ಜಾರಿಗೊಳಿಸಲಾಗಿತ್ತು. ಇದರಿಂದಾಗಿಯೇ ಈ ಎಲ್ಲ ಘಟನೆಗಳು ನಡೆಯಿತು ಎನ್ನುವುದು ನನ್ನ ಅಭಿಪ್ರಾಯವಾಗಿದೆ. But you are not answering for that.

**ಶ್ರೀ ಬಸವರಾಜ ಬೊಮ್ಮಾಯಿಃ-** ಸನ್ಮಾನ್ಯ ಸಭಾಪತಿಯವರೇ, ಅದು ಅವರ interpretation, ನಮ್ಮ interpretation ಅಲ್ಲ. ಒಂದು ವೇಳೆ ಸೆಕ್ಷನ್ 144ನ್ನು ಜಾರಿಗೊಳಿಸದೇ ಗೋಲಿಬಾರ್ ಆಗಿದ್ದರೆ, 'ಪೊಲೀಸ್‌ನವರು ಕನಿಷ್ಠ ಪಕ್ಷ ಸೆಕ್ಷನ್ 144ನ್ನು ಜಾರಿಗೊಳಿಸಬೇಕಾಗಿತ್ತು. ಏತಕ್ಕೋಸ್ಕರ ಅದನ್ನು ಜಾರಿಗೊಳಿಸಲಿಲ್ಲ. ನಿಮ್ಮ intelligence failure ಆಗಿದೆ' ಎಂದು ಇವರೇ ಕೇಳುತ್ತಿದ್ದರು. ಸ್ಥಳೀಯ ಪರಿಸ್ಥಿತಿಯನ್ನು ನೋಡಿಕೊಂಡು ಸೆಕ್ಷನ್ 144ನ್ನು ಜಾರಿಗೊಳಿಸುವ ಅಧಿಕಾರ ಅಲ್ಲಿನ ಹಿರಿಯ ಪೊಲೀಸ್ ಅಧಿಕಾರಿಗಳಿಗಿದೆ. ಹಿಂದೆ ಭಂಟ್ವಾಳದ ಬಿ.ಸಿ.ರೋಡ್‌ನಲ್ಲಿ ಗಲಾಟೆ ಆದಂತಹ ಸಂದರ್ಭದಲ್ಲಿ ಇವರ ಪಕ್ಷದ ಸರ್ಕಾರ ಸುಮಾರು ಒಂದೂವರೆ ತಿಂಗಳುಗಳ ಕಾಲ ಸೆಕ್ಷನ್ 144ನ್ನು ಜಾರಿಗೊಳಿಸಲಾಗಿತ್ತು. ಈಗ ಇವರು ನಮ್ಮನ್ನು ಪ್ರಶ್ನೆ ಮಾಡಿದರೆ ಹೇಗೆ? ಈ ರೀತಿ ಪ್ರಶ್ನೆ ಮಾಡಿದರೆ, ಮುಂದೆ ಪೊಲೀಸಿನವರು ಯಾವುದೇ ರೀತಿಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲ.

**(ಗೊಂದಲ)**

**ಶ್ರೀ ಸಿ.ಟಿ.ರವಿ(ಕನ್ನಡ ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಂಗಳೂರಿನಲ್ಲಿ ಶೇಕಡಾ 99ರಷ್ಟು ಜನ ಪೊಲೀಸ್ ಅಧಿಕಾರಿಗಳು ಮಾನ್ಯ ಐವನ್ ಡಿ'ಸೋಜಾ ಮತ್ತು ಯು.ಟಿ.ಖಾದರ್‌ರವರ ಶಿಫಾರಸ್ಸಿನ ಮೇಲೆ ಅಲ್ಲಿಗೆ ಹೋಗಿದ್ದಾರೆ. ನಾವು ಭಾರತೀಯ ಜನತಾ ಪಕ್ಷದವರು, ಗಲಭೆ ಮಾಡಿಸಿದ್ದರೆ ಇವರೇ ಮಾಡಿಸಿರಬಹುದು.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾಃ-** ಸನ್ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ಉತ್ತರವನ್ನು ಬಯಸುವುದಿಲ್ಲ. ಅವರು ಬುದ್ಧಿವಂತರೆಂದು ನನಗೆ ಗೊತ್ತು. ನಾನು ಬುದ್ಧಿವಂತಿಕೆಯನ್ನು ಕಲಿತಿದ್ದೇನೆ. ನನಗೂ ಮಾತನಾಡುವುದಕ್ಕೆ ಬರುತ್ತದೆ. ಮಾನ್ಯ ಸಭಾಪತಿಯವರೇ,

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾವು ನನ್ನ ರಕ್ಷಣೆಗೆ ಬರಬೇಕು. ಸೆಕ್ಷನ್ 144ನ್ನು ಜಾರಿಗೊಳಿಸದೇ ಇದ್ದಿದ್ದರೆ, ಮಂಗಳೂರಿನಲ್ಲಿ ಆ ಘಟನೆ ನಡೆಯುತ್ತಿರಲಿಲ್ಲ. This was the opinion of the entire city. ಇಡೀ ರಾಜ್ಯದ ಜನರು ಆ ರೀತಿ ಮಾತನಾಡಿಕೊಳ್ಳುತ್ತಿದ್ದಾರೆ. Section 144 is the root cause for all this.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿಃ–** ಸನ್ಮಾನ್ಯ ಸಭಾಪತಿಯವರೇ, ಯಾವ ಯಾವ ಕಾರಣಕ್ಕಾಗಿ ಸೆಕ್ಷನ್ 144ನ್ನು ಜಾರಿಗೊಳಿಸಲಾಯಿತು ಎನ್ನುವುದರ ಬಗ್ಗೆ ವಿವರಣೆಯನ್ನು ಕೊಟ್ಟಿದ್ದೇನೆ.

**(ಗೊಂದಲ)**

**ಡಾಃತೇಜಸ್ವಿನಿ ಗೌಡಃ–** ಸನ್ಮಾನ್ಯ ಸಭಾಪತಿಯವರೇ, ಒಂದು ವೇಳೆ ಸೆಕ್ಷನ್ 144ಅನ್ನು ಜಾರಿಗೊಳಿಸದೇ ಇದ್ದಿದ್ದರೆ, ಪರಿಸ್ಥಿತಿ ಕೈಮೀರಿ ಹೋಗುತ್ತಿತ್ತು. ಎಷ್ಟೋ ಜನರ ಜೀವಹಾನಿಯಾಗುತ್ತಿತ್ತು. ಈ ಗಲಭೆಯಲ್ಲಿ ಪೊಲೀಸರಿಗೂ ಸಹ ಗಾಯಗಳಾಗಿವೆ. ನಮ್ಮ ಪೊಲೀಸ್ ಇಲಾಖೆಯವರು ಸರಿಯಾದ ಕ್ರಮವನ್ನು ತೆಗೆದುಕೊಂಡಿದ್ದಾರೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾಃ–** ಸನ್ಮಾನ್ಯ ಸಭಾಪತಿಯವರೇ, *CAA* (Citizenship Amendment Act), *NRC* (National Register of Citizens) and NPR (National Population Register) ಕಾಯಿದೆಯನ್ನು ಜಾರಿಗೊಳಿಸಿರುವುದನ್ನು ವಿರೋಧಿಸಿ ಏನು ಪ್ರತಿಭಟನೆ ನಡೆಯುತ್ತಿತ್ತು, ಅದನ್ನು ಪೊಲೀಸರ ಮೂಲಕ ಹತ್ತಿಕ್ಕುವುದು ಈ ಸರ್ಕಾರದ ಉದ್ದೇಶವಾಗಿತ್ತು. ಅದಕ್ಕಾಗಿ ಸೆಕ್ಷನ್ 144ನ್ನು ಜಾರಿಗೊಳಿಸಿದ್ದಾರೆ. ಯಾರು ಪ್ರತಿಭಟನೆ ಮಾಡುತ್ತಾರೆ, ಅವರನ್ನು ತಡೆಯುವುದು ಪೊಲೀಸರ ಕೆಲಸವಾಗಿದೆ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿಃ–** ಸನ್ಮಾನ್ಯ ಸಭಾಪತಿಯವರೇ, ಅವರ logic ಏನೆಂಬುದೇ ಅರ್ಥವಾಗುತ್ತಿಲ್ಲ. ದಿನಾಂಕಃ16, 17 ಮತ್ತು 18ರಂದು 6 ಸಭೆಗಳನ್ನು ನಡೆಸುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೇವೆ. ಜಿಲ್ಲಾಧಿಕಾರಿಗಳ ಕಛೇರಿಗೇ ಅನುಮತಿಯನ್ನು ಕೊಟ್ಟಿದ್ದೇವೆ. ಅಲ್ಲಿ ಗಲಭೆ ನಡೆಯುತ್ತದೆ ಎನ್ನುವ ಮಾಹಿತಿ ಲಭ್ಯವಾಯಿತು. ಹೊರಗಿನವರು ಬರುತ್ತಾರೆನ್ನುವ ಮಾಹಿತಿ ಬಂದಿತ್ತು. ಅದಕ್ಕಾಗಿ ನಾವು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಮತಿಯನ್ನು ವಿತ್‌ಡ್ರಾ ಮಾಡಿದ್ದೆವು. ಪ್ರತಿಭಟನಾಕಾರರು ಪೆಟ್ರೋಲ್ ಬಾಂಬ್‌ಗಳನ್ನು, ಲಾಠಿ ಮತ್ತು ಕಲ್ಲುಗಳನ್ನು ಹಿಡಿದುಕೊಂಡು ಬಂದಿದ್ದಾರೆ. ಪೊಲೀಸಿನವರು ಸುಮ್ಮನೆ ನಿಂತುಕೊಂಡು ನೋಡಬೇಕೇ?

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಪ್ರತಿಭಟನಾಕಾರರಲ್ಲಿ ಕೆಲವರು ಮುಖಕ್ಕೆ mask ಧರಿಸಿಕೊಂಡು ಬಂದಿದ್ದಾರೆ.

**(ಗೊಂದಲ)**

**ಡಾಃತೇಜಸ್ವಿನಿ ಗೌಡಃ–** ಸನ್ಮಾನ್ಯ ಸಭಾಪತಿಯವರೇ, ಅವರಲ್ಲಿ ಕೆಲವರಿಗೆ ಕ್ರಿಮಿನಲ್ ಹಿನ್ನೆಲೆ ಇದೆ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಯಿಃ–** ಸನ್ಮಾನ್ಯ ಸಭಾಪತಿಯವರೇ, ಒಂದು ವೇಳೆ ಸೆಕ್ಷನ್ 144ನ್ನು ಜಾರಿಗೊಳಿಸದೇ ಇದ್ದಿದ್ದರೆ, ಏತಕ್ಕೋಸ್ಕರ ಜಾರಿಗೊಳಿಸಲಿಲ್ಲವೆಂದು ಇವರೇ ಕೇಳುತ್ತಿದ್ದರು. With some thought process you should not speak like this.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾಃ–** ಸನ್ಮಾನ್ಯ ಸಭಾಪತಿಯವರೇ, ಹೈಕೋರ್ಟ್ ನ್ಯಾಯಾಧೀಶರು ಏನು ಹೇಳಿದ್ದಾರೆ ಎನ್ನುವುದನ್ನು ಅವರು ಗಮನಿಸಬೇಕಾಗಿದೆ. After hearing the case, the High Court said it is illegal.

**(ಗೊಂದಲ)**

**ಡಾಃತೇಜಸ್ವಿನಿ ಗೌಡಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಸವಿವರವಾಗಿ ಸದರಿ ಗಲಭೆಯ ಬಗ್ಗೆ ಈ ಸದನಕ್ಕೆ ವಿವರಣೆಯನ್ನು ನೀಡಿದ ಮೇಲೆ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ, ಅದನ್ನು ಕೈಗೊಳ್ಳಬಾರದಿತ್ತು ಎನ್ನುವುದು ಸರಿಯಲ್ಲ. ಈ ಗಲಭೆಯಲ್ಲಿ ಪೊಲೀಸಿನವರು ಸಹ ಗಾಯಗೊಂಡಿದ್ದಾರೆ. ಸೆಕ್ಷನ್ 144ನ್ನು ಯಾವಾಗ ಜಾರಿಗೊಳಿಸಬೇಕು ಎನ್ನುವುದು ಸರ್ಕಾರದ ವಿವೇಚನೆಗೆ ಬಿಟ್ಟ ವಿಚಾರವಾಗಿದೆ.

**(ಗೊಂದಲ)**

**ಉಪ ಸಭಾಪತಿಯವರುಃ–** ಮಾನ್ಯ ಐವನ್ ಡಿ'ಸೋಜಾರವರೇ, ಮಾನ್ಯ ಗೃಹ ಸಚಿವರು ಎಲ್ಲ ವಿಚಾರಗಳಿಗೂ ಉತ್ತರವನ್ನು ಕೊಡುತ್ತಿದ್ದಾರೆ. ಇನ್ನೂ ನಿಮ್ಮ ವಿಚಾರಕ್ಕೂ ಉತ್ತರವನ್ನು ಕೊಡುತ್ತಿದ್ದಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾಃ–** ಸನ್ಮಾನ್ಯ ಸಭಾಪತಿಯವರೇ, I am asking the clarification. Let them allow me to ask the clarification. Why they are worried about my question. ನನ್ನ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಅವರಿಗೆ ಹೆದರಿಕೆ ಯಾಕೆ?

**(ಗೊಂದಲ)**

**ಉಪ ಸಭಾಪತಿಯವರುಃ–** ಎಲ್ಲರೂ ಕುಳಿತುಕೊಳ್ಳಿ, ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿಃ–** ಸನ್ಮಾನ್ಯ ಸಭಾಪತಿಯವರೇ, ಯಾವ ಕಾರಣಕ್ಕೋಸ್ಕರ ಸೆಕ್ಷನ್ 144ನ್ನು ಜಾರಿಗೊಳಿಸಲಾಯಿತು ಎನ್ನುವುದರ ಬಗ್ಗೆ ನಾನು ಈಗಾಗಲೇ ಸ್ಪಷ್ಟವಾದ ಉತ್ತರವನ್ನು ನೀಡಿದ್ದೇನೆ. ಸುಮಾರು 6 ಸಭೆಗಳನ್ನು ನಡೆಸುವುದಕ್ಕೆ ನಾವು ಅನುಮತಿಯನ್ನು ಕೊಟ್ಟಿದ್ದೆವು. ಜಿಲ್ಲಾದಿಕಾರಿಗಳ ಕಛೇರಿಯ ಎದುರು ಸಿ.ಎ.ಎ. ವಿರುದ್ಧ ಸುಮಾರು 6 ಪ್ರತಿಭಟನೆಗಳು ನಡೆದಿವೆ. *DYFI* (Democratic Youth Federation of India), NSUI (National Students' Union of India), Congress, SDPI (Social Democratic Party of India), PFI (Popular Front of India) ಎಲ್ಲರೂ ಒಂದೊಂದು ದಿನ ಪ್ರತಿಭಟನೆ ನಡೆಸುವುದಕ್ಕೆ ನಾವು ಅನುಮತಿಯನ್ನು ಕೊಟ್ಟಿದ್ದೇವೆ. ಆ ದಿನ ಸಮಸ್ತ ಕೇರಳ SSF *(Sunni Students' Federation)* ರವರು ಪ್ರತಿಭಟನೆಯನ್ನು ನಡೆಸುವವರಿದ್ದರು. ಈ ರೀತಿ inputs ಇದೆ, ಗಲಭೆಯಾಗುವ ಸಾಧ್ಯತೆಗಳಿವೆ ಎಂದು ನಾವು ಕಾಸರಗೋಡಿನ ಖಾಜಿಯವರನ್ನು ಭೇಟಿ ಮಾಡಿ ಕೇಳಿಕೊಂಡಾಗ, ಅವರು 'ಆಯಿತು' ಎಂದು ಒಪ್ಪಿಕೊಂಡು ಪ್ರತಿಭಟನೆಯನ್ನು ವಿತ್‌ಡ್ರಾ ಮಾಡಿದ್ದಾರೆ. ಅದರ ಬಗ್ಗೆ ಪ್ರಕಟಣೆಯನ್ನು ಸಹ ಕೊಟ್ಟಿದ್ದಾರೆ. ನಾವು ಸೆಕ್ಷನ್ 144ನ್ನು ಜಾರಿಗೊಳಿಸಿರುವ ಬಗ್ಗೆ ವ್ಯಾಪಕವಾದ ಪ್ರಚಾರವನ್ನು ಸಹ ಮಾಡಿದ್ದೇವೆ. ನಮಗೆ ಬಂದಂತಹ inputs ಪ್ರಕಾರ ಭಾರತ್ ಬಂದ್ ಆದಂತಹ ಸಂದರ್ಭದಲ್ಲಿ ಎರಡು ರಾಜ್ಯಗಳಲ್ಲಿ ಆದಂತಹ ಅಹಿತಕರ ಘಟನೆ ನಮ್ಮ ರಾಜ್ಯದಲ್ಲಿ ಸಂಭವಿಸಬಹುದು ಎನ್ನುವ ಹಿನ್ನೆಲೆಯಲ್ಲಿ section 144 is just a preventive measure, ಆ ಮುನ್ನೆಚ್ಚರಿಕೆ ಕ್ರಮವನ್ನು ತೆಗೆದುಕೊಳ್ಳಬೇಕಾಗಿರುವುದು ನಮ್ಮ ಆದ್ಯ ಕರ್ತವ್ಯವಾಗಿದೆ. This is the primary responsibility. ಆ ಕೆಲಸವನ್ನು ನಮ್ಮ ಪೊಲೀಸಿನವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಕ್ಷತೆಯಿಂದ ಮಾಡಿದ್ದಾರೆ. ಪೊಲೀಸಿನವರು ಜರುಗಿಸಿರುವಂತಹ ಕ್ರಮದ ಬಗ್ಗೆ ಇವರು ಸಂಶಯವನ್ನು ವ್ಯಕ್ತಪಡಿಸಿದರೆ, ನಾಳೆ ನಮ್ಮ ಸರ್ಕಾರ ಅಧಿಕಾರದಲ್ಲಿರಬಹುದು ಅಥವಾ ಬೇರೆ ಸರ್ಕಾರವಿರಬಹುದು, ಅವರು ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಸೆಕ್ಷನ್ 144ನ್ನು ಜಾರಿಗೊಳಿಸದೇ ಇರುವಂತಹ ವ್ಯವಸ್ಥೆಯನ್ನು ಇವರು ಸೃಷ್ಟಿ ಮಾಡುತ್ತಿದ್ದಾರೆ. ಪೊಲೀಸರು ಯಾವುದೇ ಒಂದು ಸರ್ಕಾರದ ಪರವಾಗಿ ಕೆಲಸ ಮಾಡುವುದಿಲ್ಲ. ಅಲ್ಲಿನ ಪರಿಸ್ಥಿತಿಗೆ ಅನುಗುಣವಾಗಿ ಅವರು ಕೆಲಸ ಮಾಡುತ್ತಾರೆ. ಸೆಕ್ಷನ್ 144ನ್ನು ಜಾರಿಗೊಳಿಸಿರುವುದರಿಂದಲೇ ಗಲಾಟೆಯಾಗಿದೆ ಎನ್ನುವ ಈ ರೀತಿಯ ವಾದವನ್ನು ನಾವು ಎಲ್ಲಿಯೂ ನೋಡಿಲ್ಲ. ನಾವೂ ಕೂಡ ವಿರೋಧ ಪಕ್ಷದಲ್ಲಿದ್ದಾಗ ಹಲವಾರು ಗೋಲಿಬಾರ್ ಪ್ರಕರಣಗಳ ಮೇಲೆ ಚರ್ಚೆ ಮಾಡಿದ್ದೆವು. But we never questioned.

(ಮುಂದುವರಿದಿದೆ)

(092) 20.2.2020 3.30 ಪಿಕೆ:ವಿಕೆ

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ**(ಮುಂದುವರೆದಿದೆ)

ನಾನು ಕೇವಲ ಸೆಕ್ಷನ್ 144 ಬಗ್ಗೆ ಮಾತ್ರ ಮಾತನಾಡುತ್ತೇನೆ. ಬೇರೆ ವಿಷಯ ಮಾತನಾಡುವುದಿಲ್ಲ. ನಾವು ವಿರೋಧ ಪಕ್ಷದಲ್ಲಿದ್ದಾಗಲೂ ಗೋಲಿಬಾರ್ ಪ್ರಕರಣಗಳು ನಡೆದಿತ್ತು, ಆ ಕುರಿತು ನಾವೂ ಕೂಡ ವಾದ ಮಾಡಿದ ಉದಾಹರಣೆಗಳಿವೆ. ಆದರೆ ಎಂದೂ ಕೂಡ ಪೊಲೀಸರ intent ಆಗಲಿ, integrity ಬಗ್ಗೆಯಾಗಲಿ ನಾವೆಂದೂ ಕೂಡ ಪ್ರಶ್ನೆ ಮಾಡಿಲ್ಲ. ಸೆಕ್ಷನ್ 144 ಏಕೆ ಹಾಕಿದಿರಿ ಎನ್ನುವ ಪ್ರಶ್ನೆ ಕೇಳಲಿಲ್ಲ. ಈ extent ಗೆ ನಾವು ಚಿಂತನೆಯನ್ನು ಮಾಡಬಾರದು. ಮಾನ್ಯ ಸಭಾಪತಿಯವರೇ, ಪೊಲೀಸರ ನೈತಿಕತೆಯನ್ನು ಕುಂದಿಸುವಂತಹ ಕೆಲಸವನ್ನು ಯಾರು ಕೂಡ ಮಾಡಬಾರದು.

(ಗೊಂದಲ)

**Sri IVAN D'SOUZA:-** FIR was registered on the basis of the police complaint. ಅಂದರೆ ಸರ್ಕಾರದ ಕಡೆಯಿಂದ ದೂರುಗಳು ರಿಜಿಸ್ಟರ್ ಆಯಿತು. ಎಫ್‌ಐಆರ್ ಹಾಕಿದುದರಲ್ಲಿ 2500 ಮಂದಿಗಳ ಪೈಕಿ 100-150 ಮಂದಿ ಮುಸ್ಲಿಂ ಯುವಕರು, 38

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಸುಗಳಲ್ಲಿ ಕೂಡ 2500 ಮಂದಿಯೂ ಮುಸ್ಲಿಂ ಯುವಕರೆ ಭಾಗವಹಿಸಿದ್ದರು ಎಂದು at the first ಬರೆದಿರಿ. The first information was the case registered between 4.30 to 5.30. ಒಂದು ಗಂಟೆಯಲ್ಲಿ 2500 ಜನರೆಲ್ಲರೂ ಮುಸ್ಲಿಮರೇ ಎಂದು ನೀವು ಹೇಗೆ ನಿರ್ಧಾರಕ್ಕೆ ಬಂದಿರಿ? How did you come to the conclusion? ಬೇರೆ ಸಮಾಜದವರು ಭಾಗವಹಿಸಿರಲಿಲ್ಲವೇ? ಅಥವಾ ಅವರು ಇರಲಿಲ್ಲವೇ? 2500 ಮಂದಿಯೂ ಮುಸ್ಲಿಮರು ಎಂದು ನೀವು ಗುರುತಿಸಿದ್ದೀರಾ? That means you wanted to target the Muslims.

(ಗೊಂದಲ)

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸ್ಪಷ್ಟೀಕರಣ ಕೇಳಬೇಕು. ಅವರು ಭಾಷಣ ಹೊಡೆಯುತ್ತಿದ್ದಾರೆ. ಸರ್ಕಾರದ ಕಡೆಯಿಂದ ಉತ್ತರ ಕೊಟ್ಟಮೇಲೆ ಮತ್ತೆ ಭಾಷಣ ಮಾಡುತ್ತಿದ್ದಾರೆ. ಸ್ಪಷ್ಟೀಕರಣ ಕೇಳಲಿ.

(ಗೊಂದಲ)

**Sri IVAN D'SOUZA:-** How did the police identify that they are Muslims. ಅದರಲ್ಲಿ ಹಿಂದೂಗಳು ಭಾಗವಹಿಸಿರಲಿಲ್ಲವೇ? ಯಾವ ಆಧಾರದ ಮೇಲೆ ಹೇಳಿದಿರಿ. You are defending the police. ನೀವು ಪೊಲೀಸರನ್ನು defend ಮಾಡಿಕೊಳ್ಳುತ್ತೀರಾ?

**ಡಾ|| ವೈ.ಎ.ನಾರಾಯಣಸ್ವಾಮಿ:-** ನೀವು ಹೇಳುತ್ತಿರುವ ಹಾಗೆ ಅವರು ನಿರಪರಾಧಿಗಳಾಗಿದ್ದರೆ ಮುಖಕ್ಕೆ mask ಹಾಕಿಕೊಂಡು ಬರುತ್ತಿದ್ದರೇ? ...

(ಗೊಂದಲ)

"ತಿದ್ದುಪಡಿಯಾಗದ ಪ್ರತಿ" ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಐವನ್ ಡಿ'ಸೋಜಾ:–** ಲಾಠಿ ಇರಬೇಕಾದ ಪೊಲೀಸರ ಕೈಯಲ್ಲಿ **XXX** ಇತ್ತು. And you are still defending the police.

**ಡಾ|| ವೈ.ಎ.ನಾರಾಯಣಸ್ವಾಮಿ:–** – ಅವರು ನಿರಪರಾಧಿಗಳಾಗಿದ್ದರೆ ಮುಖಕ್ಕೆ ಮಾಸ್ಕನ್ನು ಏಕೆ ಕಟ್ಟಿಕೊಂಡು ಬರುತ್ತಿದ್ದರು?

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಕೇವಲ ಇಬ್ಬರು ಮಾತ್ರ ಸತ್ತಿದ್ದಾರೆ ಎಂದು ಹೇಳುತ್ತೀರಿ. That is not the criteria. You show me one single case.

**ಡಾ|| ವೈ.ಎ.ನಾರಾಯಣಸ್ವಾಮಿ:–** ನಿಮ್ಮ ವಿಷಯಗಳನ್ನು ಮ್ಯಾಜಿಸ್ಟ್ರೇಟ್ ಕೋರ್ಟ್ ಮುಂದೆ ಹೇಳಿ. It is unfair. ಮುಖಕ್ಕೆ ಬಟ್ಟೆ ಕಟ್ಟಿಕೊಂಡು ಏಕೆ ಬಂದಿದ್ದರು?

(ಗೊಂದಲ)

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾ ಅವರ ಮಾತಿನಿಂದ, ಮಂಗಳೂರಿನಲ್ಲಿ ಸಂಪೂರ್ಣವಾಗಿ ಗಲಾಟೆ ಆಗಬೇಕಾಗಿತ್ತು; ಅವರಿಗೆ ಸ್ವಾತಂತ್ರ್ಯ ಕೊಡಬೇಕಾಗಿತ್ತು ಎಂದು ಹೇಳಿ ಹೊರಟಿರುವುದು ಸ್ಪಷ್ಟವಾಗುತ್ತಿದೆ.

(ಗೊಂದಲ)

**ಡಾ|| ವೈ.ಎ.ನಾರಾಯಣಸ್ವಾಮಿ:–** ನೀವು ದೇಶದ್ರೋಹಿಗಳಿಗೆ ಸಪೋರ್ಟ್ ಮಾಡುವ ಕೆಲಸ ಮಾಡಬೇಡಿ.

(ಗೊಂದಲ)

**(ಈ ಹಂತದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷದ ಅನೇಕ ಜನ ಸದಸ್ಯರು ಒಟ್ಟಾಗಿ ಮಾತನಾಡುತ್ತಿದ್ದರು)**

---

**(XXX ಸಭಾಪತಿಯವರ ಆದೇಶಾನುಸಾರ ತೆಗೆದು ಹಾಕಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಯಾರು ಸಿಸಿ ಟಿವಿಗಳಿಗೆ ಕಲ್ಲು ಹೊಡೆಯುತ್ತಾರೋ, ಯಾರು mask ಹಾಕಿಕೊಂಡು ಗಲಾಟೆ ಮಾಡುತ್ತಾರೋ ಅಂಥವರಿಗೆ ಇವರು ಬೆಂಬಲ ಕೊಡುತ್ತಿದ್ದಾರೆ.

(ಗೊಂದಲ)

**ಉಪ ಸಭಾಪತಿಯವರು:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಐವನ್ ಡಿ'ಸೋಜಾರವರೇ, ನೀವು ನಿಮ್ಮ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಬಯಸುವುದಾದರೆ . . .

(ಗೊಂದಲ)

**(ಈ ಹಂತದಲ್ಲಿ ಮಾನ್ಯ ಸಭಾನಾಯಕರು ತಮ್ಮ ಸ್ಥಾನದಲ್ಲಿ ನಿಂತು ಗಲಭೆಗೆ ಸಂಬಂಧಪಟ್ಟಂತೆ ಕೆಲವು ಛಾಯಾ ಚಿತ್ರಗಳನ್ನು ಪ್ರದರ್ಶಿಸಿದರು)**

(ಗೊಂದಲ)

**ಉಪ ಸಭಾಪತಿಯವರು:-** ವಿರೋಧ ಪಕ್ಷದ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು. ಮಾನ್ಯ ವಿರೋಧ ಪಕ್ಷದ ನಾಯಕರೇ, ನಿಮ್ಮ ಪಕ್ಷದ ಸದಸ್ಯರನ್ನು ಕುಳಿತುಕೊಳ್ಳುವುದಕ್ಕೆ ಹೇಳಿ. ಆಡಳಿತ ಪಕ್ಷದ ಸದಸ್ಯರು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಐವನ್ ಡಿ'ಸೋಜಾರವರೇ, ನಿಮ್ಮ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡಲು ಸಚಿವರಿದ್ದಾರೆ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನನ್ನ ಮಾತುಗಳನ್ನು ಆಡಳಿತ ಪಕ್ಷದ ಸದಸ್ಯರು ಕೇಳುವುದಕ್ಕೆ ತಯಾರಿಲ್ಲ.

(ಗೊಂದಲ)

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, He has given a befitting and effective reply and also he has protected Mangalore. ಮಾನ್ಯ ಐವನ್ ಡಿ'ಸೋಜಾರವರ ಮಾತು ಕೇಳಿದ್ದರೆ ಮಂಗಳೂರು ಧ್ವಂಸ ಆಗುತ್ತಿತ್ತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಚಿವರು ಸ್ಪಷ್ಟ ಉತ್ತರ ಕೊಟ್ಟರೂ ಕೂಡ, ಆ ಉತ್ತರದಿಂದ ಕನ್‌ವಿನ್ಸ್ ಆಗಿದ್ದರೂ ಕೂಡ ಮತ್ತೆ ಹೇಳಿದ್ದನ್ನೇ ಪ್ರಸ್ತಾಪ ಮಾಡುವುದನ್ನು ನೋಡಿದರೆ ರಾಜಕಾರಣ ಮಾಡುತಿದ್ದಾರೆ ಎನ್ನುವುದು ಗೊತ್ತಾಗುತ್ತಿದೆ. ಇದರಲ್ಲಿ ಯಾವುದೇ ಸದುದ್ದೇಶ ಕಾಣುತ್ತಿಲ್ಲ.

(ಗೊಂದಲ

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠಾಸೀನರಾದರು)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಯಾರು ಗೋಲಿಬಾರ್‌ನಲ್ಲಿ ಸತ್ತಿದ್ದಾರೋ ಅವರ ಕುಟುಂಬಕ್ಕೆ ಸರ್ಕಾರ ಪರಿಹಾರ ಕೊಡಬೇಕು ಎಂದು ಕೇಳಿದಾಗ ಮಾನ್ಯ ಸಚಿವರು ಪರಿಹಾರ ಕೊಡುವುದಿಲ್ಲ, ಏಕೆಂದರೆ, ಮುಲ್ಕೀ ಕೇಸ್‌ಗೆ ಸಂಬಂಧ ಪಟ್ಟಂತೆ ಸುಪ್ರೀಂ ಕೋರ್ಟ್ ...

(ಗೊಂದಲ)

**ಸಭಾಪತಿಯವರು:–** ನಿಯಮ 68ರ ಮೇರೆಗೆ, ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ ಬಂದಿದೆ. ಈಗ ಮುಂದಿನ ವಿಷಯವನ್ನು ತೆಗೆದುಕೊಳ್ಳೋಣ.

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ನಿನ್ನೆ ಕೇಳಿದಂತಹ ಪ್ರಶ್ನೆಗೆ ಸರ್ಕಾರದ ಕಡೆಯಿಂದ ಉತ್ತರ ಬಂದಿಲ್ಲ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–**ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇನ್ನೂ clarification ಕೇಳುತ್ತಿದ್ದಾರೆ. ...

(ಗೊಂದಲ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ:–** ನೀವು ಶಾಂತವಾಗಿ ಒಂದೊಂದೇ clarification ಕೇಳಿದರೆ ಉತ್ತರ ಕೊಡಬಹುದು. ಆದರೆ ಉತ್ತರ ಕೇಳುವವರು ಯಾರೂ ಇಲ್ಲ ...

(ಗೊಂದಲ)

**ಸಭಾಪತಿಯವರು:–** ಈಗ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲಿ.

(ಗೊಂದಲ)

(ಮುಂದು)

(93)20–02–2020 3.40 ಡಿಎಸ್–ಬಿಎನ್ಎಸ್

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ಕ್ಲಾರಿಫಿಕೇಶನ್ ಕೇಳುವುದಕ್ಕೆ ಅವಕಾಶ ಕೊಟ್ಟಿಲ್ಲ.

**ಸಭಾಪತಿಯವರು:–** ಮಾನ್ಯ ಐವನ್ ಡಿಸೋಜಾರವರಿಗೆ ಕ್ಲಾರಿಫಿಕೇಶನ್ ಕೇಳುವುದಕ್ಕೆ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಕ್ಲಾರಿಫಿಕೇಶನ್ ಕೇಳುವುದಕ್ಕೆ ಒಬ್ಬೊಬ್ಬರಿಗೆ ಒಂದೊಂದು ನಿಮಿಷ ಅವಕಾಶ ಕೊಡಿ. ನಂತರ ಮಾನ್ಯ ಗೃಹ ಮಂತ್ರಿಗಳು ಉತ್ತರ ಕೊಟ್ಟ ತಕ್ಷಣ ಆ ವಿಷಯವನ್ನು ಮುಕ್ತಾಯಗೊಳಿಸಿ. ಈಗ ಒಂದೊಂದು ನಿಮಿಷ ಕಾಲಾವಕಾಶ ಕೊಟ್ಟುಬಿಡಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸರ್ಕಾರ ಉತ್ತರ ಕೊಟ್ಟಾಗಿದೆ. ಪುನಃ ಪ್ರಶ್ನೆ ಕೇಳುವ ಹಾಗಿಲ್ಲ. ನಿಯಮ 68ರಲ್ಲಿ ಚರ್ಚೆಯಾಗಿರುವುದಕ್ಕೆ ಸರ್ಕಾರ ಕೊಟ್ಟಿರುವ ಉತ್ತರವನ್ನು ತಾವು ಒಪ್ಪಿಕೊಂಡಿದ್ದೀರಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಒಬ್ಬರಿಗೆ ಒಂದು ಅಥವಾ ಎರಡು ನಿಮಿಷ ಕ್ಲಾರಿಫಿಕೇಶನ್ ಕೇಳುವುದಕ್ಕೆ ಅವಕಾಶ ಕೊಡಿ. ಆಮೇಲೆ ಮಾನ್ಯ ಗೃಹ ಮಂತ್ರಿಗಳು ಉತ್ತರ ಕೊಟ್ಟ ತಕ್ಷಣ ಆ ವಿಷಯವನ್ನು ಮುಕ್ತಾಯಗೊಳಿಸೋಣ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಗೃಹ ಮಂತ್ರಿಗಳೇ, ಎಲ್ಲಾ ಸದಸ್ಯರು ಒಂದೊಂದು ನಿಮಿಷ ಕ್ಲಾರಿಫಿಕೇಶನ್ ಕೇಳುತ್ತೇವೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ತಾವು ತಯಾರಿದ್ದೀರಾ?

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಈಗ ನಾನು ವಿವರವಾಗಿ ಎಲ್ಲಾ ಹೇಳಿದ್ದೇನೆ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ.....

(ಗೊಂದಲ)

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಲಹರ್ ಸಿಂಗ್‌ರವರಿಗೆ ಮೊದಲು ಕನ್ನಡವನ್ನು ಕಲಿಸಿ. ಅವರು ನಿಂತುಕೊಂಡು ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆ. ಅವರು ಸ್ಪಷ್ಟವಾಗಿ ಮಾತನಾಡುವುದಕ್ಕೆ ಸ್ಪೆಷಲ್ ಕೋಚಿಂಗ್ ಕ್ಲಾಸ್‌ಗೆ ಕಳುಹಿಸಿ ಆಮೇಲೆ ಅವರನ್ನು ಮಾತನಾಡಿಸಿ. ಅವರನ್ನು ಕನ್ನಡ ಶಾಲೆಗೆ ಸೇರಿಸಿ. ಎಲ್ಲರೂ ಮಾತನಾಡುವಾಗ ಅವರು ಸುಮ್ಮನೆ ಎದ್ದು ನಿಂತುಕೊಳ್ಳುತ್ತಾರೆ. (ಗೊಂದಲ) ಅವರಿಗೆ ಬಿ.ಜೆ.ಪಿ.ಯವರು ಮಂತ್ರಿ ಸ್ಥಾನ ಕೊಡುತ್ತಾರೆಯೋ ಕೇಳಿ. ಸುಮ್ಮನೆ ಎದ್ದು ನಿಂತುಕೊಂಡು ಮಾತನಾಡುತ್ತಾರೆ. ಅವರು ಏನೇನೋ ಹೇಳುತ್ತಿದ್ದಾರೆ, ನಾವು ಸುಮ್ಮನೆ ಕೇಳಿಸಿಕೊಳ್ಳುತ್ತಿದ್ದೇವೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಲಹರ್ ಸಿಂಗ್‌ರವರೇ, ತಾವು ಸರ್ಕಾರದ ಪರವಾಗಿ ಇದ್ದೀರಿ. ತಾವು ಎಲ್ಲಿ ಕುಳಿತುಕೊಂಡಿದ್ದೀರಿ ಎಂಬುದು ಗೊತ್ತಿದೆಯೇ?

(ಗೊಂದಲ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮೂರ್‍ನಾಲ್ಕು ಕ್ಲಾರಿಫಿಕೇಶನ್ ಕೇಳುತ್ತೇವೆ. ಆಮೇಲೆ ಮಾನ್ಯ ಸಚಿವರು ಒಂದೇ ಸಲ ಉತ್ತರ ಕೊಟ್ಟುಬಿಟ್ಟರೆ ಮುಗಿದು ಹೋಗುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ತಾವು ರೂಲಿಂಗ್ ಕೊಟ್ಟಿದ್ದರೂ ಕೂಡ ಸದಸ್ಯರೆಲ್ಲರೂ ಒಟ್ಟಿಗೆ ಮಾತನಾಡಿದರೆ ಯಾರೂ ಕೂಡ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ. It is physically impossible. ನಾನು ಈಗ ಸುದೀರ್ಘವಾದಂತಹ ಉತ್ತರ ಕೊಟ್ಟಿದ್ದೇನೆ. ಉತ್ತರ ಕೊಟ್ಟಾಗಿದೆ ಎಂದು ತಾವು ಕೂಡ ಈಗಾಗಲೇ ಹೇಳಿದ್ದೀರಿ. ಆದಾಗ್ಯೂ ಕೂಡ ಸದಸ್ಯರು ನನ್ನ ಉತ್ತರದಲ್ಲಿ ಒಂದು pinpointed ಆಗಿ ಏನಾದರೂ ಪ್ರಶ್ನೆ ಇದ್ದರೆ ಅದಕ್ಕೆ ಉತ್ತರ ಕೊಡಬಹುದು. ಅವರು ಮತ್ತೆ ಭಾಷಣವನ್ನು ಮಾಡಿ ತಮ್ಮ ನಿಲುವನ್ನು ಮತ್ತೊಮ್ಮೆ ಹೇಳುವುದಕ್ಕೆ ಹೋದರೆ, it is endless. ಆದ್ದರಿಂದ ಇದನ್ನು restrictive ಆಗಿ ತಾವು ಮಾಡುವುದಾದರೆ ನನ್ನದೇನೂ ತಕರಾರು ಇಲ್ಲ, ನಾನು ಉತ್ತರ ಕೊಡುತ್ತೇನೆ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಅವರು ಪರಿಹಾರ ಕೊಡದಿದ್ದರೆ 2023ನೇ ಇಸವಿಗೆ ನಮ್ಮ ಸರ್ಕಾರ ಬರುತ್ತದೆ. ಮತ್ತೆ ಆಡಳಿತ ಪಕ್ಷದಲ್ಲಿ ಕೂರುತ್ತೇವೆ. ಆದರೆ, it is only discrimination on community. ಮುಸಲ್ಮಾನರು ಎನ್ನುವ ಕಾರಣಕ್ಕಾಗಿ ಅವರಿಗೆ ಪರಿಹಾರವನ್ನು ಕೊಡುತ್ತಿಲ್ಲ. ಇವತ್ತು ಆಡಳಿತ ಪಕ್ಷದ ಒಬ್ಬ ಸದಸ್ಯರು ಹೇಳುತ್ತಾರೆ, ಮಂಗಳೂರು, ಮೈಸೂರು ಮತ್ತು ಬೀದರ್‌ನಲ್ಲಿ ಮೂರು ಘಟನೆಗಳು ಮಾತ್ರ ಆಗಿವೆ. ಉಳಿದ ಕಡೆ Law and Order situation ಸರಿಯಾಗಿದೆ. (ಗೊಂದಲ) ಹಾಗಾಗಿ ಈ ಸರ್ಕಾರ ಕಾನೂನು ಸುವ್ಯವಸ್ಥೆ ಕಾಪಾಡುವುದರಲ್ಲಿ ಸಂಪೂರ್ಣ ವಿಫಲವಾಗಿದೆ.

**ಸಭಾಪತಿಯವರು:-** ಸರ್ಕಾರದಿಂದ ಏನಾಗಬೇಕು ಎಂಬುದನ್ನು ಕೇಳಿ. ಅವರು ಮಾತನಾಡಿದ್ದಕ್ಕೆ ಇವರು, ಇವರು ಮಾತನಾಡಿದ್ದಕ್ಕೆ ಅವರು ಉತ್ತರ ಕೊಡುವುದಕ್ಕಾಗುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಂಗಳೂರಿಗೆ ಬರುವಂತಹ ಕೇರಳದವರನ್ನು ಇವತ್ತು ನೋಟೀಸ್ ಕೊಟ್ಟು ಸ್ಟೇಷನ್‌ಗೆ ಕರೆಯಲಾಗುತ್ತಿದೆ. ಹೇಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರೆಯುತ್ತಿದ್ದಾರೆಂದರೆ, ಯಾರು ಒಡವೆ ಅಂಗಡಿ, ಬಿಸನೆಸ್ ಮೆನ್ ಇದ್ದಾರೆ ಅವರಿಗೆಲ್ಲಾ 41(ಎ)ಅಡಿಯಲ್ಲಿ ನೋಟೀಸ್ ಕೊಟ್ಟು ನೀವು ಸ್ಟೇಷನ್‌ಗೆ ಬಂದು ಮತ್ತೆ ನಿಮ್ಮ ಅಂಗಡಿಗೆ ಹೋಗಬೇಕು ಎಂದು ಹೇಳುತ್ತಿದ್ದಾರೆ. ಇದು ಯಾವ ರೀತಿಯ ಕಾನೂನು? ಈ ರೀತಿಯ ಕಾನೂನು ಎಲ್ಲಿಯಾದರೂ ಇದೆಯೇ? ಎರಡನೆಯದು, ಯಾರು ಕೇರಳಿಗರ ಮಕ್ಕಳು ಶಾಲೆಗಳಲ್ಲಿ, ಕಾಲೇಜುಗಳಲ್ಲಿ, ಹಾಸ್ಟೆಲ್‌ಗಳಲ್ಲಿ ಓದುತ್ತಿದ್ದಾರೆಯೋ ಅವರ ಚಲನವಲನವನ್ನು ಪರಿಶೀಲನೆ ಮಾಡಿ ಎಂದು ಪೊಲೀಸ್ ಕಮೀಷನರ್‌ರವರು ಆರ್ಡರ್ ಮಾಡುತ್ತಾರೆ. ನಾವು ಯಾವ ದೇಶದಲ್ಲಿದ್ದೇವೆ?, ನಾವು ಅವರನ್ನು ಕೇಳಿ ಮಾಡಬೇಕೇ, ನಮ್ಮ ಹಕ್ಕನ್ನು, ಜನರ ಹಕ್ಕನ್ನು ಮೊಟಕು ಮಾಡುತ್ತಿದ್ದಾರೆ. ಮೂರನೆಯದು, ಸೆಕ್ಷನ್ 144 ವಿಧಿಸಿರುವ ಕಾರಣಕ್ಕಾಗಿ ಇವೆಲ್ಲಾ ಘಟನೆಗಳು ನಡೆದಿವೆ. CAA (Citizenship Amendment Act), NRC (National Register of Citizens), NPR (National Population Register) ಅನ್ನು ಹತ್ತಿಕ್ಕುವುದಕ್ಕೆ ಪೊಲೀಸರ ಮುಖಾಂತರ ಸೆಕ್ಷನ್ 144 ವಿಧಿಸಿದ್ದಾರೆ. ಸೆಕ್ಷನ್ 144 ವಿಧಿಸಿರುವುದು ಸರ್ವತಃ ತಪ್ಪು ಎಂದು ಹೈಕೋರ್ಟ್ ಹೇಳಿದೆ. ಅಂದರೆ, ತಪ್ಪು ನಮ್ಮದೋ ಅವರದ್ದೋ? ಯಾರು ಈ protest ನಲ್ಲಿ ಸತ್ತಿದ್ದಾರೆ, ಅವರು ಸಾಯುವುದಕ್ಕೆ ಸೆಕ್ಷನ್ 144 ವಿಧಿಸಿರುವುದೇ ಕಾರಣ. ಅವರ ಕುಟುಂಬದವರಿಗೆ ಪರಿಹಾರ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿನ್ನೆ ನಾನು ಮಾತನಾಡಬೇಕಾದರೆ ಮಾನ್ಯ ಸಭಾನಾಯಕರಿಗೆ ಹೇಳಿದ್ದೆ. ದಯಮಾಡಿ ನಾನು ಮಾತನಾಡಿರುವ ಪಾಯಿಂಟ್‌ನ್ನು ನೋಟ್ ಮಾಡಿಕೊಂಡು ನಾಳೆ ಉತ್ತರ ಕೊಡಿಸಬೇಕೆಂದು ಹೇಳಿದ್ದೆ. ನಾನು ನೇರವಾಗಿ ಪ್ರಶ್ನೆಗೆ ಬರುತ್ತೇನೆ, ನಮ್ಮ ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರದಲ್ಲಿ ಹಾಲಿ ಶಾಸಕರೊಬ್ಬರ ಹುಟ್ಟುಹಬ್ಬ ಆಗುತ್ತದೆ. ಆ ಹುಟ್ಟು ಹಬ್ಬದಲ್ಲಿ ಹಾಲಿ ಮಂತ್ರಿಯಾಗಿ ಇರತಕ್ಕಂಥವರು, ಆಗ ಅವರು ಮಂತ್ರಿ ಆಗಿರಲಿಲ್ಲ, ಮೂರು ಜನ ಪೊಲೀಸ್ ಅಧಿಕಾರಿಗಳು ಆ ಹುಟ್ಟು ಹಬ್ಬಕ್ಕೆ ಹೋಗಿ ಬೆಳ್ಳಿ ಗದೆಯನ್ನು ಕೊಡುತ್ತಾರೆ. ಅಷ್ಟು ದುಬಾರಿ ಬೆಲೆ ಬಾಳುವಂತಹ ಬೆಳ್ಳಿ ಗದೆಯನ್ನು ಕೊಡುವುದಕ್ಕೆ ಅವರಿಗೆ ಹಣ ಎಲ್ಲಿಂದ ಬಂತು? ಮತ್ತೆ ಪಕ್ಷದ ಕಾರ್ಯಕರ್ತರ ರೀತಿಯಲ್ಲಿ ಅವರು ಜೈಕಾರಗಳನ್ನು ಕೂಗುತ್ತಾರೆ. ಅವರ ವಿರುದ್ಧ ಯಾವ ರೀತಿಯ ಕ್ರಮವನ್ನು ತೆಗೆದುಕೊಂಡಿದ್ದಾರೆ ಎಂದು ನಾನು ಕೇಳಿದ್ದೆ. ಮತ್ತೊಂದು ಪ್ರಶ್ನೆ ಏನೆಂದರೆ, ಯಾರು ದ್ವೇಷದ ರಾಜಕಾರಣ ಮಾಡುವುದಕ್ಕೆ ಹೊರಟಿದ್ದಾರೆ, ಯಾರು ನಮ್ಮ ಪಕ್ಷದ ಪರವಾಗಿ ಕೆಲಸ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿದರೋ ಅವರ ಮೇಲೆ Atrocity ಕೇಸ್‌ನ್ನು ಹಾಕಿ ಅವರಿಗೆ ಬಹಳಷ್ಟು ತೊಂದರೆ ಕೊಡುತ್ತಿರತಕ್ಕಂಥಾದ್ದು ಜಾಸ್ತಿಯಾಗಿದೆ. ಇದಕ್ಕೆ ಉತ್ತರ ಕೊಡಬೇಕೆಂದು ಕೇಳಿದ್ದೆ. ಇದು ನಮ್ಮ ಕ್ಷೇತ್ರದಲ್ಲಿ ಆಗಿರುವಂಥದ್ದು. ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರದಲ್ಲಿ ನಾನು ಚುನಾವಣೆಗೆ ನಿಂತಂಥ ಸಂದರ್ಭದಲ್ಲಿ ನನ್ನ ಪರವಾಗಿ ಕೆಲಸ ಮಾಡಿದಂತಹ ಕಾರ್ಯಕರ್ತನನ್ನು ನಮ್ಮ ಪಕ್ಷಕ್ಕೆ ಬರಬೇಕೆಂದು ಕೇಳುತ್ತಾರೆ. ಇಲ್ಲ, ನಮ್ಮ ಪಕ್ಷಕ್ಕೆ ದ್ರೋಹ ಮಾಡಿ ಬೇರೆ ಪಕ್ಷಕ್ಕೆ ನಿಮ್ಮ ಜೊತೆಯಲ್ಲಿ ಬರುವುದಿಲ್ಲ ಎಂದು ಹೇಳುತ್ತಾರೆ. ಅವನ ಮೇಲೆ ಬೇಕಂತಲೇ ಸುಳ್ಳು ಕೇಸ್‌ನ್ನು ಹಾಕಿ Atrocity ಕೇಸ್ ಹಾಕಿ 50 ದಿನದಿಂದ ಆತನಿಗೆ ಬೇಲ್ ಸಿಗದೆ ಮನೆಬಿಟ್ಟು ಇವತ್ತು ಹೊರಗಡೆ ಹೋಗಿದ್ದಾನೆ. ಇಂತಹದ್ದು ಬೇಕಾದಷ್ಟು ಪ್ರಕರಣಗಳು ನಡೆಯುತ್ತಿವೆ. ಇದರ ಬಗ್ಗೆ ಮಾನ್ಯ ಗೃಹ ಸಚಿವರು ಉತ್ತರ ಕೊಡಬೇಕು.

**ಶ್ರೀ ಕೆ.ಅಬ್ದುಲ್ ಜಬ್ಬಾರ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ಮಾನ್ಯ ಗೃಹ ಸಚಿವರಿಗೆ ಕೇಳುವುದೇನೆಂದರೆ, ನಿನ್ನೆ ಕೆಳಮನೆಯಲ್ಲಿ ಅವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ, 'ಬಸವರಾಜ.ಎಸ್.ಬೊಮ್ಮಾಯಿಯವರಿಗೆ ದುಬೈಯಿಂದ ಬೆದರಿಕೆಯ ಕಾಲ್' ಮತ್ತು 'CAA ವಿರುದ್ಧ ಹೋರಾಟಕ್ಕೆ ಅಪಾರ ಆರ್ಥಿಕ ನೆರವು ಹೊರಗಡೆ ದೇಶದಿಂದ ಬರುತ್ತಿದೆ' ಎಂದು ಇದೆ. ಅದಕ್ಕೆ ನಾನು ಮಾನ್ಯ ಗೃಹ ಸಚಿವರಿಗೆ ಕೇಳುತ್ತೇನೆ, ಇದು ಯಾರ ಕಡೆಯಿಂದ ಬರುತ್ತಿದೆ, ಎಲ್ಲಿಗೆ ಬಂದಿದೆ, ನಿಮಗೆ ಹೇಗೆ ಪ್ರೂಫ್ ಸಿಕ್ಕಿದೆ, ಯಾರಿಂದ ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಫೋನ್ ಬಂದಿದೆ. ಫೋನ್‌ಗಳು ಬಂದ ಮೇಲೆ ಅವರ ಫೋನ್ ನಂಬರ್‌ಗಳು ನಿಮಗೆ ಬಂದಿರಬಹುದು. ಅವರನ್ನು ನೀವು ಯಾವುದೇ ಕಾರಣಕ್ಕೂ ಬಿಡಬಾರದು. ಹೇಗೆ ಹಣ ಬಂತು, ಯಾವ ದೇಶದಿಂದ ಬಂತು, ಯಾರಿಗೆ ಬಂದಿದೆ, ಅದು ತನಿಖೆಯಾಗಬೇಕು. ಏಕೆಂದರೆ, ಇದು ಸುಳ್ಳು ಆಗಿದ್ದರೆ ಜನರಿಗೆ ತಪ್ಪು ಸಂದೇಶ ಹೋಗುತ್ತದೆ.

**ಶ್ರೀ ನಸೀರ್ ಅಹ್ಮದ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾಕಷ್ಟು ಚರ್ಚೆಯಾಗಿದೆ. ಈ ಮನೆಯಲ್ಲಿ ಚರ್ಚೆ ಮಾಡಬೇಕಾದರೆ ಸ್ವಲ್ಪ ತಾಳ್ಮೆಯಿಂದ ಎಲ್ಲರು ಸಹಕರಿಸಬೇಕು. ಪ್ರತ್ಯೇಕವಾಗಿ ಆಡಳಿತ ಪಕ್ಷದಲ್ಲಿರುವಂತಹ ಜನ ಅವಕಾಶವನ್ನು ಕೂಡ ಮಾಡಿಕೊಡಬೇಕು. ಈಗಾಗಲೇ ಮಾನ್ಯ ಗೃಹ ಮಂತ್ರಿಗಳು ಸಾಕಷ್ಟು ವಿಸ್ತಾರವಾಗಿ ಉತ್ತರ ಕೊಟ್ಟಿದ್ದಾರೆ. ನಿನ್ನೆ ನಾವು ಮಾತನಾಡಬೇಕಾದರೆ ಕೆಲವು ವಿಚಾರಗಳನ್ನು ಹೇಳಿದ್ದೇವೆ. ಒಂದು ಪ್ರತಿಭಟನೆ ಮಾಡಬೇಕಾದರೆ ಪೊಲೀಸರು ಈಗ ಹೊಸದಾಗಿ ಒಂದು ಬಾಂಡ್ ಕೊಡಿ ಎಂದು ಕೇಳುತ್ತಿದ್ದಾರೆ. ಇಲ್ಲದಿದ್ದರೆ ಒಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Undertaking ಕೊಡಿ ಎಂದು ಕೇಳುತ್ತಿದ್ದಾರೆ. ಯಾವ ನಿಯಮದಡಿಯಲ್ಲಿ ಬಾಂಡ್ ಕೊಡಬೇಕು? ದಲಿತರು ಪ್ರದರ್ಶನ ಮಾಡಬೇಕೆಂದರೆ ಅವರು ಹತ್ತು ಲಕ್ಷ ರೂಪಾಯಿ ತಂದು ಬಾಂಡ್ ಕೊಡುವುದಕ್ಕೆ ಎಲ್ಲಿ ಅವಕಾಶ ಇದೆ? ಯಾವ ರೀತಿ Undertaking ಕೊಡಬೇಕು? ಅದರ ಬಗ್ಗೆ ದಯವಿಟ್ಟು ಮಾನ್ಯ ಗೃಹ ಸಚಿವರು ಹೇಳಬೇಕು.

(ಮುಂದು)

(094)/20.02.2020/3.50/ಬಿಕೆಪಿ(ಹೆಚ್‌ವಿ)-ಬಿಎನ್‌ಎಸ್
**ಶ್ರೀ ನಸೀರ್ ಅಹ್ಮದ್(ಮುಂದುವರೆದದ್ದು)**

ಸನ್ಮಾನ್ಯ ಸಭಾಪತಿಯವರೇ, ಸರ್ಕಾರ, ಮಾನ್ಯ ಮಂತ್ರಿಗಳು ಮತ್ತು ಇಲಾಖೆ ಇವರುಗಳೆಲ್ಲ ಒಂದು ಕಡೆಯಾದರೆ, ನಮ್ಮೆಲ್ಲರಿಗೂ ಸಾಮಾನ್ಯಜ್ಞಾನ ಬುದ್ಧಿವಂತಿಕೆ ಎನ್ನುವುದು ಇದೆ. ಯಾವ ರೀತಿ ಗಲಭೆಯಾಗಿದೆ, ಯಾವ ರೀತಿ ಆಗಿಲ್ಲ, ತಪ್ಪಾಗಿದೆಯೋ-ಸರಿಯಾಗಿದೆಯೋ ಎನ್ನುವುದರ ಬಗ್ಗೆ ನಾವೆಲ್ಲ ಆಲೋಚನೆ ಮಾಡುತ್ತೇವೆ. ಇದರಿಂದ ಒಂದು ಚಿತ್ರಣ ನಮಗೆ ದೊರೆಯುತ್ತದೆ. ಅವರು ಸಹ ಅದನ್ನು ಅರ್ಥ ಮಾಡಿಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ಜನರಿಗೆ ಮತ್ತು ಸಮಾಜಕ್ಕೆ ಒಂದು ಒಳ್ಳೆಯ ಸಂದೇಶ ಹೋಗಬೇಕಾಗಿದೆ. ಯಾರು ತಪ್ಪಿತಸ್ಥ ಪೊಲೀಸ್ ಅಧಿಕಾರಿಗಳಿದ್ದಾರೆ ಅವರನ್ನು ಕಡೆಪಕ್ಷ ಸರ್ಕಾರ ವರ್ಗಾವಣೆಯನ್ನಾದರೂ ಮಾಡಬೇಕಾಗಿದೆ. ಬೀದರ್ ಜಿಲ್ಲೆಯಲ್ಲಿರುವ concerned Police Officers have acted beyond their limits. ಅಂಥಹವರನ್ನು ಸಸ್ಪೆಂಡ್ ಮಾಡಿದ್ದರೆ ಜನರಿಗೆ ಒಂದು ಒಳ್ಳೆಯ ಸಂದೇಶ ಹೋಗುತ್ತಿತ್ತು. ಅದೇ ರೀತಿ ಮಂಗಳೂರು ಗಲಭೆಯಲ್ಲಿ ನಡೆದ ಘಟನೆಗಳು ವಿಡಿಯೋದಲ್ಲಿ ರೆಕಾರ್ಡ್ ಆಗಿದೆ. ಯು-ಟ್ಯೂಬ್‌ನಲ್ಲಿ ಕಾಣಿಸುತ್ತಿದೆ, ಫೋಟೋಗ್ರಾಫಿಯಾಗಿದೆ. ಈ ಗಲಭೆಯಲ್ಲಿ, ಒಬ್ಬರು ಷರೀಫ್ ಎನ್ನುವ ಮುಸ್ಲಿಂ ಇನ್ಸ್‌ಪೆಕ್ಟರ್ ಮತ್ತೊಬ್ಬರು ಶಾಂತಕುಮಾರ್ ಎನ್ನುವ ಇಬ್ಬರು ಪೊಲೀಸ್ ಇನ್ಸ್‌ಪೆಕ್ಟರ್‌ಗಳು, 'ಗೋಲಿ ಹೊಡೆದರೂ ಯಾರೂ ಸತ್ತಿಲ್ಲವಲ್ಲ' ಎಂದು ಓಪನ್ ಆಗಿ ಹೇಳುತ್ತಾರೆ. ಸರ್ಕಾರದವರಿಗೆ ಇದಕ್ಕಿಂತ ಹೆಚ್ಚಿನ ಸಾಕ್ಷ್ಯಾಧಾರಗಳು ಬೇಕೇ? ಇಂತಹ ಅಧಿಕಾರಿಗಳನ್ನು ವರ್ಗಾವಣೆ ಅಥವಾ ಸಸ್ಪೆಂಡ್ ಮಾಡಿದರೆ, 'ತಪ್ಪು ಮಾಡಿದವರಿಗೆ ಶಿಕ್ಷೆ ದೊರೆಯುತ್ತದೆ' ಎನ್ನುವ ಒಳ್ಳೆಯ ಸಂದೇಶ ಈ ರಾಜ್ಯಕ್ಕೆ ಮತ್ತು ಸಮಾಜಕ್ಕೆ ರವಾನೆಯಾಗುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ನಾನು ಸರ್ಕಾರಕ್ಕೆ ನೇರವಾಗಿ ಎರಡು ಪ್ರಶ್ನೆಗಳನ್ನು ಮಾತ್ರ ಕೇಳುವುದಕ್ಕೆ ಬಯಸುತ್ತಿದ್ದೇನೆ. ಮಂಗಳೂರು ಗಲಭೆ ಇಬ್ಬರನ್ನು ಬಲಿ ತೆಗೆದುಕೊಂಡಿದೆ. ಇವರಿಗೆ ಪರಿಹಾರವನ್ನು ಸರ್ಕಾರ ಘೋಷಣೆ ಮಾಡಿದೆ. ಮಾನವೀಯತೆಯ ಹಿನ್ನೆಲೆಯಲ್ಲಿ ಘೋಷಣೆ ಮಾಡಿರುವ ಪರಿಹಾರವನ್ನು ಸರ್ಕಾರ ನೀಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಹೈಕೋರ್ಟ್‌ನಲ್ಲಿ ಆಗಿರುವ ಅಬ್ಸರ್ವೇಷನ್ ಪತ್ರಿಕೆಗಳಲ್ಲಿ ಸಹ ಪ್ರಕಟವಾಗಿದೆ. ನಾನು ಅದನ್ನು ಓದುವುದಕ್ಕೆ ಹೋಗುವುದಿಲ್ಲ. 'ಪೊಲೀಸರು ಅಮಾಯಕರ ಮೇಲೆ ಕೇಸ್ ಹಾಕಿದ್ದಾರೆ– ಹೈಕೋರ್ಟ್' ಈ ಅಬ್ಸರ್ವೇಷನ್ ತುಂಬಾ ವಂಡರ್‌ಫುಲ್ ಆಗಿದೆ. ಜನರು ಕೊಟ್ಟಂತಹ ಯಾವುದೇ ದೂರುಗಳು ದಾಖಲಾಗಿಲ್ಲ. ಪೊಲೀಸರು ಸ್ವಯಂಪ್ರೇರಿತರಾಗಿ ದಾಖಲು ಮಾಡಿರುವ ದೂರುಗಳು ಮಾತ್ರ ದಾಖಲಾಗಿವೆ. ಎಲ್ಲೋ ಒಂದು ಕಡೆ ಅಮಾಯಕರ ಮೇಲೆ ಮೊಕದ್ದಮೆ ಹೂಡಿರುವುದು ಕಂಡುಬಂದಿದೆ. ಆ ಕಾರಣಕ್ಕಾಗಿ ಜಾಮೀನು ನೀಡಲಾಗಿದೆಯೆಂದು ನಿನ್ನೆ ಹೈಕೋರ್ಟ್ ಆದೇಶ ನೀಡಿದೆ. ಗ್ಯಾರೇಜ್ ಬಾಗಿಲು ಹಾಕುತ್ತಿರುವ ಒಬ್ಬ ವ್ಯಕ್ತಿ, ಮಗುವನ್ನು ಕರೆದುಕೊಂಡು ಹೋಗಿ ಮನೆಗೆ ಬಿಟ್ಟು ಬರುತ್ತಿರುವ ಮತ್ತೊಬ್ಬ ವ್ಯಕ್ತಿ ಇಬ್ಬರು ಸತ್ತಿದ್ದಾರೆ. ಸತ್ತ ವ್ಯಕ್ತಿಗಳಿಗೆ ಸರ್ಕಾರ ಪರಿಹಾರ ನೀಡುವುದಾಗಿ ಘೋಷಣೆ ಮಾಡಿದ ಮೇಲೆ ಅದನ್ನು ಕೊಡುವಂತಹದು ಒಂದು ನಾಗರಿಕ ಸರ್ಕಾರದ ಜವಾಬ್ದಾರಿಯಾಗಿದೆ ಎನ್ನುವುದು ನನ್ನ ಭಾವನೆಯಾಗಿದೆ. ಘೋಷಣೆ ಮಾಡಿರುವ ಪರಿಹಾರವನ್ನು ನೀಡುವುದು ಸರ್ಕಾರದ ಆದ್ಯ ಕರ್ತವ್ಯವಾಗಬೇಕೆನ್ನುವುದು ನನ್ನ ಒತ್ತಾಯವಾಗಿದೆ.

ಎರಡನೆಯದಾಗಿ, ಈ ಸದನದಲ್ಲಿ ಮಂಗಳೂರು ಗೋಲಿಬಾರ್ ಗಲಭೆಯ ಬಗ್ಗೆ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಈ ಸದನದ ಎರಡೂ ಭಾಗದ ಸದಸ್ಯರು ಸಾಕಷ್ಟು ಭಾವಚಿತ್ರಗಳ ಪ್ರದರ್ಶನವನ್ನು ನಡೆಸಿದರು. ಪೊಲೀಸರು ಮತ್ತು ಜನರು ಲಾಠಿ, ಕಲ್ಲುಗಳನ್ನು ಮತ್ತು ಟಿಯರ್ ಗ್ಯಾಸ್ ಹಿಡಿದುಕೊಂಡಿರುವ ಭಾವಚಿತ್ರಗಳನ್ನು ಪ್ರದರ್ಶನ ಮಾಡಿದರು. ಜನರಿಗೆ ಇಲ್ಲಿ ಏನು ನಡೆಯಿತು, ಸತ್ಯ ಯಾವುದು ಎನ್ನುವುದು ಅರ್ಥವಾಗಬೇಕಾಗುತ್ತದೆ. ಮಾನ್ಯ ಗೃಹ ಸಚಿವರು ಉತ್ತರವನ್ನು ನೀಡುತ್ತಿದ್ದ ಸಂದರ್ಭದಲ್ಲಿ 'ಸರ್ಕಾರ ಈ ಗಲಭೆಗೆ ಸಂಬಂಧಪಟ್ಟಂತೆ ಎಲ್ಲ ರೀತಿಯ ತನಿಖೆಗೂ ಸಿದ್ಧವಿದೆ' ಎನ್ನುವ ಮಾತನ್ನು ಹೇಳಿದ್ದಾರೆ. ಇದು ಬಹಳ ಒಳ್ಳೆಯ ನಿರ್ಧಾರವಾಗಿದೆ. ಒಬ್ಬ ಸಾಮಾನ್ಯ ಪ್ರಜೆಯಾಗಿ ನಾನು ಕೇಳುತ್ತಿದ್ದೇನೆ. ಅಲ್ಲಿ ಏನು ನಡೆಯಿತು ಎನ್ನುವ ವಾಸ್ತವಾಂಶ ಜನರಿಗೆ ಗೊತ್ತಾಗಬೇಕಾಗಿದೆ. ಮ್ಯಾಜಿಸ್ಟ್ರೇಟ್‌ನವರಿಂದ ತನಿಖೆ ನಡೆಸಿದರೆ ಡೆಪ್ಯುಟಿ ಕಮೀಶನರ್‌ರವರು ಸರ್ಕಾರದ ಪರವಾಗಿ ವರದಿ ಕೊಡುತ್ತಾರೆ. ಸಿ.ಐ.ಡಿ. ತನಿಖೆಯಾದರೆ ಸರ್ಕಾರದ ಪರವಾಗಿ ಅಥವಾ ಪೊಲೀಸ್ ಇಲಾಖೆಯ ಪರವಾಗಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರದಿಯನ್ನು ಕೊಡುತ್ತಾರೆ. ಸರ್ಕಾರ ದಯಮಾಡಿ ಕಾಂಗ್ರೆಸ್, ಜೆ.ಡಿ.(ಎಸ್) ಮತ್ತು ಬಿ.ಜೆ.ಪಿ., ಮೂರು ಪಕ್ಷದ ಸದಸ್ಯರನ್ನೊಳಗೊಂಡ ಒಂದು ಸದನ ಸಮಿತಿಯನ್ನು ರಚನೆ ಮಾಡಲಿ. ಅದರಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರೇ ಹೆಚ್ಚಿನ ಸಂಖ್ಯೆಯಲ್ಲಿ ಇರಲಿ, ಇದರ ಬಗ್ಗೆ ನಮಗೇನೂ ಅಡ್ಡಿ ಇಲ್ಲ. ವಾಸ್ತವಾಂಶ ಏನು ಎನ್ನುವುದು ಈ ನಾಡಿನ ಜನರಿಗೆ ಗೊತ್ತಾಗಲಿ. ಮಾನ್ಯ ಗೃಹ ಸಚಿವರು ಯಾವುದೇ ತನಿಖೆಗೆ ನಾವು ಸಿದ್ಧರಿದ್ದೇವೆ ಎಂದು ಹೇಳಿರುವುದರಿಂದ ದಯಮಾಡಿ ಸದನ ಸಮಿತಿ ರಚನೆಗೆ ಅನುಮತಿ ನೀಡಬೇಕೆಂದು ಕೇಳಿಕೊಳ್ಳುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಆಯ್ಕೆಯಾದವರು):-** ಸನ್ಮಾನ್ಯ ಸಭಾಪತಿಯವರೇ, ಬೀದರ್‌ನ ಶಾಹಿನ್ ಶಿಕ್ಷಣ ಸಂಸ್ಥೆಯಲ್ಲಿ ನಡೆದಂತಹ ನಾಟಕದ ದೃಶ್ಯವನ್ನು ಒಬ್ಬ ಪತ್ರಕರ್ತ ಫೇಸ್‌ಬುಕ್‌ನಲ್ಲಿ ಅಪ್‌ಲೋಡ್ ಮಾಡಿರುವುದಕ್ಕಾಗಿ ಆತನ ಮೇಲೆ punishment for Sedition ಪ್ರಕಾರ ಪ್ರಕರಣ ದಾಖಲು ಮಾಡಲಾಗಿದೆ. ಇದರ ಬಗ್ಗೆ ಸರ್ಕಾರ ಯಾವ ನಿಲುವನ್ನು ತೆಗೆದುಕೊಂಡಿದೆ ಎನ್ನುವುದು ನಮಗೆ ಗೊತ್ತಾಗಿಲ್ಲ. ಇದುವರೆವಿಗೂ ಆ ಪತ್ರಕರ್ತ ಕಾಣೆಯಾಗಿದ್ದಾನೆ. ಇದರ ಜೊತೆಗೆ ವಿಡಿಯೋಗ್ರಾಫರ್‌ಗೆ ಪೊಲೀಸಿನವರು threaten ಮಾಡಿದ್ದಾರೆ. ಆತನೂ ಇಲ್ಲಿಯವರೆಗೆ ಕಾಣೆಯಾಗಿದ್ದಾನೆ. ನಾಟಕ ಮಾಡಿದಂತಹ ವಿದ್ಯಾರ್ಥಿಯ ತಾಯಿ ಮತ್ತು ಟೀಚರ್ ಮೇಲಿನ ಕೇಸ್ ಕೋರ್ಟ್ ಮುಂದೆ ಇರುವುದರಿಂದ ಅದರ ಬಗ್ಗೆ ಏನೂ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಮಾನ್ಯ ಗೃಹ ಸಚಿವರು ಹೇಳಿದ್ದಾರೆ. ನಾಟಕದ ದೃಶ್ಯವನ್ನು ಫೇಸ್‌ಬುಕ್‌ನಲ್ಲಿ ಅಪ್‌ಲೋಡ್ ಮಾಡಿದ ಪತ್ರಕರ್ತನ ಬಗ್ಗೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಳ್ಳುತ್ತದೆ ಎನ್ನುವುದನ್ನು ಮಾನ್ಯ ಗೃಹ ಸಚಿವರು ತಿಳಿಸಬೇಕಾಗಿದೆ.

**ಶ್ರೀ ಪ್ರಕಾಶ್ ಕೆ. ರಾಥೋಡ್(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಸಾಕಷ್ಟು ವಿವರವಾಗಿ ಉತ್ತರವನ್ನು ನೀಡಿದ್ದಾರೆ. ಸೆಕ್ಷನ್ 144 ಅನ್ನು ಹಲವಾರು ಸರ್ಕಾರಗಳು ಹಂತಹಂತವಾಗಿ ಜಾರಿ ಮಾಡಿವೆ ಎನ್ನುವ ಮಾತನ್ನು ಮಾನ್ಯ ಗೃಹ ಸಚಿವರು ಹೇಳಿದ್ದಾರೆ. ಆದರೆ, ಹೈಕೋರ್ಟ್ ಈ ಕೆಳಕಂಡಂತೆ ಹೇಳಿದೆ:

*"The Karnataka High Court's ruling that the imposition of Section 144 by the Bengaluru Police Commissioner in the City in December was illegal should serve as a warning to the police against excessive zeal in acting against protests*

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

> *by the people. The police had withdrawn permission that had earlier been granted for holding protests against the Citizenship Amendment Act (CAA) and imposed ban orders in the city from December 18 to 21 on grounds that the court has now found wrong and unacceptable. . . .* " ಎಂದು ಹೇಳಿದೆ. ಮುಂದುವರೆದು,

> *". . . The ruling and the court's observations amount to an indictment of the decision of the city police. They should serve as a guide before such decisions are taken in future. In many parts of the country protests are being prohibited or protesters are being subjected to police action or violence by others while the police look on as spectators. The police have often read and acted on the script written by the BJP governments at the Centre and in the States. . . ."*

ಎಂದು ಹೈಕೋರ್ಟ್ ಹೇಳಿದೆ. ಮುಂಜಾಗ್ರತಾ ಕ್ರಮವಾಗಿ ಸೆಕ್ಷನ್ 144 ಅನ್ನು ಜಾರಿಗೊಳಿಸಲಾಗಿತ್ತು ಎನ್ನುವ ವಾದವನ್ನು ಮಾನ್ಯ ಗೃಹ ಸಚಿವರು ಮಾಡುತ್ತಿದ್ದಾರೆ ಅದು ತಪ್ಪು ಎಂದು ಕೋರ್ಟ್ ಹೇಳುತ್ತಿದೆ. ಹಿಂದೂ ಮತ್ತು ಮುಸ್ಲಿಂರ ನಡುವೆ ದ್ವೇಷದ ವಾತಾವರಣವನ್ನುಂಟು ಮಾಡುವುದಕ್ಕೆ ಈ ಸರ್ಕಾರ ಸೆಕ್ಷನ್ 144 ಅನ್ನು ಮಂಗಳೂರಿನಲ್ಲಿ ಜಾರಿಗೊಳಿಸಿದೆ. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಪೌರತ್ವ ತಿದ್ದುಪಡಿ ಕಾಯಿದೆ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ, 'it is a process of Naturalisation' ಎಂದು ಹೇಳಿದ್ದಾರೆ. ಪೌರತ್ವ ತಿದ್ದುಪಡಿ ಕಾಯಿದೆಯನ್ನು ಅವರು ಓದಿದ್ದಾರೆಂದು ನಾನು ಭಾವಿಸುತ್ತೇನೆ. ನಾನು ಸಹ ಓದಿದ್ದೇನೆ. It is not a process. The relevant portion of the Citizenship Amendment Act reads thus:

> *" . . . Provided that any person belonging to Hindu, Sikh, Buddhist, Jain, Parsi or Christian community from Afghanistan, Bangladesh or Pakistan, who entered into India on or before the 31st day of December, 2014 and who has been exempted by the Central Government by or*

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*under clause (c) of sub-section (2) of section 3 of the Passport (Entry into India) Act, 1920 . . ."*

ಎಂದು ಇದೆ. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಸಚಿವರು ಪೌರತ್ವ ತಿದ್ದುಪಡಿ ಕಾಯಿದೆ ಬಗ್ಗೆ ಕೊಟ್ಟಿರುವಂತಹ ಸ್ಪಷ್ಟೀಕರಣ ತಪ್ಪಾಗಿದೆ ಎನ್ನುವ ಅಂಶವನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ಅವರು ಏನು ವ್ಯಾಖ್ಯಾನ ಮಾಡುತ್ತಾರೆ ಮಾಡಲಿ, ನಾವು ನಮ್ಮ ವಾದವನ್ನು ಹೇಳುತ್ತೇವೆ. ಪ್ರಕರಣ ಕೋರ್ಟ್‌ನಲ್ಲಿದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಬಹಳ ವಿಸ್ತೃತವಾಗಿ ಉತ್ತರವನ್ನು ಹೇಳಿದ್ದಾರೆ. ನಾವು ಕೂಡ ತಾಳ್ಮೆಯಿಂದ ಅವರು ಹೇಳಿದಂತಹ ವಿಚಾರಗಳನ್ನು ಕೇಳಿದ್ದೇವೆ. 'ನಿಮ್ಮ ಭಾವನೆಗಳನ್ನು ಅರ್ಥ ಮಾಡಿಕೊಂಡಿದ್ದೇನೆ' ಎಂದು ಅವರು ಹೇಳಿದ್ದಾರೆ. ಮುಂದಿನ ದಿನಗಳಲ್ಲಿ ನಮ್ಮ ಭಾವನೆಗಳ ಪ್ರಕಾರ ಅವರು ನಡೆದುಕೊಳ್ಳುತ್ತಾರೆನ್ನುವ ವಿಶ್ವಾಸ ಮತ್ತು ನಂಬಿಕೆ ನಮಗಿದೆ. ನಾನು ತಮ್ಮ ಮೂಲಕ ಮಾನ್ಯ ಗೃಹ ಸಚಿವರಲ್ಲಿ ಕೇಳುವುದೇನೆಂದರೆ, ಡಿಸೆಂಬರ್ 19ನೇ ತಾರೀಖಿನಂದು ಗಲಭೆ ಒಂದು ಕಡೆ ನಡೆದಿಲ್ಲ. ಜಿಲ್ಲಾಧಿಕಾರಿಗಳ ಕಛೇರಿ ಮುಂದೆ, ಸ್ಟೇಟ್ ಬ್ಯಾಂಕ್ ಹತ್ತಿರ ಮೊದಲು ನಡೆದಿದೆ ನಂತರ ನೆಲ್ಲಿಕಾಯಿ ಪ್ರದೇಶದಲ್ಲಿ ನಡೆದಿದೆ. ತದನಂತರ ಬಂದರು ಪ್ರದೇಶದಲ್ಲಿ ನಡೆದಿದೆ. Police Drill Manual ಪ್ರಕಾರ ಇವರು ವರ್ತಿಸಲಿಲ್ಲವೆಂದು ನಾನು ಹೇಳುತ್ತಿದ್ದೇನೆ. Police have committed a wrong thing. Police Drill Manual ಪ್ರಕಾರ ಮೊದಲು ವಾರ್ನಿಂಗ್ ಕೊಡಬೇಕು, ನಂತರ ವಾರ್ನಿಂಗ್‌ಗೆ ಜನರ ಗುಂಪು ಚದುರಲಿಲ್ಲವೆಂದರೆ ಅಶ್ರುವಾಯು ಪ್ರಯೋಗ ಮಾಡಬೇಕು. ಅದಕ್ಕೂ ಜನರು ಚದುರಲಿಲ್ಲವೆಂದರೆ ಲಾಠಿಚಾರ್ಜ್ ಮಾಡಬೇಕು. ಅದಕ್ಕೂ ಗುಂಪು ಚದುರಲಿಲ್ಲವೆಂದರೆ, ಮೊದಲು ವಾರ್ನಿಂಗ್ ಕೊಟ್ಟು ನಂತರ ಫೈರಿಂಗ್ ಮಾಡಬೇಕು.

(ಮುಂದುವರಿದಿದೆ)

**(095) 20.02.2020 04.00 ಎಸ್‌ವಿ-ಕೆಎಸ್**
**ಶ್ರೀ ಎಸ್.ಆರ್.ಪಾಟೀಲ್ (ಮುಂದು)**

ಏಕೆಂದರೆ ಈ ಮೂರು ಕ್ಷೇತ್ರಗಳು ಬೇರೆ ಬೇರೆ ಇದೆ. ಒಂದಕ್ಕೊಂದು connect ಮಾಡಲಿಕ್ಕೆ ಬರುವುದಿಲ್ಲ. ಬಂದರು ಪ್ರದೇಶದಲ್ಲಿ ಮೊದಲಿಗೆ ಎಚ್ಚರಿಕೆಯನ್ನು ಕೊಟ್ಟು, ಅಶ್ರುವಾಯುವನ್ನು ಪ್ರಯೋಗ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕು. ನಂತರ ಪುನಃ ಎಚ್ಚರಿಕೆಯನ್ನು ಕೊಟ್ಟು ಲಾಠಿಚಾರ್ಜ್ ಮಾಡಬೇಕು. ತದನಂತರ, crowd disperse ಆಗುವುದಿಲ್ಲವೆಂದಾಗ ಫೈರಿಂಗ್‌ಗೆ ಹೋಗಬೇಕಿತ್ತು. Police Drill Manual apply ಮಾಡದೆ ಪೊಲೀಸರು ನಿಶ್ಚಿತವಾಗಿ, the Police have committed an access. ಗೋಲಿಬಾರ್‌ನ ಅವಶ್ಯಕತೆ ಇರಲಿಲ್ಲ. ಗೋಲಿಬಾರ್ ಇಲ್ಲದೆ ಈ ಗಲಭೆಯನ್ನು ನಿಯಂತ್ರಣ ಮಾಡುವುದು ಸಾಧ್ಯವಿತ್ತು. ಅಥವಾ ಪೊಲೀಸ್ ಕಾಯ್ದೆಯ ಪ್ರಕಾರ ದಸ್ತಗಿರಿಯನ್ನು ಮಾಡಬಹುದಿತ್ತು. ಅಶ್ರುವಾಯುವನ್ನು ಸಿಡಿಸುವ ಮೂಲಕವೇ ನಿಯಂತ್ರಣಕ್ಕೆ ತರಬಹುದಿತ್ತು. Definitely, the Police have committed an access and have taken wrong a decision. ಪೊಲೀಸರು ಗೋಲಿಬಾರ್ ಮಾಡುವುದರಿಂದ ಇಬ್ಬರು ಮುಗ್ಧರಷ್ಟೇ ಅಲ್ಲದೆ ಅನೇಕ ಜನ ಗಾಯಗೊಂಡಿದ್ದಾರೆ. ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಬಹಳಷ್ಟು ಹಾನಿಯಾಗಿದೆ. ಇದಕ್ಕೆ ಪೊಲೀಸರು ನೇರವಾಗಿ ಹೊಣೆಗಾರರು ಎನ್ನುವಂತಹ ಮಾತನ್ನು ಹೇಳಬಯಸುತ್ತೇನೆ. ಈಗಾಗಲೇ ಮಾತನಾಡಿರುವ ನನ್ನ ಸ್ನೇಹಿತರ ಮಾತುಗಳನ್ನು ನಾನು ಪುನರಾವರ್ತನೆ ಮಾಡುವುದಕ್ಕೆ ಹೋಗುವುದಿಲ್ಲ. ಪೊಲೀಸರು ಕೈಯಲ್ಲಿ **XXX** ಬಗ್ಗಿ **XXX** ಎತ್ತಿಕೊಳ್ಳುತ್ತಿರುವ ಸಾಕಷ್ಟು ಭಾವಚಿತ್ರಗಳನ್ನು ಈಗಾಗಲೇ ಇಲ್ಲಿ ಪ್ರದರ್ಶಿಸಲಾಗಿದೆ. ಪೊಲೀಸರು **XXX** The CCTV camera has captured all those footages. ಆ ದೃಶ್ಯಾವಳಿಯನ್ನು ನೋಡಿ ತಪ್ಪಿತಸ್ಥ ಪೊಲೀಸರು ಯಾರಿದ್ದಾರೆಯೋ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು. All Police Officials have acted sincerely, promptly and honestly ಎಂದು ನಾನು ಹೇಳುವುದಿಲ್ಲ, ತಪ್ಪಿತಸ್ಥ ಪೊಲೀಸ್ ಅಧಿಕಾರಿಗಳು ಯಾರೇ ಇರಲಿ, ಅವರ ಮೇಲೆ ನಿರ್ದಾಕ್ಷಿಣ್ಯವಾದ ಕ್ರಮ ಕೈಗೊಳ್ಳಬೇಕು. ಆಡಿಯೋ ಅನ್ನು ಸಹ ನಾನು ಕೇಳಿದ್ದೇನೆ. ಆಡಿಯೋದಲ್ಲಿ 'ಒಂದಾಗಲಿ, ಎರಡಾಗಲಿ ಹೆಣ ಬೀಳಲಿ' ಎಂದು ಹೇಳುತ್ತಾರೆ. ಪೊಲೀಸರು ಬಗ್ಗಿ **XXX** ಎತ್ತಿಕೊಳ್ಳುತ್ತಿರುವ ಚಿತ್ರವಿದೆ. ಜನರ ಮೇಲೆ **XXX** ಪೊಲೀಸರ ಕೆಲಸವೇನು? ಪ್ರತಿಭಟನೆ ಮಾಡುವವರು **XXX** ಅವರ ವಿರುದ್ಧ ಪ್ರಕರಣವನ್ನು ದಾಖಲಿಸಲಾಗುತ್ತದೆ. ಆದರೆ ಇಲ್ಲಿ ಪೊಲೀಸರ ಮೇಲೆ ಯಾರು ಕ್ರಮ ಕೈಗೊಳ್ಳುತ್ತಾರೆ?

---

**(XXX ಸಭಾಪತಿಯವರ ಆದೇಶಾನುಸಾರ ತೆಗೆದು ಹಾಕಲಾಗಿದೆ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರವೇ ಕ್ರಮ ಕೈಗೊಳ್ಳಬೇಕು. ಈಗಾಗಲೇ ಗೌರವಾನ್ವಿತ ಮುಖ್ಯಮಂತ್ರಿಗಳು 21ನೇ ತಾರೀಖಿನಂದು ಮೃತರ ಕುಟುಂಬ ಸದಸ್ಯರಿಗೆ ರೂ. 10 ಲಕ್ಷ ಪರಿಹಾರವನ್ನು ಘೋಷಣೆ ಮಾಡಿದ್ದರು. ಪುನಃ 24ನೇ ತಾರೀಖಿನಂದು ಪರಿಹಾರವನ್ನು ನೀಡಲಾಗುವುದಿಲ್ಲ ಎಂದು ಘೋಷಣೆಯನ್ನು ಮಾಡಿದ್ದಾರೆ. ಆದ್ದರಿಂದ ಮಾನವೀಯತೆಯ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಯವರು ಮಾತು ಕೊಟ್ಟಂತೆ ಪರಿಹಾರವನ್ನು ಘೋಷಿಸಬೇಕು. ಮಾನ್ಯ ಮುಖ್ಯಮಂತ್ರಿಯವರು ಬಸವಾದಿ ಸಂಪ್ರದಾಯದಲ್ಲಿ ಬಂದವರಾಗಿದ್ದು, ನುಡಿದಂತೆ ನಡೆದುಕೊಳ್ಳಬೇಕು. ನಡೆ–ನುಡಿಯನ್ನು ಒಂದು ಮಾಡಿಕೊಂಡು ನಡೆಯುತ್ತಾರೆಂದು ನಾನು ಭಾವಿಸಿದ್ದೇನೆ.

ಕೊನೆಯದಾಗಿ ಇದರಲ್ಲಿ ಬಹಳಷ್ಟು ತಪ್ಪುಗಳಾಗಿವೆ. Definitely, the Police have committed an access. It was not necessary to fire on the innocent people. ಆಗಿರುವ ತಪ್ಪುಗಳ ಕುರಿತು ಆಮೂಲಾಗ್ರವಾಗಿ ತನಿಖೆಯಾಗಬೇಕು. CID Inquiry and Magisterial Inquiry ನಡೆದಿದೆ. ಈ ಎರಡೂ ತನಿಖೆಗಳಿಂದ ಏನೂ ಸಾಧ್ಯವಿಲ್ಲ. ಆದ್ದರಿಂದ ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಮೂರ್ತಿಗಳಿಂದ ಇದನ್ನು ತನಿಖೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ, ವಿಪಕ್ಷ ನಾಯಕರು ಕೇಳಿರುವ ಬಹುತೇಕ ಪ್ರಶ್ನೆಗಳಿಗೆ ನನ್ನ ಉತ್ತರದಲ್ಲಿ ವಿವರಿಸಲಾಗಿದೆ. ಆದರೂ ಕೂಡ ಅವರು ಕೇಳುತ್ತಿರುವ ಪ್ರಶ್ನೆಗಳಿಗೆ ನಾನು ಮತ್ತೊಮ್ಮೆ ಉತ್ತರಿಸುವ ಪ್ರಯತ್ನವನ್ನು ಮಾಡುತ್ತೇನೆ. ಈಗಾಗಲೇ ಸೆಕ್ಷನ್ 144 ರ ಬಗ್ಗೆ ಮಾನ್ಯ ಐವನ್ ಡಿ'ಸೋಜಾ ಅವರಿಗೆ ಹೇಳಿದ್ದೇನೆ. ಅವರ ಎರಡನೆಯ ಪ್ರಶ್ನೆಯೆಂದರೆ ಕೇರಳದವರನ್ನು ಕರೆದು ಪ್ರಶ್ನೆಯನ್ನು ಮಾಡಲಾಗುತ್ತಿದೆ ಎಂಬುದಾಗಿದೆ. ಘಟನೆ ನಡೆದಂತಹ ಬಂದರು ರಸ್ತೆ, ಅಜೀಜುದ್ದೀನ್ ರಸ್ತೆ, ನೆಲ್ಲಿಕಾಯಿ ರಸ್ತೆ ಈ ಮೂರು ರಸ್ತೆಗಳಲ್ಲಿ ಸುಮಾರು 1,300 ಕ್ಕೂ ಹೆಚ್ಚು ಫೋನ್‌ಗಳು ಕೇರಳ ರಾಜ್ಯದ ಕಾಸರಗೋಡು ವ್ಯಾಪ್ತಿಯದ್ದಾಗಿದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಕಾಸರಗೋಡಿನಿಂದ ದಿನನಿತ್ಯ ಸಾವಿರಾರು ಜನ ಬರುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಪ್ರಕಾಶ್‌ರವರೇ, ನಾನು ಉತ್ತರವನ್ನು ಹೇಳುವವರೆಗೆ ತಾಳ್ಮೆಯಿಂದಿರಿ. ನಿಮಗೆ ಬೇಕಾದಂತೆ ನಾನು ಉತ್ತರವನ್ನು ಹೇಳುವುದಕ್ಕೆ ಆಗುವುದಿಲ್ಲ. You listen to me. ನಾನು ಏನು ಹೇಳುತ್ತೇನೆಂದು ತಿಳಿಯದೆ ನೀವು ಮಾತನಾಡುತ್ತೀರಿ ಎಂದರೆ ಏನು ಮಾಡುವುದು. ನೀವು ನನ್ನ ಗೆಳೆಯರಾಗಿ ಹೀಗೆ ಮಾಡಬಾರದು.

**ಶ್ರೀ ಎಂ.ನಾರಾಯಣಸ್ವಾಮಿ:-** ಅವರೊಬ್ಬರು ಮಾತ್ರ ಗೆಳೆಯರಾದರೆ ನಾವೆಲ್ಲಾ ನಿಮ್ಮ ಶತ್ರುಗಳೇ?

**ಶ್ರೀ ಬಸವರಾಜ ಬೊಮ್ಮಾಯಿ:-** ನೀವೆಲ್ಲರೂ ನನಗೆ ಒಳ್ಳೆಯ ಗೆಳೆಯರು. ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾ ಅವರು ಆ ಪ್ರದೇಶದಲ್ಲಿ 1,300ಕ್ಕೂ ಹೆಚ್ಚು ಕಾಸರಗೋಡು ಮೂಲದ ಟೆಲಿಫೋನ್‌ಗಳು trace ಆಯಿತು ಎಂದು ಹೇಳಿದರು. ಮಾನ್ಯ ಪ್ರಕಾಶ್ ಕೆ.ರಾಥೋಡ್ ಅವರು ಹೇಳಿದ್ದು ಸರಿಯಿದೆ. ದಿನನಿತ್ಯ ವ್ಯಾಪಾರ-ವಹಿವಾಟಿಗಾಗಿ ಕಾಸರಗೋಡಿನಿಂದ ಅಲ್ಲಿಗೆ ಬರುತ್ತಾರೆ. ಅದಕ್ಕಾಗಿಯೇ ನಾವು ಎಲ್ಲರನ್ನೂ ಸಂಶಯಾಸ್ಪದವಾಗಿ ನೋಡಿರುವುದಿಲ್ಲ. 1329 ಜನರ ಪೈಕಿ 373 ಜನರಿಗೆ ನೋಟಿಸ್ ಕೊಡಲಾಗಿದೆ. ವ್ಯಾಪಾರ ವಹಿವಾಟಿಗಾಗಿ ಬಂದವರಿಗೆ ನಾವು ನೋಟಿಸ್ ಅನ್ನು ಕೊಟ್ಟಿರುವುದಿಲ್ಲ. Call tracking ಬಿಟ್ಟು ಬೇರೆ ಪ್ರೂಫ್ ಇರುವವರಿಗೆ ಕೇವಲ ಪ್ರಶ್ನೆಗಳನ್ನು ಕೇಳಲಾಗಿದೆ. ಅವರು ಏಕೆ ಇಲ್ಲಿಗೆ ಬಂದರು ಎನ್ನುವುದಕ್ಕೆ ಅವರು ನೀಡುವ ಉತ್ತರ ಸಕಾರಣವಾಗಿದ್ದರೆ ಅವರ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆಯೇ ಇಲ್ಲ. ಸಂಶಯಾಸ್ಪದ ವ್ಯಕ್ತಿಗಳಾಗಿದ್ದು, ಅವರು ದಂಗೆಯಲ್ಲಿ ತೊಡಗಿದ್ದಾರೆಂದರೆ ಖಂಡಿತ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಹೀಗಾಗಿ ಇದರ ಹಿಂದೆ ಬೇರೆ ಯಾವ ಉದ್ದೇಶವೂ ಇಲ್ಲ.

ಇನ್ನು ಮಾನ್ಯ ಎಂ.ನಾರಾಯಣಸ್ವಾಮಿಯವರು ಬೇರೆಯದೇ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಪೊಲೀಸ್ ಅಧಿಕಾರಿಗಳು ಶಾಸಕರ ಹುಟ್ಟುಹಬ್ಬದ ಸಂಭ್ರಮದಲ್ಲಿ ಪಾಲ್ಗೊಂಡಿರುವ ಹಾಗೂ atrocity case ಗಳನ್ನು ದಾಖಲಿಸುತ್ತಿರುವ ಬಗ್ಗೆ ಅವರು ಪ್ರಸ್ತಾಪಿಸಿದ್ದಾರೆ. ಖಂಡಿತವಾಗಿಯೂ ನಾನು ಇದರ ಬಗ್ಗೆ ಗಮನವನ್ನು ಹರಿಸುತ್ತೇನೆ ಹಾಗೂ ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುತ್ತೇನೆ. Vindictive ಆಗಿ ಮಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಚಿವರೇ, ಆ ಪೊಲೀಸ್ ಅಧಿಕಾರಿಗಳು ಶಾಸಕರಿಗೆ ಬೆಳ್ಳಿ ಗದೆಯನ್ನು ನೀಡಿರುವ ಬಗ್ಗೆ ತಾವು ಏನೂ ಹೇಳಲಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಚಿವರೇ, ಕಣ್ಣಿಗೆ ಕಾಣುತ್ತಿರುವುದಕ್ಕೆ ಪುರಾವೆ ಬೇಕಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:–** ಈ ವಿಷಯದ ಕುರಿತು ಸಾಕ್ಷಿಸಮೇತವಾಗಿ ಕ್ರಮವನ್ನು ಕೈಗೊಳ್ಳುವಂತೆ ಹಿರಿಯ ಅಧಿಕಾರಿಗಳಿಗೆ ಈಗಾಗಲೇ ನಿರ್ದೇಶನವನ್ನು ನೀಡಿರುತ್ತೇನೆ.

ನಂತರ ಪಿ.ಎಫ್.ಐ. ಗೆ ಬಂದಿರುವ ದುಡ್ಡಿನ ಬಗ್ಗೆ ಪ್ರಸ್ತಾವನೆಯನ್ನು ಮಾಡಿದರು. ತಮಗೆಲ್ಲಾ ತಿಳಿದಿರುವಂತೆ ಈ ವಿಷಯದ ಬಗ್ಗೆ ತಮಗೆಲ್ಲಾ ತಿಳಿದಿದ್ದು, ಪ್ರಚಾರವೂ ಆಗಿದೆ. ಪಿ.ಎಫ್.ಐ.ನ ಹಲವಾರು ಬ್ಯಾಂಕ್ ಖಾತೆಗಳಿಗೆ ಹೊರದೇಶಗಳಿಂದ ಹಣ ಬಹಳ ದೊಡ್ಡ ಪ್ರಮಾಣದಲ್ಲಿ ಬಂದಿದ್ದು, ಅದರ ಮೂಲ ಹಾಗೂ ಕಳುಹಿಸಿರುವವರ ಕುರಿತು ಜಾರಿ ನಿರ್ದೇಶನಾಲಯವು ಈಗಾಗಲೇ ಪ್ರಶ್ನಿಸುತ್ತಿದೆ. ಅಷ್ಟೇ ಅಲ್ಲದೆ, ಮಂಗಳೂರು ಇತರ ಭಾಗಗಳಲ್ಲಿ ಬೇರೆ ಬೇರೆ ಖಾತೆಗಳಿಗೆ ಹಣ ಬಂದಿರುವ ಬಗ್ಗೆ ಮಾಹಿತಿಯನ್ನು ಕಲೆ ಹಾಕಲಾಗುತ್ತಿದೆ. ಪಿ.ಎಫ್.ಐ.ನ ವಿವರಗಳು ಬೇಕಾದಲ್ಲಿ ಅದನ್ನು ವಿರೋಧ ಪಕ್ಷದ ನಾಯಕರಿಗೆ ಕಳುಹಿಸಿಕೊಡುತ್ತೇನೆ. ಬಹಿರಂಗವಾಗಿ ಕೆಲವು ವಿಚಾರಗಳನ್ನು ಹೇಳುವುದು ಬೇಡವೆಂದು ನಾನು ಸೂಕ್ಷ್ಮವಾಗಿ ಹೇಳಿದ್ದೇನೆ.

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಮಾನ್ಯ ಗೃಹ ಸಚಿವರೇ, Citizenship (Amendment) Act (CAA) ವಿರೋಧಿ ಹೋರಾಟಕ್ಕೆ ಸಂಬಂಧಿಸಿದ ವಿಚಾರವಾಗಿದ್ದು, ನೀವು ಇಲ್ಲಿ ಎಲ್ಲಿಯೂ ಪಿ.ಎಫ್.ಐ. ಎಂದು ಹೇಳಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:–** ಈ ವಿಷಯವನ್ನು ನಾನು ಬಹಳ ಸ್ಪಷ್ಟವಾಗಿ ಕೆಳಮನೆಯಲ್ಲಿಯೂ ಹೇಳಿರುತ್ತೇನೆ. ಇಲ್ಲಿಯೂ ಹೇಳಿದ್ದೇನೆ. ಪಿ.ಎಫ್.ಐ. ನ ವಿವರಗಳನ್ನು ನಾನು ಬಹಿರಂಗವಾಗಿ ಹೇಳುವುದಿಲ್ಲ. ಅವರ ಕಾರ್ಯ ಚಟುವಟಿಕೆಗಳ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕಳುಹಿಸಿಕೊಡುತ್ತೇನೆಂದು ಈಗಾಗಲೇ ಹೇಳಿದ್ದೇನೆ.

ಇದರ ಜೊತೆಯಲ್ಲಿ ಮಾನ್ಯ ನಸೀರ್ ಅಹಮದ್ ಅವರು concerned officers and excess ಇರುವವರನ್ನು transfer ಮಾಡಿದರೆ ಒಂದು ಒಳ್ಳೆಯ ಸಂದೇಶ ಹೋಗುತ್ತದೆ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದರು. ಈಗ ಆ ವಿಷಯವು ಉಚ್ಚ ನ್ಯಾಯಾಲಯದಲ್ಲಿದ್ದು, ಅದು ಸರಿಯೇ ಅಥವಾ ತಪ್ಪೇ ಎಂಬ ತೀರ್ಮಾನ ಬರುತ್ತದೆ. ಈ ವಿಷಯದಲ್ಲಿ ಯಾರನ್ನೂ ಕೂಡ ರಕ್ಷಣೆ ಮಾಡುವ ಪ್ರಶ್ನೆಯಿಲ್ಲ ಎಂದು ನಾನು ಆಗಲೇ ಹೇಳಿದ್ದೇನೆ.

**(ಮುಂದು)**

(96) 20.02.2020 KG.KS 4.10

**Sri NASEER AHMED:-** That's what I said. As, a Home Minister you can take a call.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ನಸೀರ್ ಅಹ್ಮದ್‌ರವರೇ, I agree with you. ನನ್ನ background ಹೇಳಿ ನ್ಯಾಯ ಸಮ್ಮತವಾಗಿ ನಡೆದುಕೊಳ್ಳಿ ಎಂದು ಹೇಳಿದ್ದು ನನಗೆ ನೆನಪು ಇದೆ. ಇಲ್ಲಿ ಏನಾಗಿದೆ ಎಂದರೆ, ನಾವು ಮಾಡಿರುವಂತಹ action ಅನ್ನು affidavit ಆಗಿ ನಾವು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಕೊಟ್ಟಿದ್ದೇವೆ. ಕೆಲವೇ ದಿವಸಗಳಲ್ಲಿ ತೀರ್ಪು ಬರುತ್ತದೆ. ಆ affidavit ಪ್ರಕಾರ, ನಮ್ಮ ಪೋಲೀಸರು ಏನು action ಮಾಡಿದ್ದಾರೆಂದು scrutinize ಆಗುತ್ತದೆ. ತಪ್ಪಿತಸ್ಥರೆಂದು ಕಂಡು ಬಂದಾಗ, ಯಾರನ್ನು ಇಟ್ಟುಕೊಳ್ಳಬೇಕು ಅಥವಾ ಯಾರನ್ನು ಬಿಡಬೇಕೆಂದು ನಮ್ಮ ವಿವೇಚನೆಗೆ ಇದೆ. ಖಂಡಿತವಾಗಿಯೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಅದರ letter and spirit ನಲ್ಲಿ ನಾವು ಕೆಲಸವನ್ನು ಮಾಡುತ್ತೇವೆ.

ಮಾನ್ಯ ಸಭಾಪತಿಯವರೇ, ಮಾನ್ಯ ಗೌಡರು compensation ಬಗ್ಗೆ ಕೇಳಿದ್ದಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಯವರು ಮಾನವಿಯತೆಯ ದೃಷ್ಟಿಯಿಂದ ಘೋಷಣೆ ಮಾಡಿದ್ದು ನಿಜ. ಅದಾದ ಮೇಲೆ ನಾವು ಏನ್ನನ್ನು ನೋಡದೆ compensation ಮಾಡಿದ್ದೆವು. ಆನಂತರ accused ಗಳು ಬಂದಿದ್ದಾರೆಂದು ಒಂದು ಕಾರಣ ಇತ್ತು. ಆದರೂ ಸಹ ನಾವು announce ಮಾಡಿರಲಿಲ್ಲ. 2007 ರಲ್ಲಿ ಮುಲ್ಕಿಯಲ್ಲಿ, ಆ ಸಂದರ್ಭದಲ್ಲಿ ಸಮ್ಮಿಶ್ರ ಸರ್ಕಾರ ಇತ್ತು. ಆಗ ಅಲ್ಲಿ ಸುಕುಮಾರಶೆಟ್ಟಿ ಎಂಬುವರು ಕೊಲೆಯಾದಂತಹ ಪ್ರಕರಣದಲ್ಲಿ funeral ಗೆ ಹೋಗಿ ಹಿಂತಿರುಗಿ ಬರಬೇಕಾದರೆ, police

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

station ಘೇರಾವು ಆಗುತ್ತದೆ. ಆಗ ಗೋಲಿಬಾರ್ ಆಗುತ್ತದೆ. ಇಬ್ಬರು ಸತ್ತು ಹೋಗುತ್ತಾರೆ. ಆ ತೀರಿ ಹೋದ ಇಬ್ಬರಿಗೂ ಇಂದಿಗೂ compensation ಸಿಕ್ಕಿಲ್ಲ. ಏಕೆಂದರೆ, ಅವರು accused ಆಗಿದ್ದರು.,

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಕುಟ್ಟಪ್ಪ ತೀರಿಹೋದಾಗ ಟಿಪ್ಪು ಜಯಂತಿ ಇತ್ತು. ತದನಂತರ ರಫೀಕ್‌ರವರು ತೀರಿಹೋದಾಗ ನಾವು ಕೊಟ್ಟಿದ್ದೇವೆ.

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಮುಲ್ಕಿ ವಿಷಯ ಮಾತನಾಡುತ್ತಿದ್ದೇನೆ. ಮಾನ್ಯ ಡಿ'ಸೋಜಾರವರು ಮಡಿಕೇರಿ ವಿಷಯ ಮಾತನಾಡುತ್ತಿದ್ದಾರೆ. ಅವರು ಏಕೆ crosstalk ಮಾಡುತ್ತಾರೆ? ಅವರು ಕೊಟ್ಟಿರಬಹುದು. ಇಲ್ಲಿ ಪ್ರಕರಣ ಏನಾಯಿತು ಎಂದರೆ, ಮುಲ್ಕಿಯಲ್ಲಿ accused ಇದ್ದರು. ಅವರು ಬಂದು ನಮಗೆ 2007 ರಿಂದ ಇಲ್ಲಿಯವರೆಗೆ compensation ಕೊಟ್ಟಿಲ್ಲ, ನಮಗೆ ಮೊದಲು ಕೊಡಬೇಕು. ಆಮೇಲೆ ಅವರಿಗೆ ಕೊಡಬೇಕು ಎಂದು representation ಕೊಟ್ಟರು. ಹೀಗಾಗಿ, ಇದರ ತೀರ್ಮಾನ ಮೂರು ತಿಂಗಳಲ್ಲಿ ಆಗುತ್ತದೆ ಎಂದರೆ, ಖಂಡಿತವಾಗಿ compensation ಕೊಡಬೇಕು ಎನ್ನುವುದು ಮಾನ್ಯ ಮುಖ್ಯ ಮಂತ್ರಿಯವರ ಉದ್ದೇಶ ಇದ್ದ ಕಾರಣ ಅದನ್ನು ತಡೆಹಿಡಿಯಲಾಗಿದೆ. ಅದರ ತೀರ್ಮಾನ ಬಂದ ನಂತರ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. This is the position.

ಮಾನ್ಯ ಸಭಾಪತಿಯವರೇ, ಇನ್ನೂ ಪ್ರಕಾಶ್ ಕೆ. ರಾಥೋಡ್‌ರವರು ಹೇಳಿದ ಸೆಕ್ಷನ್ 114ಗೆ ನಾನು ಆಗಲೇ ಉತ್ತರ ಕೊಟ್ಟಿದ್ದೇನೆ. ಬೆಂಗಳೂರಿನ ಕೇಸ್‌ನಲ್ಲಿ ಮಾನ್ಯ ಶಾಸಕರಾದ ಶ್ರೀಮತಿ ಸೌಮ್ಯರೆಡ್ಡಿಯವರು PIL (Public Interest Litigation) ಅನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಹಾಕಿದ್ದರು. ಅದರಲ್ಲಿ statement ಬಂದಿದೆ. ಅದರ ಪ್ರಕಾರ ಮಾನ್ಯ ಸರ್ವೋಚ್ಚ ನ್ಯಾಯಾಲಯದ guidelines ಅನ್ನು follow ಮಾಡಬೇಕೆಂದು ಹೇಳಿದ್ದಾರೆ. ಅದರಲ್ಲಿ 144 ಸೆಕ್ಷನನ್ನು ಹಾಕಬಾರದು ಎಂದು ಎಲ್ಲೂ ಹೇಳಿಲ್ಲ. ಆ ರೀತಿ ಹಾಕುವಾಗ ಮಾನ್ಯ ಸರ್ವೋಚ್ಚ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನ್ಯಾಯಾಲಯದ guidelines follow ಮಾಡಬೇಕೆಂದು ಹೇಳಿದೆ. ನಾವು ಅದನ್ನು ಒಪ್ಪಿಕೊಂಡಿದ್ದೇವೆ. ಆದರೆ, ಮಂಗಳೂರಿನ ಕೇಸ್‌ನಲ್ಲಿ ಅಲ್ಲ, but, it is in Bengaluru case.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇದು ರಾಜ್ಯದಲ್ಲಿ. ಅದನ್ನು ಮಾನ್ಯ ಸಚಿವರು ತಪ್ಪಿಸುವುದಕ್ಕೆ ಬರುವುದಿಲ್ಲ. ಅವರು ಏನು ಹೇಳಿದ್ದಾರೆಂದರೆ, Citizenship (Amendment) Act (CAA) ಹಾಗೂ NRC (National Register of Citizens) ಅನ್ನು.. ನೀವು right withhold ಮಾಡುವುದಕ್ಕೆ ಮಾಡಿದ್ದೀರಿ ಎಂದು ಹೇಳಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಹೇಳಿರುವುದು ಅವರ stand ಅದು. ಅದು ಬೆಂಗಳೂರಿನಲ್ಲಿ ಮಾನ್ಯ ಶಾಸಕರಾದ ಶ್ರೀಮತಿ ಸೌಮ್ಯರೆಡ್ಡಿ ಮತ್ತು ಇತರರು PIL ಹಾಕಿರುವಂತ ಕೇಸ್‌ನ observation ನಲ್ಲಿ guidelines ಅನ್ನು follow ಮಾಡಬೇಕು ಎಂದು ಹೇಳಿದೆ. So, we have to honor the guidelines of Hon'ble Supreme Court. It is with regard to the action by the Bengaluru Commissioner.

**Sri PRAKASH K. RATHOD:-** Then you are taking action against the Bengaluru Commissioner.

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ–** ಮಾನ್ಯ ಸಭಾಪತಿಯವರೇ, ಅವರು ಅದನ್ನು ಪೂರ್ತಿ ಓದಬೇಕು.

**ಸಭಾಪತಿಯವರು:–** ಪ್ರಕಾಶ್‌ರವರೇ, ಸಚಿವರು reply ಅನ್ನು ಪೂರ್ತಿ ಹೇಳಿ ಮುಗಿಸಲಿ.

**ಶ್ರೀ ಬಸವರಾಜ ಬೊಮ್ಮಾಯಿ–** ಮಾನ್ಯ ಸಭಾಪತಿಯವರೇ, I will tell the stand of the Government, Court ಏನು ಸರ್ವೋಚ್ಚ ನ್ಯಾಯಾಲಯದ guidelines follow ಮಾಡಿ ಎಂದು directions ಕೊಟ್ಟಿದೆ, ಅದನ್ನು ನಾವು follow ಮಾಡುತ್ತೇವೆ. ಆ ಮೇಲೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿರೋಧ ಪಕ್ಷದ ನಾಯಕರಾದ ಮಾನ್ಯ ಎಸ್.ಆರ್.ಪಾಟೀಲ್‌ರವರು ಸಹ compensation ಬಗ್ಗೆ ಹೇಳಿದ್ದರು.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಒಂದು ವಿಷಯ ಹೇಳುವುದಿದೆ ನಾನು ಹೇಳಿದ ನಂತರ ಮಾನ್ಯ ಸಚಿವರು ಉತ್ತರ ಹೇಳಲಿ. ಬೀದರ್‌ನ ಶಾಹೀನ್ ಶಾಲೆಯ ಬಗ್ಗೆ ಮಾನ್ಯ ಸಚಿವರು ಹೇಳಿದ್ದಾರೆ. ಅದರ ಜೊತೆಗೆ ನಮ್ಮ ಕೆಳಮನೆಯ ಸದಸ್ಯರಾದ ಮಾನ್ಯ ಯು.ಟಿ.ಖಾದರ್‌ರವರ ವಿರುದ್ಧ sedition case ಹಾಕಿದ್ದೀರಿ. ಅದೇ ರೀತಿ ಖ್ಯಾತ ಕವಿಗಳಾದ ಸೀರಾಜ್ ಬೀಸರಹಳ್ಳಿ ಈ ರೀತಿ ಎಲ್ಲೆಲ್ಲಿ sedition case ಹಾಕಿದ್ದಾರೆ wrongly invoke ಮಾಡಿ. ಆ ಎಲ್ಲಾ ಕೇಸ್‌ಗಳನ್ನು withdraw ಮಾಡುವುದು ಸೂಕ್ತ ಹಾಗೂ ಅದು ಅವರ ಸರ್ಕಾರಕ್ಕೆ ಗೌರವ ಎನ್ನುವಂತಹ ಮಾತನ್ನು ಹೇಳುತ್ತೇನೆ. ಕೊನೆಗೆ ಒಂದು ಮಾತನ್ನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಅನೇಕ ಜಾತಿ, ಮತ, ಪಂಥ, ಪಂಗಡ, ಅನೇಕ ಭಾಷಿಕರು, ಧರ್ಮಿಯರು ಇಲ್ಲಿ ಎಲ್ಲರೂ ಸಾವಿರಾರು ವರ್ಷಗಳಿಂದ ನೆಮ್ಮದಿಯಿಂದ ಬದುಕಿ ಬಾಳಿದ್ದಾರೆ. ನಮ್ಮ ನಮ್ಮ ಮಧ್ಯದಲ್ಲಿ ಗೋಡೆಗಳನ್ನು ನಿರ್ಮಾಣ ಮಾಡುವಂತಹ ಕೆಲಸ ಆಗಬಾರದೆಂದು ಮಾನ್ಯ ಸಭಾಪತಿಯವರ ಮುಖಾಂತರ ಈ ಸರ್ಕಾರಕ್ಕೆ ಮಾನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರು ಪೊಲೀಸ್ Drill Manual ನ್ನು guidelines follow ಮಾಡಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ನನ್ನ ಉತ್ತರದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ.

**ಸಭಾಪತಿಯವರು:-** ಐವನ್ ಡಿ'ಸೋಜಾರವರೇ, ಏನು ತಯಾರು ಮಾಡುತ್ತಿದ್ದೀರಿ?

**ಶ್ರೀ ಬಸವರಾಜ ಬೊಮ್ಮಾಯಿ-** ಮಾನ್ಯ ಸಭಾಪತಿಯವರೇ, ಅವರು ಮಾಡಲಿ ಬಿಡಿ. ಮೊದಲು ಕಲ್ಲು ತೂರಾಟ ಆದಾಗ loudspeaker ನಲ್ಲಿ ಹೇಳಿ warning ಮಾಡಿದ್ದೆವು, ಅವರು ಕೇಳಲಿಲ್ಲ. ಅವರನ್ನು ಬೆದರಿಸಿ ಚದುರಿಸುವ ಪ್ರಯತ್ನ ಮಾಡಿದೆವು. ಆಗಲಿಲ್ಲ. ಅವರೆಲ್ಲರೂ ರಸ್ತೆ ಕಡೆಗೆ ಬಂದು ಹೆಚ್ಚಿನ ಸಂಖ್ಯೆಯಲ್ಲಿ ಕಲ್ಲು ತೂರಾಟ ಮಾಡಿದರು, ರಸ್ತೆಯನ್ನು block ಮಾಡಿದರು. ಮತ್ತೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

loudspeaker ನಲ್ಲಿ ಹೇಳಿದರೂ ಸಹ, ಅವರು ಕೇಳಲಿಲ್ಲ. ಲಾಠಿಚಾರ್ಜ್ ಮಾಡಿದೆವು. Petrol Bomb ಹಾಕುವುದಕ್ಕೆ ಪ್ರಾರಂಭ ಮಾಡಿದರು. Petrol Bomb ಹಾಕುವುದಕ್ಕೆ ಪ್ರಾರಂಭ ಮಾಡಿದ ಮೇಲೆ ಟೈಯರ್‌ಗೆ ಬೆಂಕಿ ಹಚ್ಚಿ ಪೊಲೀಸ್ ಠಾಣೆಗೆ ನುಗ್ಗಿಸುವಂತಹ ಪ್ರಯತ್ನ ಮಾಡಿದಾಗ ನಾವು tear gas shells ಅನ್ನು ಹಾಕಿದೆವು. ನಾನು ಈಗಾಗಲೇ 106 tear gas shells ಗಳನ್ನು ಹಾಕಿದ್ದೇವೆಂದು ಹೇಳಿದ್ದೇನೆ. ತದನಂತರ 47 rubber bullets ಗಳನ್ನು ಮಾಡಿದ್ದೇವೆ, announcement ಮಾಡುತ್ತಾ, ಮಾಡುತ್ತಾ ಮಾಜಿ ಮೇಯರ್‌ರವರನ್ನು ಕರೆದುಕೊಂಡು ಬಂದು ಹೇಳಿಸುವಂತಹ ಪ್ರಯತ್ನ ಮಾಡಿದೆವು. ಅವರಿಗೂ ಸಹ ಗಾಯ ಆಯಿತು. ತದನಂತರ ಗಾಳಿಯಲ್ಲಿ 56 ರೌಂಡು ಗುಂಡುಗಳನ್ನು ಹಾಕಿದೆವು. ಪಿಸ್ತೂಲ್‌ನಲ್ಲಿ 10, 303 rifle ನಲ್ಲಿ 10 ಹಾಗೂ ಎಸ್.ಎಲ್.ಆರ್ ನಿಂದ 36 ಗುಂಡುಗಳನ್ನು ಹಾಕಿದೆವು. ಇವೆಲ್ಲವನ್ನು ಮಾಡಿ warning ಕೊಟ್ಟು ಇಲ್ಲಿಂದ ಚದುರಲೇಬೇಕೆಂದು ಹೇಳಿದಾಗಲೂ ಸಹ, ಚದುರದೆ petrol bombs ಅನ್ನು ಬೆಂಕಿ ಹಚ್ಚುವಂತಹ ಕೆಲಸ, ಅಂಗಡಿಗೆ ನುಗ್ಗುವಂತಹ ಕೆಲಸ ಮಾಡಿದಾಗ ಮುಂದೆ ಆಗುವಂತಹ ಅನಾಹುತಗಳನ್ನು ತಪ್ಪಿಸಲು firing ಅನ್ನು ಮಾಡಲಾಯಿತು.

ಮಾನ್ಯ ಸಭಾಪತಿಯವರೇ, ಹೀಗಾಗಿ, Police drill manual ನಲ್ಲಿ ಏನಿದೆ, ಅವೆಲ್ಲವನ್ನು ಸಹ ನಾವು ಮಾಡಿದ್ದೇವೆ. ಮೇಲ್ನೋಟಕ್ಕೆ ಯಾವುದೇ ರೀತಿಯ ಉಲ್ಲಂಘನೆಯಾಗಿಲ್ಲ. ನಮ್ಮ ಪೊಲೀಸ್‌ನವರು ಸಮರ್ಪಕವಾಗಿ ಕೆಲಸ ಮಾಡಿದ್ದಾರೆ. ಕಾನೂನು ಸುವ್ಯವಸ್ಥೆಯನ್ನು ಕಾಪಾಡಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಪೊಲೀಸರು ಆಯುಕ್ತರು ನಮಗೆ ಬನ್ನಿ ಎಂದು ಹೇಳಿದ ನಂತರ ನಾವು ಮರುದಿವಸ ಮಂಗಳೂರಿಗೆ ಹೋದಾಗ airport ನಿಂದ ಹೊರಗಡೆ ಹೋಗದಂತೆ ವಿರೋಧ ಪಕ್ಷದ ನಾಯಕರನ್ನು ತಡೆದಿದ್ದಾರೆ. ಅದು ಅವರಿಗೆ ಹೆಚ್ಚಿನ ಅವಮಾನವಾಗಿದೆ.

**ಶ್ರೀ ಬಸವರಾಜ ಬೊಮ್ಮಾಯಿ–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಆ ರೀತಿ ಭಾವಿಸಿಕೊಂಡರೆ, ಅದಕ್ಕೆ ತಪ್ಪೇನಿಲ್ಲ. ಅವಮಾನ ಯಾರಿಗೆ ಎಂದು ಅದನ್ನು ಜನ ತೀರ್ಮಾನ ಮಾಡಬೇಕು. ಆದರೆ, ಪೊಲೀಸರು ಸಮರ್ಥವಾಗಿ ನಿಭಾಯಿಸಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ನಿನ್ನೆ ದಿವಸ ಸದನದಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ನಾನಿದ್ದೆ. ಅದನ್ನು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ವಿಚಾರಣೆ ಮಾಡಿದೆ. 20ನೇ ತಾರೀಖು ಬೆಳಗ್ಗೆ ನಮಗೆ ಪ್ರವಾಸ ಕಾರ್ಯಕ್ರಮಗಳ ವಿವರ ಬಂತು. ಅಷ್ಟರೊಳಗೆ ನಾವು airport ನಲ್ಲಿ ನೊಟೀಸ್ ಕೊಟ್ಟಿದ್ದು ನಿಜ. Curfew ಇರುವುದರಿಂದ....

**ಶ್ರೀ ಎಸ್.ಆರ್.ಪಾಟೀಲ್:–** ಹಿಂದಿನ ದಿವಸ ರಾತ್ರಿ ನನ್ನ ಕಚೇರಿಯಿಂದ ಪಿ.ಎಸ್. ಪತ್ರವನ್ನು ಕಳುಹಿಸಿದ್ದರು.

**ಶ್ರೀ ಬಸವರಾಜ ಬೊಮ್ಮಾಯಿ–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. I am coming to that point. ಅವರು ನನಗೆ ಹೇಳಿದ್ದಾರೆ. I believe you (Opposition Leader).

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದೊಂದು ಮಾತಿಗೂ ಎದ್ದು ನಿಂತರೆ ಹೇಗೆ? ನಾನು ಮಾತನಾಡಿದ ಮೇಲೆ, ಮಾನ್ಯ ವಿರೋಧ ಪಕ್ಷದ ನಾಯಕರು ಅದರಲ್ಲಿ ತಪ್ಪಿದ್ದರೆ, ಅವರು ಎದ್ದು ನಿಂತು ಮಾತನಾಡಲಿ. ನಾನು ಪೂರ್ತಿ ವಿಷಯ ಮಾತನಾಡುವುದಕ್ಕಿಂತ ಮುಂಚೆಯೇ ಅವರು ನನಗೆ guide ಮಾಡುತ್ತಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು 19ನೇ ತಾರೀಖು ಅವರ ಪಿ.ಎಸ್. ಮಾತನಾಡಿದ್ದಾರೆಂದು ಹೇಳುತ್ತಾರೆ. ಆದರೆ, ಅವರು 20ನೇ ತಾರೀಖು ಮಾತನಾಡಿದ್ದಾರೆಂದು ಹೇಳುತ್ತಾರೆ. But, I believe you. This is my stand. 20ನೇ ತಾರೀಖು ಆದರೂ ಸಹ curfew ಇದ್ದಿದ್ದರಿಂದ ಆ ನೊಟೀಸ್ ಕೊಡಲಾಗಿದೆಯೆ ಹೊರತು, ಅವರನ್ನು ತಡೆಯಬೇಕೆಂದು ಕೊಟ್ಟಿಲ್ಲ. Curfew ಇದ್ದಾಗ ಅವರಿಗೆ security ಕೊಡುವುದು ಕಷ್ಟ. ಅಲ್ಲಿ curfew ನಲ್ಲಿ control ಮಾಡುವುದು ಸಹ ಕಷ್ಟ ಎನ್ನುವಂತಹ ದೃಷ್ಟಿಯಿಂದ ಅದಾಗಿದೆ. ಆದರೂ ಸಹ ಅವರಿಗೆ ಅಲ್ಲಿ ಆಗಿರುವಂತಹ inconvenience ಗೆ ಮತ್ತು ಇತರೆ ತೊಂದರೆಗಳಿಗೆ ನಾನು ವಿಷಾದವನ್ನು ವ್ಯಕ್ತಪಡುಸುತ್ತೇನೆ. ನಾನು ಕೆಳಮನೆಯಲ್ಲಿಯೂ ಸಹ ಇದಕ್ಕೆ ವಿಷಾದವನ್ನು ವ್ಯಕ್ತಪಡಿಸಿದ್ದೇನೆ. ಏಕೆಂದರೆ, ಸರ್ಕಾರ ಯಾವುದು ಖಾಯಂ ಅಲ್ಲ. ನಾನು ಸಹ ವಿರೋಧ ಪಕ್ಷದ ನಾಯಕನಾಗಿ ಹಲವಾರು ಬಾರಿ ಬಂಧನಕ್ಕೆ ಒಳಗಾಗಿದ್ದೇನೆ. Rough treatment ನಮಗೂ ಆಗಿದೆ. ಬಸ್ ಹತ್ತುವಾಗ ನಮ್ಮನ್ನು ಎತ್ತಿ ಹೋಗೆದಿದ್ದು ಆಗಿದೆ. ಇಂತಹವು ಬೇಕಾದಷ್ಟು ಆಗಿವೆ. ರಾಜಕಾರಣದಲ್ಲಿ ಇದ್ದಾಗ ಇದೆಲ್ಲಾ ಸಾಮಾನ್ಯ. ಮಾನ್ಯ ಹೆಚ್.ಎಂ.ರೇವಣ್ಣನವರಿಗೆ ಈ ತರಹ

"ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇಕಾದಷ್ಟು ಆಗಿದೆ. ನಾವು ಅನುಭವಿಸಿದ್ದೇವೆ. ಇದು ಯಾರಿಗೂ ಆಗಬಾರದು. ಅವರು ವಿರೋಧ ಪಕ್ಷದರಲ್ಲಿ ಇರಲಿ ಅಥವಾ ಆಡಳಿತ ಪಕ್ಷದಲ್ಲಿ ಇರಲಿ, ನಾವು ಇದರಲ್ಲಿ ಯಾವುದೇ ರೀತಿಯ ಪ್ರತಿಷ್ಠೆಯನ್ನು ಮಾಡಿಕೊಳ್ಳುವುದಿಲ್ಲ. ಇದಕ್ಕೆ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಇದಕ್ಕೆ ಕೆಳಮನೆಯಲ್ಲಿಯೂ ಸಹ ವಿಷಾದವನ್ನು ವ್ಯಕ್ತಪಡಿಸಿದ್ದೇನೆ.

(ಮುಂದು)

(97)20-02-2020(4-20)ಎಂವಿ-ಜಿಆರ್
**ಶ್ರೀ ಬಸವರಾಜ ಬೊಮ್ಮಾಯಿ (ಮುಂದು)**

ಆದರೆ, ಒಟ್ಟಾರೆ ಉದ್ದೇಶ, ಇಲ್ಲಿ ನಡೆದಂತಹ ಘಟನೆಯಿಂದ ಪಾಠ ಕಲಿತು, ನಾವು ಇಡೀ ಸದನ ಒಂದಾಗಿ ಈ ರಾಜ್ಯದ ಜನರಿಗೆ ವಿಶ್ವಾಸ ಮೂಡಿಸಿ, ಅವರ ಮಾನ ಮತ್ತು ಪ್ರಾಣಕ್ಕೆ ಹಾನಿಯಾಗದಂತೆ ನಾವೆಲ್ಲರೂ ಸೇರಿ ನೋಡಿಕೊಳ್ಳುತ್ತೇವೆ. ಏನೇ ಪ್ರಸಂಗ ಬಂದರೂ ಕೂಡ, ಶಾಂತಿ ಸುವ್ಯವಸ್ಥೆಯನ್ನು ಕದಡುವುದಕ್ಕೆ ಬಿಡುವುದಿಲ್ಲ ಮತ್ತು ಯಾವುದೇ ರೀತಿಯ ದುಷ್ಟ ಶಕ್ತಿಗಳಿಗೆ ಅವಕಾಶವನ್ನು ಕೊಡುವುದಿಲ್ಲ ಎನ್ನುವಂತಹ ಒಂದು ಸಂದೇಶ ಕಳುಹಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಆಮೇಲೆ ನ್ಯಾಯಾಂಗ ತನಿಖೆಯ ಪ್ರಶ್ನೆ ಇಲ್ಲ. ಆದರೆ, ಈಗಾಗಲೇ Magistrate Inquiry ಪೂರ್ಣ ಪ್ರಮಾಣದ advanced stage ನಲ್ಲಿ ಇದೆ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ಸದನ ಸಮಿತಿ ಮಾಡುವ ಬಗ್ಗೆ ಕೇಳಿದ್ದೆವು. ಅದರ ಬಗ್ಗೆ ಮಾನ್ಯ ಗೃಹ ಸಚಿವರು ಬೆಳಕು ಚೆಲ್ಲಬೇಕು. ಈಗ ಮೂರು ಪಕ್ಷಗಳನ್ನು ಸೇರಿಸಿ ಒಂದು ಸದನ ಸಮಿತಿಯನ್ನು ರಚನೆ ಮಾಡಿದರೆ, ಇದರ ವಾಸ್ತವಾಂಶ ಏನು ಎಂದು ಜನರಿಗೆ ಗೊತ್ತಾಗುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಇದುವರೆಗೂ ಯಾವುದೇ ಗೋಲಿಬಾರ್‌ಗೆ ಸದನ ಸಮಿತಿ ರಚನೆ ಆಗಿರುವಂತಹ ಇತಿಹಾಸ ಕರ್ನಾಟಕ ರಾಜ್ಯದಲ್ಲಿ ಆಗಿಲ್ಲ. ಅವರ ಸರ್ಕಾರ ಅಧಿಕಾರದಲ್ಲಿದ್ದಾಗ ಕೂಡ ಗೋಲಿಬಾರ್ ಆಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಇಷ್ಟು ಹೊತ್ತು ಬಹಳ ಸುದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಆದರೆ, ಅಲ್ಲಿ ನಡೆದಿರುವಂತಹ ಗಲಭೆ ಬಗ್ಗೆ ಇಡೀ ರಾಜ್ಯದಲ್ಲಿ ಗೊಂದಲದ ವಾತಾವರಣವಿದೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇದಕ್ಕೆ ಸದನ ಸಮಿತಿ ಮಾಡಬೇಕು.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ನಾವು Magistrate Inquiry ಮಾಡುತ್ತಿದ್ದೇವೆ. ಅದು ಮುಂದುವರೆದಿದೆ. ಈಗಾಗಲೇ ಅವರು ಕೋರ್ಟ್ ಮುಂದೆ ಮಧ್ಯಂತರ ವರದಿಯನ್ನು ಸಲ್ಲಿಸಿದ್ದಾರೆ. ಆ ಮಧ್ಯಂತರ ವರದಿ none other than the Chief Justice of Karnataka ಅವರ scrutiny ಯಲ್ಲಿ ಇದೆ. ಹೀಗಾಗಿ ನ್ಯಾಯಾಂಗ ತನಿಖೆ ಮತ್ತು ಸದನ ಸಮಿತಿಯ ಅವಶ್ಯಕತೆ ಇಲ್ಲ ಎನ್ನುವುದು ಸರ್ಕಾರದ ನಿಲುವು.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಸದನ ಸಮಿತಿ ರಚನೆ ಮಾಡಬೇಕು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾವು ಏನು demand ಮಾಡಿದ್ದೆವು. ಆ ಒಂದು demand ಅನ್ನು ಕೂಡ ಸರಿಯಾಗಿ fulfill ಮಾಡುವುದಕ್ಕೆ ಈ ಸರ್ಕಾರ ಅಸಮರ್ಥವಾಗಿದೆ ಮತ್ತು ತಿರಸ್ಕಾರ ಮಾಡಿದೆ. ಆ ದೃಷ್ಟಿಯಿಂದ ನಾವು protest ಮಾಡಿ ಸದನದಿಂದ walkout ಮಾಡುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸದನದ ಮೂಲಕ ವಾಸ್ತವಾಂಶಗಳನ್ನು ಹೊರಗೆ ತೆಗೆಯುವುದಕ್ಕೆ ಸರ್ಕಾರ ಪ್ರಯತ್ನ ಮಾಡದೆ ಇರುವುದರಿಂದ ನಾವು ಕೂಡ ಬಹಿಷ್ಕಾರ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಧಿಕ್ಕಾರ ಕೂಗುತ್ತಾ ಸಭಾತ್ಯಾಗ ಮಾಡಿದರು)**

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಈಗ ನಿಯಮ 330ಎ ಅಡಿಯಲ್ಲಿನ ವಿಶೇಷ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಹೇಳಿಕೆಯನ್ನು ಕೊಡಿ.

**ಶ್ರೀ ಅರವಿಂದ ಕುಮಾರ ಅರಳಿ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ.

**4. ನಿಯಮ 330ಎ ಅಡಿ ಪ್ರಸ್ತಾಪಿಸಲಾಗಿದ್ದ ವಿಶೇಷ ಪ್ರಸ್ತಾವಕ್ಕೆ ಸರ್ಕಾರದಿಂದ ಉತ್ತರ**

**ವಿಷಯ:–** ಬೆಂಗಳೂರು ನಗರ ವ್ಯಾಪ್ತಿಯಲ್ಲಿ ರೇಬಿಸ್ ಕಾಯಿಲೆಯಿಂದ ಐದು ಜನರು ಬಲಿಯಾಗಿರುವುದರಿಂದ ಬೀದಿ ನಾಯಿಗಳಿಗೆ Antivirus Vaccine ಹಾಕುವ ಬಗ್ಗೆ.

– – – – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ದಿನಾಂಕ:19.02.2020ರ ರಂದು ಶ್ರೀಮತಿ ಜಯಮಾಲ ರಾಮಚಂದ್ರ ರವರು ನಿಯಮ 330ಎ ಅಡಿಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

**5. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ರಾಜ್ಯಪಾಲರು ನಮ್ಮ ಎರಡು ಸದನವನ್ನು ಕುರಿತು ಮಾಡಿದಂತಹ ಭಾಷಣ, ನಮ್ಮ ರಾಜ್ಯ ಸರ್ಕಾರದ ದಿಕ್ಸೂಚಿಯನ್ನು ಮತ್ತು ಕರ್ನಾಟಕದ ಸರ್ವ ಜನರನ್ನು ಉದ್ದೇಶಿಸಿ ಮಾಡಿದಂತಹ ಭಾಷಣವಾಗಿತ್ತು. ಉದಾಹರಣೆಗೆ ಹೇಳುವುದಾದರೆ, ಕರ್ನಾಟಕದಲ್ಲಿ ಇದುವರೆವಿಗೂ ಯಾವ ಸರ್ಕಾರವೂ ಕೂಡ ಮಾಡದೇ ಇರುವಂತಹ ಒಂದು ಒಳ್ಳೆಯ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳಾದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಬಿ.ಎಸ್.ಯಡಿಯೂರಪ್ಪನವರ ಸರ್ಕಾರ ಮಾಡಿದೆ. ಅದೇನೆಂದರೆ, ಮನೆಗಳು ಬಿದ್ದಿದ್ದರೆ ಹೆಚ್ಚು ಎಂದರೆ ಒಂದು ಲಕ್ಷ ಅಥವಾ ಒಂದೂವರೆ ಲಕ್ಷವನ್ನು ಕೊಡಬಹುದಿತ್ತು. ಆದರೆ, ಈಗ ಕರ್ನಾಟಕ ಸರ್ಕಾರ ಕೊಟ್ಟಿರುವಂಥದ್ದು ಸುಮಾರು ಐದು ಲಕ್ಷ ರೂಪಾಯಿಗಳು. ಇವತ್ತು ವಿರೋಧ ಪಕ್ಷದವರು ಸುಮಾರು ಹತ್ತು ಲಕ್ಷದವರೆಗೆ ಕೊಡಬೇಕೆಂದು ಹೇಳುತ್ತಿದ್ದರು. ಆದರೆ, ಇಡೀ ದೇಶದಲ್ಲಿ ಇದುವರೆವಿಗೂ ಐದು ಲಕ್ಷ ರೂಪಾಯಿಗಳನ್ನು ಯಾವ ಸರ್ಕಾರ ಕೂಡ ಕೊಟ್ಟಿಲ್ಲ. ಅಷ್ಟು ಹಣವನ್ನು ಯಾವುದೇ ವಿರೋಧ ಪಕ್ಷದವರ ಬೇಡಿಕೆ ಇಲ್ಲದೆಯೇ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ ಸರ್ಕಾರ ಕೊಟ್ಟಿರುವಂಥದ್ದು ಅತ್ಯಂತ ಅಭಿನಂದನೀಯ ಎಂದು ನಾನು ಈ ಸಂದರ್ಭದಲ್ಲಿ ಭಾವಿಸುತ್ತೇನೆ. ಅದೇ ರೀತಿಯಾಗಿ ನಮ್ಮೆಲ್ಲರಿಗೂ ಕೂಡ MGNREGS ಅಡಿಯಲ್ಲಿ ಬೇಸಿಗೆಯಲ್ಲಿ 100 ದಿನಗಳವರೆಗೆ ಉದ್ಯೋಗವನ್ನು ಕೊಡಬಹುದು ಎನ್ನುವಂತಹ ಯೋಜನೆ ಇತ್ತು. ಈಗ ಅದನ್ನು 150 ದಿನಗಳವರೆಗೆ ಹೆಚ್ಚಿಗೆ ಮಾಡಿರುವಂಥದ್ದು ಅತ್ಯಂತ ಸ್ವಾಗತಾರ್ಹವಾಗಿರತಕ್ಕಂಥದ್ದು ಎಂದು ಭಾವಿಸುತ್ತೇನೆ. ಅದೇ ರೀತಿಯಾಗಿ ನೀರಾವರಿಗೆ ಸಂಬಂಧಪಟ್ಟಂತೆ ಅನೇಕ ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ ಕೊಟ್ಟಿರುವಂಥ ಸಾಕಷ್ಟು ವಿಚಾರಗಳಿವೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಕೋರಂ ಇದೆಯೇ ಎಂದು ಸ್ವಲ್ಪ ಪರಿಶೀಲನೆ ಮಾಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಉದಾಹರಣೆಗೆ ಹೇಳುವುದಾದರೆ, ಹೊಸಪೇಟೆ ಮತ್ತು ಸುತ್ತಮುತ್ತಲಿನ ಹಳ್ಳಿಗಳಿಗೆ ನೀರನ್ನು ತಲುಪಿಸುವುದಕ್ಕೋಸ್ಕರವಾಗಿ ಸುಮಾರು 450 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ಕೊಟ್ಟಿರುವಂಥದ್ದು. ಅದೇರೀತಿ 175 ಕೆರೆಗಳನ್ನು ತುಂಬಿಸುವುದಕ್ಕೋಸ್ಕರವಾಗಿ ಸುಮಾರು 496 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುವಂಥದ್ದು. ಈ ತರಹ ಅನೇಕ ಯೋಜನೆಗಳು ನೀರಾವರಿಗೆ ಸಂಬಂಧಪಟ್ಟಂತೆ ಇದೆ. ಈ ಸರ್ಕಾರ ಮಹಿಳೆಯರ ಪರವಾಗಿ ಇದೆ ಎಂದು ಹೇಗೆ ಅನಿಸುತ್ತಿದೆ ಎಂದರೆ, ಆಶಾ ಕಾರ್ಯಕರ್ತೆಯರು ಏನು ಇದ್ದಾರೆ, ಅವರಿಗೆ ಇದುವರೆಗೆ ಸುಮಾರು 3,500/- ರೂಪಾಯಿಗಳ ವೇತನ ಸಿಗುತಿತ್ತು. ಅದನ್ನು ಸುಮಾರು 4,000/- ರೂಪಾಯಿಗಳಿಗೆ ಹೆಚ್ಚಿಸಿರುವುದು ಬಹಳ ಅಭಿನಂದನೀಯ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅದೇರೀತಿ ಅಂಗನವಾಡಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾರ್ಯಕರ್ತೆಯರಿಗೆ ಸುಮಾರು 8,000/- ರೂಪಾಯಿಗಳ ವೇತನ ಸಿಗುತಿತ್ತು. ಅದನ್ನು ಸುಮಾರು 10,000/- ರೂಪಾಯಿಗಳಿಗೆ ಹೆಚ್ಚಿಗೆ ಮಾಡಿರುವಂಥದ್ದು ಅತ್ಯಂತ ಅಭಿನಂದನಾರ್ಹ ಮತ್ತು ಮಹಿಳೆಯರ ಪರ ಇರುವಂತಹ ಸರ್ಕಾರ ಎನ್ನುವುದು ಮತ್ತೊಮ್ಮೆ ಸಾಭೀತಾಗುತ್ತಿದೆ. ಅದೇ ತರಹ ಸ್ವಸಹಾಯ ಗುಂಪುಗಳಿಗೆ ಸುಮಾರು 10,000/- ರೂಪಾಯಿಗಳವರೆಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ಕೊಟ್ಟಿರುವಂಥದ್ದು. ಅದು ಸಹ ಮಹಿಳೆಯರ ಪರ ಮತ್ತು ಸಣ್ಣ ಕೈಗಾರಿಕೆಗಳ ಪರ ಹಾಗೂ ಗುಡಿ ಕೈಗಾರಿಕೆಗಳ ಪರ ಎನ್ನುವುದು ಇದರಿಂದ ನಮ್ಮೆಲ್ಲರಿಗೂ ಸಹ ಗೊತ್ತಾಗುತ್ತಿದೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರುಗಳು ಸದನಕ್ಕೆ ಆಗಮಿಸಿದರು)**

ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಸರ್ಕಾರ ಎಸ್.ಸಿ. ಮತ್ತು ಎಸ್.ಟಿ.ಗಳ ಪರವಾಗಿ ಇದೆ ಎಂಬುದಕ್ಕೆ ಇದುವರೆಗೆ 30,445/- ಕೋಟಿ ರೂಪಾಯಿಗಳನ್ನು ಬೇರೆ ಬೇರೆ ಉದ್ದೇಶಗಳಿಗೆ ಸಮಾಜೋಪಯೋಗಿ ಮತ್ತು ಜನೋಪಯೋಗಿ ಕಾರ್ಯಗಳಿಗೆ ಕೊಟ್ಟಿರುವಂಥದ್ದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ವ್ಯಕ್ತವಾಗಿದೆ. ಅದೇರೀತಿ ಮೊನ್ನೆ ಹುಬ್ಬಳ್ಳಿಯಲ್ಲಿ ನಡೆದಿರತಕ್ಕಂಥ 'Investors Meet' (Invest Karnataka -Huballi Conference) ನಂತಹ ಹೂಡಿಕೆಯ ಸಭೆಯನ್ನು ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಬೆಳಗಾವಿ, ಗುಲ್ಬರ್ಗ, ಹುಬ್ಬಳ್ಳಿ-ಧಾರವಾಡ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಬೆಂಗಳೂರು ಹೊರತಾಗಿ, ಬೇರೆ ಬೇರೆ ನಗರಗಳನ್ನು ಅಭಿವೃದ್ಧಿ ಮಾಡಬೇಕು ಎನ್ನುವಂತಹ ಒಂದು ಉದ್ದೇಶವಿದೆ. ಇಡೀ ದೇಶದಲ್ಲಿ ಎರಡನೆ ಅತಿ ದೊಡ್ಡ "Investors' Meet" ಇದಾಗಿದೆ. ಸುಮಾರು 73,000/- ಸಾವಿರ ಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡುವುದಕ್ಕೆ ಅಲ್ಲಿನ ಸಭೆಯಲ್ಲಿ ನಿರ್ಣಯ ಮಾಡಲಾಗಿದೆ.

**(ಮುಂದು...)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(98) 20.02.2020 04.30 LL-GR
**ಶ್ರೀ ಎನ್. ರವಿಕುಮಾರ್(ಮುಂದುವರೆದಿದ್ದು...)**

ಪೊಲೀಸ್ ನೇಮಕಾತಿಯಲ್ಲಿ ಶೇಕಡ 100ರಲ್ಲಿ 25ರಷ್ಟು ಮಾಡಬೇಕೆನ್ನುವ ನಿರ್ಣಯವನ್ನು ಮಾಡಿರುವುದು ಸೇರಿದಂತೆ ಅನೇಕ ವಿಷಯಗಳಿಗೆ ಸಂಬಂಧಪಟ್ಟಂತೆ, ಸಾಕಷ್ಟು ವಿಚಾರಗಳನ್ನು

ರಾಜ್ಯಪಾಲರ ಭಾಷಣದಲ್ಲಿ ನಾವು ಹೇಳಿದ್ದೇವೆ. ಮಾನ್ಯ ವಿಪಕ್ಷ ನಾಯಕರು ಭಾಷಣ ಮಾಡತಕ್ಕಂತಹ ಸಂದರ್ಭದಲ್ಲಿ ಹೇಳಿದಂತಹ ವಿಷಯಗಳಿಗೆ ಸಂಬಂಧಪಟ್ಟಂತೆ, ಒಂದೆರಡು ಅಂಶಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ, law and order failure ಆಗಿದೆ ಎಂದು ಏನು ಹೇಳಿದ್ದರು? ನನಗನ್ನಿಸುತ್ತದೆ ಇದು ಅತ್ಯಂತ ಪೂರ್ವನಿಯೋಜಿತವಾಗಿರತಕ್ಕಂತಹ ಟೀಕೆಯನ್ನು ಈ ಸರ್ಕಾರದ ವಿರುದ್ಧ ಮಾಡಲೇಬೇಕು ಎನ್ನುವಂತಹ ಮೈಂಡ್‌ಸೆಟ್‌ನಿಂದ ಮಾಡಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಭಾವಿಸುತ್ತೇನೆ. ಉದಾಹರಣೆಗೆ, C.A.A., [Citizenship (Amendment) Act] ಇದು ಭಾರತೀಯ ಜನತಾ ಪಾರ್ಟಿ ತಂದಿರತಕ್ಕ ಕಾನೂನಲ್ಲ. 1955ನೇ ಇಸವಿಯಲ್ಲಿಯೇ ಕಾಂಗ್ರೆಸ್ ಸರ್ಕಾರ ತಂದಿರತಕ್ಕಂತಹ ಕಾನೂನು. ಯಾವಾಗ ಭಾರತ ಮತ್ತು ಪಾಕಿಸ್ತಾನ ವಿಭಜನೆಯಾದಂತಹ ಸಂದರ್ಭದಲ್ಲಿ, ಭಾರತದಲ್ಲಿ ದೇಶದಲ್ಲಿರತಕ್ಕಂತಹ ಹಿಂದೂಗಳು, ಸಿಖ್ಖರು, ಮುಸಲ್ಮಾನರು ಎಲ್ಲಾ ಜನಾಂಗದವರು 6-7 ಧರ್ಮದವರು ಪಾಕಿಸ್ತಾನಕ್ಕೆ ಹೋದರು. ಆ ಸಂದರ್ಭದಲ್ಲಿ ನಮಗೆಲ್ಲಾ ಗೊತ್ತಿರುವಂತೆ ಪಾಕಿಸ್ತಾನದ ಕಾನೂನು ಸಚಿವರು ಶ್ರೀ ಜೋಗೇಂದ್ರನಾಥ್ ಮಂಡಲ್ ಆಗಿದ್ದರು. ದಲಿತ ನಾಯಕನಾದ ಶ್ರೀ ಜೋಗೇಂದ್ರನಾಥ್ ಮಂಡಲ್ ಅವರು ಪಾಕಿಸ್ತಾನದ ಮೊದಲನೆ ಕಾನೂನು ಸಚಿವರಾಗಿರುತ್ತಾರೆ. ಅವರು, "ನನಗೆ ಪಾಕಿಸ್ತಾನದಲ್ಲಿ ತುಂಬಾ ಬೇಸರವಾಗುತ್ತಿದೆ" ಎಂದು ಹೇಳುತ್ತಾರೆ. ಏಕೆಂದರೆ, "ನಾನು ಭಾರತ ದೇಶದಿಂದ ಪಾಕಿಸ್ತಾನಕ್ಕೆ ಬಂದಿದ್ದೇನೆ, ಕಾನೂನು ಸಚಿವನಾಗಿದ್ದೇನೆ. ಆದರೆ, ನನ್ನ ಜೊತೆಯಲ್ಲಿ ಬಂದಿರತಕ್ಕಂತಹ ಹಿಂದೂಗಳು, ಸಿಖ್ಖರು, ಮೈನಾರಿಟಿಗಳಿದ್ದಾರೆ. ಅವರಿಗೆ ಈ ದೇಶದಲ್ಲಿ ಏನೇನು ಅನುಕೂಲತೆಗಳು ಸಿಗುತ್ತಿಲ್ಲ. ಅವರಿಗೆ ರಕ್ಷಣೆ ಕೊಡಬೇಕೆಂದರೆ ನನ್ನನ್ನೇ ಪಾಕಿಸ್ತಾನದವರು ದೂರುತ್ತಿದ್ದು, ನನಗೆ ರಕ್ಷಣೆಯನ್ನು ಕೊಡುತ್ತಿಲ್ಲವೆಂದು ರಾಜೀನಾಮೆಯನ್ನು ಕೊಟ್ಟು ನಾನು ಭಾರತಕ್ಕೆ ಬಂದನೆಂದು" ಶ್ರೀ ಜೋಗೇಂದ್ರನಾಥ್ ಮಂಡಲ್‌ರವರು ಹೇಳುತ್ತಾರೆ. ಅವರು ಒಬ್ಬ ದಲಿತ ನಾಯಕನಾಗಿರುತ್ತಾರೆ. ಆದರೆ ಆ ಸಂದರ್ಭದಲ್ಲಿಯೂ ಕೂಡ ಅವೊತ್ತಿನ ದಿವಸ ನಮ್ಮ ದೇಶವನ್ನು ಆಳುತ್ತಿರುವ ಸರ್ಕಾರ ನಮ್ಮ ದೇಶದೊಳಗೆ ಅವರನ್ನು ಬೆಂಬಲಿಸುವುದಿಲ್ಲ. ಶ್ರೀ ಜೋಗೇಂದ್ರನಾಥ್ ಮಂಡಲ್‌ರವರು ಅತ್ಯಂತ ನೋವಿನಿಂದ ಪಾಕಿಸ್ತಾನದಿಂದ ಕಲ್ಕತ್ತಾಗೆ ವಾಪಸ್ಸು ಬರುತ್ತಾರೆ. ಇದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎರಡನೆಯದಾಗಿ, "ಪಾಕಿಸ್ತಾನದಿಂದ ಯಾರ್‍ಯಾರು ನಮ್ಮ ದೇಶಕ್ಕೆ ಬರುತ್ತಾರೆ, ಅವರೆಲ್ಲರಿಗೂ ನಮ್ಮ ದೇಶದೊಳಗೆ ಎಲ್ಲಾ ಅನುಕೂಲಗಳನ್ನು ಕೊಡಬೇಕೆಂದು" ಮಹಾತ್ಮ ಗಾಂಧೀಜಿಯವರು ಹೇಳಿರುತ್ತಾರೆ. ಶ್ರೀ ಜವಾಹರಲಾಲ್ ನೆಹರುರವರು ಸಹ ಇದೇ ಮಾತನ್ನು ಹೇಳಿರುತ್ತಾರೆ. ಶ್ರೀ ಜವಹರಲಾಲ್ ನೆಹರು ಮತ್ತು ಪಾಕಿಸ್ತಾನದ 2ನೇ ಪ್ರಧಾನ ಮಂತ್ರಿಯಾಗಿರತಕ್ಕಂತಹ ಮಾನ್ಯ ಲಿಯಾಕತ್ ಆಲಿಖಾನ್ ಜೊತೆಯಲ್ಲಿ ಒಂದು ಒಪ್ಪಂದವಾಗುತ್ತದೆ. ಅದೇನೆಂದರೆ, ಭಾರತ ದೇಶದಲ್ಲಿ ಮೈನಾರಿಟೀಸ್‌ಗಳಿಗೆ ಏನೇನು ಸೌಕರ್ಯಗಳಿವೆ, ಅದೇ ರೀತಿಯ ಅನುಕೂಲತೆಗಳು ಪಾಕಿಸ್ತಾನದಲ್ಲಿಯೂ ಸಿಗಬೇಕೆಂದು ಭಾರತ ಮತ್ತು ಪಾಕಿಸ್ತಾನದ ಇಬ್ಬರು ಪ್ರಧಾನ ಮಂತ್ರಿಗಳ ಮಧ್ಯದಲ್ಲಿ 1950ರಲ್ಲಿ ಮಾನ್ಯ ಜವಹರಲಾಲ್ ನೆಹರು, ಮಾನ್ಯ ಲಿಯಾಕತ್ ಆಲಿಖಾನ್ ಒಪ್ಪಂದವಾಗುತ್ತದೆ. ಆದರೆ, ಆ ಒಪ್ಪಂದದಂತೆ ಪಾಕಿಸ್ತಾನ ನಡೆದುಕೊಳ್ಳುವುದಿಲ್ಲ. ತತ್ಪರಿಣಾಮವಾಗಿ, ಪಾಕಿಸ್ತಾನದಲ್ಲಿರತಕ್ಕಂತಹ ನಮ್ಮ ಮೈನಾರಿಟೀಸ್‌ಗಳು ಭಾರತ ದೇಶಕ್ಕೆ ವಾಪಸ್ಸು ಬರುವುದಕ್ಕೆ ನಿರ್ಧಾರ ಮಾಡುತ್ತಾರೆ. ಇದುವರೆವಿಗೂ ಲಕ್ಷಾಂತರ ಜನ ವಾಪಸ್ಸು ಭಾರತಕ್ಕೆ ಬಂದಿರುತ್ತಾರೆ. ಆ ರೀತಿ ವಾಪಸ್ಸು ಬಂದಿರುವ ಅನೇಕರಿಗೆ ಇದುವರೆವಿಗೂ ಪೌರತ್ವ ಸಿಕ್ಕಿರುವುದಿಲ್ಲ. ಶ್ರೀ ಮನಮೋಹನ್‌ಸಿಂಗ್ ರವರು 2003ನೇ ಇಸವಿಯಲ್ಲಿ ರಾಜ್ಯ ಸಭಾ ಸದಸ್ಯರಾಗಿರುತ್ತಾರೆ. ಅವರ ಜೊತೆಯಲ್ಲಿ ಶ್ರೀ ಅಶೋಕ್ ಗೆಹ್ಲೋಟ್ ರವರು ಸಹ ಅವರ ಪಕ್ಕದಲ್ಲಿಯೇ ಕುಳಿತಿರುತ್ತಾರೆ. ಆ ಇಬ್ಬರೂ ಶ್ರೀ ಎಲ್.ಕೆ. ಅಡ್ವಾಣಿಯವರಿಗೆ ಮತ್ತು ಶ್ರೀ ವಾಜಪೇಯಿಯವರಿಗೆ, "ಬಾಂಗ್ಲಾದೇಶದಿಂದ ಬಹಳಷ್ಟು ಜನ ನಿರಾಶ್ರಿತರಾಗಿ ಬಂದಿದ್ದಾರೆ. ಅವರಿಗೆ ಅಲ್ಲಿ ಏನೇನು ಅನುಕೂಲತೆಗಳಿರುವುದಿಲ್ಲ. ಅವರು ಬಹಳಷ್ಟು ಕಷ್ಟ-ಕಾರ್ಪಣ್ಯದಲ್ಲಿ ಕೈತೊಳೆಯುತ್ತಿದ್ದಾರೆ. ಅವರಿಗೆ ಪೌರತ್ವವನ್ನು ಕೊಡಬೇಕು. ಅವರಿಗೆ ಅನುಕೂಲಗಳನ್ನು ಕೊಡಬೇಕೆಂದು ಹೇಳುತ್ತಾರೆ. ಆದರೆ, ಇವೊತ್ತಿನ ದಿವಸ ಅದೇ ಕಾಂಗ್ರೆಸ್ ಪಾರ್ಟಿ, "ನೀವು ಏತಕ್ಕೆ ಅವರಿಗೆ ಪೌರತ್ವ ಕೊಡುತ್ತಿದ್ದೀರೆಂದು" ಕೇಳುತ್ತಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ರವಿಕುಮಾರ್‌ರವರೇ, ಶ್ರೀ ಮನಮೋಹನ್ ಸಿಂಗ್ ರವರ ಕಾಲಕ್ಕೆ ಏನು ಸುತ್ತೋಲೆ ಇತ್ತು, ಈಗ ತಮ್ಮ ಸರ್ಕಾರದಲ್ಲಿ ಏನು ಸುತ್ತೋಲೆ ಎನ್ನುವುದರ ಬಗ್ಗೆ ಮಾಹಿತಿ ನೀಡುತ್ತೀರಾ?

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಶ್ರೀ ಮನಮೋಹನ್ ಸಿಂಗ್‌ರವರು ಇದ್ದಂತಹ ಸಂದರ್ಭದಲ್ಲಿ 11 ವರ್ಷಗಳ ಕಾಲ ನಮ್ಮ ದೇಶದಲ್ಲಿದ್ದಂತಹ ನಿರಾಶ್ರಿತರಿಗೆ ಭಾರತದ ಪೌರತ್ವ ನೀಡಬೇಕೆಂದು ಕಾಯಿದೆ ಇತ್ತು. ಅಲ್ಲಿಯವರೆಗೂ, ಅವರಿಗೆ ಪೌರತ್ವ ಸಿಗುತ್ತಿರಲಿಲ್ಲ. ಆದರೆ, ನಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಅದನ್ನು 5 ವರ್ಷಗಳಿಗೆ ಇಳಿಸಿರುತ್ತದೆ. ಅದೊಂದೇ ವ್ಯತ್ಯಾಸವನ್ನು ಮಾತ್ರ ನಮ್ಮ ಸರ್ಕಾರ ಮಾಡಿರುತ್ತದೆ. ಎರಡನೆಯದಾಗಿ, ಏಪ್ರಿಲ್ 31ನೇ ತಾರೀಖು ಕಾಲಾವಧಿ ನಿಗದಿ ಮಾಡಿರುತ್ತೇವೆ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಒಂದು ತಪ್ಪು ಮಾಡಿರುತ್ತಾರೆ. ಅದೇನೆಂದರೆ, ಮುಸ್ಲಿಂರನ್ನು ಬಿಟ್ಟು ಕ್ರಿಶ್ಚಿಯನ್, ಹಿಂದೂಗಳು, ಸಿಖ್ಖರು ಇನ್ನೂ ಬೇರೆ ಬೇರೆ ಎಲ್ಲಾ ಧರ್ಮದವರಿಗೆ ಹೇಳಿ, 'ಆನೆ ನಡೆದಿದ್ದೇ ದಾರಿ' ಎಂದು ಹೇಳಿದ್ದಕ್ಕೆ ಈ ಪ್ರಶ್ನೆ ಬಂದಿರುತ್ತದೆ. ಈ ರೂಲ್ಸ್‌ನಲ್ಲಿ ಯಾರ್ಯಾರು ನಿರಾಶ್ರಿತರು ನಮ್ಮ ದೇಶಕ್ಕೆ ಬರುತ್ತಾರೆ ಅವರಿಗೆ ಪೌರತ್ವ ಕೊಡುತ್ತೇವೆಂದು ಹೇಳಿದ್ದರೆ ಈ ಪ್ರಶ್ನೆ ಬರುತ್ತಿರಲಿಲ್ಲ. ಇದರಲ್ಲಿ ಮುಸ್ಲಿಂರನ್ನು ಬಿಟ್ಟಿದ್ದಕ್ಕೆ ಮಾತ್ರ ಈ ಎಲ್ಲಾ ಗಲಾಟೆ ಬಂದಿರುತ್ತದೆ. ಅವರನ್ನು ಬಿಡಬಾರದಿತ್ತು. ಆ ವಿಷಯದಲ್ಲಿಯೇ ಕೇಂದ್ರ ಸರ್ಕಾರ ತಪ್ಪು ಮಾಡಿರುತ್ತದೆ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಈ ವಿಷಯ ಮೈನಾರಿಟಿಯವರಿಗೆ ಮಾತ್ರ ಸಂಬಂಧಿಸಿರುತ್ತದೆ. ಪಾಕಿಸ್ತಾನದಿಂದ ಬಂದಿರತಕ್ಕಂತಹ ಮೈನಾರಿಟಿಯವರಿಗೆ ಮಾತ್ರ ಸಂಬಂಧಿಸಿರುತ್ತದೆ. ಪಾಕಿಸ್ತಾನದಲ್ಲಿ, ಆಫ್ಘಾನಿಸ್ತಾನಿದಲ್ಲಿ, ಬಾಂಗ್ಲಾದೇಶದಲ್ಲಿ ಮುಸಲ್ಮಾನರು ಅಲ್ಪಸಂಖ್ಯಾತರಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಆದರೆ ಪೌರತ್ವ ಕಾಯಿದೆಯಲ್ಲಿ ಕೆಲವು ಧರ್ಮದ ಹೆಸರನ್ನು ಮಾತ್ರ ಹಾಕಿರುತ್ತಾರೆ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮುಸಲ್ಮಾನರು ಆ 3 ದೇಶಗಳಲ್ಲಿ ಅಲ್ಪಸಂಖ್ಯಾತರಲ್ಲ. ಇದು ಅಲ್ಪಸಂಖ್ಯಾತರಿಗೆ ಮಾತ್ರ ಸಂಬಂಧಪಟ್ಟಿರುವ ಕಾನೂನಾಗಿದ್ದು, ಬಹುಸಂಖ್ಯಾತರಿಗೆ ಸಂಬಂಧಪಟ್ಟಿರುವುದಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಆದರೆ ಈ ಕಾಯಿದೆಯಲ್ಲಿ ಕ್ರಿಶ್ಚಿಯನ್, ಹಿಂದೂಗಳು ಮತ್ತು ಸಿಖ್ಖರು ಎಲ್ಲಾ ಧರ್ಮದವರನ್ನು ಸೇರಿಸಿ ಮುಸಲ್ಮಾನರನ್ನು ಮಾತ್ರ ಸೇರಿಸಿರುವುದಿಲ್ಲ. ಅದು ನಮ್ಮ ಪ್ರಶ್ನೆಯಾಗಿದೆ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಕ್ರಿಶ್ಚಿಯನ್, ಸಿಖ್ಖರು ಮತ್ತು ಹಿಂದೂಗಳು ಆ ದೇಶಗಳಲ್ಲಿ ಅಲ್ಪಸಂಖ್ಯಾತರಾಗಿರುತ್ತಾರೆ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ಮೇಲೆ ನನಗೆ ಅಪಾರವಾದ ಗೌರವವಿದೆ. ಪಾಕಿಸ್ತಾನ, ಆಫ್ಘಾನಿಸ್ತಾನ ಮತ್ತು ಬಾಂಗ್ಲಾದೇಶದಲ್ಲಿ ಮುಸ್ಲಿಂಮರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಪಸಂಖ್ಯಾತರಲ್ಲ. ಈ 3 ದೇಶಗಳು ನಮ್ಮದು ಮುಸಲ್ಮಾನ ದೇಶಗಳೆಂದು ಘೋಷಣೆ ಮಾಡಿಕೊಂಡಿರುತ್ತವೆ. ತತ್ಪರಿಣಾಮವಾಗಿ, 'ಮುಸಲ್ಮಾನ ದೇಶ'ಗಳೆಂದು ಘೋಷಣೆಯಾದ ನಂತರ ಅಲ್ಲಿರತಕ್ಕಂತಹ ಹಿಂದೂಗಳು, ಸಿಖ್ಖರಿಗೆ, ಕ್ರಿಶ್ಚಿಯನ್ನರಿಗೆ ಯಾವುದೇ ಕೆಲಸ ಸಿಗುತ್ತಿರಲಿಲ್ಲ. ಪರಿಣಾಮವಾಗಿ ಅವರು ಭಾರತ ದೇಶಕ್ಕೆ ಬಂದರು.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಆ 3 ದೇಶಗಳು ಮುಸಲ್ಮಾನ ದೇಶಗಳಲ್ಲ. ಅವುಗಳು 'ಇಸ್ಲಾಮಿಕ್ ಸ್ಟೇಟ್'ಗಳು. ಈ ವಿಷಯವನ್ನು ರಾಜ್ಯಪಾಲರ ಭಾಷಣದಲ್ಲಿ ಪೌರತ್ವ ಕಾಯಿದೆ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿದೆಯೇ?

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಮೇಲೆ ಸಿ.ಎ.ಎ., ಬಗ್ಗೆ ಮಾತನಾಡುವುದಕ್ಕೆ ಅವಕಾಶವಿದೆಯೇ?

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಪೌರತ್ವ ಕಾಯಿದೆಯ ಬಗ್ಗೆ ಪ್ರತಿಪಕ್ಷದವರು ಈಗಾಗಲೇ ಭಾಷಣ ಮಾಡಿರುತ್ತಾರೆ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ದಯಮಾಡಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪೌರತ್ವ ಕಾಯಿದೆ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಬಾರದು.

**(ಗೊಂದಲ)**

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಎಂ. ಇಬ್ರಾಹಿಂರವರು ರಾಜ್ಯಪಾಲರ ಭಾಷಣದ ಮೇಲೆ ಇದೇ ವಿಷಯವನ್ನು ಮಾತನಾಡಿರುತ್ತಾರೆ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ತಮ್ಮ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಮಾತನಾಡಲಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್ ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಪ್ರತಿಪಕ್ಷದವರು ರಾಜ್ಯದಲ್ಲಿ law and order failure ಆಗಿದೆ ಎಂದು ಹೇಳಿದ್ದಾರೆ. ಆದರೆ, ನಮ್ಮ ರಾಜ್ಯದಲ್ಲಿ law and order failure ಆಗಿರುವುದಿಲ್ಲ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಭಾರತದ ಪ್ರಧಾನ ಮಂತ್ರಿಯವರು 'ಬಿರಿಯಾನಿ' ತಿನ್ನುವುದಕ್ಕೆ ಪಾಕಿಸ್ತಾನಕ್ಕೆ ಹೋದ ವಿಷಯದ ಬಗ್ಗೆ ಆಡಳಿತ ಪಕ್ಷದವರು ಮಾತನಾಡುತ್ತಿಲ್ಲ.

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೇ, ಪೌರತ್ವ ಕಾಯಿದೆ ಬಗ್ಗೆ ಮಾತನಾಡುವುದಕ್ಕೆ ನಾವು ಕೂಡ ರೆಡಿ ಇದ್ದೇವೆ. ಆದುದರಿಂದ, ಪೌರತ್ವ ಕಾಯಿದೆ ವಿಷಯದ ಮೇಲೆ ಚರ್ಚೆ ಮಾಡುವುದಕ್ಕೆ ನಮಗೂ ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರಿಗೆ ಪಾಕಿಸ್ತಾನದ ವಿಷಯ ಬಿಟ್ಟರೆ ಮಾತನಾಡುವುದಕ್ಕೆ ಬೇರೆ ವಿಷಯ ಸಿಗುವುದಿಲ್ಲ. ಅದರ ಬದಲಾಗಿ, ನೀರಾವರಿ ವಿಷಯದ ಬಗ್ಗೆ ಮಾತನಾಡಲಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಪೌರತ್ವ ಕಾಯಿದೆ ಬಗ್ಗೆ ಪ್ರತಿಪಕ್ಷದವರು ಸಹ ತಮಗೆ ಅವಕಾಶ ಸಿಕ್ಕಾಗ ಮಾತನಾಡಲಿ.

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೇ, ನಮಗೂ ಅವಕಾಶ ಕೊಡಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ, ರಾಜ್ಯಪಾಲರ ಭಾಷಣದ ಬಗ್ಗೆ ಮಾತ್ರ ಮಾತನಾಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಶ್ರೀ ರವಿಕುಮಾರ್‌ರವರಿಗೆ ಅವಕಾಶ ಕೊಟ್ಟಿದ್ದೀರಿ. ಅವರು ಮಾತನಾಡಲಿ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಪೌರತ್ವ ಕಾಯಿದೆ ಬಗ್ಗೆ ಅನಗತ್ಯವಾಗಿ ಗೊಂದಲ ನಿರ್ಮಾಣ ಮಾಡುತ್ತಿದ್ದಾರೆ.

**(ಗೊಂದಲ)**

(ಮುಂದುವರೆದಿದೆ...)

(099)20.02.2020/4.40/ವೈಎಲ್–ಎಂಡಿ
**ಶ್ರೀ ಎನ್.ರವಿಕುಮಾರ್(ಮುಂದು)**

ಇಡೀ ದೇಶದಲ್ಲಿ *NRC (National Register of Citizens)* ವಿಚಾರವನ್ನು ತೆಗೆದುಕೊಂಡು ಅನಗತ್ಯವಾಗಿ ಪ್ರಸ್ತಾಪ ಮಾಡುತ್ತಿದ್ದಾರೆ, ಅವರು CAA (Citizenship Amendment Act) ಮತ್ತು *NRC* ಬಗ್ಗೆ ಮಾಡಿರತಕ್ಕಂಥ ಭಾಷಣವು ...

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ನೆರೆ ಹಾವಳಿಯಿಂದ ಜನರು ತತ್ತರಿಸಿ ಬೀದಿಗೆ ಬಿದ್ದಿರುವ ವಿಚಾರದ ಬಗ್ಗೆ ಮಾಡನಾಡಲು ಹೇಳಿ, ಸಾಲ ಮನ್ನಾವಾಗದೇ ರೈತರು ಸಾಯುತ್ತಿರುವ ವಿಚಾರವನ್ನು ಮಾತನಾಡಲು ಹೇಳಿ, ಶಿಕ್ಷಕರಿಗೆ ಸಂಬಳ ನೀಡದೇ ಇರುವ ವಿಚಾರವನ್ನು ಮಾತನಾಡಲು ಹೇಳಿ.

(ಗೊಂದಲ)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:-** ವಿರೋಧ ಪಕ್ಷದವರೇ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಇಲ್ಲದಿದ್ದರೆ ಏನು ಮಾಡಬೇಕೆಂಬುದನ್ನು ನೀವೇ ಹೇಳಿ. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮಗೆ ಪಾಕಿಸ್ತಾನದ ಬಗ್ಗೆ ಭಾಷಣ ಬೇಡ. ಈ ರಾಜ್ಯದ ಬಗ್ಗೆ ಮಾತನಾಡಲಿ. ರೈತರ ಸಾಲ ಮನ್ನಾ ಬಗ್ಗೆ ಮಾತನಾಡಲಿ. ಆಡಳಿತ ಪಕ್ಷದವರ ಬಾಯಿ ಮುಚ್ಚಿಸಿ, ನಂತರ ನಾವು ಕುಳಿತುಕೊಳ್ಳುತ್ತೇವೆ.

(ಗೊಂದಲ)

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇಷ್ಟು ಹೊತ್ತು ವಿರೋಧ ಪಕ್ಷದ ಸದಸ್ಯರು *NRC* ಬಗ್ಗೆ ಮಾತನಾಡಿರತಕ್ಕ ವಿಚಾರವು ಸರಿಯಾಗಿತ್ತೇ? ಅವರು ಮಾತನಾಡಬೇಕಾದರೆ ಏನು ಬೇಕಾದರೂ ಮಾತನಾಡಬಹುದೇ?

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ಸಹ ಎನ್.ಆರ್.ಸಿ. ಬಗ್ಗೆ ಮಾತನಾಡಲಿ.

(ಗೊಂದಲ)

**ಸಭಾಪತಿಯವರು:-** ಒಂದು ನಿಮಿಷ. ಮಾನ್ಯ ರಾಜ್ಯಪಾಲರು ಸದನದಲ್ಲಿ ಮಾತನಾಡದೇ ಇರುವುದನ್ನು ತಾವು ಇಲ್ಲಿ ಮಾತನಾಡುವುದು ಸಮಂಜಸವಲ್ಲ. ರಾಜ್ಯಪಾಲರು ಯಾವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ಎಲ್ಲವನ್ನೂ ಮಾತನಾಡಿ. ಅದು ಬಿಟ್ಟು, ರಾಜ್ಯಪಾಲರು ಯಾವ ವಿಚಾರವನ್ನು ಹೇಳಿಲ್ಲ, ಅದನ್ನು ಸದನದಲ್ಲಿ ಮಾತನಾಡಿ ಗೊಂದಲಕ್ಕೆ ಕಾರಣ ಮಾಡುವುದು ಬೇಡ.

(ಗೊಂದಲ)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಎಂ.ಇಬ್ರಾಹಿಂರವರು ಮಾತನಾಡಲಿಲ್ಲವೇ? ಆಗ ಅವರಿಗೆ ತಾವು ಮಾತನಾಡಲು ಅನುಮತಿ ನೀಡಲಿಲ್ಲವೇ?

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಶಾಸಕರ ನಿಧಿಗೆ ಹಣವನ್ನು ಬಿಡುಗಡೆ ಮಾಡುವುದಕ್ಕಾಗಿಲ್ಲ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣಕ್ಕೂ, CAA ಗೂ ಇರತಕ್ಕಂಥ ಸಂಬಂಧ ಏನೆಂದು ಹೇಳಿ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮನೆ ಇಲ್ಲದವರಿಗೆ ಮನೆ ಒದಗಿಸಲು ಆಗಲಿಲ್ಲ. ನೆರೆ ಹಾವಳಿಗೆ ಒಳಗಾದವರಿಗೆ ಪರಿಹಾರ ನೀಡಲು ಆಗಲಿಲ್ಲ. ಅವುಗಳ ಬಗ್ಗೆ ಅವರು ಮಾತನಾಡಲಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ತಾವು ಈ ರೀತಿ ಎಲ್ಲರೂ ಎದ್ದರೆ ನನಗೆ ಭಯವಾಗುತ್ತದೆ. ಸ್ವಲ್ಪ ನಾನು ಹೇಳುವುದನ್ನು ಕೇಳಿ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:–** ದೇವಸ್ಥಾನ, ಪಾಕಿಸ್ತಾನ ಈ ವಿಚಾರಗಳನ್ನು ಬಿಟ್ಟರೆ, ನಿಮ್ಮ ಹತ್ತಿರ ಬೇರೆ ಏನಾದರೂ ಮಾತು ಇದೆಯೇ? ಜನರು ಹಸಿವಿನಿಂದ ಸಾಯುತ್ತಿದ್ದಾರೆ, ಅದರ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡಿ. ನಮಗೆ ಏತಕ್ಕೆ ಪಾಕಿಸ್ತಾನದ ವಿಚಾರ ಬೇಕು. ನಿಜವಾಗಿಯು ಮನಸ್ಸಿದರೆ ಜನರ ಮತ್ತು ಈ ನಾಡಿನ ರೈತರ ಬಗ್ಗೆ ಮಾತನಾಡಲಿ.

(ಗೊಂದಲ)

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ನೆರೆ ಹಾವಳಿ ಬಗ್ಗೆ ಮಾತನಾಡಲಿ. ನಮ್ಮ ಶಾಸಕರಿಗೆ ಸಂಬಳ ನೀಡಲಿ. ನಮ್ಮ ರೈತರ ಸಾಲ ಮನ್ನಾ ಬಗ್ಗೆ ಮಾತನಾಡಲಿ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪಾಕಿಸ್ತಾನದ ಬಗ್ಗೆ ಮಾತನಾಡಿದರೆ ನಮಗೆ ಏನು ಗೊತ್ತಿದೆ. ನಿಜವಾಗಿಯು ಮಾತನಾಡುವುದಿದ್ದರೆ ಅವರು ಈ ನಾಡಿನ ರೈತರ ಬಗ್ಗೆ ಮಾತನಾಡಲಿ.

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಮೇಲೆ ಮಾನ್ಯ ಸದಸ್ಯರಾದ ಶ್ರೀ ಸಿ.ಎಂ.ಇಬ್ರಾಹಿಂರವರು ಎಲ್ಲಾ ವಿಚಾರವನ್ನು ಮಾತನಾಡಿದ್ದಾರೆ. ದಯವಿಟ್ಟು ಮಾನ್ಯ ಎನ್.ರವಿಕುಮಾರ್‌ರವರು ಮಾತನಾಡುವುದಕ್ಕೆ ಯಾರೂ ಅಭ್ಯಂತರ ಮಾಡಬಾರದು. ದಯವಿಟ್ಟು ಅವರು ಮಾತನಾಡಲು ಅನುಮತಿ ನೀಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಸಿ.ಎಂ.ಇಬ್ರಾಹಿಂರವರು CAA ವಿಚಾರವಾಗಿ ಮಾತನಾಡಿದ್ದಾರೆ. ನಾವೆಲ್ಲರೂ ಇಲ್ಲಿಯೇ ಕೇಳಿಸಿಕೊಂಡಿದ್ದೇವೆ. ಅದಕ್ಕಾಗಿ ಮಾನ್ಯ ಎನ್.ರವಿಕುಮಾರ್‌ರವರಿಗೆ ಮಾತನಾಡಲು ಅವಕಾಶ ನೀಡಿ.

(ಗೊಂದಲ)

**ಶ್ರೀ ಎಸ್.ರವಿ:–** ಮಾತನಾಡಲು ಪ್ರಾರಂಭಿಸಿದರೆ ಬರೀ ಸುಳ್ಳು ಹೇಳುತ್ತಾರೆ.

(ಗೊಂದಲ)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಹೆಚ್.ಎಂ.ರಮೇಶಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಎಂ.ಇಬ್ರಾಹಿಂರವರು ಮಾತನಾಡಿಲ್ಲ. ಅವರು ಹೇಳಿದ ಮಾತು ಬೇರೆ ವಿಷಯಕ್ಕೆ ಸಂಬಂಧಿಸಿದ್ದಾಗಿರುತ್ತದೆ.

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:-** ಹೌದು, ಮಾನ್ಯ ಸಿ.ಎಂ.ಇಬ್ರಾಹಿಂರವರು ಮಾತನಾಡುವಾಗ ತಾವು ಸದನದಲ್ಲಿ ಇದ್ದಿರಾ! ನಾವು ಇಲ್ಲಿಯೇ ಇದ್ದು ಕೇಳಿಸಿಕೊಂಡಿದ್ದೇವೆ. ಆದ್ದರಿಂದ ತಾವು ದಯಮಾಡಿ ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:-** ಒಂದೇ ಒಂದು ಪದವಾದರೂ ಈ ರಾಜ್ಯದ ರೈತರ ಬಗ್ಗೆ ಅವರು ಮಾತನಾಡಿದ್ದಾರೆಯೇ? ಮಾತನಾಡಲು ಪ್ರಾರಂಭಿಸಿದರೆ ಪಾಕಿಸ್ತಾನದ ಬಗ್ಗೆ ಮಾತನಾಡುತ್ತಾರೆ. ಬೇರೆ ವಿಚಾರವೇ ಗೊತ್ತಿಲ್ಲ.

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಓ... ಅವರಿಗೆ ಹೆಚ್ಚು ವಿಷಯಗಳನ್ನು ಮಾತನಾಡಲು ಏತಕ್ಕೆ ಬಿಡಲಾಗಿದೆ ಎಂಬುದು ಈಗ ನಮಗೆ ಅರ್ಥವಾಗಿತ್ತು. ಮಾನ್ಯ ಎಸ್.ಎಲ್.ಭೋಜೇಗೌಡರು, ಶ್ರೀ ಕೆ.ಟಿ.ಶ್ರೀಕಂಠೇಗೌಡರು...

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:-** ಶಿಕ್ಷಕರಿಗೆ ಸಂಬಳ ನೀಡಿಲ್ಲ, ಇವರಿಗೆ ನಾಚಿಕೆಯಾಗಬೇಕು.

(ಗೊಂದಲ)

**ಶ್ರೀ ಎನ್.ರವಿಕುಮಾರ್:-** ನಾವುಗಳೇ ರೈತರ ಸಾಲಮನ್ನಾ ಮಾಡಿದ್ದು, ಬಜೆಟ್ ಮಂಡನೆ ಮಾಡಿದ್ದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಮ್ಮ ಮಾತು ಮುಗಿಯಿತೇ?

(ಗೊಂದಲ)

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇನ್ನೂ ಮುಗಿದಿಲ್ಲ. ವಿರೋಧ ಪಕ್ಷದವರು ಮಾತನಾಡಬೇಕಾದರೆ...

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎನ್.ರವಿಕುಮಾರ್‌ರವರೇ ಒಂದು ನಿಮಿಷ. ನನ್ನ ಒಂದು ವಿನಂತಿಯೇನೆಂದರೆ, ಇಲ್ಲಿಯವರೆಗೂ ಸಹ ನಾವು ರಾಜ್ಯಪಾಲರ ಭಾಷಣವನ್ನು ಹತ್ತಾರು ವರ್ಷಗಳಿಂದ ಕೇಳಿದ್ದೇವೆ. ರಾಜ್ಯಪಾಲರ ಭಾಷಣ ಮತ್ತು ಬಜೆಟ್ ಭಾಷಣದ ಮೇಲೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಚೌಕಟ್ಟು ಮೀರಿ ಆಚೆ-ಈಚೆ ಹೋಗಿ ಚರ್ಚೆ ಮಾಡಿರತಕ್ಕಂಥ ವಿಚಾರಗಳು ಇವೆ, ಇಲ್ಲವೆಂದು ಹೇಳುವುದಿಲ್ಲ. ಇವತ್ತು ಮಾನ್ಯ ಎನ್.ರವಿಕುಮಾರ್‌ರವರಿಗೆ ಮಾತನಾಡಲು ತಾವು ಸುಮಾರು ಅರ್ಧ ಗಂಟೆಗೂ ಹೆಚ್ಚು ಸಮಯವನ್ನು ನೀಡಿರುತ್ತೀರಿ. ಸಾಮಾನ್ಯವಾಗಿ ವಿರೋಧ ಪಕ್ಷದಿಂದ ಬಹಳ ಹಿರಿಯರಾದ ಮಾನ್ಯ ಬಸವರಾಜ್ ಶಿವಲಿಂಗಪ್ಪ ಹೊರಟ್ಟಿಯವರು ಮಾತನಾಡುತ್ತಾರೆ, ನಂತರ ಅದು ಸರಿದೂಗುತ್ತದೆ. ಆರೋಗ್ಯಕರವಾದ ರೀತಿಯಲ್ಲಿ ಚರ್ಚೆಯಾಗಿದ್ದು, ಎಲ್ಲಿಯೂ ಆಪಾದನೆ ಆಗಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು CAA ವಿಚಾರ ಮಾತನಾಡಬಾರದು ಎಂದು ಎದ್ದರು. ಇಷ್ಟು ಹೊತ್ತಿಗೆ ಮಾನ್ಯ ಎನ್.ರವಿಕುಮಾರ್‌ರವರ ಮಾತ್ತೇ ಮುಗಿಯುತ್ತಿತ್ತು. ಅವರುಗಳು ಮಾತನಾಡುವಾಗ counter ಮಾಡಿ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು CAA ವರದಿ ಬಗ್ಗೆ ಮಾತನಾಡಲಿ, ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಏನೇ ಕೇಳಿದರೂ ಸಹ ಕಾರಣ ಪಾಕಿಸ್ತಾನ, ಮಂದಿರ... ಇದೇ ವಿಚಾರವಾಗಿಯೇ ಮಾತನಾಡುತ್ತಾರೆ. ಈ ರಾಜ್ಯದ ಜ್ವಲಂತ ಸಮಸ್ಯೆಗಳ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಗ್ಗೆ ಅವರು ಮಾತನಾಡಲಿ. ಅದು ಬಿಟ್ಟು ಏತಕ್ಕೆ ಪಾಕಿಸ್ತಾನದ ಬಗ್ಗೆ ಮಾತನಾಡುತ್ತಾರೆ. ಅವರಿಗೆ ಪ್ರಧಾನ ಮಂತ್ರಿಗಳು ಪಾಕಿಸ್ತಾನಕ್ಕೆ ಹೋಗಿ ಬಿರಿಯಾನಿ ತಿಂದು ಬಂದಿದ್ದು ಗೊತ್ತಿಲ್ಲವೇ?

**ಸಭಾಪತಿಯವರು:–** ಮಾನ್ಯ ಎಂ.ನಾರಾಯಣಸ್ವಾಮಿಯವರೇ,...

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:–** (ಗೊಂದಲ) ಅದರ ಬಗ್ಗೆ ಮಾತನಾಡಲಿ.

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, CAA ವಿಚಾರ ಏನಿದೆ, ಅದು ಈ ದೇಶದ ಕಾನೂನಾಗಿದ್ದು, ಅದರ ಬಗ್ಗೆ ಅವರು ಮಾತನಾಡಲೇಬೇಕು. ಅವರುಗಳು ಮಾತನಾಡುವುದು ಬೇಡ ಎಂದು ಯಾರೂ ಹೇಳುವಂತಿಲ್ಲ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:–** ಘೋಷ ಮಾಡಿದ ವಿಚಾರ ಇದೆ, ಅದರ ಬಗ್ಗೆ ಅವರು ಮಾತನಾಡಲಿ. 'ಹೊಟ್ಟೆಗೆ ಹಿಟ್ಟಿಲ್ಲಾ, ಜುಟ್ಟಿಗೆ ಮಲ್ಲಿಗೆ ಹೂವು!'

(ಗೊಂದಲ)

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಮೇಲೆ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಬಹುದು ಎಂಬುದು ತಮಗೂ ಗೊತ್ತಿದೆ. ಈ ಸದನದಲ್ಲಿ ಬಹಳ ಕಾಲದಿಂದ ನಡೆದುಕೊಂಡು ಬಂದಿದೆ. ಮಾನ್ಯ ಎನ್.ರವಿಕುಮಾರ್‌ರವರು ಮಾತನಾಡಲು ಹಕ್ಕಿದೆ, ಅವರು ಮಾತನಾಡಲಿ. ಅವರಿಗೆ ಮಾತನಾಡಲು ದಯವಿಟ್ಟು ಅವಕಾಶ ನೀಡಿ.

**ಶ್ರೀ ನಸೀರ್ ಅಹ್ಮದ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪಾಕಿಸ್ತಾನದ ಬಗ್ಗೆ ಮಾತನಾಡಲು ಅವಕಾಶ ಕಲ್ಪಿಸಬಾರದು. ರಾಜ್ಯಪಾಲರ ಭಾಷಣದ ಬಗ್ಗೆ ಬಿಟ್ಟು ಬೇರೆ ಏನೇ ವಿಚಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದ್ದರೂ ಸಹ ಕರ್ನಾಟಕ ರಾಜ್ಯದ ಬಗ್ಗೆ ಮಾತ್ರ ಮಾತನಾಡಲಿ. ಈ ರಾಜ್ಯದ ವಿಚಾರ ಬಿಟ್ಟು ಪಾಕಿಸ್ತಾನ, ದುಬೈ, ಇಂಗ್ಲೆಂಡ್, ಯು.ಎಸ್. ವಿಚಾರಗಳನ್ನು ಇಲ್ಲಿ ಈ ಸಂದರ್ಭದಲ್ಲಿ ಮಾತನಾಡುವುದು ಬೇಡ.

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:–** CAA ವಿಚಾರವೂ ಈ ರಾಜ್ಯದ ಕಾನೂನಿನ ವಿಚಾರವಾಗಿದೆ. ಈ ದೇಶದ ಕಾನೂನಾಗಿದೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ದೇಶದ ಬಗ್ಗೆ ಮಾತನಾಡುತ್ತಿದ್ದಾರೆ. ರಾಜ್ಯಪಾಲರ ಭಾಷಣದ ಮೇಲೆ ಸಂವಿಧಾನದ ಕೆಲವು ಕಾಯ್ದೆಗಳ ಬಗ್ಗೆ ಮಾತನಾಡಲು ಅವರಿಗೆ ಅಧಿಕಾರ ಇರುತ್ತದೆ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:–** ಸಮಯ ಸಿಕ್ಕಿದ ಮೇಲೆ ಅವರು ಮಾತನಾಡಲಿ.

(ಗೊಂದಲ)

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಈ ಕಾನೂನು ಎಂಬುದು ಏನಿದೆ, ಅದು ಬಾಂಗ್ಲಾ ದೇಶ, ಪಾಕಿಸ್ತಾನ ಹಾಗೂ ಆಫ್ಘಾನಿಸ್ತಾನದಿಂದ ಬಂದಿರುವಂಥ ಅಲ್ಪಸಂಖ್ಯಾತರಿಗೆ ಸಂಬಂಧಪಟ್ಟಿರುವುದಾಗಿದೆ.

(ಗೊಂದಲ)

**ಸಭಾಪತಿಯವರು:–** 4ನೇ ತಾರೀಖಿನಂದು ಆ ವಿಚಾರಗಳ ಬಗ್ಗೆ ಮಾತನಾಡಲು ಅವಕಾಶ ಇದೆ. ಆದ್ದರಿಂದ ಆವತ್ತಿನ ದಿನ ಈ ಬಗ್ಗೆ ಮಾತನಾಡೋಣ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಎಂ.ಇಬ್ರಾಹಿಂರವರು ಮಾತನಾಡಿದ್ದು, ನಮ್ಮ ದೇಶದೊಳಗೆ CAA ವಿರುದ್ಧವಾಗಿ ಇಷ್ಟೆಲ್ಲಾ ಸಮಸ್ಯೆಗಳು ನಡೆಯುತ್ತಿವೆ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, 4ನೇ ತಾರೀಖಿನ ನಂತರ ಮಾತನಾಡಲು ಅವಕಾಶ ನೀಡುತ್ತೇವೆ ಎಂದು ತಾವು ಹೇಳಿದ್ದೀರಿ. ಆದ್ದರಿಂದ ದಯಮಾಡಿ ಈಗಾಗಲೇ ಮಾನ್ಯ ಸದಸ್ಯರು ಹೇಳಿರುವ ಮಾತುಗಳನ್ನು delete ಮಾಡಿಸಿ.

(ಗೊಂದಲ)

**ಡಾ॥ ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):-** ಈಗ ಮಾನ್ಯ ಸದಸ್ಯರು ಮಾತನಾಡಲಿ, ಅವರಿಗೆ ಮಾತನಾಡಲು ಬಿಡಿ. ಅವರು ಏನು ಮಾತನಾಡುತ್ತಾರೆ ಎಂಬುದನ್ನು ಕೇಳಿಸಿಕೊಳ್ಳಿ. ನಾವು ಇಷ್ಟು ಹೊತ್ತು ತಮ್ಮ ಮಾತನ್ನು ಕೇಳಿಸಿಕೊಳ್ಳಲಿಲ್ಲವೇ?

**ಸಭಾಪತಿಯವರು:-** ಒಂದು ನಿಮಿಷ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಒಂದು ಪ್ರಕಟಣೆ ಇದೆ.

**6. ಪ್ರಕಟಣೆ**

**ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿ**

ದಿನಾಂಕ: 19.02.2020 ಹಾಗೂ 20.02.2020 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ದಿನಾಂಕ: 20.02.2020 ಮತ್ತು 02.03.2020 ರಿಂದ ಮುಂದಿನ ಕಾರ್ಯಕಲಾಪ ಸಲಹಾ ಸಮಿತಿ ಸೇರುವವರೆಗೂ ಕಾರ್ಯಕಲಾಪಗಳನ್ನು ಈ ಕೆಳಕಂಡಂತೆ ನಡೆಸಲು ತೀರ್ಮಾನಿಸಲಾಯಿತು.

| ದಿನಾಂಕ | | ವಿವರ |
|---|---|---|
| 20.02.2020 | | ನಿಯಮ 68ರಲ್ಲಿ ಪ್ರಸ್ತಾಪಿಸಲಾದ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ |

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

| | | |
|---|---|---|
| 02.03.2020 | ಬೆಳಗ್ಗೆ | ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ |
| | ಮಧ್ಯಾಹ್ನ | ಪ್ರಶ್ನೋತ್ತರ |
| 03.03.2020 ಮತ್ತು 04.03.2020 | ಬೆಳಗ್ಗೆ | ಭಾರತ ಸಂವಿಧಾನದ ಮೇಲಿನ ವಿಶೇಷ ಚರ್ಚೆ |
| | ಮಧ್ಯಾಹ್ನ | ಪ್ರಶ್ನೋತ್ತರ |
| 05.03.2020 | ಬೆಳಗ್ಗೆ | ಆಯವ್ಯಯ ಮಂಡನೆ |
| 06.03.2020 ರಿಂದ 31.03.2020 | | ಪ್ರಶ್ನೋತ್ತರ ಹಾಗೂ ಇತರ ಕಾರ್ಯಕಲಾಪಗಳು ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ |

ವಿಧಾನ ಸಭೆಯಲ್ಲಿ ಮಂಡಿಸಲಾದ ವಿಧೇಯಕಗಳ ಪ್ರತಿಯನ್ನು ಯಥಾವತ್ತಾಗಿ ವಿಧಾನ ಪರಿಷತ್ತಿನ ಶಾಸಕರುಗಳಿಗೆ ಮಾಹಿತಿಗಾಗಿ ಮುಂಚಿತವಾಗಿ ಒದಗಿಸಲಾಗುವುದು. ಈ ವರದಿಗೆ ಸದನದ ಅಂಗೀಕಾರ ಇದೆ ಎಂದು ಭಾವಿಸುತ್ತೇನೆ.

(ಮುಂದು)

(100)/20.02.2020/4.50/ಎಸ್‌ಕೆ-ಎಂ.ಡಿ.

**7. ಘನತೆವತ್ತ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ**

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ರಾಜ್ಯಪಾಲರ ಭಾಷಣದ ಮೇಲೆ ವಿಸ್ತೃತವಾಗಿ ಮಾತನಾಡುವುದಕ್ಕೆ ಬಹಳಷ್ಟು ವಿಚಾರಗಳಿವೆ. ಆ ವಿಚಾರವನ್ನು ಬಿಟ್ಟು, ಪಾಕಿಸ್ತಾನ, ಬಾಂಗ್ಲಾದೇಶ, ಆಫ್ಘಾನಿಸ್ತಾನ ಈ ದೇಶಗಳ ಬಗ್ಗೆ ಮಾತನಾಡುವುದಕ್ಕೆ ಅವಶ್ಯಕತೆ ಏನಾದರೂ ಇದೆಯಾ? ರಾಜ್ಯಪಾಲರ ಭಾಷಣದ ಮೇಲೆ ಬೆಳಕು ಚೆಲ್ಲುವಂತಹ ಅನೇಕ ವಿಚಾರಗಳಿವೆ. ರಾಜ್ಯದ ಅಭಿವೃದ್ಧಿ ಮತ್ತು ಹಿತ ದೃಷ್ಟಿಯಿಂದ ಹಾಗೂ ಸರ್ಕಾರದ ದಿಕ್ಕು-ದೆಸೆಗಳನ್ನು ಹೇಳುವಂತಹದ್ದರ ಬಗ್ಗೆ ಅವುಗಳನ್ನೆಲ್ಲಾ ಹೇಳಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಇದನ್ನು ನಾನು ಏತಕ್ಕೆ ಓದಿದ್ದೇನೆಂದರೆ, ದಿನಾಂಕ 03.03.2020 ರಂದು ಸಂವಿಧಾನದ ಬಗ್ಗೆ ಮಾತನಾಡುವುದಕ್ಕೆ ಅವಕಾಶವಿದೆ. ಆಗ ಸದಸ್ಯರು ಯಾರು ಮಾತನಾಡುವವರಿದ್ದಾರೆ. ಆಗ ತಮ್ಮ ತಮ್ಮ ಅವಕಾಶವನ್ನು ಬಳಸಿಕೊಳ್ಳುವುದಾದರೆ ಬಳಸಿಕೊಳ್ಳಲಿ. ಈಗ ಮಾತನಾಡಬೇಡಿ ಎಂದು ಹೇಳುತ್ತಿಲ್ಲ. ಇವತ್ತು ರಾಜ್ಯಪಾಲರು ಭಾಷಣವನ್ನು ಏನು ಮಾಡಿದ್ದಾರೆ. ಆ ಭಾಷಣದ ಇತಿಮಿತಿಯೊಳಗೆ ಮಾತನಾಡಿ. ರಾಜ್ಯಪಾಲರ ಭಾಷಣದಲ್ಲಿ ಮಾತನಾಡದೇ ಇರುವಂಥದ್ದನ್ನು, ಅವರು ಮಾಡಿರುವಂತಹ ಭಾಷಣದೊಳಗೆ ತೂರಿಸುವ ಪ್ರಯತ್ನ ಬೇಡ. ಇದರ ಬಗ್ಗೆ ಇನ್ನೊಂದು ದಿವಸ ಮಾತನಾಡುವುದಕ್ಕೆ ಅವಕಾಶವಿದೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾನಾಯಕರೇ, ಕರ್ನಾಟಕ ರಾಜ್ಯದ ಅಭಿವೃದ್ಧಿಯ ಬಗ್ಗೆ ವಿಸ್ತೃತವಾಗಿ ಮಾತನಾಡಲಿ. ಆನಂತರ ಸರ್ಕಾರದ ದಿಕ್ಕು–ದೆಸೆಯ ಬಗ್ಗೆ ಮಾತನಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಾವು ಒಂದೇ ಸ್ಪಷ್ಟತೆಯನ್ನು ಕೇಳುತ್ತೇವೆ. ಇಂತಹ ಹತ್ತಾರು ರಾಜ್ಯಪಾಲರ ಭಾಷಣವನ್ನು ಗಮನಿಸಿದವರು ತಾವು. ಇಂತಹ ಪ್ರಕರಣಗಳಲ್ಲಿ ರಾಜ್ಯಪಾಲರು ಭಾಷಣ ಮಾತನಾಡುವಾಗ ಈ ದೇಶದ ಕಾನೂನು ಕಾಯ್ದೆ ವ್ಯವಸ್ಥೆಗಳ ಬಗ್ಗೆ ಚರ್ಚೆ ಮಾಡಿರುವ ಉದಾಹರಣೆಗಳು ಇಲ್ಲವೇ. ಹಾಗಿದ್ದರೆ, ನೀವು ಹೇಳಿದಾಗೇ ಕೇಳಬೇಕು ಎನ್ನುವಂತಿದ್ದರೆ, ಇದು ಯಾವ ನ್ಯಾಯ ನಿಮ್ಮದು? ಈಗ ಮಾನ್ಯ ಸದಸ್ಯರುಗಳಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ಮರಿತಿಬ್ಬೇಗೌಡರು ಹೇಳಿದರು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ನಾವು ಹೇಳುವುದಕ್ಕಿಂತ ಪೂರ್ವದಲ್ಲಿ ಮಾನ್ಯ ಸಭಾಪತಿಯವರು ಪೀಠದಿಂದ ಸಂವಿಧಾನದ ಮೇಲೆ ಮೂರು ಮತ್ತು ನಾಲ್ಕನೇ ತಾರೀಖು ಚರ್ಚೆಯಾಗುತ್ತದೆ. ಆಗ ವಿಸ್ತೃತವಾಗಿ ಬೇಕಾದರೆ ಮಾತನಾಡಿ ಎಂದು ಹೇಳಿದರು. ಆಗ ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್‌ರವರು ಮಾತನಾಡಲೇಬೇಕಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಅವರಿಗೆ ಬೇಕಾದರೆ ಸಲಹೆ ಕೊಡಿ. ಆದರೆ, ಇದೇ ರೀತಿ ಮಾತನಾಡಬೇಕು ಎಂದು ನೀವು ಅವರಿಗೆ ಹೋಗಿ ದಿಗ್ಬಂಧನ ಮಾಡುವ ಅಧಿಕಾರ ಏನಿದೆ?

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್. ಪಾಟೀಲ್:-** ಇಲ್ಲಿ ದಿಗ್ಬಂಧನ ಅಲ್ಲ. ಮಾನ್ಯ ಸಭಾಪತಿಯವರೇ ಹೇಳಿದ್ದಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರು ಏನು ಹೇಳಿದ್ದಾರೆಂದರೆ,

**(ಗೊಂದಲ)**

**Sri S.R.PATIL:-** Whatever decision taken by the Chair is binding on all of us. ಸಭಾಪತಿಯವರು ಹೇಳಿರುವ ಆದೇಶಕ್ಕೆ ಗೌರವ ಕೊಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸಭಾಪತಿಯವರು ತಡೆ ಹಿಡಿದಿಲ್ಲ. ಸಭಾಪತಿಯವರು ಪೀಠದಿಂದ ಏನು ಹೇಳಿದ್ದಾರೆಂದರೆ..

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಪಾಕಿಸ್ತಾನ, ಬಾಂಗ್ಲಾದೇಶ, ಆಫ್ಘಾನಿಸ್ತಾನ ದೇಶಗಳ ಬಗ್ಗೆ ಬಗ್ಗೆ ಮಾತನಾಡುವುದಕ್ಕೆ ಅವಶ್ಯಕತೆಯಾದರೂ ಏನಿದೆ? ಸಂವಿಧಾನದ ಬಗ್ಗೆ ಮಾತನಾಡಬೇಕೆಂದರೆ, ಮಾತನಾಡಲಿ.

**ಸಭಾಪತಿಯವರು:-** ಒಂದು ನಿಮಿಷ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ ಮಾತನಾಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ಹೇಳಿದ್ದಾರೆ. ರಾಜ್ಯಪಾಲರ ಭಾಷಣದ ಮೇಲೆ ಕಾನೂನಿನಲ್ಲಿ ಇಂತಹದೇ ಮಾತನಾಡಬೇಕೆಂದು ಇಲ್ಲ. ಆದರೆ ನಿರ್ದಿಷ್ಟವಾದ ವಿಷಯ ಬಹಳ ಸೂಕ್ಷ್ಮವಿರುತ್ತದೆ. ಮೂರು ಮತ್ತು ನಾಲ್ಕನೇ ತಾರೀಖಿನಲ್ಲಿ ಮಾತನಾಡುವುದಕ್ಕೆ ಕಾಲಾವಕಾಶ ಕೊಟ್ಟಿದ್ದಾರೆ. ದಯವಿಟ್ಟು, ಮಾನ್ಯ ರವಿಕುಮಾರ್‌ರವರೇ ಅಂದಿನ ದಿನ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನೂ ಬೇಕಾದರೂ ತಾವು ಮಾತನಾಡಬಹುದು. ಈಗ ದಯವಿಟ್ಟು, ತಾವು ಪರಿಸ್ಥಿತಿಗೆ ಹೊಂದಿಕೊಂಡು, ಈ ವಾತಾವರಣವನ್ನು ತಿಳಿ ಮಾಡಬೇಕು. ತಾವು ದಯಮಾಡಿ, ಇದರ ಮೇಲೆ restrict ಮಾಡಿ, ಮಾತನಾಡಬೇಕೆಂದು ಹೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಏನು ತೊಂದರೆಯಿದೆ? ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ ತಾವೊಬ್ಬ ಹಿರಿಯ ಸದಸ್ಯರಿದ್ದೀರಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾನಾಯಕರೇ ಒಂದೇ ನಿಮಿಷ ಕೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ತಾವು ಹೇಳಿರುವುದೆನ್ನೆಲ್ಲಾ ಕೇಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾನಾಯಕರೇ, ನಾನು ಅದನ್ನು ಒಪ್ಪುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸದಸ್ಯರು ಮಾತನಾಡುವಾಗ ದಿಗ್ಬಂಧನ ಹಾಕುವ ಅಧಿಕಾರ ಏನಿದೆ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ನಾನು ಇದನ್ನು ಇಲ್ಲವೆಂದು ಹೇಳುವುದಿಲ್ಲ. ನನ್ನ ಮಾತನ್ನು ಸ್ವಲ್ಪ ಕೇಳಿ. ಪರಿಸ್ಥಿತಿ ಬಂದಾಗ ಸೂಕ್ಷ್ಮವಾಗಿ ವರ್ತಿಸುವುದು ಸದಸ್ಯರ ಗೌರವದ ಮಾತು. Whether it is right or wrong, ಮಾನ್ಯ ಸಭಾಪತಿಯವರು ಒಂದು ನಿರ್ಣಯವನ್ನು ಕೊಟ್ಟಿದ್ದಾರೆ. ಆ ನಿರ್ಣಯದಂತೆ ದಯವಿಟ್ಟು ಮಾತನಾಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರು ನಿರ್ಣಯವನ್ನು ಏನು ಕೊಟ್ಟಿದ್ದಾರೆಂಬುದನ್ನು ಕೇಳಿ. ಪೀಠದಿಂದ ಬಂದಿರುವಂತಹ ಆದೇಶವನ್ನು ನಾವು ಅರ್ಥ ಮಾಡಿಕೊಳ್ಳೋಣ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ ನನ್ನ ಮಾತನ್ನು ಕೇಳಿ. ತಾವು ಏಕೆ ವಾದ ಮಾಡುತ್ತೀರಿ? ಈ ವಾತಾವರಣ ತಿಳಿಯಾಗಲಿ. ಅವರು ಮಾತನಾಡುವುದಾದರೆ ಮಾತನಾಡಲಿ. ತಾವು ಏತಕ್ಕೆ ವಾದ ಮಾಡುತ್ತೀರಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಈ ಸದನದಲ್ಲಿ ಇನ್ನು ಮುಂದೆ ಎಲ್ಲರಿಗೂ ಖುಷಿಯಾಗುವ ತರಹ ಮಾತನಾಡಬೇಕು. ಇದು ಆ ರೀತಿ ಎನ್ನುವಂತೆ ಆಗುತ್ತದೆ. ಇದು ಯಾವ ನ್ಯಾಯ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಆ ಪೀಠದ ಮೇಲೆ ವಿಶ್ವಾಸ ನಂಬಿಕೆ ತಮಗೆ ಇದೆಯೋ ಇಲ್ಲವೋ. ದಯಮಾಡಿ, ಮಾನ್ಯ ಸಭಾಪತಿಯವರ ಮಾತಿಗೆ ಮೇಲೆ ಗೌರವವಿಟ್ಟು ಕೇಳಿ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಅವರು ಒಪ್ಪಿಕೊಂಡಿದ್ದಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರು ಏನು ಹೇಳಿದ್ದಾರೆಂದರೆ, ನಿಮ್ಮ ವಿವೇಚನೆಗೆ ಬಿಟ್ಟಿದ್ದು ಎಂದು ಹೇಳಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರು ಹೇಳಿದ್ದು, ಗೊತ್ತಾಗಿದೆ. ಅದನ್ನು ಪುನಃ ವಿವರಣೆಯಾಗಿ ಹೇಳಬೇಡಿ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಹಾಗೂ ಶ್ರೀ ಎಸ್. ಆರ್. ಪಾಟೀಲ್‌ರವರು ಮೂರು ಮತ್ತು ನಾಲ್ಕನೇ ತಾರೀಖಿನಂದು ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿ ಎಂದು ಹೇಳಿದ್ದಾರೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ವಿರೋಧ ಪಕ್ಷದ ಕಡೆಯ ಸದಸ್ಯರು ರಾಜ್ಯಪಾಲರ ಭಾಷಣದ ಇಪ್ಪತ್ತು ಪುಟಗಳ ಕುರಿತಂತೆ ಎಷ್ಟು ಜನ ಸದಸ್ಯರು ಮಾತನಾಡಿದ್ದಾರೆ ಎಂಬುದರ ಬಗ್ಗೆ ನಮಗೆಲ್ಲರಿಗೂ ಕೂಡ ಚೆನ್ನಾಗಿ ಗೊತ್ತಿದೆ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ರಾಜ್ಯಪಾಲರ ಭಾಷಣದ ಮೇಲೆ ಯಾವೊಬ್ಬ ಸದಸ್ಯರು ಕೂಡ ಮಾತನಾಡಿಲ್ಲ.

**ಶ್ರೀ ಎನ್. ರವಿಕುಮಾರ್:–** ನಮಗೆ ಗೊತ್ತಿದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು):–** ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಇನ್ನು ಪ್ರಾರಂಭವಾಗಿಲ್ಲ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸದಸ್ಯರುಗಳಾದ ಶ್ರೀ ಆಯನೂರು ಮಂಜುನಾಥ್‌ರವರು ಮಂಡನೆ ಮಾಡಿದ್ದಾರೆ ಮತ್ತು ಶ್ರೀ ಭೋಜೇಗೌಡರು ಮಾತ್ರ ಮಾತನಾಡಿದ್ದಾರೆ. ಉಳಿದಂತೆ ಮಾತ್ರ ಚರ್ಚೆಯಾಗಿದೆ.

**(ಗೊಂದಲ)**

**ಸಭಾಪತಿಯವರು:–** ಅವರು ಮಾತನಾಡುವುದಕ್ಕೆ ಬಿಡಿ.

**ಶ್ರೀ ಎಸ್.ಎಲ್. ಭೋಜೇಗೌಡ:–** ನಾನು ರಾಜ್ಯಪಾಲರ ಭಾಷಣದ ಬಗ್ಗೆ ಮಾತ್ರ ಮಾತನಾಡಿದ್ದೇನೆ. ರಾಜ್ಯಪಾಲರ ಭಾಷಣದ ಪುಸ್ತಕವನ್ನು ಮೀರಿ ಆಚೆ ಒಂದೇ ಒಂದು ಪದ ಇದ್ದರೆ ನೀವು ಹೇಳಿದ್ದು ಕೇಳುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ರವಿಕುಮಾರ್‌ರವರೇ ತಾವು ಚೆನ್ನಾಗಿ ಮಾತನಾಡುತ್ತೀರಾ. You are a very good orator and parliamentarian. ತಮ್ಮ ಬಗ್ಗೆ ಗೌರವವಿದೆ. ರಾಜ್ಯದಲ್ಲಿ ಅನೇಕ ಜ್ವಲಂತ ಸಮಸ್ಯೆಗಳಿವೆ. ರಾಜ್ಯಪಾಲರ ಭಾಷಣದ ಪ್ರತಿಯಲ್ಲಿ ಇಪ್ಪತ್ತು ಪೇಜಿನ ಹೊರಗೆ ರಾಜ್ಯಕ್ಕೆ ಸಂಬಂಧಿಸಿದಂತಹ ಅನೇಕ ಜ್ವಲಂತ ಸಮಸ್ಯೆಗಳಿವೆ. ಅದಕ್ಕೆ ಇರಲಾರದ್ದು, ರಾಜ್ಯಕ್ಕೆ ಸೀಮಿತವಾಗಿ ಮಾತನಾಡಿದರೆ ಒಳ್ಳೆಯದು ಎನ್ನುವಂತಹ ವಿಚಾರವನ್ನು ಮಾನ್ಯ ಸಭಾಪತಿಯವರು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ,..

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರು ಹೇಳಿದ್ದಾರೆ. ಮಾನ್ಯ ಸಭಾನಾಯಕರೇ ಇದನ್ನು ನಾನು ಹೇಳಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ ಮಾತನಾಡಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಕರ್ನಾಟಕ ರಾಜ್ಯದ ಅಭಿವೃದ್ಧಿ ವಿಚಾರವಾಗಿ ಹಾಗೂ ಅದರ ಶ್ರೇಯೋಭಿವೃದ್ಧಿಗಾಗಿ ರಾಜ್ಯಪಾಲರ ಭಾಷಣದಲ್ಲಿ ಇಲ್ಲದೇ ಇರುವುದನ್ನು ಮಾತನಾಡಿ. ಅದನ್ನು ಬಿಟ್ಟು, ದೇಶದಿಂದ ಹೊರಗೆ ಹೋಗಬೇಡಿ ಎಂದು ಅವರು ಹೇಳಿದ್ದಾರೆ. ದೇಶ ಬಿಟ್ಟು ಹೊರಗೆ ಹೋಗಿಬಿಟ್ಟರಿ.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ರಾಜ್ಯಪಾಲರು ಭಾಷಣ ಮಾಡುವಾಗ...

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ ಮಾತನಾಡಿ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. Point or Order ಬಗ್ಗೆ ಮಾತನಾಡುತ್ತೇನೆ. ರಾಜ್ಯಪಾಲರ ಈ ಪುಸ್ತಕದ ಮೇಲೆ ಏನು ಭಾಷಣ ಮಾಡಿದ್ದಾರೆ. ಅವರು ಭಾಷಣ ಮಾಡುವಂತಹ ಒಂದು ಸಂದರ್ಭದಲ್ಲಿ ಆರವತ್ತೇಳನೇ ಪ್ಯಾರಾದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಈ ಅಧಿವೇಶನದಲ್ಲಿ ವಿಚಾರ ವಿಮರ್ಶೆ ಮತ್ತು ಚರ್ಚೆಗಳು ಗುಣಾತ್ಮಕವಾಗಿ ನಿರ್ವಹಿಸುವಲ್ಲಿ ನಾನು ಎಲ್ಲಾ ಸದಸ್ಯರುಗಳ ಸಹಕಾರವನ್ನು ಕೋರುತ್ತೇನೆ. ವಿಚಾರ ಮಂಥನದಿಂದ ಹೊರ ಹೊಮ್ಮುವ ಹೊಸ ಆಲೋಚನೆಗಳು ಮತ್ತು ವಿಚಾರಗಳು ರಾಜ್ಯವನ್ನು ಅತ್ಯುನ್ನತ ಬೆಳವಣಿಗೆಗೆ ಮತ್ತು ಅಭಿವೃದ್ಧಿಯ ಕಡೆಗೆ ಕೊಂಡೊಯ್ಯಲಿ. ನಾವು ಮಾತನಾಡಬೇಕಾಗಿರುವ ವಿಚಾರವನ್ನು ಬಿಟ್ಟು, ನಾವು ಬೇರೆ ಬೇರೆ ಯಾವ್ಯಾವ ವಿಚಾರಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ನಮ್ಮ ರಾಜ್ಯದಲ್ಲಿರುವ ಸಮಸ್ಯೆಗಳನ್ನು ಬಿಟ್ಟು... (ಗೊಂದಲ) ಸಿಎಎ ಬರುತ್ತದೆ. ಇಡೀ ದೇಶದಲ್ಲಿಯೇ ಅದು ಬರಬೇಕು. ಬರೀ ಕರ್ನಾಟಕ ರಾಜ್ಯಕ್ಕೆ ಬಂದು ಬಿಟ್ಟರೆ ಆಗುವುದಿಲ್ಲ.

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ ತಾವು ಮಾತನಾಡಿ.

**ಶ್ರೀ ಪಿ.ಆರ್.ರಮೇಶ್:–** ಒಂದೇ ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಎನ್.ರವಿಕುಮಾರ್:–** ನನಗೆ ಮಾತನಾಡುವುದಕ್ಕೆ ಬಿಟ್ಟರೆ ಮಾತನಾಡುತ್ತೇನೆ.

**ಶ್ರೀ ಪಿ.ಆರ್.ರಮೇಶ್:–** ಇವತ್ತು ರಾಜ್ಯದಲ್ಲಿ ಬಹಳಷ್ಟು ಸಮಸ್ಯೆಗಳಿವೆ. ಖಜಾನೆ ಖಾಲಿ ಇದೆಯೆಂದು ಹೇಳಿ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಳುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ ಮಾತನಾಡಿ.

**ಶ್ರೀ ಪಿ.ಆರ್.ರಮೇಶ್:–**ಇವತ್ತು ರಾಜ್ಯದಲ್ಲಿ ಹಲವಾರು ಸಮಸ್ಯೆಗಳಿವೆ. ಅದರ ಬಗ್ಗೆ ಮಾತನಾಡುತ್ತಿಲ್ಲ. ಇದು ಏಕೆ instigate ಮಾಡುತ್ತಾರೆ ಮತ್ತು ಇದು ಬಹಳಷ್ಟು repercussion ತರುವಂತಹ ರೀತಿಯಲ್ಲಿ ಏತಕ್ಕೆ ಮಾಡುತ್ತಾರೆಂಬುದು ನನಗೆ ಗೊತ್ತಿಲ್ಲ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಈ ಹಿಂದೆ ಇದ್ದಂತಹ ಸರ್ಕಾರವನ್ನು ಕರ್ನಾಟಕ ರಾಜ್ಯ ನೋಡಿದೆ. ಈಗ ಕರ್ನಾಟಕ ರಾಜ್ಯಕ್ಕೆ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಶಾಂತ ರೀತಿಯಿಂದ law and order maintain ಮಾಡಿಕೊಂಡು ಹಾಗೂ ಇಡೀ ರಾಜ್ಯದಲ್ಲಿರುವ ರೈತರು, ಮಹಿಳೆಯರು, ದಲಿತರ ಪರವಾಗಿರತಕ್ಕಂಥ ಮತ್ತು ಶಿಕ್ಷಣದ ಪರವಾಗಿರತಕ್ಕಂತಹ ಹಾಗೂ ಎಲ್ಲಾ ವಿಚಾರಗಳನ್ನು ಸರ್ಕಾರ ಗಮನಿಸುತ್ತಿದೆ. ನಾನು ಅನೇಕ ವಿಷಯಗಳ ಬಗ್ಗೆ ಬೆಳಕನ್ನು ಚೆಲ್ಲುವುದಕ್ಕೆ ಬಯಸುತ್ತೇನೆ. ಉದಾಹರಣೆಗೆ ಹಿಂದೆಂದೂ ಕಾಣದೇ ಇರತಕ್ಕಂತಹ ಪ್ರವಾಹ ಕರ್ನಾಟಕ ರಾಜ್ಯದಲ್ಲಿ ನಾವು ನೋಡಿದ್ದೇವೆ. ಆ ಸಂದರ್ಭದಲ್ಲಿ ನಮ್ಮ ಸರ್ಕಾರ full-fledged Government ಆಗಿರಲಿಲ್ಲ. ಕರ್ನಾಟಕ ರಾಜ್ಯದಲ್ಲಿ ಒಬ್ಬರೇ ಮುಖ್ಯಮಂತ್ರಿಯಾಗಿ ಮಾನ್ಯ ಯಡಿಯೂರಪ್ಪನವರು ಇದ್ದರು. ಯಾರೊಬ್ಬರನ್ನೂ ಕೂಡ ಅವರು ತಮ್ಮ ಸಹಾಯಕ್ಕೆ ತೆಗೆದುಕೊಂಡಿರಲಿಲ್ಲ. ಅವರೊಬ್ಬರೇ ಇದ್ದರು.

**(ಗೊಂದಲ)**

**ಸಭಾಪತಿಯವರು:–** ಅವರನ್ನು ಮಾತನಾಡುವುದಕ್ಕೆ ಬಿಡಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ತಾವು ಮಾತನಾಡಿ ಎಂದು ಹೇಳುತ್ತೀರಾ. ಆಗ ಮತ್ತೆ ನನಗೆ comment ಮಾಡುತ್ತೀರಾ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಸಭಪತಿಯವರು:-** ಅವರನ್ನು ಮಾತನಾಡುವುದಕ್ಕೆ ಬಿಡಿ. ಅವರಿಗೆ ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ?

**Sri S.L.BOJEGOWDA:-** How can he take that defence?

**ಶ್ರೀ ಎನ್.ರವಿಕುಮಾರ್:-** ತಾವು ಹೇಳಿದ ಹಾಗೇ ನಾನು ಭಾಷಣ ಮಾಡಬೇಕಾ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಮುಖ್ಯಮಂತ್ರಿಗಳು ಒಬ್ಬರೇ ಇದ್ದರು ಎನ್ನುವ ಬಗ್ಗೆ defence ಹೇಗೆ ತೆಗೆದುಕೊಳ್ಳುತ್ತಾರೆ? ಮಂತ್ರಿಮಂಡಲ ರಚನೆ ಮಾಡಬೇಕಾಗಿತ್ತು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-**ಮಾನ್ಯ ಭೋಜೇಗೌಡರೇ ತಾವು ಹೇಳಿದ ಹಾಗೇ ನಾನು ಭಾಷಣ ಮಾಡಬೇಕಾ.

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದನ್ನು ನಾವು ಕೇಳಿದ್ದೇವೆ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಭೋಜೇಗೌಡರೇ, ಮಾನ್ಯ ಸಭಾಪತಿಯವರು ಹೇಳುವ ಮಾತನ್ನು ನಾವು ಕೇಳುವುದಕ್ಕೆ ಇರುವುದು.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ಭಾಷಣವನ್ನು ಬರೆದುಕೊಟ್ಟು ಬಿಡಲಿ. ಆಗ ಅದನ್ನೇ ನಾನು ಓದಿ ಬಿಡುತ್ತೇನೆ. ತಾವು ಏನೆಂದು ತಿಳಿದುಕೊಂಡಿದ್ದೀರಾ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್. ಭೋಜೇಗೌಡ:–** ಭಾಷಣವನ್ನು ನಾನೇಕೆ ಬರೆದುಕೊಡಲಿ. ನಾನು ಮಾನ್ಯ ಸಭಾಪತಿಯವರ ಹತ್ತಿರ ಮಾತನಾಡುತ್ತಿದ್ದೇನೆ. ಮತ್ತೆ ಅವರು ಬರೆದುಕೊಡಲಿ ಎಂದರೆ...

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಏನು ಭಾಷಣ ಮಾಡಬೇಕೆಂದು ನನಗೆ ಚೆನ್ನಾಗಿ ಗೊತ್ತಿದೆ. ನಮ್ಮ ಸರ್ಕಾರದ ನೀತಿ, ನಿರ್ಧಾರ, ದಾರಿ ಏನೆಂಬುದು ನನಗೆ ಚೆನ್ನಾಗಿ ಗೊತ್ತಿದೆ. ಮಾನ್ಯ ಭೋಜೇಗೌಡರು ನನಗೆ direct ಮಾಡುವಂತಹದ್ದು ನನಗೆ ಅವಶ್ಯಕತೆಯಿಲ್ಲ.

**ಶ್ರೀ ಎಸ್.ಎಲ್. ಭೋಜೇಗೌಡ:–** ನಾನು ಸಹ ತಮ್ಮಿಂದ ಏನೂ ಕಲಿಯಬೇಕಾಗಿಲ್ಲ. ತಾವೇ ಭಾಷಣವನ್ನು ಬರೆದುಕೊಡಿ ಎಂದು ಕೇಳುತ್ತಿರುವುದು. ಬೇಕಾದರೆ ಭಾಷಣವನ್ನು ಬರೆದುಕೊಡಬೇಕೆಂದರೆ ಅದಕ್ಕೂ...

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯರೇ ಸ್ವಲ್ಪ ಹೇಳಿರಿ.

**ಡಾ॥ ತೇಜಸ್ವಿನಿ ಗೌಡ:–** ಈ ಸದನದ ಸಮಯವನ್ನು ವ್ಯರ್ಥ ಮಾಡಬೇಡಿ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–**ತಾವು ಭಾಷಣವನ್ನು ಏನು ಬರೆದುಕೊಡುತ್ತೀರಾ ಎಂಬುದು ನನಗೆ ಚೆನ್ನಾಗಿ ಗೊತ್ತಿದೆ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಬೆಳಿಗ್ಗೆ ಬಾವಿಗೆ ಬೀಳಿಸಿದ್ದೀಯಾ. ತಾವು ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಎನ್. ರವಿಕುಮಾರ್:–**ಮಾನ್ಯ ಸಭಾಪತಿಯವರೇ, ಮಾನ್ಯ ಯಡಿಯೂರಪ್ಪನವರು...

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಒಂದು ನಿಮಿಷ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಮಾತನಾಡುತ್ತಾರೆ.

(ಮುಂದು...)

**(101)20.2.2020/5.00/ಎಂ.ಎಂ–ಎ.ಕೆ**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತೇನೆ, ಅವರು ಏನಾದರೂ ಮಾತನಾಡಲಿ ಅದು ಅವರಿಗೆ ಬಿಟ್ಟಿದ್ದು ಮಾತನಾಡಬೇಡಿ ಎಂದರೂ ಮಾತನಾಡಿದರೆ ಏನು ಮಾಡುವುದಕ್ಕಾಗುತ್ತದೆ? ನಾವು ಹತ್ತು ಸಲ ಹೇಳುತ್ತೇವೆ. ಸದನ ನಡೆಯುವಾಗ ತೊಂದರೆ ಕೊಡಬಾರದು ಎಂದು ಮಾನ್ಯ ಸಭಾಪತಿಯವರೇ ಹೇಳಬೇಕು.

**ಸಭಾಪತಿಯವರು:–** ನಾನು ನಿಮಗೆ ಹೇಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಅವರು ಏನು ಬೇಕಾದರೂ ಮಾತನಾಡುತ್ತಾರೆ ನೀವು ಹೇಳಬೇಕು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ರವಿಕುಮಾರ್‌ರವರು ಮಾತನಾಡಿದ ಮೇಲೆ ಮಾನ್ಯ ಭೋಜೇಗೌಡರಿಗೇ ಮಾತನಾಡಲು ಅವಕಾಶ ಕೊಡಿ. ಅದೇನು ಮಾತನಾಡುತ್ತಾರೆ ಮಾತನಾಡಲಿ. ಮಾನ್ಯ ಭೋಜೇಗೌಡರೇ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

**ಡಾ: ತೇಜಸ್ವಿನಿ ಗೌಡ:–** ಸಭಾಪತಿಯವರ ಪೀಠಕ್ಕೆ ಬೆಲೆ ಕೊಡುವುದಿಲ್ಲ ಇವರು . . .

(ಗೊಂದಲ)

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ, ಮಾತನಾಡಿ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಆಗ ನಮ್ಮ ಸರ್ಕಾರದಲ್ಲಿ ಮಾನ್ಯ ಬಿ.ಎಸ್. ಯಡಿಯೂರಪ್ಪನವರೊಬ್ಬರೇ ಮುಖ್ಯಮಂತ್ರಿ ಇದ್ದರು. ಅದು ನಮ್ಮೆಲ್ಲರಿಗೂ ಕೂಡ ಗೊತ್ತಿದೆ. ಇಡೀ ರಾಜ್ಯದಲ್ಲಿ ಕಂಡರಿಯದಂತಹ ಪ್ರವಾಹ ಬಂತು. ಆ ಸಂದರ್ಭದಲ್ಲಿ ಮಾನ್ಯ ಬಿ.ಎಸ್.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಡಿಯೂರಪ್ಪನವರು ದೆಹಲಿಗೆ ಹೋಗಿದ್ದರು. ದೆಹಲಿಯಿಂದ ತಕ್ಷಣವೇ ಬೆಂಗಳೂರಿಗೆ ಬಂದರು. ಬೆಳಗಾವಿಗೆ ಹೋದರು, ಅಲ್ಲಿಂದ ಆರಂಭವಾಗಿರುವ ಅವರ ಪ್ರವಾಸ ಇಡೀ ರಾಜ್ಯಾದ್ಯಂತ ಜನ ಮೆಚ್ಚುವ ರೀತಿಯಲ್ಲಿ ಕರ್ನಾಟಕ ರಾಜ್ಯದ ಪ್ರವಾಹದ ಬಗ್ಗೆ ನಿರ್ಧಾರವನ್ನು ತೆಗೆದುಕೊಂಡರು. ಇದುವರೆಗೂ ಕರ್ನಾಟಕ ರಾಜ್ಯದಲ್ಲಿ ಬಹಳ ಪ್ರವಾಹಗಳು ಬಂದು ಹೋಗಿವೆ. ಏನು ಮಾಡಿದರು? ಸಂಪೂರ್ಣವಾಗಿ ಬಿದ್ದು ಹೋಗಿರುವ ಮನೆಗೆ ಹೆಚ್ಚು ಎಂದರೆ ಒಂದು ಮನೆಗೆ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿರಬಹುದು. ನಾವು ನೀವು ಯಾರೂ ಕೂಡ ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಿರಲಿಲ್ಲ. ಮಾನ್ಯ ಯಡಿಯೂರಪ್ಪನವರು 3 ಲಕ್ಷ ರೂಪಾಯಿ ಕೊಡಬಹುದು ಅಥವಾ 4 ಲಕ್ಷ ರೂಪಾಯಿ ಕೊಡಬಹುದು ಎಂದು ಅಂದುಕೊಂಡಿರಬಹುದು. ಆದರೆ ಅವರು ಬಿದ್ದು ಹೋಗಿರುವ ಒಂದೊಂದು ಮನೆಗೆ 05 ಲಕ್ಷ ರೂಪಾಯಿಗಳನ್ನು ಕೊಟ್ಟರು.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಕೊಡಗಿನಲ್ಲಿ 8 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಒಂದು ಜಿಲ್ಲೆಗೆ ಸೀಮಿತವಾಗಿ ಹೇಳುತ್ತಿಲ್ಲ, ಲಕ್ಷಾಂತರ ಮನೆಗಳು ಬಿದ್ದಂತಹ ಸಂದರ್ಭದಲ್ಲಿ ಇಡೀ ರಾಜ್ಯದ ಬಗ್ಗೆ ಹೇಳುತ್ತಿದ್ದೇನೆ. ಎರಡನೇ ಅಂಶವನ್ನು ಹೇಳುತ್ತೇನೆ. ಅರ್ಧಂಬರ್ಧ ಬಿದ್ದಂತಹ ಮನೆಗಳಿಗೆ ಒಂದು ಲಕ್ಷ ರೂಪಾಯಿಯನ್ನು ಕೊಟ್ಟರು. ಸರಿಸುಮಾರು ಬಿದ್ದಂತಹ ಮನೆಗಳಿಗೆ 50,000/- ರೂಪಾಯಿಗಳನ್ನು ಕೊಟ್ಟರು. ತಕ್ಷಣದ ಪರಿಹಾರವಾಗಿ 10,000/- ರೂಪಾಯಿಗಳನ್ನು ಕೊಟ್ಟರು. ಈ ತರಹ ಬಿದ್ದಿರುವಂತಹ ಮನೆಗಳು ಸಾಮಾನ್ಯವಾಗಿ ಯಾವ ಮನೆಗಳು ಬಿದ್ದು ಹೋಗಿವೆ ಎಂದು ನಮ್ಮೆಲ್ಲರಿಗೂ ಗೊತ್ತಿರುತ್ತದೆ. ಬಡವರ ಮನೆಗಳು, ರೈತರ ಮನೆಗಳು ಮತ್ತು ಮಣ್ಣಿನ ಮನೆಗಳೇ ಬಿದ್ದಿರುತ್ತವೆ. ಈ ರೀತಿ ಬಡವರ ಕಣ್ಣೀರನ್ನು ಒರೆಸುವಂತಹ ಸರ್ಕಾರ ಮೊದಲನೇ ಕಾರ್ಯವನ್ನು ಕರ್ನಾಟಕ ರಾಜ್ಯದಲ್ಲಿ ಯಶಸ್ವಿಯಾಗಿ ಮಾಡಿತು. ವಿರೋಧಪಕ್ಷದವರು, ಪತ್ರಿಕೆಯವರು ಮತ್ತು ದೂರದರ್ಶನದವರು ಕೂಡ ಬಹಳ ಚೆನ್ನಾಗಿ ನಿರ್ವಹಣೆ ಮಾಡಿದ್ದೀರಿ ಎಂದು ಈ ಸರ್ಕಾರಕ್ಕೆ ಬೆನ್ನು ತಟ್ಟಿದವು ಇದು ಮೊದಲನೆಯದು. ಎರಡನೆಯದಾಗಿ, ನಮ್ಮ ಸರ್ಕಾರದ ಬಗ್ಗೆ ಇವರು ಮಂತ್ರಿಮಂಡಲವನ್ನು ವಿಸ್ತಾರ ಮಾಡುವುದಿಲ್ಲ, ಯಡಿಯೂರಪ್ಪನವರ ಕೈಯಲ್ಲಿ ಮಂತ್ರಿಮಂಡಲವನ್ನು ರಚನೆ ಮಾಡುವುದಕ್ಕಾಗುವುದಿಲ್ಲ, 17 ಜನ ಬಂದಿದ್ದಾರೆ, ಈ ಸರ್ಕಾರ ಬಿದ್ದು ಹೋಗುತ್ತದೆ, ಈ ಸರ್ಕಾರ ಇರುವುದಿಲ್ಲ ನೋಡುತ್ತಾ ಇರಿ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾಳೆ, ನಾಡಿದ್ದು, 8 ದಿನ ಇನ್ನು ಯಾವಾಗ ಮಂತ್ರಿಮಂಡಲ ರಚನೆ ಮಾಡುತ್ತಾರೆ ಎಂದು ಎಲ್ಲರೂ ಕೇಳುತ್ತಿದ್ದರು. ನಮ್ಮೆಲ್ಲರಿಗೂ ಕೂಡ ಗೊತ್ತಿದೆ, ಏನೂ ಸಮಸ್ಯೆ ಇಲ್ಲದ ಹಾಗೆ ಮಾನ್ಯ ಯಡಿಯೂರಪ್ಪನವರು ಏನು ಮಾತನ್ನು ಕೊಟ್ಟಿದ್ದರು, ಆ ಮಾತನ್ನು ಸಂಪೂರ್ಣವಾಗಿ ಉಳಿಸಿಕೊಂಡರು. ಮಂತ್ರಿಮಂಡಲವು ಏನೂ ಸಮಸ್ಯೆ ಇಲ್ಲದಂತೆ ವಿಸ್ತಾರವಾಯಿತು. ಇವತ್ತು ನಮ್ಮ ಸರ್ಕಾರ ಅತ್ಯಂತ ಸುಭದ್ರವಾಗಿರುವಂತಹ ಸರ್ಕಾರವಾಗಿದೆ. ಈಗ ನಮ್ಮ ಕಣ್ಣ ಮುಂದೆ ಅನೇಕ ಸಮಸ್ಯೆಗಳಿವೆ. ರೈತರಿಗೆ ನಮ್ಮ ಕೇಂದ್ರ ಸರ್ಕಾರದ ಶ್ರೀ ನರೇಂದ್ರ ಮೋದಿಯವರು ಪ್ರತಿ ವರ್ಷ ಒಂದು ಕುಟುಂಬಕ್ಕೆ 6,000/- ರೂಪಾಯಿಗಳನ್ನು ಕೊಡುತ್ತಿದ್ದರು. ಯಡಿಯೂರಪ್ಪನವರು ಬಂದ ಕೂಡಲೇ 4,000/- ರೂಪಾಯಿಗಳನ್ನು ಸೇರಿಸಿ ಪ್ರತಿ ವರ್ಷ 10,000/- ರೂಪಾಯಿಗಳು ರೈತರ ಮನೆ ಮುಟ್ಟುವ ಹಾಗೆ ಮಾಡಿದರು. ಅತ್ಯಂತ ಒಳ್ಳೆಯ ನಿರ್ಧಾರವನ್ನು ಮಾನ್ಯ ಯಡಿಯೂರಪ್ಪನವರು ಮಾಡಿದರು. ಅಷ್ಟೇ ಅಲ್ಲ, ನೇಕಾರರ ಸಾಲ ಮನ್ನಾ ಮಾಡಿದರು, ಮೀನುಗಾರರ ಸಾಲಮನ್ನಾ ಮಾಡಿದರು. ಅಷ್ಟೇ ಅಲ್ಲದೆ, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಪ್ರತಿ ವರ್ಷ ಬಂದು ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಕುಳಿತುಕೊಳ್ಳುತ್ತಿದ್ದರು. ನಮಗೆಲ್ಲರಿಗೂ ಆ ಗೋಳನ್ನು ನೋಡಿ ಕಣ್ಣೀರು ಬರುತ್ತಿತ್ತು. ಸಹಕಾರ್ಯಕರ್ತೆಯರಿಗೆ 3,500/- ಇರುವುದನ್ನು 4,000/- ರೂಪಾಯಿಗಳಿಗೆ ಹೆಚ್ಚಳ ಮಾಡಿದರು. ಇನ್ನು ಆಶಾ ಕಾರ್ಯಕರ್ತೆಯರಿಗೆ 8,000/- ಇರುವುದನ್ನು 10,000/- ರೂಪಾಯಿಗಳಿಗೆ ಹೆಚ್ಚಳ ಮಾಡಿದರು. ಅಂಗನವಾಡಿ ಕಾರ್ಯಕರ್ತೆಯರಿಗೂ 8,000/- ಗಳಿಂದ 10,000/- ರೂಪಾಯಿಗಳಿಗೆ ಹೆಚ್ಚಳ ಮಾಡಿದರು. ಈ ರೀತಿ ಮಾನ್ಯ ಯಡಿಯೂರಪ್ಪನವರ ಸರ್ಕಾರ ಮಹಿಳೆಯರ ಪರ ಮತ್ತು ದಲಿತರ ಪರವಾಗಿ ನಿರ್ಧಾರಗಳನ್ನು ತೆಗೆದುಕೊಂಡಿದೆ.

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ತಾವು ಮಾತನಾಡಲು ಪ್ರಾರಂಭಿಸಿ ಈಗಾಗಲೇ ಅರ್ಧ ಗಂಟೆ ಆಯಿತು. ಯಾವಾಗ ಮುಗಿಸುತ್ತೀರಿ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇನ್ನೊಂದು ಐದು ನಿಮಿಷದಲ್ಲಿ ಮುಗಿಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ law and order ಅನ್ನು ಕಾಪಾಡುವಂತಹ ಸಂದರ್ಭದಲ್ಲಿಯೂ ಕೂಡ ಉದಾಹರಣೆಗೆ, ಮಂಗಳೂರು ಗಲಾಟೆಯನ್ನು ತೆಗೆದುಕೊಂಡರೆ, ಬೀದರ್ ಘಟನೆಯನ್ನು ತೆಗೆದುಕೊಂಡರೆ ಹೀಗೆ ರಾಜ್ಯದಲ್ಲಿ ಎಲ್ಲಾ ಕಾರ್ಯಕ್ರಮಗಳೂ ಕೂಡ ಅತ್ಯಂತ ಶಾಂತ ರೀತಿಯಿಂದ ನಡೆಯುವ ರೀತಿಯಲ್ಲಿ ಮಾಡಿದರು. ಉದಾಹರಣೆಗೆ CAA [Citizenship

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(Amendment) Act] ಬಗ್ಗೆ ಕೂಡ ರಾಜ್ಯದಲ್ಲಿ ಹೋರಾಟ ನಡೆಯಿತು. ಹೋರಾಟ ಮಾಡುವವರಿಗೆ ಅನುಮತಿ ಕೊಡಬೇಕು ಅಥವಾ ಕೊಡಬಾರದು ಎಂದು democratic ಆಗಿ ಪೊಲೀಸ್ ಇಲಾಖೆಗೆ ನಮ್ಮ ಸರ್ಕಾರ ನಿರ್ದೇಶನ ನೀಡಿತು. ಕಾರ್ಯಕ್ರಮಗಳನ್ನು ಮೆರವಣಿಗೆ ಮಾಡದೇ ಸಭೆಗಳನ್ನು ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಅವಕಾಶವನ್ನು ಕೊಟ್ಟರು. ಮಂಗಳೂರು ಒಂದನ್ನು ಹೊರತುಪಡಿಸಿ ಎಲ್ಲಿಯೂ ಗಲಾಟೆ ನಡೆಯಲಿಲ್ಲ. ಮಂಗಳೂರು ಅತ್ಯಂತ ಪೂರ್ವ ನಿಯೋಜಿತವಾದಂತಹ, ಗಲಾಟೆ ಎಬ್ಬಿಸುವಂತಹ ಕಾರ್ಯಕ್ರಮವಾಗಿತ್ತು. ರಾಜ್ಯದ ವಿಷಯಕ್ಕೆ ಸಂಬಂಧಪಟ್ಟಂತೆ law and order ಬಗ್ಗೆ ಹೇಳಬಯಸುತ್ತೇನೆ. ಮಂಗಳೂರಿನಲ್ಲಿ ಗಲಾಟೆ ನಿರ್ಮಾಣ ಮಾಡಬೇಕೆಂದು ಕಾಸರಗೋಡಿನಿಂದ, ಕೇರಳದಿಂದ, ಪತ್ರಕರ್ತರ ಹೆಸರಿನಲ್ಲಿ ಬಂದರು. ಆದರೆ ಅತ್ಯಂತ ಯಶಸ್ವಿಯಾಗಿ ಮಂಗಳೂರಿನಲ್ಲಿ ಏನೇನೂ ಗಲಾಟೆಯಾಗದ ಹಾಗೆ ಸಾರ್ವಜನಿಕರಿಗೆ ಏನೂ ತೊಂದರೆಯಾಗದ ಹಾಗೆ ಶಾಂತಿಯುತವಾಗಿ ಮಾನ್ಯ ಯಡಿಯೂರಪ್ಪನವರ ಸರ್ಕಾರ ನಿರ್ವಹಣೆ ಮಾಡಿತು.

**ಶ್ರೀ ಐವನ್ ಡಿ'ಸೋಜಾ:–** ಇಬ್ಬರ ಮೇಲೆ ಗೋಲಿಬಾರ್ ನಡೆಸಿದ್ದು ಶಾಂತಿಯುತವೇ?

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಗೋಲಿಬಾರ್ ಏಕಾಯಿತು ಎಂದು ಹೇಳಬಯಸುತ್ತೇನೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ, ಅದರ ಬಗ್ಗೆ ಬೇಕಾದಷ್ಟು ಚರ್ಚೆಗಳಾಗಿವೆ, ಬೇರೆ ವಿಷಯದ ಬಗ್ಗೆ ಮಾತನಾಡಿ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಹೇಗಾದರೂ ಮಾಡಿ ಮಂಗಳೂರಿನಲ್ಲಿ ಒಂದು ದೊಡ್ಡ ಗಲಾಟೆಯನ್ನು ಎಬ್ಬಿಸಬೇಕು ಎನ್ನುವುದನ್ನು ಇವತ್ತಿನ ಸರ್ಕಾರ ಸಂಪೂರ್ಣವಾಗಿ ವಿಫಲ ಮಾಡಿತು. ಒಂದು ವೇಳೆ ಅವಕಾಶ ಕೊಟ್ಟಿದ್ದರೆ ಅವತ್ತು ನೂರಾರು ಜನರ ಹೆಣ ಬೀಳುತ್ತಿತ್ತು. ನಮ್ಮ ಸರ್ಕಾರ ಇದನ್ನು ಸಂಪೂರ್ಣವಾಗಿ ತಡೆಗಟ್ಟಿತು. ಇನ್ನು ಬೀದರ್ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಬಸವರಾಜ ಹೊರಟ್ಟಿಯವರು ಮತ್ತು ಮಾನ್ಯ ಎಸ್.ಆರ್. ಪಾಟೀಲರವರು ಹಾಗೂ ಹುಮ್ನಾಬಾದ್‌ನ ನಮ್ಮ ಪಾಟೀಲರು ಹೀಗೆ ಅನೇಕರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ನಾನು ಬಹಳ ನೋವಿನಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಬಯಸುತ್ತೇನೆ. ಎಳೆಯ ಮಕ್ಕಳಿಂದ ಕೂಡ ಮಾನ್ಯ ಪ್ರಧಾನ ಮಂತ್ರಿಯವರಿಗೆ ಬೈಯ್ಯಿರಿ ಎಂದು ನಾಟಕದ ಪಠ್ಯವನ್ನು ರಚನೆ ಮಾಡಿಕೊಡುವುದು, ಇದು ಅತ್ಯಂತ ಹೀನ ಕೃತ್ಯ ಎಂದು ಹೇಳಬಯಸುತ್ತೇನೆ. ಸಣ್ಣ ಮಕ್ಕಳಿಂದ, ಅವರಿಗೆ ತಪ್ಪು ಯಾವುದು, ಸರಿ ಯಾವುದು ಎಂಬುದು ಮಕ್ಕಳಿಗೆ ಗೊತ್ತಿರುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ:–** ಕಲ್ಲಡ್ಕದಲ್ಲಿ ಬಾಬರಿ ಮಸೀದಿಯನ್ನು damage ಮಾಡಿದ ಪ್ರಾತ್ಯಕ್ಷಿಕೆ ಮಾಡಿದ ಕಾರಣಕ್ಕೆ ಅಲ್ಲಿ ಪೊಲೀಸರು ಸೇರಿದ್ದರು ಅದರ ಮೇಲೆ ಕೇಸ್ ರಿಜಿಸ್ಟರ್ ಮಾಡಿದ್ದಾರೆಯೇ?

**ಶ್ರೀ ಎನ್. ರವಿಕುಮಾರ್:–** ಸರ್ಕಾರ ಅದರ ಮೇಲೆ ಕ್ರಮ ತೆಗೆದುಕೊಂಡಿದೆ.

**ಶ್ರೀ ಐವನ್ ಡಿ'ಸೋಜಾ:–** ಮಕ್ಕಳ ಮೇಲೆ ನೀವು ದಾದಾಗಿರಿ ತೋರಿಸಿದಿರಿ ಅದರ ಮೇಲೂ ಕೇಸ್ ರಿಜಿಸ್ಟರ್ ಮಾಡಿದ್ದಾರೆಯೇ?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಐವನ್ ಡಿ'ಸೋಜಾರವರೇ, ನಮ್ಮ ಪಾಳಿ ಬಂದಾಗ ಹೇಳೋಣ ಈಗ ಅವರು ಮಾತನಾಡಲಿ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಬೀದರ್‌ನ ಶಾಹಿನ್ ಶಾಲೆಯಲ್ಲಿ; ಉದಾಹರಣೆಗೆ ಕೇಸ್ ಹಾಕಬಾರದು ಎಂದು ಹೇಳಿದರು ಯಾರ ಮೇಲೆ ಕೇಸ್ ಹಾಕಬಾರದು?

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ರವಿಕುಮಾರ್‌ರವರೇ, ಒಂದು ನಿಮಿಷ. ಆ ಮಗು ಪ್ರಧಾನ ಮಂತ್ರಿಯವರನ್ನು ಎಲ್ಲೂ ಬೈದಿದ್ದಲ್ಲ. ಯಾರು ದಾಖಲೆಯನ್ನು ಕೇಳುವುದಕ್ಕೆ ಬರುತ್ತಾರೋ ಅವರಿಗೆ ಹೇಳಿರುವುದಾಗಿದೆ. ಅದನ್ನು ಸರಿ ಮಾಡಿಕೊಳ್ಳಿ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರು ಅವಕಾಶ ಕೊಟ್ಟರೆ ಆ ಶಬ್ಧವನ್ನು ಸದನದಲ್ಲಿ ಹೇಳಿಬಿಡುತ್ತೇನೆ.

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ, ಬೇಡ ಬಿಡಿ.
**ಶ್ರೀ ಎನ್. ರವಿಕುಮಾರ್:– XXX**

(ಮುಂದು)

**(XXX ಸಭಾಪತಿಯವರ ಆದೇಶಾನುಸಾರ ತೆಗೆದು ಹಾಕಲಾಗಿದೆ)**

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(102) 20-02-2020/ 05-10/ ಕೆಹೆಚ್-ಎಕೆ

**XXX XXX XXX XXX XXX XXX**

**ಡಾ॥ ಜಯಮಾಲ:-** ಮಾನ್ಯ ಸಭಾಪತಿಯವರೇ, ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ.

**ಸಭಾಪತಿಯವರು:-** ನಾನು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರನ್ನು ಮಾತನಾಡುವುದಕ್ಕೆ ತಿಳಿಸಿದ್ದೇನೆ.

**ಡಾ॥ ಜಯಮಾಲ:-** ಮಾನ್ಯ ಸಭಾಪತಿಯವರೇ, ಮಾನ್ಯ ಮನಮೋಹನ್‌ಸಿಂಗ್‌ರವರು . . . ಒಂದು ನಿಮಿಷ.

**ಸಭಾಪತಿಯವರು:-** ನಾನು ಈಗಾಗಲೇ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರನ್ನು ಮಾತನಾಡುವುದಕ್ಕೆ ತಿಳಿಸಿದ್ದೇನೆ.

**ಡಾ॥ ಜಯಮಾಲ:-** ಮಾನ್ಯ ಸಭಾಪತಿಯವರೇ, ನಾನು ಒಂದೇ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಜಯಮಾಲರವರೇ ಮತ್ತು ಮಾನ್ಯ ರವಿಕುಮಾರ್‌ರವರೇ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಿನಾಂಕ:17-02-2020 ರಂದು ಜಂಟಿ ಸದನವನ್ನು ಉದ್ದೇಶಿಸಿ, ರಾಜ್ಯಪಾಲರು ಮಾಡಿದಂತಹ ಭಾಷಣದ ಮೇಲೆ ಚರ್ಚೆ ಮಾಡಲು ತೆಗೆದುಕೊಂಡಿದ್ದೇವೆ. ಈ ಹಿನ್ನಲೆಯಲ್ಲಿ ರಾಜ್ಯಪಾಲರು ಸುಮಾರು 21 ಪುಟಗಳನ್ನು ಓದಿದರು. ಅದರಲ್ಲಿ 67 ಪ್ಯಾರಗಳು ಇವೆ. ಮಾನ್ಯ ರವಿಕುಮಾರ್‌ರವರು ನಮ್ಮ ರಾಜ್ಯದ ಬಗ್ಗೆ ಮತ್ತು ಅಧಿಕಾರದ ಬಗ್ಗೆ ಬಹಳವಾಗಿ ಹೇಳಿದರು. ನಮ್ಮ ಸರ್ಕಾರವು 2019ರ ಡಿಸೆಂಬರ್

---

**(XXX ಸಭಾಪತಿಯವರ ಆದೇಶಾನುಸಾರ ತೆಗೆದು ಹಾಕಲಾಗಿದೆ)**

"ತಿದ್ದುಪಡಿಯಾಗದ ಪ್ರತಿ" ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಿಂಗಳಿನವರೆಗೆ "ನಮ್ಮ ಗ್ರಾಮ, ನಮ್ಮ ರಸ್ತೆ" ಕಾರ್ಯಕ್ರಮ ಅಡಿಯಲ್ಲಿ ಏನೇನು ಕಾರ್ಯಕ್ರಮವನ್ನು ಮಾಡಿದ್ದೇವೆ ಎನ್ನುವ ಮಾತನ್ನು 34ನೇ ಪ್ಯಾರದಲ್ಲಿ ಹೇಳಿದ್ದಾರೆ. ಹಾಗೆಯೇ 33ನೇ ಪ್ಯಾರದಲ್ಲಿ ಜನವರಿ, 2020ರವರೆಗೆ 1,752 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸುಮಾರು 16,000 ಗ್ರಾಮೀಣ ನೀರು ಸರಬರಾಜು ಯೋಜನೆಗಳನ್ನು ಪೂರ್ಣಗೊಳಿಸಿದ್ದೇವೆ ಎಂದು ಹೇಳಿದ್ದಾರೆ. ಹಾಗೆಯೇ Public ಶಾಲೆಗಳ ಬಗ್ಗೆಯೂ ಹೇಳಿದ್ದಾರೆ. ನಾನು ಹೇಳುವುದೇನೆಂದರೆ, ಈ ಸರ್ಕಾರ ಅಧಿಕಾರಕ್ಕೆ ಬಂದು ಈಗಾಗಲೇ 6 ತಿಂಗಳುಗಳಾಯಿತು. ಸರ್ಕಾರ ಅಧಿಕಾರವನ್ನು ತೆಗೆದುಕೊಂಡ ದಿನಾಂಕದಿಂದ ಇಲ್ಲಿಯವರೆಗೆ ಏನೇನು ಅಭಿವೃದ್ಧಿ ಕೆಲಸವನ್ನು ಮಾಡಿದ್ದೇವೆ ಎಂದು ಹೇಳಿರುವುದಿಲ್ಲ. ಹಿಂದಿನ ಸರ್ಕಾರದ ಯೋಜನೆಗಳನ್ನು ಸಹ ಸೇರಿಸಿಕೊಂಡು ಹೇಳಿದ್ದಾರೆ. ಸರ್ಕಾರವು ಯಾವ ದಿನಾಂಕದಿಂದ ಅಧಿಕಾರವನ್ನು ವಹಿಸಿಕೊಂಡು, ಎಷ್ಟು ಹಣವನ್ನು ಬಿಡುಗಡೆ ಮಾಡಿ, ಏನೇನು ಅಭಿವೃದ್ಧಿ ಕೆಲಸವನ್ನು ಮಾಡಿದ್ದೇವೆ ಎಂದು ತಿಳಿಸಿದ್ದರೆ ಸರಿಯೆನಿಸುತ್ತಿತ್ತು. ರಾಜ್ಯಪಾಲರ ಭಾಷಣದ ಪುಟ ಸಂಖ್ಯೆ.10 ರಲ್ಲಿ ಕ್ಯಾನ್ಸರ್ ತಪಾಸಣೆ ಸೌಲಭ್ಯಗಳಿಲ್ಲದ 10 ಜಿಲ್ಲಾ ಆಸ್ಪತ್ರೆಗಳಲ್ಲಿ ಸಂಚಾರಿ ಮ್ಯಾಮೋಗ್ರಫಿ ಮತ್ತು ಸರ್ವಿಕಲ್ ಕ್ಯಾನ್ಸರ್ ಡೈಯಾಗ್ನೋಸ್ಟಿಕ್ ಯುನಿಟ್ ಸ್ಥಾಪನೆ ಬಗ್ಗೆ ಹೇಳಿದ್ದಾರೆ. ಇವತ್ತಿನ ದಿವಸ ಕರ್ನಾಟಕದಲ್ಲಿ ಕ್ಯಾನ್ಸರ್ ಎಷ್ಟುಮಟ್ಟಿಗೆ ಬೆಳೆದಿದೆ ಎಂದರೆ, ಅದಕ್ಕೆ ಇತಿ-ಮಿತಿಗಳೇ ಇರುವುದಿಲ್ಲ. ಕರ್ನಾಟಕದಲ್ಲಿ ಒಂದು ವರ್ಷಕ್ಕೆ 1 ಲಕ್ಷ ಜನರಿಗೆ ಕ್ಯಾನ್ಸರ್ ಇರುವುದು ಪತ್ತೆಯಾಗುತ್ತಿದೆ. ಇದು ಅಂಕಿ-ಸಂಖ್ಯೆಗಳ ಪ್ರಕಾರ ಕೊಟ್ಟಿರುವಂತಹ ಮಾಹಿತಿ ಮತ್ತು ವೈದ್ಯರು ಕೊಟ್ಟಿರುವಂತಹ ಮಾಹಿತಿಯಾಗಿದೆ. ಸುಮಾರು 19 ವರ್ಷದ ಹೆಣ್ಣು ಮಗಳಿಗೆ breast cancer ಇದೆ. ಇವತ್ತಿನ ದಿವಸ ಕ್ಯಾನ್ಸರ್‌ನ್ನು ತಪಾಸಣೆ ಮಾಡಲು ಒಂದು ಆಸ್ಪತ್ರೆಯನ್ನು ಬಿಟ್ಟರೆ, ಎಲ್ಲಿಯೂ ಕೂಡ ಖಾಸಗಿ ಆಸ್ಪತ್ರೆಗಳಲ್ಲಿ ಸೌಲಭ್ಯಗಳು ಇರುವುದಿಲ್ಲ ಮತ್ತು ಸರಿಯಾದ ಮಾಹಿತಿಯನ್ನು ಕೊಡುವುದಿಲ್ಲ. ಇದರ ಬಗ್ಗೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ? ಇದು ಬಹಳ ಗಂಭೀರವಾದಂತಹ ಸಮಸ್ಯೆಯಾಗಿದೆ. ಇಂತಹ ಸಮಸ್ಯೆಗಳ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಹೇಳಬೇಕಾಗುತ್ತದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿರುವುದಿಲ್ಲ. ಇದರ ಬಗ್ಗೆ ರಾಜ್ಯಪಾಲರ ಕಡೆಯಿಂದ ಭಾಷಣವನ್ನು ಮಾಡಿಸಿದ್ದಾರೆ. ನಮ್ಮ ಸಂವಿಧಾನದಲ್ಲಿ ಸರ್ಕಾರ ಏನು ಬರೆದು ಕೊಡುತ್ತದೆಯೋ, ಅದನ್ನು ರಾಜ್ಯಪಾಲರು ಓದಬೇಕಾಗುತ್ತದೆ. ರಾಜ್ಯಪಾಲರಿಗೆ ಅನೇಕ ಸಾರಿ ಮುಜುಗರ ಉಂಟು ಮಾಡುವಂತಹ ಪ್ರಸಂಗವನ್ನು ನಮ್ಮ ದೇಶದ ಇತಿಹಾಸದಲ್ಲಿ ನೋಡಿದ್ದೇವೆ. ನಮ್ಮ ಶ್ರೀ ಎಸ್.ಎಂ.ಕೃಷ್ಣರವರು ಮಹಾರಾಷ್ಟ್ರದಲ್ಲಿ ರಾಜ್ಯಪಾಲರಾಗಿದ್ದರು. ಕೊನೆಗೆ ಅವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ–ಮಹಾರಾಷ್ಟ್ರ border ಸಲುವಾಗಿ ಎಂದು ಬರೆದು ಕೊಟ್ಟರು. ನಂತರ ಜೈ ಮಹಾರಾಷ್ಟ್ರ ಎಂದು ಹೇಳಿದರು. ಇದರ ಬಗ್ಗೆ ನಮ್ಮಲ್ಲಿ ಬಹಳ ವಿರೋಧ ವ್ಯಕ್ತವಾಯಿತು. ನಮ್ಮ ಸಂವಿಧಾನದಲ್ಲಿ ರಾಜ್ಯಪಾಲರ ಪಾತ್ರ ಏನಿದೆ, ಅದನ್ನು ನಾವು ಮಾಡಿದ್ದೇವೆ. ಈ ಭಾಷಣವನ್ನು ರಾಜ್ಯಪಾಲರ ಮೂಲಕ ಮಾಡಿಸಲಾಯಿತು. ಹಾಗೆಯೇ ಉತ್ತರ ಕರ್ನಾಟಕದ ಬಗ್ಗೆ ಏನು ಹೇಳಿದ್ದಾರೆ. ನಾನು 67 ಪ್ಯಾರವನ್ನು ಕೂಡ ಓದಿ ಮಾರ್ಕ್ ಮಾಡಿದ್ದೇನೆ. ಈ 67 ಪ್ಯಾರವನ್ನು ಸಹ ರಾಜ್ಯಪಾಲರು ಓದಿದ್ದಾರೆ. ಇದರಲ್ಲಿ ಉತ್ತರ ಕರ್ನಾಟಕದ ಬಗ್ಗೆ ಏನು ಹೇಳಿರುವುದಿಲ್ಲ. ಇದರ ಬಗ್ಗೆ ಒಂದಾದರೂ ಅಂಶ ಬೇಕಲ್ಲವೇ, ನಾನು ಏನಾದರೂ ತಪ್ಪು ಹೇಳಿದರೆ ಆಡಳಿತ ಪಕ್ಷದವರು ಬರೆದುಕೊಳ್ಳಬಹುದು. 67 ಪ್ಯಾರದಲ್ಲಿಯೂ ಉತ್ತರ ಕರ್ನಾಟಕದ ಬಗ್ಗೆ ಹೇಳಿರುವುದಿಲ್ಲ. ನಾನು ಬೆಳಗಾವಿ ಸುವರ್ಣ ವಿಧಾನಸೌಧದ ಬಗ್ಗೆ ಮಾತ್ರ ಹೇಳುತ್ತೇನೆ. ಬೆಳಗಾವಿ ಸುವರ್ಣ ವಿಧಾನಸೌಧ ಉತ್ತರ ಕರ್ನಾಟಕಕ್ಕೆ ಒಂದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಆ ಸುವರ್ಣ ವಿಧಾನಸೌಧವನ್ನು ಬಿಳಿ ಆನೆ ಸಾಕಿದ ಹಾಗೆ ಆಗಿದೆ. ಬೆಳಗಾವಿ ಸುವರ್ಣ ವಿಧಾನಸೌಧದ ನಿರ್ಮಾಣ ವೆಚ್ಚ 438 ಕೋಟಿ ರೂಪಾಯಿಗಳಾಗಿವೆ. ವಾರ್ಷಿಕ ನಿರ್ವಹಣೆ 6 ಕೋಟಿ ರೂಪಾಯಿಗಳಾಗುತ್ತದೆ. ಬೆಳಗಾವಿ ಸುವರ್ಣ ವಿಧಾನ ಸೌಧದಲ್ಲಿ ಸದನವು 7 ವರ್ಷದಲ್ಲಿ 70 ದಿವಸ ಮಾತ್ರ ನಡೆದಿದೆ. Helipad ನ್ನು 4 ವರ್ಷದಲ್ಲಿ 3 ಬಾರಿ ನಿರ್ಮಾಣ ಮಾಡಿದ್ದಾರೆ. ಒಂದು ದಿನಕ್ಕೆ ಒಂದು ಕೋಟಿ ಅರವತ್ತಾಲ್ಕು ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಇವತ್ತಿನವರೆಗೂ ಸುಮಾರು 500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಸುವರ್ಣ ವಿಧಾನಸೌಧದಲ್ಲಿರುವ ಕಛೇರಿಗಳನ್ನು ಉಪಯೋಗ ಮಾಡುವುದಕ್ಕೆ ಯಾರು ಇಲ್ಲ ಮತ್ತು ಅಲ್ಲಿ ಕಸ ಗುಡಿಸಿ, ಸ್ವಚ್ಛತೆಯನ್ನು ನಿರ್ವಹಣೆ ಮಾಡುವುದಕ್ಕೂ ಸಹ ಯಾರು ಇಲ್ಲ. ಅವರು ತಮ್ಮ ಸರ್ಕಾರದ ಬಗ್ಗೆ ಅನೇಕ ವಿಚಾರಗಳನ್ನು ಹೇಳಿಕೊಂಡಿದ್ದಾರೆ. ಅದರ ಬಗ್ಗೆ ತಪ್ಪು ಎಂದು ನಾನು ಹೇಳುವುದಿಲ್ಲ. ಕಛೇರಿಗಳು ಸ್ಥಳಾಂತರಗೊಂಡರೂ ಸಹ ಸುವರ್ಣ ವಿಧಾನಸೌಧಕ್ಕೆ ಯಾವುದೇ ಮುಕ್ತಿ ಕಾಣುತ್ತಿಲ್ಲ. ಸರ್ಕಾರದಿಂದ ಒಂದು ಆದೇಶವನ್ನು ಹೊರಡಿಸಲಾಗಿದ್ದು, ಅದರಲ್ಲಿ ಕೃಷ್ಣಾ ಜಲ ಭಾಗ್ಯ ನಿಗಮ, ಆಲಮಟ್ಟಿ ಡ್ಯಾಂ, ಕರ್ನಾಟಕ ನೀರಾವರಿ ನಿಗಮ, ದಾವಣಗೆರೆ, ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ, ಬೆಳಗಾವಿ, ಸರ್ಕಾರಿ ನಿರ್ದೇಶನಾಲಯ ಕಬ್ಬು ಅಭಿವೃದ್ಧಿ, ಆಯುಕ್ತರು, ಬೆಳಗಾವಿ, ಪುರಾತತ್ತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ, ಹಂಪಿ, ಮಾನವ ಹಕ್ಕು ಆಯೋಗದ ಕಛೇರಿ, ಧಾರವಾಡ, ಉತ್ತರ ಕರ್ನಾಟಕದ ಭಾಗದಲ್ಲಿ ಪ್ರತ್ಯೇಕ ಮಂಡಳಿ ಸ್ಥಾಪನೆ, ಹುಬ್ಬಳ್ಳಿ–ಕರ್ನಾಟಕ ರಾಜ್ಯ ಮಾಹಿತಿ ಆಯೋಗದ ಎರಡು ಆಯುಕ್ತರ ಕಛೇರಿ, ಬೆಳಗಾವಿ ಮತ್ತು ಕಲುಬುರ್ಗಿ, ಇಲ್ಲಿ ಏನು ಅಭಿವೃದ್ಧಿ

ಕೆಲಸಗಳನ್ನು ಮಾಡಲಾಗಿದೆ. ಇಲ್ಲಿ ಏನಾದರೂ ಮಾಡಿದ್ದೇವೆ ಎಂದು ಒಂದು ಶಬ್ದವಾದರೂ ಬೇಕಲ್ಲವೇ? ಸರ್ಕಾರ ಆದೇಶವನ್ನು ಹೊರಡಿಸಿದೆ. ಆದರೆ ಇದನ್ನು ಇಂಪ್ಲಿಮೆಂಟ್ ಏಕೆ ಮಾಡಿಲ್ಲ, ಇಂಪ್ಲಿಮೆಂಟ್ ಮಾಡಬೇಕಾಗಿರುವ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ? ಇವತ್ತಿನ ದಿವಸ 500 ರಿಂದ 600 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇನ್ನೊಂದು ಮೊದಲ ಬಾರಿಗೆ ಸುವರ್ಣ ವಿಧಾನಸೌಧ, ಬೆಳಗಾವಿಯಲ್ಲಿ ಅಧಿವೇಶನ ಮಾಡಿದಾಗ ಆಗ ನಾನು ಕಾನೂನು ಮಂತ್ರಿಯಾಗಿದ್ದೆ. ಮಾನ್ಯ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದರು. ಬೆಂಗಳೂರಿನಲ್ಲಿರುವ ವಿಧಾನಸೌಧದ ಮಾದರಿಯಂತೆ ಸುವರ್ಣ ವಿಧಾನಸೌಧವನ್ನು ನಿರ್ಮಾಣ ಮಾಡಿದ್ದರೆ ಯಾವುದೇ ಸಮಸ್ಯೆ ಇರುತ್ತಿರಲಿಲ್ಲ. ಆ ಸುವರ್ಣ ವಿಧಾನ ಸೌಧವನ್ನು ಗೋಡೌನ್ ರೀತಿಯಲ್ಲಿ ನಿರ್ಮಾಣ ಮಾಡಿದ್ದಾರೆ. ಅದನ್ನು ಭೂತಬಂಗಲೆ ಎಂದು ಕರೆಯುತ್ತಾರೆ. ಆ ಸುವರ್ಣ ವಿಧಾನಸೌಧವನ್ನು ಅವರಿಗೆ ಬೇಕಾದ ರೀತಿಯಲ್ಲಿ ನಿರ್ಮಾಣ ಮಾಡಿದ್ದಾರೆ? ಅದನ್ನು ಯಾರು ನಿರ್ಮಾಣ ಮಾಡಿದ್ದಾರೆ, ನಾವು ನಿರ್ಮಾಣ ಮಾಡಿರುವುದಿಲ್ಲ. ಇವರು ನಿರ್ಮಾಣ ಮಾಡಿದ್ದಾರೆ. ನಾವು ಸುವರ್ಣ ವಿಧಾನಸೌಧವನ್ನು ಪ್ರಾರಂಭ ಮಾಡಿದ್ದೇವೆ. ಇವರು ನಿರ್ಮಾಣ ಮಾಡಿದ್ದಾರೆ. ಆ ಸುವರ್ಣ ವಿಧಾನಸೌಧಕ್ಕೆ ಯಾವುದೇ ರೀತಿಯ ethics ಇರುವುದಿಲ್ಲ. ಅಲ್ಲಿಗೆ ಕಛೇರಿಗಳನ್ನು ಸ್ಥಳಾಂತರ ಮಾಡುವುದಕ್ಕೆ ತಿಳಿಸಲಾಗಿತ್ತು. ಕಛೇರಿಗಳನ್ನು ಸ್ಥಳಾಂತರ ಮಾಡಿದರೆ, ಶಾಸನ ಸಭೆಗಳು ನಡೆದಾಗ ಈ ಕಛೇರಿಗಳನ್ನು ಹೊರಗೆ ಹಾಕಬೇಕಾಗುತ್ತದೆ. ಬೆಂಗಳೂರಿನ ವಿಧಾನಸೌಧದ ರೀತಿಯಲ್ಲಿ ಆ ಸುವರ್ಣ ವಿಧಾನಸೌಧ ಇರುವುದಿಲ್ಲ. ಇಲ್ಲಿ ನೆಲಮಹಡಿ, ಮೊದಲನೇ ಮಹಡಿ ಈ ರೀತಿ ಇದೆ. ಆ ಸುವರ್ಣ ವಿಧಾನಸೌಧವನ್ನು ಸಣ್ಣದಾದ ರೀತಿಯಲ್ಲಿ ನಿರ್ಮಿಸಿದ್ದರೆ ನಿಮ್ಮ ಕಾಲಕ್ಕೆ 400 ರಿಂದ 500 ಕೋಟಿ ರೂಪಾಯಿಗಳಾಗುತ್ತಿತ್ತು. ಇದರ ಬಗ್ಗೆ ನಾನು ಏನೂ ಸಹ ಹೇಳಬಾರದು. ಅಲ್ಲಿ ಏನೇನು ಭ್ರಷ್ಟಾಚಾರ ಆಯಿತು, ಏನೇನು ಆಗಿದೆ. ಅದೇನೂ ಇಲ್ಲ. ಇವತ್ತಿನ ದಿವಸ ಅವರು ಬಹಳಷ್ಟು ವಿಚಾರಗಳನ್ನು ಹೇಳುತ್ತಾರೆ. ಇವರು ರಾಜ್ಯದ ಜನತೆಯ ಬಗ್ಗೆ ಏನು ವಿಚಾರ ಮಾಡುತ್ತಾರೆ? ಆಗ ಇವರ ಸರ್ಕಾರವೇ ಅಸ್ತಿತ್ವದಲ್ಲಿದ್ದು, ಇವರು ರಾಜ್ಯದ ಜನತೆಯ ಬಗ್ಗೆ ಏನು ವಿಚಾರ ಮಾಡಿರುವುದಿಲ್ಲ. ಇವರು ಸುವರ್ಣ ವಿಧಾನಸೌಧವನ್ನು ನಿರ್ಮಿಸಿದ್ದಾರೆ. ಅಲ್ಲಿ ಏನು ಇದೆ ಎಂದು ತಾವೇ ಹೇಳಿ. ಉತ್ತರ ಕರ್ನಾಟಕದ ಬಗ್ಗೆ ತಾವು ಏನೂ ಅಭಿವೃದ್ಧಿ ಮಾಡಿರುವುದಿಲ್ಲ. ದಯಮಾಡಿ, ಸುವರ್ಣ ವಿಧಾನಸೌಧವನ್ನು ಮಾರ್ಪಾಡು ಮಾಡುವುದಕ್ಕೆ ಬರುವುದಿಲ್ಲ. ಭರವಸೆ ಸಮಿತಿಯ ಜೊತೆ ಮಾನ್ಯ ಸದಸ್ಯರುಗಳು ಹೋದಾಗ ಒಂದು ಸಭೆಯನ್ನು ಮಾಡಲಾಯಿತು. ಇದಕ್ಕೆ ಪಿ.ಡಬ್ಲ್ಯೂಡಿ., ಮತ್ತು ಡಿ.ಪಿ.ಎ.ಆರ್., ಇಲಾಖೆಯ ಅಧಿಕಾರಿಗಳ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜೊತೆ ಚರ್ಚೆ ನಡೆಸಿದಾಗ 30 ರಿಂದ 32 ಕಾರಿಡಾರ್‌ಗಳು ಸುವರ್ಣ ವಿಧಾನಸೌಧದಲ್ಲಿ ಇದೆ. B.A.C. (Business Advisory Committee) ಸಭೆಯನ್ನು ಮಾಡುವುದಕ್ಕೆ 11 ಕೊಠಡಿಗಳಿವೆ. ಆ ಕೊಠಡಿಗಳನ್ನು ಸಣ್ಣದಾಗಿ ಮಾಡಿ, ಪ್ಲೈವುಡ್‌ನ್ನು ಹಾಕಿದರೆ, ಕಾನೂನು ಪ್ರಕಾರ ಸುವರ್ಣ ವಿಧಾನಸೌಧದಲ್ಲಿ 10 ಕಛೇರಿಗಳನ್ನು ನಡೆಸಬಹುದೆಂದು ವರದಿಯನ್ನು ಕೊಟ್ಟಿದ್ದೇವೆ. ಬೆಂಗಳೂರನ್ನು ಬಿಟ್ಟು ಯಾವ ಅಧಿಕಾರಿಗಳು ಸಹ ಅಲ್ಲಿಗೆ ಹೋಗುವುದಕ್ಕೆ ತಯಾರು ಇರಲಿಲ್ಲ. ಯಾವ ರೀತಿಯಲ್ಲಿ ಆಗುತ್ತದೋ ಆ ರೀತಿಯಲ್ಲಿ ಮಾಡಿ. ಇವತ್ತಿನ ದಿವಸ ನಾನು ಹೇಳುವುದೇನೆಂದರೆ, ಮುಂದಿನ 2ನೇ ತಾರೀಖಿಗೆ ಅಧಿವೇಶನ ನಡೆಯುವಷ್ಟರಲ್ಲಿ ಅಧಿಕಾರಿಗಳನ್ನು ಕಳುಹಿಸಿ, ಅಲ್ಲಿ ಕಛೇರಿಯನ್ನು ಪ್ರಾರಂಭ ಮಾಡುವುದಕ್ಕೆ ಹೇಳಿ. ಮೊದಲನೆಯದು, ಉತ್ತರ ಕರ್ನಾಟಕದಲ್ಲಿ ಏನು ಅಭಿವೃದ್ಧಿ ಮಾಡಲಾಗಿದೆ. ನಮ್ಮ ಸರ್ಕಾರದಲ್ಲಿ ಕಾಲೇಜು ಶಿಕ್ಷಕರನ್ನು ನೇಮಕಾತಿ ಮಾಡಲಾಗಿದೆ ಎಂದು ನಾವು ಒಪ್ಪುತ್ತೇವೆ. ಕಾಲೇಜು ಶಿಕ್ಷಕರನ್ನು ನೇಮಕಾತಿ ಮಾಡಿ ಸುಮಾರು 125 ಪ್ರಾಧ್ಯಾಪಕರನ್ನು ಇಲ್ಲಿಗೆ ನಿಯೋಜನೆ ಮಾಡಿದರು. ನಮ್ಮ ಸರ್ಕಾರ ಆಸ್ತಿತ್ವದಲ್ಲಿದ್ದಾಗ ಕಾಲೇಜು ಶಿಕ್ಷಕರನ್ನು ನೇಮಕಾತಿ ಮಾಡಿದ ಒಂದು ತಿಂಗಳಿನಲ್ಲಿಯೇ ಒಟ್ಟಾರೆಯಾಗಿ 205 ಪ್ರಾಧ್ಯಾಪಕರನ್ನು ನಿಯೋಜನೆ ಮಾಡಿದರು. ಆವತ್ತು ಕೂಡ ಇದು ತಪ್ಪು ಎಂದು ಹೇಳಿದ್ದೇವೆ. ಇದರ ಬಗ್ಗೆ ಅನೇಕ ಮಾನ್ಯ ಶಾಸಕರು ಒತ್ತಾಯ ಮಾಡುತ್ತಾರೆ ಎಂದು ಹೇಳಿದರು. ನಾನು ಹೇಳುವುದೇನೆಂದರೆ, ನಿಮ್ಮ ಸರ್ಕಾರ, ನಮ್ಮ ಸರ್ಕಾರ ಎಂದು ಅಲ್ಲ. ಯಾವುದೇ ಸರ್ಕಾರ ಆಸ್ತಿತ್ವಕ್ಕೆ ಬಂದರೂ ಕೂಡ ಉತ್ತರ ಕರ್ನಾಟಕದ ಕಡೆ ಲಕ್ಷ್ಯ ಕೊಡುವುದಿಲ್ಲ ಎನ್ನುವ ಮಾತು ಇದೆ. ಈ ರೀತಿಯ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲಿ ನೇಮಕಾತಿಯನ್ನು ಮಾಡಿ, ಇಲ್ಲಿಗೆ ನಿಯೋಜನೆ ಮಾಡಲಾಗುತ್ತಿದೆ. ಮೈಸೂರು–ಬೆಂಗಳೂರನ್ನು ಬಿಟ್ಟು ಬೇರೆ ಕಡೆಗೆ ನಿಯೋಜನೆ ಮೇಲೆ ಕಳುಹಿಸುತ್ತಿರಲಿಲ್ಲ.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(103) 20/02/2020/5:20/ಎಸ್‌ಪಿಆರ್/ಆರ್‌ಎನ್**
**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಮುಂದು)**

ಎಲ್ಲರನ್ನೂ ನಿಯೋಜನೆ ಮೇಲೆ ಕಳುಹಿಸುವಂತಹ ಅನಿವಾರ್ಯತೆ ಏನು ಇದೆ? ನಾನು ಈ ಹಿಂದೆ ಶಿಕ್ಷಣ ಮಂತ್ರಿಯಾಗಿ ಕಾನೂನು ಮಾಡಿದ್ದು ಇದೇ ಉದ್ದೇಶಕ್ಕಾಗಿಯೇ. ಕೇವಲ ಎರಡು ವರ್ಷಗಳ

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವಧಿಯವರೆಗೆ ಅಲ್ಲಿಗೆ ಹೋಗುತ್ತಾರೆ, ನಂತರ ಹಿಂದಿರುಗಿ ಬರುತ್ತಾರೆ. ಪುನಃ ಇವರುಗಳೇ ಅಲ್ಲಿಗೆ ನಿಯೋಜನೆ ಮೇರೆಗೆ ಹೋಗುತ್ತಾರೆ ಪುನಃ ಹಿಂದಿರುತ್ತಾರೆ. ಈ ರೀತಿಯಾಗಬಾರದೆಂದು ವರ್ಗಾವಣೆ ನೀತಿಯನ್ನು ನಾವು ಜಾರಿಗೆ ತಂದಿದ್ದೆವು. ಇವತ್ತಿನ ದಿವಸ ಇಷ್ಟೆಲ್ಲಾ ಪ್ರಾಧ್ಯಾಪಕರುಗಳನ್ನು ನಿಯೋಜನೆ ಮೇರೆಗೆ ಕಳುಹಿಸಲಾಗಿದೆ. ಈ ಹಿಂದಿನ ಸರ್ಕಾರದ ಅವಧಿಯಲ್ಲಿ ನಾವು ಇದೇ ವಿಷಯವಾಗಿ ಬಹಳಷ್ಟು ಗಲಾಟೆಗಳನ್ನು ಮಾಡಿದ್ದೇವೆ ಹಾಗೂ ಸಲಹೆಗಳನ್ನೂ ಸಹ ನೀಡಿದ್ದೇವೆ. ಆದರೆ ಅವುಗಳಿಗೆ ಯಾವುದೇ ರೀತಿಯಾದ ಪ್ರತಿಕ್ರಿಯೆ ದೊರೆಯಲಿಲ್ಲ. ಈ ಹಿನ್ನೆಲೆಯಲ್ಲಿ ನಾನು ಹೇಳುವುದೇನೆಂದರೆ, ಇವತ್ತಿನ ದಿವಸದ ಯಾವುದೇ ಪರಿಸ್ಥಿತಿಯಲ್ಲಿ ಸರ್ಕಾರ ಈ ವಿಷಯದಲ್ಲಿ ಹೆಚ್ಚು ಕಾಳಜಿಯನ್ನು ವಹಿಸಬೇಕು. ಸರ್ಕಾರವು ರಾಜ್ಯದ ವಿಚಾರವನ್ನು ಮಾಡದೇ, ಕೇವಲ ಬೆಂಗಳೂರು ಮತ್ತು ಮೈಸೂರು ನಗರಗಳಿಗಷ್ಟೇ ಸೀಮಿತವಾಗಿ ಕ್ರಮಗಳನ್ನು ತೆಗೆದುಕೊಂಡರೆ ಪರಿಸ್ಥಿತಿ ಏನಾಗುತ್ತದೆ? ಡಾ॥ ಸರೋಜಿನಿ ಮಹಿಷಿ ವರದಿಯನ್ನು ಈಗಾಗಲೇ ಸಲ್ಲಿಸಲಾಗಿದೆ. ಆದರೆ ಇದರ ಬಗ್ಗೆ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ. ನಾನು ಕೇವಲ ಪ್ರಸ್ತುತ ಅಧಿಕಾರದಲ್ಲಿರುವ ಸರ್ಕಾರವನ್ನು ಟಾರ್ಗೆಟ್ ಮಾಡುವುದಿಲ್ಲ. ಈ ವಿಷಯದಲ್ಲಿ ಈ ಹಿಂದೆ ಅಧಿಕಾರದಲ್ಲಿದ್ದ ಎಲ್ಲಾ ಸರ್ಕಾರಗಳು ಸೂಕ್ತ ಕ್ರಮ ತೆಗೆದುಕೊಳ್ಳುವಲ್ಲಿ ಎಡವಿವೆ. ಈಗಿನ ಸರ್ಕಾರವು ಮೊನ್ನೆಯ ದಿನ ಸದರಿ ವರದಿಯನ್ನು ಕಾರ್ಯರೂಪಕ್ಕೆ ತರುವುದಾಗಿ ಹೇಳಿದೆ. ಈಗಿನ ಸರ್ಕಾರವು ಅಧಿಕಾರಕ್ಕೆ ಬಂದು ಆರು ತಿಂಗಳುಗಳಾಯಿತು. ಸ್ವಲ್ಪ ದಿನಗಳವರೆಗೆ ಮುಖ್ಯಮಂತ್ರಿಯವರು ಒಬ್ಬರೇ ಇದ್ದರು, ಬೇರೆ ಯಾವ ಮಂತ್ರಿಗಳಿರಲಿಲ್ಲ. ಆ ಸಂದರ್ಭದಲ್ಲಿ ನಾನು ನಮ್ಮ ಪಕ್ಷದ ಶ್ರೀ ಭೋಜೇಗೌಡರವರನ್ನು ಬೈದು, ಸುಮ್ಮನೆ ಕುಳಿತುಕೊಳ್ಳಲು ತಿಳಿಸಿದೆ. ಕೇವಲ ಒಬ್ಬರೇ ಮುಖ್ಯಮಂತ್ರಿಗಳಿದ್ದ ಸಮಯದಲ್ಲಿ ಬೇರೆ ಯಾರನ್ನೂ ಸಹ ಮಂತ್ರಿಗಳನ್ನು ಮಾಡದಿರುವುದಕ್ಕೆ ಯಾರೂ ಸಹ ಅಡ್ಡಿಪಡಿಸಿರಲಿಲ್ಲ. ಬೇರೆ ಮಂತ್ರಿಗಳನ್ನು ಹೊರತುಪಡಿಸಿ, ಕೇವಲ ಒಬ್ಬರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡುವುದಕ್ಕೆ ನಾವೂ ಯಾರೂ ಸಹ ಹೇಳಿರಲಿಲ್ಲ. ನಿಮ್ಮ ಪಕ್ಷದೊಳಗಿನ ಕಚ್ಚಾಟಕ್ಕಾಗಿ, ನಿಮ್ಮ ಅನುಕೂಲಕ್ಕಾಗಿ ಕೇವಲ ಒಬ್ಬರನ್ನೇ ಮುಖ್ಯಮಂತ್ರಿಯನ್ನಾಗಿ ಇಟ್ಟುಕೊಂಡಿದ್ದೀರಿ. ಅವರು ತಮ್ಮ ಕಾಲಿಗೆ ಚಕ್ರವನ್ನು ಕಟ್ಟಿಕೊಂಡು ಎಲ್ಲಾ ಕಡೆ ಸುತ್ತಾಡಿದರು. ಇದನ್ನು ನಾವು ಒಪ್ಪಿಕೊಂಡೆವು. ಈ ರೀತಿಯಾಗಿ ಕಾಲಿಗೆ ಚಕ್ರವನ್ನು ಕಟ್ಟಿಕೊಂಡು ಓಡಾಡಲು ಯಾರು ಹೇಳಿದರು? ನೀವಾಗಿಯೇ ಈ ರೀತಿಯಾಗಿ ಮಾಡಿದರೆ, ಅದಕ್ಕೆ ಯಾರು ಏನು ಮಾಡುವುದಕ್ಕಾಗುತ್ತದೆ? ಅಂದಿನ ಸಂದರ್ಭದಲ್ಲಿ ನಾಲ್ಕೈದು ಮಂತ್ರಿಗಳನ್ನು ನೇಮಕ ಮಾಡಬಹುದಾಗಿತ್ತು. ಆದರೆ ಆ ರೀತಿಯಾಗಿ ಮಾಡಲಿಲ್ಲ. ಇಂತಹ ಅನೇಕ ವಿಚಾರಗಳಲ್ಲಿ ಹಾಲಿ ಸರ್ಕಾರವು ಎಡವಿದೆ. ಅತ್ಯಂತ ಪ್ರಮುಖವಾದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿಚಾರವೆಂದರೆ, ಇವತ್ತಿನ ದಿವಸ ಕರ್ನಾಟಕ ಮಹಾರಾಷ್ಟ್ರ ರಾಜ್ಯಗಳ ನಡುವೆ ವಿವಾದವುಂಟಾಗಿದೆ. ಮಹಾರಾಷ್ಟ್ರ ರಾಜ್ಯದಲ್ಲಿ ಹೊಸ ಸರ್ಕಾರವು ಅಸ್ತಿತ್ವಕ್ಕೆ ಬಂದಿರುವುದಕ್ಕಾಗಿ ಬೆಳಗಾವಿಯ ಗಡಿ ಭಾಗದಲ್ಲಿ ಯಾವ ರೀತಿಯ ಪರಿಸ್ಥಿತಿಯುಂಟಾಗಿದೆ? ಈ ವಿಷಯದ ಬಗ್ಗೆ ಸರ್ಕಾರವು ಚಕಾರವನ್ನೂ ಸಹ ಎತ್ತಿಲ್ಲ, ಮಹದಾಯಿ ವಿಚಾರದಲ್ಲಿಯೂ ಸಹ ಸರ್ಕಾರವು ಏನನ್ನೂ ಹೇಳಿಲ್ಲ. ಇವತ್ತಿನ ದಿವಸ ಸುದೈವದಿಂದ ಭಾರತದ ಸರ್ವೋಚ್ಚ ನ್ಯಾಯಾಲಯವು ಮಹದಾಯಿ ವಿಚಾರದಲ್ಲಿ ಬಹಳ ಒಳ್ಳೆಯ ತೀರ್ಪನ್ನು ನೀಡಿದೆ. ಇದರ ಬಗ್ಗೆ ಯಾವ ಸರ್ಕಾರವೂ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಆದರೂ ಸಹ ನಮಗೆ ಒಳ್ಳೆಯದಾಗಿದೆ. ಶ್ರೀ ನಂಜುಂಡಪ್ಪ ರವರು ಸಲ್ಲಿಸಿರುವ ವರದಿಯ ವಿಚಾರದಲ್ಲಿಯೂ ಸಹ ಹಾಲಿ ಸರ್ಕಾರವು ಯಾವುದೇ ವಿಷಯವನ್ನು ಪ್ರಸ್ತಾಪಿಸಿಲ್ಲ. ಶಿಕ್ಷಣದ ವಿಚಾರದಲ್ಲಿಯೂ ಸಹ ಹಾಲಿ ಸರ್ಕಾರವು ಯಾವುದೇ ಸಂಗತಿಗಳನ್ನು ಪ್ರಸ್ತಾಪಿಸಿಲ್ಲ. ಇವತ್ತಿನ ದಿವಸ ಬಹಳಷ್ಟು ವಿಧಾನ ಪರಿಷತ್ತಿನ ಸದಸ್ಯರು ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾಗಿ ಬರುತ್ತಾರೆ. ಆದಾಗ್ಯೂ ಸಹ ಸರ್ಕಾರವು ಶಿಕ್ಷಣ ವಿಷಯದಲ್ಲಿ ಏನನ್ನೂ ಸಹ ಹೇಳಿಲ್ಲ. ಇವತ್ತಿನ ದಿವಸ ಇಲಾಖೆಯಲ್ಲಿ ಶೇಕಡಾ 49 ರಷ್ಟು ಶಿಕ್ಷಕರು ಹುದ್ದೆಗಳು ಖಾಲಿಯಿವೆ. ಮಾನ್ಯ ಎಸ್.ಸುರೇಶ್ ಕುಮಾರ್, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಚಾರದ ಬಗ್ಗೆ ಹೇಳಿಕೆಯನ್ನು ನೀಡಿ, ಹಾಗೆಯೇ ಇಲಾಖೆಯು ಕಾರ್ಯನಿರ್ವಹಿಸುತ್ತಿದೆ ಎಂಬುದಾಗಿ ಹೇಳಿದ್ದಾರೆ. ಶಿಕ್ಷಕರ ನೇಮಕಾತಿ ಮಾಡಿದ್ದಾರೆ ಆದರೆ, ಅವರಿಗೆ ಇನ್ನೂ ಆದೇಶ ನೀಡಿಲ್ಲ. ಶಿಕ್ಷಣದ ಬಗ್ಗೆ ಹಾಲಿ ಸರ್ಕಾರವು ಯಾವುದೇ ಪ್ರಸ್ತಾಪವನ್ನು ಮಾಡಿಲ್ಲ. ಶಿಕ್ಷಣ ವಿಚಾರದಲ್ಲಿ ಸರಿಯಾದ ರೀತಿಯಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿಲ್ಲವೆಂದಾದರೆ, ತೊಂದರೆಯಾಗುತ್ತದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸರ್ಕಾರವು ತನ್ನ ಅವಧಿಯಲ್ಲಾದರೂ ಸಹ ಈ ವಿಚಾರದಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬಹುದಾಗಿತ್ತು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರವು ತಪ್ಪು ಮಾಡಿದ್ದಕ್ಕಾಗಿ, ಜನರು ನಮ್ಮನ್ನು ವಿರೋಧ ಪಕ್ಷದ ಸ್ಥಾನದಲ್ಲಿ ಕೂಡಿಸಿದ್ದಾರೆ ಹಾಗೂ ನಿಮ್ಮನ್ನು ಆಡಳಿತ ಪಕ್ಷದ ಸ್ಥಾನದಲ್ಲಿ ಕೂಡಿಸಿದ್ದಾರೆ. ಜನರು ನಿಮ್ಮನ್ನು ಏಕೆ ಆಯ್ಕೆ ಮಾಡಿದ್ದಾರೆ ಎನ್ನುವ ವಿಚಾರವನ್ನು ನಾನು ನಂತರದಲ್ಲಿ ತಿಳಿಸುತ್ತೇನೆ. ನಾನು ಹೇಳುವ ಮಾತುಗಳನ್ನು ಆಡಳಿತ ಪಕ್ಷದವರು ಪೂರ್ತಿಯಾಗಿ ಕೇಳಬೇಕು. ನಾನು ಎಲ್ಲಾ ರೀತಿಯ ಸಿದ್ಧತೆಯನ್ನು ಮಾಡಿಕೊಂಡು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಂದಿದ್ದೇನೆ. ನಿಮ್ಮ ಪಕ್ಷವು ಹೇಗೆ ಮತ್ತು ಏಕೆ ಅಧಿಕಾರಕ್ಕೆ ಬಂದಿದೆ ಎನ್ನುವ ವಿಚಾರವನ್ನೂ ಸಹ ನಾನು ಹೇಳುತ್ತೇನೆ. ನಮ್ಮ ನಾರಾಯಣಗೌಡರೂ ಸಹ ಈಗ ಒಬ್ಬರೇ ಸದನದಲ್ಲಿ ಕುಳಿತಿದ್ದಾರೆ. ಅವರಿಗೂ ಸಹ ನಾನು ವಿಚಾರಗಳನ್ನು ತಿಳಿಸುತ್ತೇನೆ. ತಮ್ಮ ಪಕ್ಷಕ್ಕೆ 17 ಜನ ಸೇರ್ಪಡೆಗೊಂಡಿರುವ ವಿಚಾರವನ್ನು ಆಡಳಿತ ಪಕ್ಷದವರು ತಿಳಿಸಿದರು. ಅದಕ್ಕೆ ನಾನು ಬಹಳವಾಗಿ ಅಭಿನಂದಿಸುತ್ತೇನೆ. ಅವರುಗಳ ಪುಣ್ಯದಿಂದ ಆಡಳಿತ ಪಕ್ಷವು ಸರ್ಕಾರವನ್ನು ನಡೆಸುತ್ತಿದೆ, ಹೌದಲ್ಲವೇ? ಇಲ್ಲದಿದ್ದರೆ, ಇವರು ಆಡಳಿತವನ್ನು ಹೇಗೆ ನಡೆಸುತ್ತಿದ್ದರು? ಕೆಲವೊಂದು ಶಾಸಕರಿಗೆ ರಾಜಿನಾಮೆ ಕೊಡಿಸಿ, ಅವರನ್ನು ಕುಲಗೆಡಿಸಿದ್ದಾರೆ. ಈಗ ಅವರೆಲ್ಲರಿಗೂ ತೀರ್ಥವನ್ನು ಹಾಕಿ ಅವರನ್ನು ಶುದ್ಧಪಡಿಸಲಾಗಿದೆ. ಇದು ಬೇರೆಯ ವಿಚಾರವಾಗಿದೆ.

ಮಾನ್ಯ ಪ್ರದೀಪ್ ಶೆಟ್ಟರ್‌ರವರು ಆ ಶಾಸಕರನ್ನೆಲ್ಲಾ ಅವರ ಪಕ್ಷಕ್ಕೆ ಕರೆದುಕೊಂಡು ಬರುವ ವಿಚಾರದಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದ್ದಾರೆ. ಈಗ ಆ ಪಕ್ಷವು ಅಧಿಕಾರಕ್ಕೆ ಬಂದಿದೆ. ಪಕ್ಷಾಂತರಗೊಂಡ ಶಾಸಕರನ್ನು ಪವಿತ್ರಗೊಳಿಸಲಾಯಿತು. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. 17 ಶಾಸಕರ ಪೈಕಿ 10 ಶಾಸಕರನ್ನು ಮಂತ್ರಿಗಳನ್ನಾಗಿ ಮಾಡಲಾಗಿದೆ. ಆದರೆ ಈ ವಿಚಾರದಲ್ಲಿ ನಿಮ್ಮ ಪಕ್ಷದೊಳಗೆ ಯಾರಿಗೂ ಸಹ ನೋವಿಲ್ಲವೇ? ನಾಲ್ಕೈದು ಬಾರಿಗೆ ಶಾಸಕರಾದವರು ಶಂಖ ಹೊಡೆಯುತ್ತಿದ್ದಾರೆ. ಅವರ ಗತಿ ಏನೆಂಬುದಾಗಿ ಹೇಳುತ್ತಾರೆ. ಪಕ್ಷಾಂತರಗೊಂಡ ಶಾಸಕರ ಪುಣ್ಯದಿಂದಾಗಿ ನಿಮ್ಮ ಸರ್ಕಾರವು ಆಡಳಿತಕ್ಕೆ ಬಂದಿದೆ. ಅಂದರೆ ಇದರರ್ಥ ನಿಷ್ಠೆಯಿಂದ ಇದ್ದವರೇ ಪಾಪಿಗಳೇ? ಈ ವಿಚಾರದ ಬಗ್ಗೆ ಆಡಳಿತ ಪಕ್ಷದವರು ಹೇಳಬೇಕು. ಕೆಲವು ಶಾಸಕರುಗಳನ್ನು ಪಕ್ಷಾಂತರಗೊಳಿಸಿದರು. ಅನರ್ಹರಾದವರನ್ನು ಪುನಃ ಅರ್ಹರನ್ನಾಗಿ ಮಾಡಿಸಿದ್ದೀರಿ. ಜನತೆಯೂ ಸಹ ಈ ವಿಚಾರದಲ್ಲಿ ತಮ್ಮ ತೀರ್ಮಾನವನ್ನು ನೀಡಿದ್ದಾರೆ. ಇದಕ್ಕಾಗಿ ನಾನು ಈ ವಿಚಾರದಲ್ಲಿ ಏನನ್ನೂ ಮಾತನಾಡುವುದಕ್ಕೆ ಹೋಗುವುದಿಲ್ಲ; ಶಾಸಕರುಗಳ ಸರಿ–ತಪ್ಪುಗಳನ್ನು ಹಾಗೂ ಅವರು ಏಕೆ ಪಕ್ಷಾಂತರಗೊಂಡರು, ನಂತರದಲ್ಲಿ ಏನಾದರು ಎಂಬ ವಿಷಯಗಳ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ರಾಜಕಾರಣದಲ್ಲಿ ನಾನು ಅನೇಕ ಜನರನ್ನು ನೋಡಿದ್ದೇನೆ. ನಾನು ಈ ಸದನಕ್ಕೆ ಬಂದು ಇಂದಿಗೆ 40 ವರ್ಷಗಳಾಯಿತು. ಈ ಅವಧಿಯಲ್ಲಿ ನಾನು 16 ಮುಖ್ಯಮಂತ್ರಿಗಳನ್ನು ಹಾಗೂ ಅನೇಕ ಮಂತ್ರಿಗಳನ್ನು ನೋಡಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತಿನ ದಿವಸದ ವ್ಯವಸ್ಥೆಯ ಬಗ್ಗೆ ನಾನು ಹೇಳುತ್ತೇನೆ. ಆಡಳಿತ ಪಕ್ಷದವರು ರಾಜ್ಯದಲ್ಲಿ 'ಆಪರೇಷನ್ ಕಮಲ' ಎಂಬುದಾಗಿ ಪ್ರಾರಂಭಿಸಿದರು. ಇದನ್ನು ನಮ್ಮ ಉತ್ತರ ಕರ್ನಾಟಕ ಭಾಷೆಯಲ್ಲಿ 'ಕುಲಗೆಡಿಸುವುದು' ಎಂಬುದಾಗಿ ಹೇಳುತ್ತಾರೆ. ಈ ರೀತಿಯಾಗಿ ಎರಡು ಬಾರಿ ಮಾಡಿದ್ದಾರೆ. ಆದರೆ ಇನ್ನು ಮುಂದೆ ಹೇಗೆ? ಆಡಳಿತ ಪಕ್ಷದವರು ಅವರ ಸ್ವಂತ ಕಾಲ ಮೇಲೆ ಆರಿಸಿ ಬಂದು ಸರ್ಕಾರ ರಚನೆ ಮಾಡಿದ್ದರೆ ನಾವು ಒಪ್ಪುತ್ತಿದ್ದೆವು. ನಿಮ್ಮ ಪಕ್ಷದ 104 ಶಾಸಕರು ಆಯ್ಕೆಗೊಂಡರು. ಆದರೂ ಸಹ ಅವರ ಪಕ್ಷವು ಸರ್ಕಾರವನ್ನು ರಚಿಸಲಿಲ್ಲ. ಇದಕ್ಕೆ ಹಲವಾರು ಕಾರಣಗಳಿವೆ. ಇದರ ಹಿನ್ನೆಲೆಯು ಎಲ್ಲರಿಗೂ ಸಹ ತಿಳಿದಿದೆ. ಇದಾದ ನಂತರವೂ ಸಹ ಸರ್ಕಾರ ರಚನೆಗೊಂಡಿತು. ಅದರಲ್ಲಿ ನಮ್ಮ ಹಾಗೂ ಆಡಳಿತ ಪಕ್ಷದವರ ತಪ್ಪುಗಳಿವೆ. ಸಮ್ಮಿಶ್ರ ಸರ್ಕಾರದ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಅನೇಕ ರೀತಿಯ ತಪ್ಪುಗಳಾಗಿವೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆಡಳಿತ ಪಕ್ಷವನ್ನು ನಾನು ಪ್ರತಿ ಹಂತದಲ್ಲಿಯೂ ನೋಡಿದ್ದೇನೆ. ನಮ್ಮ ದೇಶದಲ್ಲಿನ ರಾಜಕೀಯ ರಂಗದಲ್ಲಿ ಕಾಂಗ್ರೆಸ್ ಪಕ್ಷಕ್ಕೆ 135 ವರ್ಷಗಳ ಸುದೀರ್ಘವಾದ ಇತಿಹಾಸವಿದೆ. ಪ್ರಪಂಚದಲ್ಲಿಯೇ ಅತೀ ಹೆಚ್ಚು ರಾಜಕೀಯ ಪಕ್ಷಗಳನ್ನು ನಮ್ಮ ದೇಶವು ಹೊಂದಿದೆ. ಚುನಾವಾಣಾ ಆಯೋಗದ ಅಧಿಕೃತ ಅಂಕಿ ಅಂಶಗಳ ಪ್ರಕಾರ ನಮ್ಮ ದೇಶದಲ್ಲಿ ಒಟ್ಟು 2,599 ಪಕ್ಷಗಳಿವೆ. ಆ ಪೈಕಿ 2,038 ಪಕ್ಷಗಳಿಗೆ ಚುನಾವಣಾ ಆಯೋಗದ ಅಧಿಕೃತ ಮನ್ನಣೆ ದೊರೆತಿದೆ.

ಕೆಲವೊಂದು ಪಕ್ಷಗಳು ಯಾವಾಗ ಪ್ರಾರಂಭವಾಗುತ್ತವೆ, ಯಾವಾಗ ಕೊನೆಗೊಳ್ಳುತ್ತವೆಯೋ ತಿಳಿಯುವುದಿಲ್ಲ. ಹಾಲಿ ನಮ್ಮ ದೇಶದಲ್ಲಿ ಪ್ರಮುಖವಾಗಿ 2–3 ಪಕ್ಷಗಳಿವೆ. ಈ ಪೈಕಿ ಕಾಂಗ್ರೆಸ್ ಪಕ್ಷಕ್ಕೆ 135 ವರ್ಷಗಳ ಇತಿಹಾಸವಿದೆ. ಸ್ವಾತಂತ್ರ್ಯ ನಂತರ 1952 ನೇ ಇಸವಿಯಿಂದ 2019 ನೇ ಇಸವಿಯವರೆಗೆ ನಮ್ಮ ದೇಶದಲ್ಲಿ ಒಟ್ಟು 17 ಸಾರ್ವತ್ರಿಕ ಚುನಾವಣೆಗಳು ನಡೆದಿವೆ. ಆ ಪೈಕಿ 7 ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಪ್ರಚಂಡ ಬಹುಮತಗಳನ್ನು ಪಡೆದು ಜಯವನ್ನು ಪಡೆದಿದೆ. ಮೂರು ಬಾರಿ ಮೈತ್ರಿಕೂಟಗಳು ಸೇರಿಕೊಂಡು ಸರ್ಕಾರವನ್ನು ರಚಿಸಿವೆ. ಒಟ್ಟಾರೆ 73 ವರ್ಷಗಳ ಪೈಕಿ 54 ವರ್ಷಗಳ ಕಾಲ ಕಾಂಗ್ರೆಸ್ ಪಕ್ಷವು ಆಡಳಿತ ನಡೆಸಿ, ದೇಶವನ್ನು ಆಳಿದೆ. 1970 ನೇ ಇಸವಿಯಲ್ಲಿ ತುರ್ತು ಪರಿಸ್ಥಿತಿಯನ್ನು ಹೇರಿದರು. ಆಗ ಮೊಟ್ಟ ಮೊದಲ ಬಾರಿಗೆ ಏನಾಯಿತು ಎನ್ನುವುದು ಇತಿಹಾಸವಾಗಿದ್ದು, ಇದರ ಬಗ್ಗೆ ಎಲ್ಲರಿಗೂ ತಿಳಿದಿದೆ. ಹೀಗಾಗಿ ನಾನು ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ನಂತರ 1977 ನೇ ಇಸವಿಯಲ್ಲಿ ದೇಶದ ರಾಜಕಾರಣ ಬದಲಾಯಿತು. ಜೆ.ಪಿ.ಮೂವ್‌ಮೆಂಟ್ ಎನ್ನುವುದು ನಡೆಯಿತು. ಜನಸಂಘ ಪಕ್ಷವು ಮೊರಾರ್ಜಿ ದೇಸಾಯಿರವರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೇತೃತ್ವದಲ್ಲಿ ಸರ್ಕಾರವನ್ನು ಪ್ರಾರಂಭಿಸಿತು. ಆಡಳಿತ ಪಕ್ಷವು ಯಾವಾಗ ಪ್ರಾರಂಭವಾಯಿತು; ಈ ಮೊದಲು ಜನಸಂಘ ಪಕ್ಷವು ಉದಯಿಸಿತು. ಜವಾಹರ್‌ಲಾಲ್ ನೆಹರುರವರ ಮೊದಲ ಸಚಿವ ಸಂಪುಟದಲ್ಲಿ ಸಚಿವರಾಗಿದ್ದ ಶ್ಯಾಮ್ ಪ್ರಸಾದ್ ಮುಖರ್ಜಿರವರು ಕಾಂಗ್ರೆಸ್ ಪಕ್ಷವನ್ನು ತ್ಯಜಿಸಿ 1950 ನೇ ಇಸವಿಯಲ್ಲಿ ಭಾರತೀಯ ಜನ ಸಂಘ ಎನ್ನುವ ಹೊಸ ಪಕ್ಷವನ್ನು ಕಟ್ಟಿದರು. ಆರ್.ಎಸ್.ಎಸ್.ನ ಗರಡಿಯಲ್ಲಿ ಪಳಗಿದ ಮಾನ್ಯ ಅಟಲ್ ಬಿಹಾರಿ ವಾಜಪೇಯಿ, ಲಾಲ್‌ಕೃಷ್ಣ ಅಡ್ವಾಣಿ, ಮುರಳಿ ಮನೋಹರ ಜೋಷಿ ಮುಂತಾದವರು ಆ ಪಕ್ಷಕ್ಕೆ ಬಂದರು ಹಾಗೂ ಜನ ಸಂಘವನ್ನು ಕಟ್ಟಿದರು. ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು, ಮಾನ್ಯ ಲಾಲ್‌ಕೃಷ್ಣ ಅಡ್ವಾಣಿ ಅವರುಗಳ ಬಗ್ಗೆ ಯಾರೂ ಸಹ ಮಾತನಾಡುವುದಿಲ್ಲ. ಅವರುಗಳು ದೇಶಕ್ಕೆ ನೀಡಿದ ಕೊಡುಗೆಯನ್ನು ನಾವುಗಳು ಒಪ್ಪಿಕೊಳ್ಳುತ್ತೇವೆ. 1980 ನೇ ಇಸವಿಯಲ್ಲಿ ಜನ ಸಂಘ ಪಕ್ಷದ ನಾಯಕರು ಭಾರತೀಯ ಜನತಾ ಪಕ್ಷವನ್ನು ಕಟ್ಟಿದರು. ತುರ್ತು ಪರಿಸ್ಥಿತಿಯ ನಂತರ ದೇಶದ ಇತಿಹಾಸ ಹಾಗೂ ವಿಚಾರ ಬದಲಾಯಿತು. ನಂತರದಲ್ಲಿ ಭಾರತೀಯ ಜನತಾ ಪಕ್ಷವು ಅಧಿಕಾರಕ್ಕೆ ಬಂದಿತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಪಕ್ಷದ ಮೂಲ ಸ್ವರೂಪ ....

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪ್ರಸ್ತುತ ಸದನದಲ್ಲಿ ಸಚಿವರು ಎಲ್ಲಿದ್ದಾರೆ ಎಂದು ಮಾನ್ಯ ಸಭಾನಾಯಕರು ತಿಳಿಸಬೇಕು. ಸದನ ನಡೆಯಬೇಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಕೆಲವು ಸದಸ್ಯರು ಸದನದ ಹೊರಗಡೆ ಚಹಾ ಕುಡಿಯುತ್ತಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ರೇವಣ್ಣನವರೇ, ನಾನು ಹೇಳುವುದನ್ನು ಮೊದಲು ಕೇಳಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಪ್ರಸ್ತುತ ಅಧಿಕಾರಿಗಳೂ ಸಹ ಸದನದಲ್ಲಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ನಾವು ಯಾರನ್ನು ಉದ್ದೇಶಿಸಿ ಮಾತನಾಡಬೇಕು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಿಯಮದ ಪ್ರಕಾರ ನಮ್ಮ ಪಕ್ಷದ ಮೂವರು ಮಂತ್ರಿಗಳು ಸದನದಲ್ಲಿರಬೇಕು. ಮಾನ್ಯ ಮಂತ್ರಿಗಳಾದ ಅಶೋಕರವರು ಹೊರಗಡೆ ಟೀ ಕುಡಿಯುವುದಕ್ಕೆ ಹೋಗಿದ್ದು, ಪುನಃ ಸದನಕ್ಕೆ ಬರುತ್ತಾರೆ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಟೀ ಕುಡಿಯುವುದಕ್ಕೆ ಹೋಗಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ರವಿಯವರೇ, ನಾವೇನು ಇಲ್ಲವೆಂದು ಹೇಳಿಲ್ಲ. ಮಾನ್ಯ ಮಂತ್ರಿಗಳು ಸದನದಲ್ಲಿದ್ದಾರೆಯೇ ಎಂದು ನಾವು ಕೇಳಿದ್ದೇವೆ. ಮಾನ್ಯ ಮಂತ್ರಿಗಳು ಬಾತ್‌ರೂಮಿನಲ್ಲಿದ್ದರೆ ನಾವೇನು ಮಾಡುವುದಕ್ಕಾಗುತ್ತದೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ರೇವಣ್ಣನವರೇ, ನಾನು ಹೇಳುವುದನ್ನು ಕೇಳಿ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಬಾತ್‌ರೂಮಿನಲ್ಲಿದ್ದರೆ ನಾವು ಕೇಳುವುದಕ್ಕಾಗುತ್ತದೆ? ಬಾತ್‌ರೂಮಿಗೆ ಹೋಗಬೇಕು. ವಾಷ್‌ರೂಮಿಗೆ ಹೋಗದೇ ಇರುವುದಕ್ಕಾಗುವುದಿಲ್ಲ. ಮಾನ್ಯ ಮಂತ್ರಿಗಳು ಸದನದಲ್ಲಿ ಇಲ್ಲವೆಂದು ನಾನು ಹೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಇನ್ನೆರೆಡು ನಿಮಿಷದಲ್ಲಿ ಸದನಕ್ಕೆ ಬರುತ್ತಾರೆ. ಅಲ್ಲಿಯವರೆಗೆ ಮಾನ್ಯ ಸದಸ್ಯರು ಸುಧಾರಿಸಿಕೊಳ್ಳಬೇಕು.

**(ಗೊಂದಲ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಅಧಿಕಾರಿಗಳೂ ಸಹ ಸದನದಲ್ಲಿಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಸದನವು ಏಕೆ ನಡೆಯುತ್ತದೆ. ಸದನ ನಡೆಸಲು ಎಷ್ಟು ಕೋಟಿ ರೂಪಾಯಿಗಳು ಖರ್ಚಾಗುತ್ತಿದೆ? ಮಂತ್ರಿಗಳು ಮೋಜು ಮಸ್ತಿ ಮಾಡುವುದಕ್ಕೆ ಸದನ ನಡೆಯುತ್ತದೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಾನು ಹೇಳುವುದನ್ನು ಕೇಳಬೇಕು.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಮೋಜು–ಮಸ್ತಿ ಮಾಡಬೇಕೋ ಅಥವಾ ಸದನದ ಕಲಾಪಗಳಲ್ಲಿ ಭಾಗಿಯಾಗಬೇಕೋ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಾನು ಹೇಳುವುದನ್ನು ಕೇಳಬೇಕು. ಇವತ್ತಿನ ಪೂರ್ವಾಹ್ನದ ಕಲಾಪದಲ್ಲಿ ನಮ್ಮ ಪಕ್ಷದ ಐವರು ಮಂತ್ರಿಗಳು ಸದನದಲ್ಲಿ ಹಾಜರಿರಬೇಕಾಗಿತ್ತು. ಅದೇ ರೀತಿಯಾಗಿ ಐವರು ಮಂತ್ರಿಗಳು ಹಾಜರಿದ್ದರು. ಅದೇ ರೀತಿಯಾಗಿ ಆರು ಜನ ಮಂತ್ರಿಗಳು ಉಪಸ್ಥಿತರಿರಬೇಕಾದ ಸಂದರ್ಭದಲ್ಲಿ ಆರು ಜನ ಮಂತ್ರಿಗಳು ಸದನದಲ್ಲಿ ಹಾಜರಿದ್ದರು. ನಿಯಮದ ಪ್ರಕಾರ ಈಗ ಕನಿಷ್ಠ ಮೂವರು ಮಂತ್ರಿಗಳು ಹಾಜರಿರಬೇಕು.

(ಮುಂದು)

(104)/20–2–2020/5–30/ಎಲ್ಎಂ/ಆರ್ಎನ್
**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು)**

ಮಾನ್ಯ ಸಭಾಪತಿಗಳೆ, ಬೆಳಗ್ಗೆ 5 ಜನ ಮಂತ್ರಿಗಳು ಸದನದಲ್ಲಿ ಇದ್ದರೂ. ನಿಯಮಗಳ ಪ್ರಕಾರ ಕನಿಷ್ಠ ಮೂರು ಜನ ಮಂತ್ರಿಗಳು ಸದನದಲ್ಲಿ ಇರಬೇಕು. ಈಗ ಇಬ್ಬರು ಮಂತ್ರಿಗಳು ಇದ್ದೇವೆ. ಮಾನ್ಯ ಸಚಿವರಾದ ಆರ್.ಅಶೋಕರವರು ಈಗ ಕಾಫಿ ಕುಡಿಯಲು ಹೋಗಿದ್ದಾರೆ. ಅವರು ಈಗಲೇ ಬರುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ಇಂದು ಸದನದಲ್ಲಿ ಇರಬೇಕಾದ ಮಂತ್ರಿಗಳ ಪಟ್ಟಿಯನ್ನು ನಾನು ಹೇಳುತ್ತೇನೆ. ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು, ಶ್ರೀ ಆರ್.ಅಶೋಕರವರು ಅವರು ಈಗ ಸದನದ ಒಳಗೆ ಬರುತ್ತಿದ್ದಾರೆ. ಶ್ರೀ

“ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ವಿಸೋಮಣ್ಣನವರು ಸದನಕ್ಕೆ ಬಂದಿರುವುದಿಲ್ಲ. ಶ್ರೀ ಸಿ.ಟಿ.ರವಿ ಸದನಕ್ಕೆ ಬಂದು ಮತ್ತೆ ಹೋದರು. ಶ್ರೀ ಕೆ.ಸುಧಾಕರ್‌ರವರು ಈ ಮನೆಗೆ ಬಂದೇ ಇಲ್ಲ ಅನ್ನಿಸುತ್ತದೆ.

**ಡಾ: ವೈ.ಎ.ನಾರಾಯಣಸ್ವಾಮಿ:–** ಸಚಿವರಾದ ಶ್ರೀ ಕೆ.ಸುಧಾಕರ್‌ರವರು ಬೆಳಗ್ಗೆ ಈ ಸದನಕ್ಕೆ ಬಂದು ಹೋಗಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ನಾರಯಣಸ್ವಾಮಿಯವರನ್ನು ಭೇಟಿ ಮಾಡಿಹೋಗಿದ್ದಾರೆ ಎಂದಮೇಲೆ ಮಂತ್ರಿಗಳು ಬಂದು ಹೋಗಿರಬಹುದು. ಶ್ರೀ ಎಚ್.ನಾಗೇಶ್ ಅಬಕಾರಿ ಸಚಿವರು ಇವರು ಇವತ್ತು ಈ ಸದನಕ್ಕೆ ಬಂದೇ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಅಬಕಾರಿ ಸಚಿವರಾದ ಎಚ್.ನಾಗೇಶ್‌ರವರು ಬೆಳಗ್ಗೆ ಈ ಸದನಕ್ಕೆ ಬಂದು ಹೋಗಿದ್ದಾರೆ.

**ಶ್ರೀ ಎಚ್.ಎಂ.ರೇವಣ್ಣ:–**ಮಾನ್ಯ ಸಭಾಪತಿಗಳೆ, ಡಾ: ವೈ.ಎ.ನಾರಾಯಣಸ್ವಾಮಿಯವರು ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿ ಬಂದವರು. ಅವರಿಗೆ ಇರುವುದಕ್ಕೂ, ಇದ್ದರೂ ಎನ್ನುವ ಪದಕ್ಕೆ ವ್ಯತ್ಯಾಸವಿದೆ ಎನ್ನುವುದು ಗೊತ್ತಿಲ್ಲವೆ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ಇಂದು ಈ ಮನೆಯಲ್ಲಿ ಇರಬೇಕಾದ ಮಂತ್ರಿಗಳನ್ನು ಕೇವಲ ಈ ಮನೆಗೆ ಬಂದು ಹೋಗಬೇಕು ಎಂದು ಹೇಳಿದ್ದೀರಾ ಅಥವಾ ಸದನ ಮುಗಿಯುವವರೆಗೆ ಇರಬೇಕು ಎಂದು ಹೇಳಿದ್ದೀರಾ? ನಿಯಮದ ಪ್ರಕಾರ ಬಂದು ಮುಖ ತೋರಿಸಿ ಹೋಗಿಬಿಡಬಹುದು ಎಂದು ಇದೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಆ ರೀತಿ ಏನು ಇಲ್ಲ. ನಿಯಮಗಳ ಪ್ರಕಾರ ಇಂದು ಈ ಮನೆಯಲ್ಲಿ ಯಾರು ಮಂತ್ರಿಗಳು ಇರಬೇಕು ಎಂದು ಸೂಚಿಸಲಾಗಿರುತ್ತದೆ. ಆ ಮಂತ್ರಿಗಳು ಇವತ್ತು ಈ ಮನೆಯಲ್ಲಿ ಇರಬೇಕು. ಇಲ್ಲದಿದ್ದರೆ ಕನಿಷ್ಟ ಮೂರು ಜನ ಮಂತ್ರಿಗಳಾದರೂ ಇರಬೇಕು. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಇದೇ ವಿಚಾರ ಬಂದಾಗ. ಆ ಮಾನ್ಯ ಎಸ್.ಆರ್.ಪಾಟೀಲ್‌ರವರು ಅವತ್ತು ಇದೇ ಉತ್ತರವನ್ನು ಕೊಟ್ಟಿದರು.

**ಶ್ರೀ ಟಿ.ಎ.ಶರವಣ:–** ಹೊಸ ಸಚಿವರಿಗೆ ಇದು ಮೊದಲನೆಯ ಅಧಿವೇಶನ ಸದನದ ಬಗ್ಗೆ ಎಷ್ಟು ಕಾಳಜಿ ಇದೆ ಎನ್ನುವುದು ಇದರಿಂದಲೇ ಗೊತ್ತಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:–** ಈ ರೀತಿ ಮಾಡಿದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಈಗ ಮೂರು ಜನ ಮಂತ್ರಿಗಳು ಸದನದಲ್ಲಿ ಇದ್ದೇವೆ. ಮಾನ್ಯ ಸದಸ್ಯರು ಅವರ ಮಾತುಗಳನ್ನು ಮುಂದುವರೆಸಲಿ, ಅಷ್ಟರಲ್ಲಿ ಉಳಿದ ಮಂತ್ರಿಗಳು ಬರುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಪೂಜಾರಿಯವರು ದೇವರ ಮುಂದೆ ಗಂಟೆ ಬಾರಿಸಿದ ಹಾಗೆ ಇಲ್ಲಿಯು ಗಂಟೆ ಬಾರಿಸಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಹೊರಟ್ಟಿಯವರು ಮಾತನಾಡುವಾಗ ನಾನು ಮಧ್ಯದಲ್ಲಿ ಎದ್ದು ನಿಂತು ಮಾತನಾಡಿದಕ್ಕೆ ಇಷ್ಟೆಲ್ಲಾ ಪ್ರಸ್ತಾಪವಾಯಿತು. ಮಾನ್ಯ ಸದಸ್ಯರು ತಮ್ಮ ಮಾತನ್ನು ಮುಂದುವರೆಸಬೇಕು.

**ಶ್ರೀ ಎಚ್.ಎಂ.ರೇವಣ್ಣ:–** ಮಾನ್ಯ ಆಯನೂರು ಮಂಜಣ್ಣ ಬಾರಿಸುವ ಗಂಟೆಯೇ ಸಾಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ನಮ್ಮ ಉತ್ತರ ಕರ್ನಾಟಕದ ಕಡೆಯಲ್ಲಿ ಒಂದು ಗಾದೆ ಮಾತು ಇದೆ. 'ನೆಚ್ಚಿದ ಎಮ್ಮೆ ಕ್ವಾಣ ಇಯಿತ್ತತೆ' ಹಾಗೆಯೇ ಇವರನ್ನು ನೀವು ನಿಮ್ಮ ಪಕ್ಷಕ್ಕೆ ತೆಗೆದುಕೊಂಡಿದ್ದೀರಿ, ಇವರಿಗೆ ಕೆಲಸದ ಬಗ್ಗೆ ಯಾವುದೇ ಆಸಕ್ತಿ ಇಲ್ಲ, ಇವರಿಂದ ಏನು ಉಪಯೋಗವಿಲ್ಲ. ಎಲ್ಲಿಯಾದರೂ ಹೋಗುತ್ತಾರೆ, ಎಲ್ಲೋ ಕುಳಿತುಕೊಳ್ಳುತ್ತಾರೆ. ಇವರೇ ಮುಂದೇ ಬಂದು ಎಲ್ಲವನ್ನು ಕಲಿತುಕೊಳ್ಳಬೇಕು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ಇಂದು ಕಡ್ಡಾಯವಾಗಿ ಈ ಸದನದಲ್ಲಿ ಹಾಜರಿರಬೇಕಾದ ಮಂತ್ರಿಗಳ ಪಟ್ಟಿ ಹೀಗಿದೆ; ಶ್ರೀ ಲಕ್ಷ್ಮಣ ಸಂಗಪ್ಪ ಸವದಿ, ಡಾ: ಸಿ.ಎನ್.ಅಶ್ವತ್ಥ ನಾರಾಯಣ, ಶ್ರೀ ಜಗದೀಶ್ ಶೆಟ್ಟರ್, ಶ್ರೀ ಎಸ್. ಸುರೇಶ್‌ಕುಮಾರ್, ಶ್ರೀ ಬಿ.ಶ್ರೀರಾಮಲು, ಶ್ರೀ ಸಿ.ಸಿ.ಪಾಟೀಲ್, ಡಾ: ಕೆ.ಸುಧಾರಕರ್, ಶ್ರೀ ಆನಂದ ಸಿಂಗ್, ಶ್ರೀ ಅರಬೈಲು ಶಿವರಾಮ್ ಹೆಬ್ಬಾರ್, ಶ್ರೀ ಕೆ.ಗೋಪಾಲಯ್ಯ, ಶ್ರೀ ಬಿ.ಎ.ಬಸವರಾಜ, ಡಾ: ಕೆ.ಸಿ.ನಾರಾಯಣಗೌಡ, ಶ್ರೀ ಎಸ್.ಟಿ.ಸೋವಶೇಖರ್. ಇದರಲ್ಲಿ 17 ಜನರ ಲಿಸ್ಟ್‌ನಲ್ಲಿ ಇದ್ದವರೆ ಹೆಚ್ಚಾಗಿದ್ದಾರೆ. ಇಷ್ಟು ಜನ ಮಂತ್ರಿಗಳು ಇವತ್ತು ಸದನಕ್ಕೆ ಬರಬೇಕು. ಆದರೆ ಈಗ ಇರುವವರು ಕೇವಲ ಮೂರು ಜನ ಮಂತ್ರಿಗಳು ಮಾತ್ರ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಬೆಳಗ್ಗೆ ಇದ್ದರು ಈಗ ಬರುತ್ತಾರೆ. ನಿಯಮದ ಪ್ರಕಾರ ಸದನ ನಡೆಸಬೇಕಾದರೆ ಮೂರು ಜನ ಮಂತ್ರಿಗಳು ಇರಬೇಕು. ಈಗ ಮೂರು ಜನ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂತ್ರಿಗಳು ಇದ್ದೇವೆ. ಮಾನ್ಯ ಸದಸ್ಯರು ಮಾತುಗಳನ್ನು ಮುಂದುವರೆಸಲಿ, ಉಳಿದ ಮಂತ್ರಿಗಳು ಬರುತ್ತಾರೆ.

**ಶ್ರೀ ಎಚ್.ಎಂ.ರೇವಣ್ಣ:–** ಕನಿಷ್ಠ ಸರ್ಕಾರ ಇದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಕನಿಷ್ಠ ಸರ್ಕಾರವಲ್ಲ. ಕನಿಷ್ಠ ಮೂರು ಜನ ಮಂತ್ರಿಗಳು ಇರಬೇಕು ಎಂದು ಹೇಳಿದ್ದೇನೆ. ಹಿಂದೆ ಎಸ್.ಆರ್.ಪಾಟೀಲ್‌ರವರು ಸಭಾನಾಯಕರಾಗಿದ್ದಾಗ ಮಂತ್ರಿಗಳು ಈಗ ಬರುತ್ತಾರೆ ಎಂದು ಹೇಳುತ್ತಿದರು. ಈಗ ನಾನು ಅದನ್ನೇ ಹೇಳಬೇಕಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ಅಧಿಕಾರಿಗಳ ಗ್ಯಾಲರಿಯು ಖಾಲಿ ಇದೆ. ಈ ರೀತಿ ಸದನ ನಡೆಸುವುದರಲ್ಲಿ ಯಾವದೇ ಅರ್ಥವಿಲ್ಲ. ಶತಮಾನದ ಇತಿಹಾಸವನ್ನು ಹೊಂದಿರುವ ತನ್ನದೆ ಆದ ಘನತೆ–ಗೌರವವನ್ನು ಹೊಂದಿರುವ ಚಿಂತಕರ ಚಾವಡಿ ಈ ಮನೆ. ಇಂದು ಸದನದಲ್ಲಿ ಇರಬೇಕಾದ ಅಧಿಕಾರಿಗಳು, ಡಾ: ಎ.ಇ.ರಮಣ ರೆಡ್ಡಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಶ್ರೀ ರಾಕೇಶ್ ಸಿಂಗ್, ಅಪರ ಮುಖ್ಯ ಕಾರ್ಯದರ್ಶಿ, ಶ್ರೀ ಮಹಮದ್ ಮೊಸಿನ್ ಇವರು ಸದನದಲ್ಲಿ ಈಗ ಇದ್ದಾರೆ, ಶ್ರೀ ರಾಜೇಂದ್ರ ಕುಮಾರ್ ಕಟಾರಿಯಾ ಇವರು ಸದನದಲ್ಲಿ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಇಂದು ಸದನದ ಕೊನೆ ದಿನ ಅದಕ್ಕೆ ಸ್ವಲ್ಪ ಬೇಗ ಹೋಗಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಯಾರ ಕೊನೆ ದಿನ. ಸರ್ಕಾರದ ಕೊನೆ ದಿನವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸದನದ ಕೊನೆ ದಿನ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ನಾನು ಪ್ರತಿಪಕ್ಷದ ನಾಯಕನಾಗಿ ಹೇಳುತ್ತೇನೆ. ಮಾನ್ಯ ಸಭಾಪತಿಗಳೆ ತಾವು ಮಂತ್ರಿಗಳಿಗೆ ಕಡ್ಡಾಯವಾಗಿ ಸದನದಲ್ಲಿ ಇರುವಂತೆ ನಿರ್ದೇಶನ ಕೊಡಿ. ಅದೇ ರೀತಿ ಅಧಿಕಾರಿಗಳು ಸಹ ಕಡ್ಡಾಯವಾಗಿ ಸದನದಲ್ಲಿ ಇರಬೇಕೆಂದು ತಿಳಿಸಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ಇಂದಿನ ಸಭಾನಾಯಕರು ಹಿಂದೆ ವಿರೋಧ ಪಕ್ಷದ ನಾಯಕರಾಗಿದ್ದರು. ಆಗ ಅವರು ಏನೇನು ಮಾತನಾಡಿದ್ದಾರೆ ಎನ್ನುವುದನ್ನು ನಡವಳಿಕೆ ತೆಗೆದು ಓದಿ, ಅಂದು ನೀವು ಮಾತನಾಡಿರುವುದನ್ನು ಇಂದು ಅಳವಡಿಸಿಕೊಳ್ಳಿ. ಪ್ರತಿ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಾರಿಯು ನೀವು ಸದನದಲ್ಲಿ ಇರಬೇಕಾದ ಅಧಿಕಾರಿಗಳ ಹೆಸರನ್ನು, ಮಂತ್ರಿಗಳ ಹೆಸರನ್ನು ಓದಿ ಹೇಳಿದ್ದೀರಿ. ಈಗ ನೀವು ಸುಧಾರಿಸಿ. ಇವತ್ತು ಮಾನ್ಯ ರವಿಯವರು 17ಜನ ಎಂಎಲ್‌ಎಗಳು ನಮ್ಮ ಕಡೆ ಬಂದರು. ಅದರಲ್ಲಿ 15 ಜನ ಮತ್ತೆ ಗೆದ್ದು ಬಂದು ನಮ್ಮ ಸರ್ಕಾರವನ್ನು ಉಳಿಸಿದರು ಎಂದು ಹೇಳಿದರು. ಅವರು ಹೇಳಿದಾರೊ ಇಲ್ಲವೊ ಗೊತ್ತಿಲ್ಲ, ಆ ವಿಷಯ ಪೇಪರ್‌ನಲ್ಲಿ ಬಂದಿದೆ. 10 ಜನರನ್ನು ಹೊಸದಾಗಿ ಮಂತ್ರಿಗಳಾಗಿ ಮಾಡಿದರು. ಆದರ ಪ್ರಮಾಣಿಕವಾಗಿ ಹೇಳಬೇಕು ಅವರ ಸರ್ಕಾರ ಸರಿಯಾಗಿ ನಡೆದಿದ್ದೆಯೆ? ಹೊಸದಾಗಿ ಮಂತ್ರಿಗಳಾದವರು ಸರಿಯಾಗಿ ವಿಧಾನಸೌಧಕ್ಕೆ ಬರುವುದಿಲ್ಲ, ಸದನಕ್ಕೆ ಬರುವುದಿಲ್ಲ, ಕಛೇರಿಯಲ್ಲಿ ಸಿಗುವುದಿಲ್ಲ. ಮಂತ್ರಿಗಳಾದ ಮೇಲಾದರೂ ಏನಾದರೂ ಕೆಲಸ ಮಾಡಬೇಕು, ಈ ರಾಜ್ಯಕ್ಕೆ ಒಳ್ಳೆಯದನ್ನು ಮಾಡಬೇಕು ಎನ್ನುವ ಭಾವನೆ ಯಾರಲ್ಲಿಯು ಇಲ್ಲ. ಮಾನ್ಯ ಯಡಿಯೂರಪ್ಪನವರು ಒಂಟಿ ನಾಯಕರಾಗಿ ಒಬ್ಬರೆ ರಾಜ್ಯವೆಲ್ಲಾ ಸುತ್ತಾಡಿದರು. " ಒಂಟಿ ನಾಯಕನ ಕಷ್ಟದ ಸುಖ" ಎಂದು ಪತ್ರಿಕೆಯಲ್ಲಿ ಬಂದಿತ್ತು. 17 ಜನರನ್ನು ರಾಜಿನಾಮೆ ಕೊಡಿಸಿ, ನಂತರ ಅವರನ್ನು ಮಂತ್ರಿಗಳಾಗಿ ಮಾಡಲು, ಅವರಿಗೆ ಜಿಲ್ಲಾ ಉಸ್ತುವಾರಿ ಕೊಡಲು, ಅವರಿಗೆ ಪೋರ್ಟ್‌ಫೋಲಿಯೊ ಕೊಡಲು ಇದೇ ಕೆಲಸದಲ್ಲಿಯೇ ಸಮಯ ಹೋಗುತ್ತಿದೆ. ರಾಜ್ಯದ ಅಭಿವೃದ್ಧಿ ಬಗ್ಗೆ ಯಾವುದೇ ಕೆಲಸವಾಗುತ್ತಿಲ್ಲ. ಮಳೆಗಾಲ ಬಂತು ನೀರು ಬಂದು ಅನಾವೃಷ್ಟಿ ಉಂಟಾಯಿತು, ಆಗ ಅಧಿಕಾರಿಗಳು ಕೆಲಸ ಮಾಡಿದ್ದಾರೆ. ಅವರು ಏನು ಕೊಟ್ಟಿದಾರೊ ಏನೋ, ಒಟ್ಟಿನಲ್ಲಿ ಕೊಡುವುದನ್ನು ಕೊಟ್ಟಿದ್ದಾರೆ. ಪಕ್ಷಾಂತರ ಮಾಡಿಸಿ, ಅವರನ್ನು ಮಂತ್ರಿಗಳಾಗಿ ಮಾಡದ್ದೀರಿ ನಿಜ. ಆದರೆ ನಿಮ್ಮ ಸರ್ಕಾರದ ಸುಧಾರಣಾ ಕಾರ್ಯಗಳು ಏನು? ನಾವು ಎರಡು ಪಕ್ಷದವರು ತಪ್ಪು ಮಾಡಿದ್ದೇವೆ ಎಂದು ನೀವು ಬಂದಿದ್ದೀರಿ. 17 ಜನ ಎಂಎಲ್‌ಎ ಗಳನ್ನು ರಾಜೀನಾಮೆ ಕೊಡಿಸಿ ಏನು ಸಾಧನೆ ಮಾಡಿದ್ದೀರಿ? ನಿಮ್ಮ ಸರ್ಕಾರ ಬಂದು ಸುಮಾರು 6 ರಿಂದ 7 ತಿಂಗಳುಗಳಾಯಿತು. ಏನು ಸುಧಾರಣೆ ಕೆಲಸಗಳನ್ನು ಮಾಡಿದ್ದೀರಿ? ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿ ಒಬ್ಬರೆ ಬಂದರು, ನಂತರ ಎಲ್ಲ ಮಂತ್ರಿಗಳು ಬಂದರು. ಆದರೆ ಮಾನ್ಯ ಯಡಿಯೂರಪ್ಪನವರಿಗೆ ಕೆಲಸದಲ್ಲಿ ಇರುವಂತಹ ಶ್ರದ್ಧೆ, ಚಾಕ್ಯಚಕತೆ, ಏನಾದರೂ ಮಾಡಬೇಕು ಎನ್ನುವ ಭಾವನೆ ನಿಮ್ಮಲ್ಲಿ ಯಾರಲ್ಲಿಯು ಇಲ್ಲ. ನಮ್ಮ ರಾಜ್ಯದಲ್ಲಿ ಬಹಳ ಜನ ಒಂಟಿ ನಾಯಕರನ್ನು ನಾನು ನೋಡಿದ್ದೆನೆ. ಹಿಂದೆ ಮಾನ್ಯ ಎಸ್.ನಿಜಲಿಂಗಪ್ಪನವರು, ಮಾನ್ಯ ದಿ.ದೇವರಾಜ ಅರಸುರವರು, ಮಾನ್ಯ ಆರ್.ಗುಂಡುರಾವ್‌ರವರು, ಮಾನ್ಯ ವೀರೆಂದ್ರ ಪಾಟೀಲ್‌ರವರು, ಮಾನ್ಯ ಎಸ್. ಬಂಗಾರಪ್ಪನವರು, ಮಾನ್ಯ ರಾಮಕೃಷ್ಣ ಹೆಗಡೆಯವರು ಈಗ ಡಾ: ಬಿ.ಎಸ್.ಯಡಿಯೂರಪ್ಪನವರು. ಇವರು ಪಕ್ಷವನ್ನು ಬಿಟ್ಟು ಬೇರೆ ಪಕ್ಷ ಕಟ್ಟಿ ಸಾಕಷ್ಟು ಹೋರಾಟವನ್ನು ಮಾಡಿ ನಂತರ ಯಾವ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧಿಕಾರವು ಇಲ್ಲದೆ ಹೋದರು. ನಂತರ ಡಾ: ಬಿ.ಎಸ್.ಯಡಿಯೂರಪ್ಪನವರದ್ದು ಅದೇ ರೀತಿ ಆಯಿತು. ಆದರೆ ಕೊನೆಗೆ ಮುಖ್ಯಮಂತ್ರಿಗಳಾಗದರು. ಈಗ ಆಡಳಿತ ನಡೆಸುತ್ತಿದ್ದಾರೆ. "ಸಾಮೂಹಿಕ ನಾಯಕತ್ವದಲ್ಲಿ, ಕರ್ತವ್ಯ ಪಾಲನೆ ರೂಪದಲ್ಲಿ ಜವಾಬ್ದಾರಿಗಳು ಹರಿದು ಹಂಚಿ ಹೋದಾಗ ಅದರ ಉತ್ತರಾಧಿಕಾರಿ ಯಾರು ಎನ್ನುವಂತಹ ಪ್ರಶ್ನೆ ಹಾಗೆಯೇ ಒಗಟಿನಂತೆ ಉಳಿಯುತ್ತದೆ. ಒಂಟಿ ನಾಯಕತ್ವದ ರೂಪ–ರೇಷೆಗಳೇ ಬೇರೆ. 15 ಸ್ಥಾನಗಳಿಗೆ ನಡೆದ ವಿಧಾನಸಭೆ ಉಪ ಚುನಾವಣೆಯಲ್ಲಿ 12 ಸ್ಥಾನಗಳ ಗೆಲ್ಲುವು ನಿರ್ಣಾಯಕ ಪಾತ್ರ ವಹಿಸುವ ಸಂದರ್ಭದಲ್ಲಿ, ಮಾನ್ಯ ಯಡಿಯೂರಪ್ಪನವರು ಸಾರ್ವಜನಿಕರ ಕಣ್ಮಣಿ, ಹಾಗೆ ಬಿಜೆಪಿ ಮುಖಂಡರಲ್ಲಿ ಪ್ರಶ್ನಾತೀತ ಮುಖಂಡ. ಒಂಟಿ ನಾಯಕತ್ವದಲ್ಲಿ ಸದಾ ಕಾಲ ಮಾನ್ಯ ಯಡಿಯೂರಪ್ಪನವರ ಪರಭಾಷೆಯನ್ನು ಬಳಸಿ ಹೇಳಬೇಕಾದರೆ, ತಂತಿಯ ಮೇಲಿನ ನಡಿಗೆ ಇದ್ದಹಾಗೆ. ಗೆಲುವಿನ ಉನ್ಮಾದದಲ್ಲಿ ಕಷ್ಟಗಳು ಕೂಡಾ ಸುಖಾನಂದ ತರುವುದು ಸ್ವಾಭಾವಿಕ. 1989 ನೇ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರು ಸ್ವಂತ ತಮ್ಮ ಪಕ್ಷದಿಂದ ಬಹಿರಂಗವಾಗಿ ಅವಹೇಳನಕ್ಕೆ ಗುರಿಯಾದ ಪರಿಸ್ಥಿತಿ ಬಂತು. ಇವೆಲ್ಲವು ಒಂಟಿ ನಾಯಕತ್ವಕ್ಕೆ ಅಂಟಿಕೊಂಡಿವೆ" ಮಾನ್ಯ ರಾಮಕೃಷ್ಣ ಹೆಗಡೆಯವರು 1985ರಲ್ಲಿ ಮುಖ್ಯಮಂತ್ರಿಗಳಾಗಿದ್ದರು. ವಿಧಾನಸಭಾ ಚುನಾವಣೆಯಲ್ಲಿ ಅವರು 139 ಸ್ಥಾನಗಳನ್ನು ಗೆದ್ದರು. 1983ರಲ್ಲಿ 18ಜನ ಬಿಜೆಪಿಯವರನ್ನು ತೆಗೆದುಕೊಂಡು ಸರ್ಕಾರ ರಚನೆ ಮಾಡಿದರು. ನಂತರ ಬಿಜೆಪಿಯವರ ಕಿರಿಕಿರಿಗೆ ಸರ್ಕಾರವನ್ನು dissolve ಮಾಡಿದರು.

(ಮುಂದು)

105/18-02-2020/05-40/ಬಿಎಸ್‌ಡಿ–ವಿಕೆ
**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು)**

ಪಾರ್ಲಿಮೆಂಟ್ ಚುನಾವಣೆಯಲ್ಲಿ 26 ಸೀಟು ಕಾಂಗ್ರೆಸ್ ಬಂತು. ನಂತರವೂ ಅವರಿಗೆ 139 ಸೀಟುಗಳು ಬಂದವು. ಮಾನ್ಯ ಮಾನ್ಯ ಯಡಿಯೂರಪ್ಪನವರು ಪ್ರಶ್ನಾತೀತ ನಾಯಕರು, ಅವರಿಂದ ಚುನಾವಣೆ ಗೆಲ್ಲಲಾಗಿದೆ ಎನ್ನುವುದೆಲ್ಲವನ್ನೂ ಒಪ್ಪಿಕೊಳ್ಳುತ್ತೇನೆ. ಇತ್ತೀಚೆಗೆ ಸಂಸದರೊಬ್ಬರು ಈ ಉಪ ಚುನಾವಣೆಯ ಗೆಲುವಿಗೆ ಮೋದಿ ಮತ್ತು ಅಮಿತ್ ಶಾ ಕಾರಣ ಎಂದು ಹೇಳುವ ಮೂಲಕ ರಾಜ್ಯದಲ್ಲಿ ಒಂದು ಗಾಳಿ ಬಿಟ್ಟರು. ಆ ಸಂಸದರು ಬಿ.ಎಸ್.ವೈ. ಪಾತ್ರವನ್ನು ನಿರಾಕರಿಸುವ ಸಾಹಸವನ್ನು ಮಾಡಿದ್ದುಂಟು. ಜನತಾ ಪಕ್ಷದ ಪಾರ್ಟಿ ಮೀಟಿಂಗ್‌ನಲ್ಲಿ ಮಾನ್ಯ ರಾಮಕೃಷ್ಣ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೆಗಡೆಯವರಿಂದ ಇಷ್ಟೆಲ್ಲಾ ಸೀಟುಗಳು ಬಂತು ಎಂದು ಹೇಳಲಾಯಿತು. ಆಗ ಅವರನ್ನು ಇಂದ್ರ-ಚಂದ್ರ ಎಂದು ಹೊಗಳಲಾಯಿತು. ಕೊನೆಗೆ ಪಕ್ಷದ ಗೆಲುವಿಗೆ ಹೆಗಡೆಯವರು ಕಾರಣ ಎಂದು ಅರ್ಥ ಬರುವ ರೀತಿಯಲ್ಲಿ ಹೇಳಲಾಯಿತು. ಕೆಲವರ ದೃಷ್ಟಿಯಲ್ಲಿ ಇದು ಭಟ್ಟಂಗಿತನದ ಪ್ರದರ್ಶನ ಎಂಬ ಟೀಕೆಗಳು ಬಂದವು. ಆ ಸಭೆಯಲ್ಲಿ ನಮ್ಮ ವರಿಷ್ಠರಾದ ಮಾನ್ಯ ದೇವೇಗೌಡರು ಈ ವಿಚಾರವನ್ನು ಪ್ರಸ್ತಾಪಿಸಿ, ಇದು ಜನತೆಯ ಹಾಗೂ ಜನತಾಪಕ್ಷದ ಗೆಲುವು, ಇದು ಜನತಾಪಕ್ಷದ ಗೆಲುವೇ ವಿನಃ ಯಾರೊಬ್ಬರ ವೈಯಕ್ತಿಕ ವ್ಯಕ್ತಿತ್ವಕ್ಕೆ ಸಿಕ್ಕಿರುವ ಗೆಲುವು ಅಲ್ಲ' ಎಂದು ಹೆಗಡೆಯವರಿಗೆ ಅಪರೋಕ್ಷವಾಗಿ ಹೇಳಿಕೆ ನೀಡಿದರು. ಅಂದರೆ ಹೆಗಡೆಯವರಿದ್ದರೂ ಜನತಾಪಕ್ಷಕ್ಕೆ ಬಂದಿದೆ ಎನ್ನುವ ಮಾತನ್ನು ಹೇಳಿದರು. ಬಹಳ ನಿಷ್ಠುರವಾದಿಯಾದ ಮಾನ್ಯ ವೈ.ಕೆ. ರಾಮಯ್ಯನವರು ಸಭೆ ಮುಗಿದ ಕೂಡಲೇ ಅತಿಶಯೋಕ್ತಿ ಆದರೂ ಚಿಂತೆಯಿಲ್ಲ, ಗೆಲುವಿಗೆ ಮಾನ್ಯ ಹೆಗಡೆಯವರೇ ಕಾರಣ' ಎನ್ನುವ ಮಾತನ್ನು ಹೇಳಿದರು. ಮುಂದೆ ಪಕ್ಷದಲ್ಲಿ ಭಿನ್ನಮತ ಶುರುವಾಯಿತು. ಮಾನ್ಯ ಹೆಗಡೆಯವರ ಮುಖವನ್ನು ಮಾನ್ಯ ದೇವೇಗೌಡರು ನೋಡಲಿಲ್ಲ, ಮಾನ್ಯ ದೇವೇಗೌಡರ ಮುಖವನ್ನು ಮಾನ್ಯ ಹೆಗಡೆಯವರು ನೋಡಲಿಲ್ಲ. ಮಾನ್ಯ ಯಡಿಯೂರಪ್ಪನವರಿಗೂ ಮುಂದೆ ಹೀಗೆ ಆಗುತ್ತದೆ. ಈ ಮಾತನ್ನು ನೆನಪಿಟ್ಟುಕೊಳ್ಳಬೇಕು. ನಂತರ ಮಾನ್ಯ ದೇವೇಗೌಡರು ಹಾಗೂ ಮಾನ್ಯ ಹೆಗಡೆರವರ ಸಂಬಂಧ ಹಳಸಿದವು. ಮುಂದೆ ಜನತಾ ಪಕ್ಷದ ಜಗಳದಿಂದ 1980 ರಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂತು. ನಾವು ವಿರೋಧ ಪಕ್ಷವಾಗಿ ಉಳಿಯಲು 24 ಸೀಟುಗಳನ್ನು ಪಡೆದುಕೊಳ್ಳಲು ಆಗಲಿಲ್ಲ. ಆಗ ನಾವು 23 ಸೀಟುಗಳನ್ನು ಪಡೆದು ಒಂದು ಸೀಟು ಕಡಿಮೆ ಇತ್ತು. ಇದು ಇತಿಹಾಸದಲ್ಲಿ ನಡೆದಿರುವುದು. ಮಾನ್ಯ ದೇವರಾಜ ಅರಸ್ ರವರಂತಹ ಮಹಾನ್ ನಾಯಕರನ್ನು ಯಾವುದೋ ಒಂದು ಕಾರಣದಿಂದ ಬದಿಗಿಟ್ಟು, ಮಾನ್ಯ ಗುಂಡೂರಾಯರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದರು. ಮಾನ್ಯ ಬಂಗಾರಪ್ಪನವರನ್ನು ಅಧ್ಯಕ್ಷರನ್ನಾಗಿ ಮಾಡಿದರು. ಇಂತಹವುಗಳೆಲ್ಲವೂ ನಡೆದು ಬಂದ ದಾರಿಗಳಿವೆ. ನಂತರ ವೇಮಗಲ್ ನಿಂದ ಶ್ರೀ ಸಿ. ಭೈರೇಗೌಡ ಮತ್ತು ಹೆಚ್.ಡಿ. ಕೋಟೆಯಿಂದ ಶ್ರೀ ಎಂ.ಪಿ. ವೆಂಕಟೇಶ್ ಎನ್ನುವವರು ಆಯ್ಕೆಯಾದರು. ನಂತರ ಮುಂದಿನ ಚುನಾವಣೆಯಲ್ಲಿ 58 ಸೀಟುಗಳನ್ನು ಗೆದ್ದರು. ಅವರು ಪ್ರಾಮಾಣಿಕವಾಗಿ ಏನು ಹೇಳುತ್ತಾರೋ, ಗೊತ್ತಿಲ್ಲ. ಇವತ್ತು 104 ಸ್ಥಾನಗಳನ್ನು ಪಡೆದರೂ ಬಹುಮತ ಪಡೆಯಲು ಆಗಲಿಲ್ಲ. ಕೊನೆಗೆ ಈ ರೀತಿ ಮಾಡಿದರು. ಈಗಿನ ರಾಜಕಾರಣಕ್ಕೆ ಸಂಬಂಧಪಟ್ಟಂತೆ ಶ್ರೀ ರಾಜೇಶ್ ಖನ್ನಾರವರು 'ಆಜ್ ಕಾ ಎಂ.ಎಲ್.ಎ' ಎಂಬ ಒಂದು ಸಿನಿಮಾ ಮಾಡಿದ್ದಾರೆ. ಅದರಲ್ಲಿ ಆಕಸ್ಮಿಕವಾಗಿ ಅವರು ಎಂ.ಎಲ್.ಎ ಆಗಿ ನಂತರ ಮುಖ್ಯಮಂತ್ರಿಯಾದರು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಖ್ಯಮಂತ್ರಿಯಾಗಿ 68 ಮಂದಿಯನ್ನು ಉಪ ಮುಖ್ಯಮಂತ್ರಿಗಳನ್ನಾಗಿ ಮಾಡಿದರು. ಆ ಚಿತ್ರದಂತೆ ಇವತ್ತು ಆಂಧ್ರಪ್ರದೇಶದಲ್ಲಿ ಉಪ ಮುಖ್ಯಮಂತ್ರಿಗಳಿದ್ದಾರೆ. ಇಲ್ಲಿಯೂ 5 ಉಪ ಮುಖ್ಯಮಂತ್ರಿಗಳನ್ನು ಮಾಡಬೇಕು. ಈಗ ಮೂರು ಮಂದಿ ಇದ್ದಾರೆ. ಮೊಟ್ಟಮೊದಲನೆಯದಾಗಿ ಕರ್ನಾಟಕ ರಾಜ್ಯದಲ್ಲಿ ಇಬ್ಬರು ಹಾಗೂ ಮೂರು ಜನ ಉಪ ಮುಖ್ಯಮಂತ್ರಿಗಳನ್ನು ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅದೇ ರೀತಿ ಐದು ಉಪ ಮುಖ್ಯಮಂತ್ರಿಗಳನ್ನು ಮಾಡುವ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಅವರು ಇದನ್ನು ಮಾಡದಿದ್ದರೆ ಮಾನ್ಯ ಯಡಿಯೂರಪ್ಪನವರ ಕುರ್ಚಿ ಉಳಿಯುವುದಿಲ್ಲ. ಇದನ್ನು ಬರೆದಿಟ್ಟುಕೊಳ್ಳಬೇಕು. ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. 2003 ರಲ್ಲಿ ಮಾನ್ಯ ವಾಜಪೇಯಿರವರು ಪ್ರಧಾನ ಮಂತ್ರಿಯಾಗಿದ್ದಾಗ ಪಕ್ಷಾಂತರ ನಿಷೇಧದ ಬಗ್ಗೆ ಸಂಸತ್ತಿನ ಸದನದಲ್ಲಿ ದೊಡ್ಡ ಕೋಲಾಹಲ ಸೃಷ್ಟಿಯಾಗಿತ್ತು. ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಮೂರನೇ ಒಂದು ಭಾಗದಷ್ಟು ಬದಲಾಗಿ ಮೂರನೆ ಎರಡು ಭಾಗದಷ್ಟು ಆಯ್ಕೆಯಾದ ಸದಸ್ಯರು ಪಕ್ಷಾಂತರ ಕೈಗೊಂಡರೆ ಅಂತಹವರನ್ನು ಮಾನ್ಯ ಮಾಡಬೇಕೆಂದು ಆಯಿತು. ಅವರು ಏನು ಮಾಡಿದರು? ಅವರು ಚಾಪೆ ಹಾಕಿದರೆ ಇವರು ರಂಗೋಲೆ ಕೆಳಗೆ ತೂರಿದರು. ಆಪರೇಷನ್ ಕಮಲ ಎಂದು ಮಾಡಿದರು. ಕರ್ನಾಟಕದಲ್ಲಿ ಬಿಜೆಪಿ ಪಕ್ಷ ಅಧಿಕಾರಕ್ಕೆ ಬಂದಾಗ ಇಡೀ ಭಾರತ ದೇಶದಲ್ಲಿ ಮಾದರಿಯಾಗುವಂತಹ ಪಕ್ಷಾಂತರ ಮಾಡುವ ಕೆಲಸ ಮಾಡಿದರು. ಇದರಿಂದ ಏನು ಸುಖ ಬಂತು. ಮಾನ್ಯ ಯಡಿಯೂರಪ್ಪನವರು ಹರಿಹರಕ್ಕೆ ಹೋಗಿದ್ದಾಗ ಕುರ್ಚಿಗೆ ಅಂಟಿಕೊಂಡಿಲ್ಲ, ರಾಜೀನಾಮೆಗೆ ಸಿದ್ಧ, ನನ್ನ ಕಷ್ಟವನ್ನು ಅರ್ಥ ಮಾಡಿಕೊಳ್ಳಬೇಕು' ಎಂದು ಜಾತ್ರೆಯ ಕಾರ್ಯಕ್ರಮದಲ್ಲಿ ಅಸಮಾಧಾನ ತೋರಿದ್ದಾರೆ. ಶ್ರೀ ಚಿದಾನಂದ ಸ್ವಾಮಿ ಎಂಬುವವರು ಇಂತಹವರನ್ನೇ ಮಂತ್ರಿ ಮಾಡಬೇಕೆಂದು ಮಾನ್ಯ ಯಡಿಯೂರಪ್ಪನವರಲ್ಲಿ, ಹೇಳಿದರು. ಈ ರೀತಿ ಇಂತಹವರನ್ನೇ ಮಂತ್ರಿ ಮಾಡಿ ಎಂದು ಸ್ವಾಮಿಯವರು ಹೇಳಬೇಕೆಂದರೆ ಸರ್ಕಾರ ಎಲ್ಲಿಗೆ ಬಂತು? ಕೆಲವು ಸ್ವಾಮಿಗಳಿಗೆ ಉದ್ಯೋಗ ಇಲ್ಲ, ಅವರು ಮಠ ಬಿಟ್ಟು ಇಂತಹವರನ್ನೇ ಮಂತ್ರಿ ಮಾಡಬೇಕು. ಇಂತಹ ಜಾತಿಯವರನ್ನೇ ಮಂತ್ರಿ ಮಾಡಬೇಕು ಎಂದು ಹೇಳುತ್ತಾರೆ. ಇವರು ನಮ್ಮವರೇ ಆಗಿದ್ದು, ಇದರ ಬಗ್ಗೆ ಇವತ್ತು ಸಭೆ ನಡೆದಿದೆ. ಸ್ವಾಮಿಗಳು ಮಠ ಬಿಟ್ಟು ವಿಧಾನ ಸೌಧಕ್ಕೆ ಬರುತ್ತಿದ್ದಾರೆ, ವಿಧಾನ ಸೌಧದವರು ಮಠಕ್ಕೆ ಹೋಗಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಒಬ್ಬರು ಸ್ವಾಮಿಗಳು ಇಂತಹವರನ್ನು ಮಂತ್ರಿ ಮಾಡಬೇಕೆಂದು ಎಚ್ಚರಿಕೆ ಕೊಡುತ್ತಾರೆ. ಈ ಪದ್ಧತಿ ಎಲ್ಲಿದೆ? ಸ್ವಾಮಿಗಳನ್ನು ಅತಿಯಾಗಿ ತಲೆ ಮೇಲೆ ಕೂರಿಸಿಕೊಂಡರೆ ಏನಾಗುತ್ತದೋ ಗೊತ್ತಿಲ್ಲ. ಆದ್ದರಿಂದ ಯಾವುದಕ್ಕೂ ಒಂದು ಲಿಮಿಟ್ ಇರಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅತಿಯಾದ ಪ್ರೀತಿ, ಅತಿಯಾದ ಸಡಿಲಿಕೆ ಇದ್ದರೆ ಆಗುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ಲಹರ್ ಸಿಂಗ್ ರವರು ನಮ್ಮ ಹುಬ್ಬಳ್ಳಿಗೆ ಬಂದಾಗ ಅವರನ್ನು ಕರ್ನಾಟಕದ ಮೋದಿ ಎಂದು ಕರೆಯುತ್ತಾರೆ. ಅವರು ಜಾಕೆಟ್ ಹಾಕಿಕೊಂಡು ಬಂದಾಗ ಕರ್ನಾಟಕದ ಮೋದಿ ಎಂದು ಕರೆಯುತ್ತಾರೆ. ಇದನ್ನು ಪ್ರೆಸ್‌ನವರು ಹೇಳಿದ್ದಾರೆ, ನಾನು ಹೇಳಿಲ್ಲ. ಈಗ ಅವರ ಕೈಯಲ್ಲಿ ಇದ್ದ ಅಧಿಕಾರ ಯಾರಿಗೂ ಇಲ್ಲ. ಸರ್ಕಾರ ಹೊಸದಾಗಿ ಬಂದಿದೆ ಎಂದು ನಾನು ಹೇಳಬಹುದು. ರಾಜ್ಯಪಾಲರ ಕಡೆಯಿಂದ ಓದಿಸಿದ ಭಾಷಣದಂತೆ ಜಾರಿಗೆ ತಂದಿಲ್ಲ. ಹಿಂದಿನ ರಾಜ್ಯಪಾಲರ ಭಾಷಣದ ಪ್ರತಿಯನ್ನು ನಾನು ತಂದಿದ್ದೇನೆ. ಅಂದರೆ ಸರ್ಕಾರಗಳು ಬಂದಾಗ ರಾಜ್ಯಪಾಲರ ಕಡೆಯಿಂದ ಓದಿಸಿದಂತಹ ವಿಷಯಗಳು ಎಷ್ಟು ಜಾರಿಗೆ ಬರುತ್ತವೆ ಎಂದು ರಾಜ್ಯಪಾಲರ ಭಾಷಣದಲ್ಲಿಯೇ ಹೇಳಬೇಕು. ಇವತ್ತು ಸಮ್ಮಿಶ್ರ ಸರ್ಕಾರದಲ್ಲಿನ ಹಣಕಾಸಿನ ವಿಷಯಗಳೆಲ್ಲವೂ ಬಂದಿವೆ. ಆದರೆ ಎಷ್ಟು ಖರ್ಚು ಮಾಡಲಾಗಿದೆ ಎಂಬ ವಿಷಯವನ್ನು ಹೇಳಿಲ್ಲ. ಅವರಿಗೆ ಅಧಿಕಾರ ಇರುವುದರಿಂದ ಮಾಡುತ್ತಾರೆ. ನಾವು ವಿಧಾನ ಪರಿಷತ್ತಿನಲ್ಲಿ ಶಿಕ್ಷಣದ ಬಗ್ಗೆ ಮತ್ತು ಕನ್ನಡ ಶಾಲೆಗಳ ಬಗ್ಗೆ ಮಾತನಾಡಿದ್ದೇವೆ.

ಇನ್ನು ಬಹಳ ಪ್ರಮುಖವಾಗಿ 13 ಜಿಲ್ಲೆಗಳಿಗೆ ಸಚಿವ ಸ್ಥಾನದ ಪ್ರಾತಿನಿಧ್ಯ ಇಲ್ಲ. ಕಲ್ಬುರ್ಗಿ, ಬಿಜಾಪುರ, ಯಾದಗಿರಿ, ರಾಯಚೂರು, ಕೊಪ್ಪಳ, ದಾವಣಗೆರೆ, ಕೊಡಗು, ಮೈಸೂರು, ದಕ್ಷಿಣ ಕನ್ನಡ, ಚಾಮರಾಜನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ಹಾಸನ ಜಿಲ್ಲೆಗಳಿಗೆ ಮಂತ್ರಿ ಸ್ಥಾನ ನೀಡಿಲ್ಲ. ಈ ರೀತಿಯಾದರೆ ಏನು? ಇವತ್ತು 28 ಮಂದಿ ಸಚಿವರಾಗಿದ್ದಾರೆ. 28 ಮಂದಿಯಲ್ಲಿ 13 ಜಿಲ್ಲೆಗಳಿಗೆ ಪ್ರಾತಿನಿಧ್ಯ ನೀಡಿಲ್ಲ ಏನು ಹೇಳುವುದು. ಒಬ್ಬೊಬ್ಬರಿಗೆ ಎರಡು ಖಾತೆ, ಒಬ್ಬೊಬ್ಬರಿಗೆ ಎರಡು ಜಿಲ್ಲೆಗಳ ಉಸ್ತುವಾರಿ ನೀಡಿದರೆ ಸರ್ಕಾರ ಹೇಗೆ ನಡೆಯುತ್ತದೆ?

**ಶ್ರೀ ಎಂ.ನಾರಾಯಣಸ್ವಾಮಿಃ–** ಬೆಂಗಳೂರು ನಗರ ಮತ್ತು ಬೆಳಗಾವಿ ಜಿಲ್ಲೆಗಳಿಂದ ಆಯ್ಕೆಯಾದ ಎಷ್ಟು ಮಂದಿಗೆ ಮಂತ್ರಿ ಸ್ಥಾನ ಕೊಡಲಾಗಿದೆ?

(ಮುಂದು)

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(106)/20.02.2020/5.50/ಹೆಚ್‌ವಿ–ವಿಕೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಈ ಸರ್ಕಾರ ಅಧಿಕಾರಕ್ಕೆ ಬರಬೇಕಾದರೆ ಬೆಳಗಾವಿಯ ನಮ್ಮ ಹಿರೋ ಕಾರಣ. ಅವರಿಗೆ ಮಾನ್ಯ ಪ್ರದೀಪ್ ಶೆಟ್ಟರ್‌ರವರು ಸಾಥ್ ಕೊಟ್ಟಿದ್ದಾರೆ. ಅದರ ಫಲವಾಗಿ ಈ ಸರ್ಕಾರ ರಚನೆಯಾಗಿದೆ. ಅವರು ನನ್ನ ಹತ್ತಿರವೂ ಬಂದಿದ್ದರು.

**(ಗೊಂದಲ)**

**ಶ್ರೀ ಪ್ರದೀಪ್ ಶೆಟ್ಟರ್‌:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಹೊರಟ್ಟಿಯವರನ್ನು ನಮ್ಮ ಪಕ್ಷಕ್ಕೆ ಬರುವಂತೆ ಆಹ್ವಾನಿಸುತ್ತಿದ್ದೇನೆ. ಅವರು ಹಿರಿಯ ಸದಸ್ಯರಿದ್ದಾರೆ. ನಮಗೆ ಹಿರಿಯರು ಬೇಕಾಗಿದ್ದಾರೆ.

**ಶ್ರೀ ಎನ್.ರವಿಕುಮಾರ್‌:–** ಸನ್ಮಾನ್ಯ ಸಭಾಪತಿಯವರೇ, ಅವರು ಹಿರಿಯ ಸದಸ್ಯರಿದ್ದಾರೆ. ಕಾಂಗ್ರೆಸ್ ಮತ್ತು ಜೆ.ಡಿ(ಎಸ್)ನವರು ಮಾಡಿದ ಪ್ರಯತ್ನಗಳ ಬಗ್ಗೆಯೂ ಅವರು ಬೆಳಕು ಚೆಲ್ಲಬೇಕಾಗಿದೆ.

**(ಗೊಂದಲ)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರಿಗೆ ಮತ್ತು ಶ್ರೀ ಎಸ್.ಆರ್.ಪಾಟೀಲ್‌ರವರಿಗೆ ಹಿಂದಿನ ಸಮಿಶ್ರ ಸರ್ಕಾರದಲ್ಲಿ ಬಹಳ ಮುಜುಗರವಾಗುತ್ತಿತ್ತು ಎನ್ನುವುದನ್ನು ಅವರು ತಮ್ಮ ಆತ್ಮಸಾಕ್ಷಿಯಾಗಿ ಹೇಳಬೇಕಾಗಿದೆ. ಮಾನ್ಯ ಹೊರಟ್ಟಿಯವರು ವಾಸ್ತವಾಂಶವನ್ನು ಹೇಳುತ್ತಿದ್ದಾರೆ. ಅದರ ಬಗ್ಗೆ ನನ್ನ ತಕರಾರಿಲ್ಲ. ಆದರೆ, ಆ ಪಕ್ಷಗಳಲ್ಲಿ ಏನೇನು ಮುಜುಗರವಿತ್ತು, ತಲೆ ಮರಿಸಿಕೊಂಡು ಓಡಾಡುವಂತಹ ಪರಿಸ್ಥಿತಿ ಇತ್ತು ಅವೆಲ್ಲವನ್ನೂ 17 ಜನ ಅತೃಪ್ತರು ತೆರವುಗೊಳಿಸಿದ್ದಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ರವಿಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಬಸವರಾಜ್ ಹೊರಟ್ಟಿಯವರು ಮೇಲ್ಮನೆಯ ಹಿರಿಯ ಸದಸ್ಯರಾಗಿದ್ದಾರೆ. ಅವರ ಪಕ್ಷ ಹೊರಟ್ಟಿಯವರನ್ನು ಯಾವ ರೀತಿ ನಡೆಸಿಕೊಂಡಿದೆ ಎನ್ನುವುದು ನಮ್ಮೆಲ್ಲರಿಗೂ ಗೊತ್ತಿದೆ.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಸನ್ಮಾನ್ಯ ಸಭಾಪತಿಯವರೇ, ಇಡೀ ಭಾರತ ದೇಶದಲ್ಲಿಯೇ ಸತತವಾಗಿ 7 ಬಾರಿ ವಿಧಾನ ಪರಿಷತ್ತಿಗೆ ಗೆದ್ದು ಬಂದಿರುವವರಲ್ಲಿ ಇವರೇ ಮೊದಲಿಗರು. ಇವರ ಪಕ್ಷ ಇವರನ್ನೇ ಮಂತ್ರಿಗಳನ್ನಾಗಿ ಮಾಡಲಿಲ್ಲ. ಬೇರೆಯವರು ಹೇಗೆ ಆ ಪಕ್ಷದಲ್ಲಿ ಆಸೆ ಇಟ್ಟುಕೊಳ್ಳುವುದಕ್ಕೆ ಸಾಧ್ಯ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಬಸವರಾಜ್ ಹೊರಟ್ಟಿಯವರೇ, ತಮ್ಮ ಮಾತು ಮುಗಿಯಿತೇ? ಇಲ್ಲವಾದರೆ, ಬೇರೆಯವರಿಗೆ ಏತಕ್ಕೋಸ್ಕರ ಬೇರೆವರಿಗೆ ಮಾತನಾಡಲು ಅವಕಾಶವನ್ನು ನೀಡುತ್ತಿದ್ದೀರಿ?

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ನಾನು ಇನ್ನೂ ಮಾತನಾಡುತ್ತಿದ್ದೇನೆ. ಅವರುಗಳು ಅಡ್ಡಿಪಡಿಸುತ್ತಿದ್ದಾರೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಮುಂದೆ ಮಾನ್ಯ ಎನ್.ರವಿಕುಮಾರ್‌ರವರು ಹೇಳಿರುವ ಮಾತುಗಳಿಗೆ ನಾವು ಉತ್ತರವನ್ನು ನೀಡುತ್ತೇವೆ.

**ಶ್ರೀ ಎನ್.ರವಿಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರು ಶಿಕ್ಷಣ ಕ್ಷೇತ್ರದಲ್ಲಿ ಅಪಾರವಾಗಿರುವ ಕೆಲಸವನ್ನು ಮಾಡಿದ್ದಾರೆ. ಮೇಲ್ಮನೆಯ ಹಿರಿಯ ಸದಸ್ಯರಾಗಿರುವ ಅವರನ್ನು ತೆರೆಮರೆಗೆ ಸರಿಸಲಾಗಿದೆ. ಅವರ ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅನುಭವವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರ ಪಕ್ಷ ಸಂಪೂರ್ಣವಾಗಿ ಕಡೆಗಣಿಸಿದೆ. ಅವರ ಹಿರಿತನವನ್ನು ಪರಿಗಣಿಸಿ ಅವರ ಪಕ್ಷ ಅವರನ್ನು ಮಂತ್ರಿಯನ್ನಾಗಿ ಮಾಡಲಿಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷದಲ್ಲಿ ಅನೇಕ ಜನ ಹಿರಿಯ ಸದಸ್ಯರಿದ್ದಾರೆ. ಅವರನ್ನು ಏನು ಮಾಡಿದ್ದಾರೆ?

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾಃ–** ಸನ್ಮಾನ್ಯ ಸಭಾಪತಿಯವರೇ, ಈ ಸರ್ಕಾರ ಶ್ರೀ ಹೆಚ್.ವಿಶ್ವನಾಥ್ ಮತ್ತು ಮಾನ್ಯ ಎಂ.ಟಿ.ಬಿ. ನಾಗರಾಜ್‌ರವರಿಗೆ ಯಾವುದಾದರೊಂದು ಸ್ಥಾನವನ್ನು ಕೊಡಬೇಕಲ್ಲ.

**(ಗೊಂದಲ)**

**ಶ್ರೀ ಟಿ.ಎ.ಶರವಣಃ–** ಸನ್ಮಾನ್ಯ ಸಭಾಪತಿಯವರೇ, ಸೋತವರನ್ನು ಉಪ ಮುಖ್ಯಮಂತ್ರಿಗಳನ್ನಾಗಿ ಮಾಡಿದ್ದಾರೆ. ಮಾನ್ಯ ಆರ್.ಅಶೋಕ್ ಮತ್ತು ಜಗದೀಶ್ ಶೆಟ್ಟರ್ ಅವರನ್ನು ಏನು ಮಾಡಿದ್ದಾರೆ?

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ–** ಸನ್ಮಾನ್ಯ ಸಭಾಪತಿಯವರೇ, ಮೂಲ ಬಿ.ಜೆ.ಪಿ.ಯವರು ಮತ್ತು ವಲಸಿಗ ಬಿ.ಜೆ.ಪಿ.ಯವರು ಎಂದು ಎರಡು ವರ್ಗಗಳಿವೆ. ಮೂಲ ಬಿ.ಜೆ.ಪಿ.ಯವರ ಹಣೆಬರಹ ಮತ್ತು ನನ್ನ ಹಣೆಬರಹ ಒಂದೇ ಆಗಿದೆ. ನಾನು ಯಾವುದೇ ಕಾರಣಕ್ಕೂ ಈ ಪಕ್ಷವನ್ನು ಬಿಟ್ಟು ಬೇರೆ ಪಕ್ಷಕ್ಕೆ ಹೋಗುವುದಿಲ್ಲ. ಇದು ನನ್ನ ತತ್ವ–ಸಿದ್ಧಾಂತವಾಗಿದೆ. ನನಗೆ ಅನ್ಯಾಯವಾಗಲಿ ಬಿಡಲಿ ನಾನು ಈ ಪಕ್ಷದಲ್ಲಿಯೇ ಇರುತ್ತೇನೆ. ರಾಜಕಾರಣದಲ್ಲಿ ಮಂತ್ರಿ ಮಂಡಲವನ್ನು ರಚನೆ ಮಾಡುವಂತಹ ಸಂದರ್ಭದಲ್ಲಿ ಅವರದೇ ಆಗಿರುವಂತಹ ಕಷ್ಟ ಇರುತ್ತದೆನ್ನುವುದನ್ನು ನಾನು ಒಪ್ಪುತ್ತೇನೆ. ಭಾರತೀಯ ಜನತಾ ಪಕ್ಷದ ನನ್ನ ಮಿತ್ರರೆಲ್ಲರೂ ನನ್ನ ಬಗ್ಗೆ ಅಪಾರವಾಗಿರುವ ಕಾಳಜಿಯನ್ನು ವಹಿಸುತ್ತಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ನಾನೊಂದು ಉದಾಹರಣೆಯನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ನಾನು ಚಿಕ್ಕ ಹುಡುಗನಾಗಿದ್ದಾಗ ಬಾದಾಮಿ ಪಟ್ಟದಕಲ್ಲಿಗೆ ಪ್ರವಾಸ ಹೋಗಿದ್ದೆವು. ಪಟ್ಟದಕಲ್ಲಿನಲ್ಲಿ ಒಂದು ಬಸವಣ್ಣನ ವಿಗ್ರಹವಿದೆ. ಒಬ್ಬ ಹುಡುಗ ಆ ಬಸವಣ್ಣನ ಮೂಗಿನೊಳಗೆ ಬೆರಳಿಟ್ಟ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವನಿಗೆ ಏನೋ ಕಚ್ಚಿದೆ. ಆದರೆ, ಅವನು ‘ಭಯಂಕರ ತಂಪಾಗಿದೆ’ ಎಂದು ಹೇಳಿದ. ಅವನ ಮಾತು ನಂಬಿ ನಾವೆಲ್ಲರೂ ಬಸವಣ್ಣನ ಮೂಗಿನೊಳಗೆ ಬೆರಳಿಟ್ಟಾಗ, ಬಸವಣ್ಣನ ಮೂಗಿನೊಳಗಿದ್ದ ಚೇಳು ನಮ್ಮೆಲ್ಲರಿಗೂ ಕಚ್ಚಿತು. ಈಗಿನ ರಾಜಕೀಯ ಪರಿಸ್ಥಿತಿಯೂ ಅದೇ ರೀತಿಯಾಗಿದೆ. ನಾವೆಲ್ಲರೂ ನಮ್ಮನಮ್ಮ ಬೆನ್ನು ಮುಟ್ಟಿಕೊಂಡು ನೋಡಬೇಕಾಗಿದೆ. ಅಧಿಕಾರದ ಆಸೆ ನನಗಿಲ್ಲ. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಹೇಳಬೇಕಾದರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದವರು, ಈ ಸರ್ಕಾರ ಅವರನ್ನು ಕನಿಷ್ಠ ಪಕ್ಷ ಉಪ ಮುಖ್ಯಮಂತ್ರಿಗಳನ್ನಾಗಿ ಮಾಡಬೇಕಾಗಿತ್ತು. ಆದರೆ, ಅವರನ್ನು ಕೇವಲ ಮಂತ್ರಿಗಳನ್ನಾಗಿ ಮಾಡಿದೆ. ಹಿಂದೆ ಶ್ರೀ ಬಿ.ಡಿ.ಜತ್ತಿ ಮತ್ತು ಮಾನ್ಯ ಎಸ್.ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದವರು ಮಂತ್ರಿಗಳಾಗಿ ಕಾರ್ಯ ನಿರ್ವಹಿಸಿದ್ದರು. ಶ್ರೀಯುತರುಗಳಾದ ಆರ್. ಅಶೋಕ್ ಮತ್ತು ಕೆ.ಎಸ್.ಈಶ್ವರಪ್ಪನವರುಗಳು ಉಪ ಮುಖ್ಯಮಂತ್ರಿಗಳಾಗಿದ್ದವರು. ಈಗ ಇವರುಗಳ ಕುರ್ಚಿಗಳು ಹಿಂದಕ್ಕೆ ಸರಿದು, ಬೇರೆಯವರು ಇವರುಗಳ ಸ್ಥಾನಕ್ಕೆ ಬಂದರು. ಮಾನ್ಯ ಗೋವಿಂದ ಕಾರಜೋಳರವರು ದಲಿತ ಸಮುದಾಯಕ್ಕೆ ಸೇರಿದವರು ಅವರನ್ನು ಉಪ ಮುಖ್ಯಮಂತ್ರಿಗಳನ್ನಾಗಿ ಮಾಡಿದ್ದರೆ ಸಾಕಾಗಿತ್ತು. ಭಾರತೀಯ ಜನತಾ ಪಕ್ಷದವರು ಜಿಲ್ಲೆಗೆ ಒಬ್ಬ ಉಪ ಮುಖ್ಯಮಂತ್ರಿಗಳನ್ನು ಮಾಡುತ್ತಿದ್ದಾರೆ. ಇದರಿಂದಾಗಿ ಆಡಳಿತ ಸುಗಮವಾಗಿ ನಡೆಯುವುದಿಲ್ಲ. ಇವರು ‘ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ’ ನಡೆಸುತ್ತಿದ್ದಾರೆ. ಸರ್ಕಾರದ ದುಡ್ಡಿನಲ್ಲಿ ಎಲ್ಲರನ್ನು ಸಮಾಧಾನ ಪಡಿಸುತ್ತಿದ್ದಾರೆ. ಭಾರತೀಯ ಜನತಾ ಪಕ್ಷದವರನ್ನು ನೋಡಿ ನಾವು ಕಲಿಯಬೇಕಾಗಿದೆ. ಹಿಂದೆ 2006ರಲ್ಲಿ ಭಾರತೀಯ ಜನತಾ ಪಕ್ಷ ಮತ್ತು ಜೆ.ಡಿ.(ಎಸ್) ಪಕ್ಷದ ಸಮಿಶ್ರ ಸರ್ಕಾರ ಅಧಿಕಾರದಲ್ಲಿದ್ದಾಗ ನಮ್ಮ ಹಳೆ ಧಾರವಾಡ ಜಿಲ್ಲೆಯ 8 ಜನರನ್ನು ನಿಗಮ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದರು. ಅವರು 8 ಜನರು ಕೆಂಪು ದೀಪದ ಕಾರಿನಲ್ಲಿ ಓಡಾಡುತ್ತಿದ್ದರು. ನಾವು, ಬಾಯಿ ಬಿಟ್ಟುಕೊಂಡು ನೋಡುತ್ತಿದ್ದೆವು. ನಮಗೆ ಯಾವ ಸ್ಥಾನವನ್ನು ಕೊಡಲಿಲ್ಲ. ‘ನೀವು ಪಕ್ಷ ಕಟ್ಟುವಂತಹ ಕೆಲಸ ಮಾಡಬೇಕು’ ಎಂದು ಪಕ್ಷದ ನಾಯಕರು ಹೇಳಿದರು.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ನಾನು ಮಾತನಾಡುವಂತಹ ಸಂದರ್ಭದಲ್ಲಿ ಯಾರ ಮುಲಾಜು ನೋಡುವುದಿಲ್ಲ. ಸಮಿಶ್ರ ಸರ್ಕಾರವಿದ್ದಾಗ, ನಮ್ಮ ಪಕ್ಷದ ನಾಯಕರು ನನಗೆ ಯಾವುದೇ ಸ್ಥಾನ ಕೊಡಲಿಲ್ಲ. ಈಗ ಪುನಃ ಭಾರತೀಯ ಜನತಾ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಿದೆ. ಎಲ್ಲಿಂದಲೋ ಹುಡುಕಿ, ಯಾವುದೋ ನಿಗಮ ಮಂಡಲಿಗಳಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧ್ಯಕ್ಷರನ್ನಾಗಿ ನೇಮಕ ಮಾಡುತ್ತಿದ್ದಾರೆ. ಸರ್ಕಾರದಿಂದ ಕೋಟಿ ರೂಪಾಯಿಗಳು ಖರ್ಚಾಗುತ್ತಿದೆ ಎನ್ನುವುದರ ಬಗ್ಗೆ ಇವರಿಗೆ ಗಮನವೇ ಇಲ್ಲ. ಅತೃಪ್ತರು ರಾಜೀನಾಮೆ ಕೊಟ್ಟು ಭಾರತೀಯ ಜನತಾ ಪಕ್ಷಕ್ಕೆ ಬಂದರು. ಈಗ ಈ ಸರ್ಕಾರದಲ್ಲಿ ಅವರುಗಳು ಮಂತ್ರಿಗಳಾಗಿದ್ದಾರೆ. ಅಲ್ಲಿ ಅವರುಗಳನ್ನು ಮಂತ್ರಿಗಳನ್ನಾಗಿ ಮಾಡಲಿಲ್ಲ ಅದಕ್ಕಾಗಿ ಅವರುಗಳು ಆ ಪಕ್ಷಕ್ಕೆ ರಾಜಿನಾಮೆ ಕೊಟ್ಟರು. ಡಾ॥ಸುಧಾಕರ್ ಮತ್ತು ನಾನು ಬಹಳ ಆಪ್ತ ಸ್ನೇಹಿತರಾಗಿದ್ದೇವೆ. 'ನಮಗೆ ಆ ಪಕ್ಷದಲ್ಲಿ ಅನ್ಯಾಯವಾಯಿತು' ಎನ್ನುವ ಕಾರಣಕ್ಕಾಗಿ ಅವರು ಬಿ.ಜೆ.ಪಿ.ಗೆ ಬಂದರು. ಪಕ್ಷಾಂತರ ಮಾಡುವುದು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ನಮ್ಮವರು ಇವರನ್ನು ಸರಿಯಾಗಿ ನಡೆಸಿಕೊಂಡಿರಲಿಲ್ಲ. ಸರಿಯಾಗಿ ನಡೆಸಿಕೊಂಡಿದ್ದರೆ ಏನಾಗುತ್ತಿತ್ತು ಎನ್ನುವುದು ನಮಗೆ ಗೊತ್ತಿಲ್ಲ.

(ಮುಂದುವರಿದಿದೆ)

(107) 20.2.2020 6.00 ಪಿಕೆ:ಬಿಎನ್ಎಸ್

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಮುಂದು):**

ಮಾನ್ಯ ಸಭಾಪತಿಗಳೆ, ರಾಜ್ಯಪಾಲರ ಭಾಷಣದ ಮೇಲೆ ನಾವು ಮಾತನಾಡುವುದು ಕೇವಲ ನೆಪ ಅಷ್ಟೆ. ನಮ್ಮಲ್ಲಿ ವ್ಯವಸ್ಥೆ ಹೇಗಿದೆ? ಯಾವ ಪಾರ್ಟಿ ಬಂದರೂ ಹಣೆಬರಹ ಅಷ್ಟೆ ಎಂದು ಜನ ಮಾತನಾಡಿಕೊಳ್ಳುತ್ತಾರೆ. ಇಲ್ಲಿ ಕುಳಿತವರು ಪ್ರಾಮಾಣಿಕವಾಗಿ ಹೇಳೋಣ. ದುಡ್ಡು ಹಂಚದೇ, ಸೆರೆ ಹಂಚದೇ ಚುನಾವಣೆಯನ್ನು ಎದುರಿಸಿದ್ದೇವೆ ಎಂದು ನಿಂತು ಯಾರಾದರೂ ಒಬ್ಬರು ಹೇಳುವವರು ಇದ್ದಾರೆಯೇ? ಈ ತರಹ ಎಲ್ಲಾ ಕಡೆ ನಡೆದಿದೆ. ವಿಧಾನ ಪರಿಷತ್ತಿಗೆ ನಡೆಯುವ ಚುನಾವಣೆಗಳಲ್ಲೂ ಇದು ನಡೆಯುತ್ತದೆ. ಚುನಾವಣೆ ನಡೆಯುವಾಗ ಮೂರೂ ಪಕ್ಷಗಳು ದುಡ್ಡು ಕೊಡುತ್ತಾರೆ; ಜನ ಆ ದುಡ್ಡನ್ನು ತೆಗೆದುಕೊಂಡು ಒಬ್ಬರಿಗೆ ಓಟು ಹಾಕುತ್ತಾರೆ, ಇಬ್ಬರಿಗೆ ಟೋಪಿ ಹಾಕುತ್ತಾರೆ. ಮಾನ್ಯ ಸಭಾಪತಿಯವರೆ, ಹಿಂದೆ ಒಂದಾನೊಂದು ಕಾಲದಲ್ಲಿ ಇಬ್ಬರು ಶಾಸಕರಿಗೆ ಸೇರಿ ಒಂದು ಕೊಠಡಿ ಕೊಡುತ್ತಿದ್ದರು. ನಾನು ಒಂದು ಸಲ, ನನ್ನ ತಂದೆಯ ಖಾಸಾ ದೋಸ್ತ್ ಬದ್ರಾಮಿಯ ಎಂ.ಎಲ್.ಎ. ಆಗಿದ್ದ ಮಾನ್ಯ ಹರಕೆರೆ ಅವರ ಬಳಿಗೆ ಪಾಸ್ ಕೇಳಲು ಹೋದೆ. ಅವರು ನನ್ನನ್ನು, 'ಯಾರಪ್ಪ ನೀನು' ಎಂದು ಕೇಳಿದಾಗ ನಾನು 'ನಾನು ಶಿವಲಿಂಗಪ್ಪನವರ ಮಗ' ಎಂದು ಹೇಳಿದೆ. 'ನನಗೆ ಗೊತ್ತಿದೆ, ಆದರೆ ನೀನು ಬಸವರಾಜ ಹೊರಟ್ಟಿ ಎನ್ನುವುದಕ್ಕೆ ಏನಾದರೂ ಆಧಾರ ಬೇಕು. ಏಕೆಂದರೆ ನೀನು ಒಳಗೆ ಹೋಗಿ ಏನಾದರೂ ಗದ್ದಲವಾದರೆ ಅದಕ್ಕೆ ನಾನು ಜವಾಬ್ದಾರನಾಗುತ್ತೇನೆ' ಎಂದು ಹೇಳಿ ನನಗೆ ಪಾಸ್ ಕೊಡಲಿಲ್ಲ. ನಂತರ ಮಾನ್ಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆರ್.ಎಸ್.ಪಾಟೀಲ್‌ರವರು ಸಿಕ್ಕಿ, 'ನಾನು ಪಾಸು ಕೊಡಿಸುತ್ತೇನೆ ಬಾ' ಎಂದು ಕರೆದುಕೊಂಡು ಹೋದರು. ಇವತ್ತಿನ ದಿನ ಏನಾಗಿದೆ? ನಾನು ನಿನ್ನೆ ಶಾಸಕರ ಭವನದ ಗೇಟ್‌ನೊಳಗೆ ಬರುತ್ತಿದ್ದಾಗ ಒಬ್ಬ ವ್ಯಕ್ತಿ ಬಂದು, 'ಪಾಸ್ ಕೊಡಿಸಿ' ಎಂದು ಕೇಳಿದಾಗ ನಾನು, 'ಆ ರೀತಿ ಪರಿಚಯ ಇಲ್ಲದವರಿಗೆ ಕೊಡಿಸಲು ಆಗುವುದಿಲ್ಲ' ಎಂದು ಹೇಳಿದೆ. ಅದಕ್ಕೆ ಆತ 'ಒಂದು ಪಾಸ್ ಕೊಡಿಸುವುದಕ್ಕೆ ಆಗದೇ ಇರುವವರು ಎಂಥ ಶಾಸಕರು' ಎಂದು ಹೇಳಿ ಹೋದ. ಇವತ್ತಿನ ಜನ ಹೀಗಿದ್ದಾರೆ.

ಎಲ್ಲಾ ಪಕ್ಷದವರು ನಾವೇ ಗೆಲ್ಲಬೇಕೆಂದು ಎಲ್ಲವನ್ನೂ ಮಾಡುತ್ತಾರೆ. ನಾವು ಆತ್ಮಸಾಕ್ಷಿಯಿಂದ ನಡೆದುಕೊಳ್ಳಬೇಕಾಗುತ್ತದೆ. ಸದನದಲ್ಲಿ ನಾವೆಲ್ಲರೂ ಗಲಾಟೆ ಮಾಡುತ್ತೇವೆ, ನಮ್ಮನ್ನು ನೀವು ಬೈಯುತ್ತೀರಿ; ನಿಮ್ಮನ್ನು ನಾವು ಬೈಯುತ್ತೇವೆ. ಜನ ಏನು ಹೇಳುತ್ತಾರೆ? ಶಾಲೆ ಕಲಿಯುವ ಮಕ್ಕಳು ಇಲ್ಲಿಗೆ ಬಂದು ಇಂಥದ್ದೆಲ್ಲವನ್ನು ನೋಡಿ ಏನೆಂದುಕೊಳ್ಳುತ್ತಾರೆ? ಮೇಲ್ಮನೆಗೆ 113 ವರ್ಷಗಳ ಇತಿಹಾಸವಿದೆ. ಮಾನ್ಯ ಸಭಾಪತಿಯವರೇ, ನಾವು ಒಂದು ಸಲ ಜಮ್ಮು-ಕಾಶ್ಮೀರಕ್ಕೆ ಹೋಗಿದ್ದೆವು. ಅಲ್ಲಿಯವರು, "Karnataka Legislative Council is one of the best Legislative Councils in the Country" ಎನ್ನುವ ಮಾತನ್ನು ಹೇಳಿದರು. ಇಂತಹ ಒಂದು ಸದನದಲ್ಲಿ ಚರ್ಚೆ ಮಾಡಿದರೆ, ಟೀಕೆ ಮಾಡಿದರೆ ಯಾರದೂ ತಕರಾರು ಇಲ್ಲ. ಮಾನ್ಯ ಸಭಾಪತಿಯವರೇ, ಈ ಸದನಕ್ಕೆ ಮಾನ್ಯ ಗಂಗೂಬಾಯಿ ಹಾನಗಲ್, ಮಾನ್ಯ ಮಲ್ಲಿಕಾರ್ಜುನ ಮನ್ಸೂರ್, ಮಾನ್ಯ ಖಾದ್ರಿ ಶಾಮಣ್ಣ, ಮಾನ್ಯ ಹೆಚ್.ನರಸಿಂಹಯ್ಯ ಮತ್ತು ಮಾನ್ಯ ಜಯಮ್ಮ ಇಂತಹ ಅನೇಕ ಮಹನೀಯರು ಸದಸ್ಯರಾಗಿ ಬಂದಿದ್ದರು. ಅಂದರೆ ಕಲೆ, ಸಾಹಿತ್ಯ, ಸಿನಿಮಾ ರಂಗಗಳನ್ನು ಪ್ರತಿನಿಧಿಸುವವರು ಬರುತ್ತಿದ್ದರು. ಇವತ್ತು ನಾವು ಅಂತಹ ವ್ಯಕ್ತಿಗಳನ್ನು ಕಾಣುವುದಿಲ್ಲ. **XXX**

ಮಾನ್ಯ ಸಭಾಪತಿಯವರೇ, ಪ್ರಸ್ತುತ ಯಾರನ್ನು ಮಂತ್ರಿಗಳನ್ನಾಗಿ ಮಾಡಿಲ್ಲವೋ, ಮಾನ್ಯ ಶಂಕರ್‌ರವರು ಸೇರಿದಂತೆ ಯಾರು ಅನರ್ಹ ಶಾಸಕರಿದ್ದಾರೋ ಅಂಥವರನ್ನು ಮೇಲ್ಮನೆಗೆ ತರಲು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**(XXX ಸಭಾಪತಿಯವರ ಆದೇಶಾನುಸಾರ ತೆಗೆದು ಹಾಕಲಾಗಿದೆ)**

**"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಈಗಾಗಲೇ 4 ಸೀಟುಗಳನ್ನು ಬಿಜೆಪಿಯವರು reserve ಮಾಡಿಬಿಟ್ಟಿದ್ದಾರೆ. ಕಲೆ, ಸಾಹಿತ್ಯ ಮತ್ತು ಇತರ ರಂಗಗಳಿಂದ ಪರಿಷತ್ತಿಗೆ ಕರೆತರುವ ವ್ಯವಸ್ಥೆಯೇ ಇಲ್ಲವಾಗಿದೆ.

**ಡಾ|| ಕೆ.ಸುಧಾಕರ್ (ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಇವತ್ತಿನ ದಿನ ವಿಧಾನ ಪರಿಷತ್ತು ಎನ್ನುವುದು **XXX** ಆಗಿದೆ ಅಥವಾ **XXX** ಎಂದು ಹೇಳಬೇಕಾಗುತ್ತದೆ. ವಿಧಾನ ಪರಿಷತ್ತನ್ನು 'House of wise and learned' ಎಂದು ಕರೆಯಲಾಗುತ್ತದೆ, ಆದರೆ ಇವತ್ತು ಅದ್ಯಾವುದೂ ಇಲ್ಲ. ಹಿಂದೆ ನಡೆಯುತ್ತಿದ್ದಂಥ ಚರ್ಚೆಗಳ ರೀತಿ ಇವತ್ತು ಚರ್ಚೆ ನಡೆಯುವುದನ್ನು ನಾವು ನೋಡುತ್ತಿಲ್ಲ. ಕೆಳಗಿನ ಮನೆಯಲ್ಲಂತೂ ಈ ಕುರಿತು ಏನನ್ನು ಹೇಳುವುದಕ್ಕೆ ಆಗುವುದಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಇಂಥದ್ದಕ್ಕೆ ಪರಿಹಾರ ಏನು? ಮಾನ್ಯ ಹೊರಟ್ಟಿಯವರು ಹೇಳಿದ್ದನ್ನು ನೀವು ರಿಪೀಟ್ ಮಾಡಿದಿರಿ, ಆದರೆ ಇದಕ್ಕೆ ಪರಿಹಾರ ಏನು? ನಿಮ್ಮ ಉದ್ದೇಶವೇನು? ನೀವು ಏನನ್ನು ಹೇಳಬೇಕು ಎಂದಿದ್ದೀರಿ? What is your suggestion? You come out with your suggestion.

**ಡಾ|| ಕೆ.ಸುಧಾಕರ್:–** ಎಲ್ಲಾ ರಾಜಕೀಯ ಪಕ್ಷಗಳು ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕು; ಆತ್ಮಾವಲೋಕನ ಮಾಡಿಕೊಳ್ಳಬೇಕು.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಎಂ.ಟಿ.ಬಿ. ನಾಗರಾಜ್‌ರವರೂ ಕೂಡ ಇಲ್ಲಿಗೆ ಸದಸ್ಯರಾಗಿ ಬರುತ್ತಾರೆ.

**ಡಾ|| ಕೆ.ಸುಧಾಕರ್:–** **XXX** ಹಾಗೆಲ್ಲ ಹೇಳುವುದಕ್ಕೆ ಹೋಗಬೇಡಿ. ಎಲ್ಲಾ ಪಕ್ಷಗಳಲ್ಲೂ ಇದು ನಡೆಯುತ್ತದೆ. ಆ ರೀತಿ ಆಗುತ್ತಿರುವುದರಿಂದಲೇ ಮಾನ್ಯ ಹೊರಟ್ಟಿಯವರು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ.

---

**(XXX ಸಭಾಪತಿಯವರ ಆದೇಶಾನುಸಾರ ತೆಗೆದು ಹಾಕಲಾಗಿದೆ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಹೆಚ್.ಎಂ.ರೇವಣ್ಣ:-** ಅದು ಸರಿ. ಮೌಲ್ಯಾಧಾರಿತ ರಾಜಕಾರಣಿಗಳು ಇಲ್ಲಿರಬೇಕು ಎಂದು ಮಾನ್ಯ ಬಸವರಾಜ ಹೊರಟ್ಟಿಯವರು ಹೇಳಿದರು. ಆದರೆ, ತಮಗೆ ತಾವೇ, ನಾವು ಆ ರೀತಿ ಇದ್ದೇವೆಯೇ ಎಂಬುದರ ಬಗ್ಗೆ ಚಿಂತನೆ ಮಾಡಬೇಕು. 'ನೈತಿಕತೆ'', 'ಮೌಲ್ಯಾಧಾರಿತ' ಎನ್ನುವ ಪದಗಳು ಕೇಳುವುದಕ್ಕೆ ಚೆನ್ನಾಗಿವೆ. ಮೌಲ್ಯಾಧಾರಿತ ರಾಜಕೀಯ ವ್ಯಕ್ತಿಗಳು ಬರಬೇಕು ಎಂದು ಹೇಳುವುದಕ್ಕೆ ಮುಂಚೆ ನಾವು ಹೇಗಿದ್ದೇವೆ ಎಂದು ತಮಗೆ ತಾವೇ ಕೇಳಿಕೊಳ್ಳುವುದು ಒಳ್ಳೆಯದು.

**ಡಾ॥ ಕೆ.ಸುಧಾಕರ್:-** ನಾವು ಸರಿಯಿದ್ದೇವೆ; ನೀವು ಸರಿಯಿಲ್ಲ ಎಂದು ನಾನು ಹೇಳುತ್ತಿಲ್ಲ. ವ್ಯವಸ್ಥೆ ಹಾಗಿದೆ ಎಂದು ಹೇಳಿದೆ.

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:-** ನಾನು ಮಾನ್ಯ ಹೆಚ್.ಎಂ.ರೇವಣ್ಣನವರನ್ನು ಬಹಳ ಬುದ್ಧಿವಂತರು ಎಂದು ತಿಳಿದುಕೊಂಡಿದ್ದೆ. ಆದರೆ ಮಾನ್ಯ ಸುಧಾಕರ್ ಅವರನ್ನು ನೀವು ಸರಿಯಾಗಿ ಅರ್ಥಮಾಡಿಕೊಂಡಿಲ್ಲ ಎಂದು ಗೊತ್ತಾಗುತ್ತಿದೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-**ಮಾನ್ಯ ಸಭಾಪತಿಯವರೇ, ನಮ್ಮಲ್ಲಿ ಒಂದು Judicial notion ಇದೆ. ಅದೇನೆಂದರೆ, 'one who seeks equity must do equity'. ನೀತಿ ಹೇಳುವವರು ನೀತಿವಂತರಾಗಿರಬೇಕು ಎನ್ನುವ ಒಂದು ಮಾತಿದೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ನಾವು ಮಾತನಾಡುವ ಮಾತುಗಳಲ್ಲಿ ದೃಢತೆ ಮತ್ತು ಅರ್ಥ ಇರಬೇಕು.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಹೊರಟ್ಟಿಯವರು ಏನು ಹೇಳಿದರೋ ಅದಕ್ಕೆ ಮಾನ್ಯ ಸುಧಾಕರ್‌ರವರು ಧ್ವನಿಗೂಡಿಸಿ ಹೇಳಿದ್ದಾರೆ ಅಷ್ಟೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸುಧಾಕರ್‌ರವರು ಮಾನ್ಯ ಹೊರಟ್ಟಿಯವರ ಮಾತುಗಳಿಗೆ ಪೂರಕವಾಗಿ ಮಾತನಾಡಿದ್ದನ್ನು ನಾವು ಒಪ್ಪುತ್ತೇವೆ. ಆದರೆ ಅವರು ಮಾತನಾಡುವ ಭರದಲ್ಲಿ ಮಾನ್ಯ ಐವನ್ ಡಿ'ಸೋಜಾರವರನ್ನು ಕುರಿತು **XXX** ಎನ್ನುವ ಮಾತನ್ನು ಹೇಳಿದರು. ಅದನ್ನು ದಯವಿಟ್ಟು ಕಡತದಿಂದ ತೆಗೆಯಬೇಕು. ಈ ಮನೆಯ ಸದಸ್ಯರಾಗಿರುವವರು ಸಾಕಷ್ಟು ಸಲ ಚುನಾವಣೆ ಎದುರಿಸಿ ಗೆದ್ದಿರುವವರೂ ಇದ್ದಾರೆ.

(ಗೊಂದಲ)

**ಡಾ:ತೇಜಸ್ವಿನಿ ಗೌಡ:–** ಹಾಗಾದರೆ **XXX** ಹೆಸರನ್ನೂ ಕಡತದಿಂದ ತೆಗೆಸಬೇಕು.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:–** **XXX** ಇರಬಹುದು ಅಥವಾ ಮತ್ತೊಬ್ಬರಿರಬಹುದು; ಇಲ್ಲಿಗೆ ಬರುತ್ತಾರೆ ಎಂದು ಹೇಳಿದರೆ ಅದರಲ್ಲಿ ತಪ್ಪೇನಿದೆ? ಆದರೆ, ವಿಧಾನಸಭೆ ಚುನಾವಣೆಗೆ ನಿಂತು ಗೆದ್ದು ಬರುವುದಕ್ಕಾಗಲಿಲ್ಲ, ಅದಕ್ಕೆ ಇಲ್ಲಿ ಬಂದಿದ್ದಾರೆ ಎಂದು ಹೇಳಬಾರದು. ಈ ಸದನದ ಸದಸ್ಯರೂ ಗೆದ್ದು ಕೆಳಮನೆಗೆ ಹೋಗಿದ್ದಾರೆ. ಎಂ.ಎಲ್.ಎ. ಆಗಿ 5–6 ಬಾರಿ ಆಯ್ಕೆಯಾಗಿ ಹೋದವರು ಈ ಮನೆಯ ಸದಸ್ಯರೂ ಕೂಡ ಆಗಿದ್ದಾರೆ. **ಹಾಗಾಗಿ ಸೂಕ್ತವಲ್ಲದ ಪದಗಳನ್ನು ಕಡತದಿಂದ ತೆಗೆಯಬೇಕು.**

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ನಾನು, ಮಾನ್ಯ ವೈ.ಎ.ನಾರಾಯಣಸ್ವಾಮಿ ಮುಂತಾದವರು ಚುನಾವಣೆ ಗೆದ್ದು ಕೆಳಮನೆಯ ಸದಸ್ಯರಾಗಿ ಈಗ ಈ ಮನೆಯ ಸದಸ್ಯರೂ ಕೂಡ ಆಗಿದ್ದೇವೆ.

(ಗೊಂದಲ)

---

**(XXX ಸಭಾಪತಿಯವರ ಆದೇಶಾನುಸಾರ ತೆಗೆದು ಹಾಕಲಾಗಿದೆ)**

"ತಿದ್ದುಪಡಿಯಾಗದ ಪ್ರತಿ" ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಆಯನೂರು ಮಂಜುನಾಥ್‌ರವರು ರಾಜ್ಯಸಭೆ, ಲೋಕಸಭೆ ಮತ್ತು ವಿಧಾನಸಭೆಯ ಸದಸ್ಯರಾಗಿದ್ದು ಈಗ ಈ ಸದನಕ್ಕೆ ಬಂದಿದ್ದಾರೆ.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನೇಕೆ ಈ ಮಾತನ್ನು ಹೇಳುತ್ತೇನೆ ಎಂದರೆ, ರಾಜಕೀಯ ನಿಂತ ನೀರಲ್ಲ. ಮುಂದಿನ ದಿನಗಳಲ್ಲಿ ಮಾನ್ಯ ಸುಧಾಕರ್‌ರವರೇ ಈ ಮನೆಯ ಸದಸ್ಯರಾಗಲು ಹೋರಾಟ ಮಾಡುವಂತಹ ಸಂದರ್ಭ ಬರಬಹುದು.

(ಗೊಂದಲ)

**ಡಾ॥ ಕೆ.ಸುಧಾಕರ್:-** ಈ ಮನೆಯ ಬಗ್ಗೆ ಬಹಳ ಗೌರವ ಇಟ್ಟುಕೊಂಡಿದ್ದೇನೆ. **XXX** ಎಂದು ನಾನು ಹೇಳಿಲ್ಲ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸುಧಾಕರ್‌ರವರು ಏನು ಹೇಳಿದರು ಎಂದರೆ . . .

(ಗೊಂದಲ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾತನಾಡುವ ಭರದಲ್ಲಿ ಒಂದೊಂದು ಸಲ ತಪ್ಪಾಗುತ್ತದೆ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, **XXX** . . .

(ಗೊಂದಲ)

(ಮುಂದು)

---

**(XXX ಸಭಾಪತಿಯವರ ಆದೇಶಾನುಸಾರ ತೆಗೆದು ಹಾಕಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(108)20-2-2020 6.10 ಡಿಎಸ್-ಬಿಎನ್‌ಎಸ್

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ದಯಮಾಡಿ ಆ ಪದವನ್ನು ಕಡತದಿಂದ ತೆಗೆಸಿ.

**ಸಭಾಪತಿಯವರು:-** ಅವರು ಇನ್ನೊಂದು ಬಾರಿ ಎಂಎಲ್‌ಎ ಆಗಿ ಆಯ್ಕೆಯಾಗಿ ಬರುತ್ತಾರೆ. ಕಡತದಿಂದ ಏಕೆ ತೆಗೆಸಬೇಕು?

(ಗೊಂದಲ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಇವೆಲ್ಲಾ ನಾವು ಮಾತನಾಡುವಂತಹ ವಿಷಯವಾಗಿದೆ. ಈಗೇನು ನಾವು ಮಾತನಾಡುತ್ತಿದ್ದೇವೆ, ಮತ್ತೆ ನಾವು ಇಲ್ಲಿ ಅದಕ್ಕೆ contradictory ಆಗಿ ಮಾಡುತ್ತೇವೆ. ತಮ್ಮ ಅನುಮತಿಯನ್ನು ಪಡೆದು ನಾವೆಲ್ಲರೂ ಭಾಷಣ ಮಾಡುತ್ತಿರುತ್ತೇವೆ. ತಾವು ಹೇಳಿದ್ದರೂ ಕೂಡ ಅನೇಕ ಸದಸ್ಯರು ಮಧ್ಯದಲ್ಲಿ ಎದ್ದು ನಿಂತು ಮಾತನಾಡುತ್ತಾರೆ. ತಾವು ನಂತರ ಇದರ ಬಗ್ಗೆ ರೂಲಿಂಗ್ ಕೊಡಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ರೂಲಿಂಗ್ ಕೊಡಿ.

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೆ, ನಾನು ತಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೆ. ತಾವು ಕಡತದಿಂದ ತೆಗೆಯಿರಿ ಎಂದು ಹೇಳಿದರೆ ನಾನು ತೆಗೆಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಕಡತದಿಂದ ತೆಗೆದು ಹಾಕಿ.

**ಸಭಾಪತಿಯವರು:-** ಅದನ್ನು ಕಡತದಿಂದ ತೆಗೆದು ಹಾಕಲಾಗಿದೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸುಧಾಕರ್‌ರವರು ಮಾತಿನ ಭರಾಟೆಯಲ್ಲಿ ಮಾತನಾಡಿದ್ದಾರೆ. But, at the same time, you have to retain that, ಇಲ್ಲಿ ಎಂ.ಎಲ್.ಸಿ.ಗಳಾಗಿ ಆಯ್ಕೆಯಾಗಿರುವಂಥವರು ಸಮಾಜದ ಮುಖ್ಯವಾಹಿನಿಯಲ್ಲಿ ಕೆಲಸ ಮಾಡತಕ್ಕಂಥ ಡಾಕ್ಟರೇಟ್, ಪಿಹೆಚ್.ಡಿ. ಪದವಿ ಮಾಡಿಕೊಂಡು ಅನೇಕ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡುವಂಥವರು, ಈಗಲೂ ಸಹ ಒಳ್ಳೊಳ್ಳೆ ಕೆಲಸ ಮಾಡತಕ್ಕಂಥ ಪ್ರೊಫೆಸರ್‌ಗಳು ಮತ ಹಾಕಿ ಆಯ್ಕೆಯಾಗಿರುವಂಥವರು. ಹಾಗಾಗಿ ಆ ಮಾತು ಆಡುವಾಗ ಎಲ್ಲೋ ಒಂದು ಕಡೆ ನಾವು ಆ ಮತಕ್ಕೆ ಗೌರವ ಕೊಟ್ಟ ಹಾಗೆ ಆಗುವುದಿಲ್ಲ. ಎಂ.ಎಲ್.ಎ.ಗಳೆಲ್ಲಾ ಸೇರಿ ಮತ ಹಾಕಿ ಗೆಲ್ಲಿಸಿರುವಂಥವರು ಇಲ್ಲಿ ಇದ್ದಾರೆ. ಇದು ಕೂಡ ಸಾರ್ವತ್ರಿಕ ಚುನಾವಣೆ ಪ್ರಜಾಪ್ರಭುತ್ವ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯವಸ್ಥೆಯಲ್ಲಿ ಆಯ್ಕೆಯಾಗಿ ಬಂದಿರುವಂಥವರು. ಹಾಗಾಗಿ ಮಾತನಾಡುವಾಗ ನಿಮ್ಮ ಕೈಯಲ್ಲಿ ಆಗಲಿಲ್ಲ, ಆದ್ದರಿಂದ ಇಲ್ಲಿಗೆ ಬಂದಿದ್ದೀರಿ ಎಂದು ಹೇಳುವಂತಹ ವಿಚಾರ ಸರಿಯಿಲ್ಲ. ಈಗಾಗಲೇ ಆ ಪದವನ್ನು ಕಡತದಿಂದ ತೆಗೆದು ಹಾಕುವುದಕ್ಕೆ ತಾವು ಒಪ್ಪಿದ್ದೀರಿ. ಅವರು ಮಾತಿನ ಭರಾಟೆಯಲ್ಲಿ ಮಾತನಾಡಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾತನಾಡುವಂತಹ ಸಂದರ್ಭದಲ್ಲಿ ಆ ರೀತಿ ಮಾತನಾಡುತ್ತೇವೆ. ಆದ್ದರಿಂದ ಆ ಪದವನ್ನು ಕಡತದಿಂದ ತೆಗೆದು ಹಾಕಿ. ಸೋಮಣ್ಣರವರೇ, ನೀವು ವಿಧಾನಸಭೆಗೂ ಬಂದಿದ್ದೀರಿ, ವಿಧಾನ ಪರಿಷತ್ತಿಗೂ ಬಂದಿದ್ದೀರಿ. ಮಾನ್ಯ ಬಸವರಾಜ ಬೊಮ್ಮಾಯಿಯವರೇ, ನಿಮಗೆ ಸ್ವಂತ ಶಕ್ತಿ ಬಹಳ ಇರುವುದರಿಂದ ಎಲ್ಲಾ ಕಡೆ ಬಂದಿದ್ದೀರಿ.

**ಶ್ರೀ ವಿ.ಸೋಮಣ್ಣ(ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಮನೆಗೆ ಒಂದು ದೊಡ್ಡ ಇತಿಹಾಸ ಇದೆ. ನಾನು ಎರಡು ಬಾರಿ ಈ ಮನೆಯ ಸದಸ್ಯನಾಗಿದ್ದೆ. ಅನೇಕ ಆಗು ಹೋಗುಗಳನ್ನು ನೋಡಿದ್ದೇನೆ. ಯಾರು ಏನೇ ಹೇಳಬಹುದು, ಇದರ ಗಾಂಭೀರ್ಯತೆಯಿಂದ ಕಲಿಯತಕ್ಕಂಥದ್ದು ಬಹಳ ಇದೆ. ಡಾ॥ಸುಧಾಕರ್‌ರವರು ಮಾತನಾಡುತ್ತಿರುವುದನ್ನು ನೋಡಿ ಇಲ್ಲಿಗೆ ಬಂದಿದ್ದೇನೆ. ಅವರು ಕೂಡ ಒಬ್ಬ ಯುವಕರಿದ್ದಾರೆ. ಶ್ರೀ ಎಂ.ಆರ್.ತಂಗಾ ಎನ್ನುವವರು ಇಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು. ಆಗ ನಾನು ಮಂತ್ರಿಯಾಗಿದ್ದೆ. ಸನ್ಮಾನ್ಯ ದಿವಂಗತ ಜೆ.ಹೆಚ್.ಪಟೇಲ್‌ರವರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಈ ಸದನದಲ್ಲಿ ಕುಳಿತುಕೊಂಡು ನಾನು ಒಂದು ಮಾತನ್ನು ಹೇಳಿದ್ದೆ. ಮಾನ್ಯ ಬಸವರಾಜ ಹೊರಟ್ಟಿಯವರು ಆಗ ಎಂ.ಎಲ್.ಸಿ.ಯಾಗಿದ್ದರು. ಅವತ್ತು ನಾನು ಏನು ಹೇಳಿದೆ ಎಂದರೆ, ನಾವು ಮುಂದಿನ ಬಾಗಿಲಿನಿಂದ ಬರುವವರು, ನಾವು ಹಿಂದಿನ ಬಾಗಿಲಿನಿಂದ ಬರುವುದಿಲ್ಲ ಎನ್ನುವ ಮಾತನ್ನು ನಾನು ಉಲ್ಲೇಖ ಮಾಡಿದ್ದೆ. ಅದಾದ ಮೇಲೆ ಅವರಿಗೆ ಆರೋಗ್ಯ ಕೆಟ್ಟಾಗ ಅವರು ಬೆಂಗಳೂರಿಗೆ ಬಂದಿದ್ದರು. ನಾನು ಅವರ ಮನೆಗೆ ಹೋಗಿದ್ದೆ. ಅವರು ಒಂದು ಮಾತನ್ನು ಹೇಳಿದರು, ಸೋಮಣ್ಣರವರೇ ಏನಾಗುತ್ತೀರೋ ಬಿಡುತ್ತೀರೋ ಗೊತ್ತಿಲ್ಲ. ಅವತ್ತು ನೀವು ಮಾತನಾಡಿದಮೇಲೆ ನೀವು ನನಗೆ ಕ್ಷಮೆ ಕೂಡ ಕೇಳಿದ್ದೀರಿ, ಒಂದಲ್ಲ ಒಂದು ದಿನ ಆ ಸದನಕ್ಕೆ ನೀವು ಅನಿವಾರ್ಯ ಎನ್ನುವುದಕ್ಕಿಂತ ಹೆಚ್ಚಾಗಿ ತಾವು ಹೋಗತಕ್ಕಂಥ ಸಂದರ್ಭ ಬರುತ್ತದೆ, ಅವತ್ತು ನೀವು ನನ್ನನ್ನು ನೆನಪಿಸಿಕೊಳ್ಳುತ್ತೀರಾ ಎನ್ನುವ ಮಾತನ್ನು ಹೇಳಿದ್ದರು. ಶ್ರೀ ಜೆ.ಹೆಚ್.ಪಟೇಲ್‌ರವರು ಮುಖ್ಯಮಂತ್ರಿಯಾಗಿದ್ದಾಗ ಆ ಮನೆ ಸದಸ್ಯನಾಗಿ ಬೆಂಗಳೂರು ನಗರ ಅಭಿವೃದ್ಧಿ ಮಂತ್ರಿಯಾಗಿದ್ದೆ. ಅವರು ಹೇಳಿದ್ದ ಮಾತನ್ನು ಅವಲೋಕನ ಮಾಡಿದಾಗ, ತಮ್ಮ ನಡವಳಿಕೆಗಳನ್ನು, ಇಲ್ಲಿರತಕ್ಕಂಥ ಬಹುತೇಕ ಹಿರಿಯ ಸದಸ್ಯರ ನಡವಳಿಕೆಯನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಲ್ಲವನಾಗಿದ್ದೇನೆ. ಆದರೆ, ಒಂದು ಸತ್ಯವೇನೆಂದರೆ, ಈ ಮನೆ ಈ ಮನೆಯೇ. ಆ ಮನೆ ಆ ಮನೆಯೇ. ಆದರೆ ಇಲ್ಲಿ ನಡೆಯತಕ್ಕಂಥ ಬಹುತೇಕ ವಿಚಾರಗಳು, ಇದರ ಗಾಂಭೀರ್ಯತೆಯನ್ನು ಸಾಮಾನ್ಯ ಜನರು ಕೂಡ ಸೂಕ್ಷ್ಮವಾಗಿ ಅವಲೋಕನ ಮಾಡುತ್ತಾರೆ. ಅಲ್ಲಿ ನಡೆಯತಕ್ಕಂಥ ವಿಚಾರಗಳು, ರಾಜ್ಯದ ಆಗುಹೋಗುಗಳ ಬಗ್ಗೆ, ದೇಶದ ಬಗ್ಗೆ ಎಲ್ಲವೂ ನಡೆಯುತ್ತದೆ. ಆದರೆ, ಇಲ್ಲಿ ತನ್ನದೇ ಆದಂತಹ ಚೌಕಟ್ಟಿನಲ್ಲಿ ದೇಶದ ಇತಿಹಾಸವನ್ನು ಬದಲಾವಣೆ ಮಾಡುವಂಥದ್ದಕ್ಕೆ, ಕಾನೂನು ಚೌಕಟ್ಟಿನಲ್ಲಿ ಏನೇನು ಮಾಡಬಹುದು ಎಂಬುದನ್ನು ತುಂಬಾ ವಿಮರ್ಶಾತ್ಮಕವಾಗಿ ಚರ್ಚೆಯಾಗುವುದನ್ನು ನೋಡಿದ್ದೇವೆ. ಸನ್ಮಾನ್ಯ ಬಸವರಾಜ ಹೊರಟ್ಟಿಯವರು ಗಂಟೆಗಟ್ಟಲೇ ಅನೇಕ ವಿಚಾರಗಳನ್ನು ಮಾತನಾಡುತ್ತಾರೆ. ಅನೇಕ ಹಿರಿಯ ಸದಸ್ಯರು ಇಲ್ಲಿದ್ದಾರೆ. ನಾನು ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ, ಯಾರು ಏನು ಹೇಳಿದರು ಎನ್ನುವುದಕ್ಕಿಂತ ಹೆಚ್ಚಾಗಿ ರಾಜ್ಯದ ಜನ, ಮೊನ್ನೆ ಆಂಧ್ರಪ್ರದೇಶದಲ್ಲಿ ಮೇಲ್ಮನೆಯನ್ನು ರದ್ದುಪಡಿಸಿದ ಮೇಲೆ ನಾನು ವಿಜಯವಾಡಕ್ಕೆ ಹೋಗಿದ್ದೆ. ಅಲ್ಲಿ ನನ್ನ ಸ್ನೇಹಿತರು ಸಿಕ್ಕಿ ಮಾತನಾಡುತ್ತಿದ್ದರು. ನೋಡಿ, ಅವರು ಒಂದೊಂದೇ ವಿಕೆಟ್ ಡೌನ್ ಮಾಡುತ್ತಿದ್ದಾರೆ, ಅವರ ವಿಕೆಟ್‌ನ್ನು ಒಂದು ದಿನ ಕಳೆದುಕೊಳ್ಳುತ್ತಾರೆ ಎಂದು ಹೇಳಿದರು. ಈ ಮನೆ ಒಂದು ಸತ್ಸಂಪ್ರದಾಯದ ಮನೆ. ಎಂಥೆಂಥ ಪುಣ್ಯಾತ್ಮರು ಈ ಮನೆಯಲ್ಲಿ ಕೆಲಸ ಮಾಡಿದ್ದಾರೆ. ರಾಜಕಾರಣ ನಿಂತ ನೀರಲ್ಲ, ಹರಿಯುವ ನೀರು. ಆ ನೀರು ಹರಿಯುವಂತಹ ಸಂದರ್ಭದಲ್ಲಿ ಒಂದೊಂದು ಸಲ ಸೋತಾಗ ಬೇರೆ ಬೇರೆ alternative arrangement ಗೆ ಇವೆಲ್ಲಾ ಆಗುತ್ತದೆ. ಆದ್ದರಿಂದ ಮಾನ್ಯ ಸುಧಾಕರ್‌ರವರು ಕೂಡ.....

**ಶ್ರೀ ಹೆಚ್.ಎಂ.ರೇವಣ್ಣ:–** ಈ ವಿಚಾರ ಹುಟ್ಟಿಕೊಂಡಿರುವುದೇ ಸುಧಾಕರ್‌ರವರಿಂದ. ಅವರಿಗೆ ಪಾಠ ಮಾಡಿದ್ದರೆ ಸಾಕಾಗಿತ್ತು, ನಮಗೆಲ್ಲಾ ಪಾಠ ಮಾಡುತ್ತಿದ್ದೀರಿ?

**ಡಾ|| ಕೆ.ಸುಧಾಕರ್:– XXX** ಎಂದು ನಿಮ್ಮ ಕಡೆಯವರು ಹೇಳಿದ್ದು, ಪ್ರಾರಂಭ ಮಾಡಿದವರು ನೀವು. ಅದನ್ನು ನಾನು ಹೇಳಿದ್ದಲ್ಲ.

**ಶ್ರೀ ವಿ.ಸೋಮಣ್ಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು ಒಬ್ಬ ಉದಾಹರಣೆ. ನಾನು ಅಲ್ಲಿ ಸೋತಾಗ ಇಲ್ಲಿಗೆ ಬಂದೆ. ಇಲ್ಲಿಗೆ ನಾನು ಬಂದಾಗ ಆಗಿನ ರಾಜ್ಯಪಾಲರು

**(XXX ಸಭಾಪತಿಯವರ ಆದೇಶಾನುಸಾರ ತೆಗೆದು ಹಾಕಲಾಗಿದೆ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದ್ದೇಶ ಪೂರ್ವಕವಾಗಿ ನನ್ನನ್ನು ಕಿತ್ತು ಹಾಕಿದರು. ಆದರೂ ಕೂಡ ನಾನು ಬೇಜಾರು ಮಾಡಿಕೊಳ್ಳಲಿಲ್ಲ. ನನಗೆ ಕೆಲವರು, ನೀನು ಅವರನ್ನು ಭೇಟಿ ಮಾಡಿದರೆ ಆಗುತ್ತದೆ ಎಂದು ಹೇಳಿದರು, ನನಗೆ ಅದರ ಅವಶ್ಯಕತೆ ಇಲ್ಲ ಎಂದು ಹೇಳಿದೆ. ಅದು ವಿಧಿ ನಿಯಮ ಯಾರು ಯಾರ್ಯಾರಿಗೆ ಯಾವ ರೀತಿ ಪ್ರಕೃತಿ ಅವಕಾಶ ಕೊಡುತ್ತದೆಯೋ ಗೊತ್ತಿಲ್ಲ. ಆದ್ದರಿಂದ ನಾವು ಇಲ್ಲಿದ್ದಾಗ ನಮಗೆ ಏನು ಚರ್ಚೆಗೆ ಇದೆ ಅದನ್ನು ಚರ್ಚೆ ಮಾಡೋಣ. ಅಲ್ಲಿಗೆ ಹೋದಾಗ ನಮ್ಮ ನಮ್ಮ ಕ್ಷೇತ್ರದಲ್ಲಿ ಅವಲಂಬಿತರಾಗಿರುತ್ತೇವೆ. ಇಲ್ಲಿ ರಾಜ್ಯ ಒಂದು ಕ್ಷೇತ್ರ. ಅಲ್ಲಿ ಕೇವಲ ಒಂದೊಂದು ಕ್ಷೇತ್ರ ಸೀಮಿತವಾಗಿರುತ್ತದೆ. ಅಲ್ಲಿ ನಾವೆಲ್ಲಾ ಏನು ಮಾಡಿದರೂ ಕೂಡ ಕೊನೆಗೆ ನಮ್ಮ ಕ್ಷೇತ್ರ ಯಾವುದನ್ನು ಪ್ರತಿನಿಧಿಸುತ್ತೇವೆಯೋ ಅಲ್ಲಿಗೆ ಬರುತ್ತೇವೆ. ಆದರೆ ಇಲ್ಲಿ ಅದು ಬರುವುದಿಲ್ಲ. ಇಡೀ ರಾಜ್ಯದ 32 ಜಿಲ್ಲೆಗಳು ಬರುತ್ತವೆ. ಮಾನ್ಯ ಜೆ.ಹೆಚ್.ಪಟೇಲ್‌ರವರನ್ನು ನಾವು ಯಾವಾಗಲೂ ನೆನಪಿಸಿಕೊಳ್ಳಬೇಕಾಗುತ್ತದೆ. ಅಂತಹ ಪಟೇಲ್‌ರು ಮತ್ತೊಬ್ಬರು ಬರುವುದಿಲ್ಲ. ಅವರು ಯಾವುದೇ ವಿಚಾರಗಳು ಬಂದಾಗ ಯಾವ ರೀತಿ ಅದರ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಂಡು ಹೇಳುತ್ತಿದ್ದರು. ತಾವು ಆ ಪೀಠದಲ್ಲಿ ಕುಳಿತ ಮೇಲೆ ನಾನು ನಿನ್ನೆಯಿಂದ ತಮ್ಮ ಲವಲವಿಕೆಯನ್ನು observe ಮಾಡುತ್ತಿದ್ದೇನೆ. ಇನ್ನೂ ಸುಧಾಕರ್‌ರವರು ಬೆಳೆಯಬೇಕಾಗಿರತಕ್ಕಂಥವರು. ಅವರಿಗೆ ಇನ್ನು ಸಾಕಷ್ಟು ಅವಕಾಶಗಳಿವೆ. ಭಗವಂತನ ದಯೆ ಏನಿದೆಯೋ ಗೊತ್ತಿಲ್ಲ. ಅದೃಷ್ಟ ಎನ್ನವುದು ಯಾರಪ್ಪನದು ಅಲ್ಲ. ಆದ್ದರಿಂದ ನಾನು ಎಂ.ಎಲ್.ಸಿ. ಆಗುತ್ತೇನೆಂದು ಕನಸಿನಲ್ಲೂ ಕಂಡಿರಲಿಲ್ಲ. ಎಂ.ಎಲ್.ಎ. ಚುನಾವಣೆಯಲ್ಲಿ ನಾನು ಸೋಲುತ್ತೇನೆ ಎಂಬುದು ನನ್ನ ಜೀವನದಲ್ಲೇ ಗೊತ್ತಿರಲಿಲ್ಲ. ಕೆಲಸ ಮಾಡಿದವನು ಕೂಡ ಸೋಲುತ್ತಾನೆ ಎನ್ನುವುದಕ್ಕೆ ನಾನು ಒಬ್ಬ ಉದಾಹರಣೆ. ತಾವು ವ್ಯವಸ್ಥಿತವಾಗಿ ಸದನವನ್ನು ನಡೆಸುತ್ತಿದ್ದೀರಿ. ನಾನು ಇದನ್ನು ನೋಡಿ ಅಲ್ಲಿಂದ ಬಂದೆ. ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಬಹಳ ವರ್ಷಗಳಿಂದ ಈ ಮನೆಯಲ್ಲಿ ಸದಸ್ಯನಾಗಿರುವ ಕಾರಣಕ್ಕಾಗಿ ಹೇಳುತ್ತಿದ್ದೇನೆ. ಹಿಂದೆ ಮಾನ್ಯ ಕಾಗೋಡು ತಿಮ್ಮಪ್ಪನವರು ಆ ಮನೆಯ ಸದಸ್ಯರಾಗಿದ್ದರು. ಶ್ರೀ ವಾಟಾಳ್ ನಾಗರಾಜ್‌ರವರು ವಿಧಾನ ಪರಿಷತ್ತನ್ನು ರದ್ದು ಮಾಡಬೇಕೆಂದು ಹೇಳಿದ್ದರು. ಶ್ರೀ ಕಾಗೋಡು ತಿಮ್ಮಪ್ಪನವರು 1981 ರಲ್ಲಿ ಈ ಸದನಕ್ಕೆ ಬಂದು ಸಭಾನಾಯಕರಾದರು. ಶ್ರೀ ವಾಟಾಳ್ ನಾಗರಾಜ್‌ರವರು ವಿಧಾನ ಪರಿಷತ್ತಿಗೆ ನಾಲ್ಕು ಸಲ ನಾಮನಿರ್ದೇಶಿತರಾಗಿ ಆಯ್ಕೆಯಾಗಿದ್ದರು. ಯಾರ್ಯಾರು ಹೇಳಿದ್ದಾರೆ ಅವರೆಲ್ಲಾ ಇಲ್ಲಿಗೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬರುತ್ತಿದ್ದಾರೆ. ಅದಕ್ಕೆ ನಾನೇನು ಹೇಳುವುದಿಲ್ಲ. ನಾವು ಕೆಲವು ಕ್ಷೇತ್ರದಿಂದ ಬಂದಿರುತ್ತೇವೆ. ನಾವು ಸಲಹೆ ಸೂಚನೆಗಳನ್ನು ಕೊಡುತ್ತೇವೆ. ಈ ಮನೆಗೆ ವಿದ್ವಾಂಸರು, ಇನ್ನಿತರರು ಬಂದಿದ್ದಾರೆ. ಆದರೆ ಈ ಮನೆಯ ಸತ್ಸಂಪ್ರದಾಯವನ್ನು ನಾವು ನಡೆಸಬೇಕಾದರೆ ವಿಧಾನಸಭಾ ಕ್ಷೇತ್ರದಲ್ಲಿ ಕೆಲಸ ಆಗಿರುವುದಿಲ್ಲ, ಅಲ್ಲಿ ಗಲಾಟೆ ನಡೆಯುತ್ತದೆ, ಇಲ್ಲಿಯೂ ಗಲಾಟೆ ನಡೆಯುತ್ತದೆ. ಆ ರೀತಿ ಆಗಬಾರದು ಎನ್ನುವುದು ನನ್ನ ಕಳಕಳಿಯ ಮನವಿ.

ಆಗಿನ ಮಂತ್ರಿಗಳು ಹೇಗಿದ್ದರು, ರಾಜಕೀಯ ಸಂಬಂಧಗಳು ಹೇಗಿದ್ದವು ಎಂದರೆ, ಶಾಸಕರ ದಿನಾಚರಣೆಯನ್ನು ಮಾಡುತ್ತಿದ್ದರು. ನಾನು ಒಂದೆರಡು ಉದಾಹರಣೆಗಳನ್ನು ಹೇಳುತ್ತೇನೆ. ಸನ್ಮಾನ್ಯ ಗುಂಡುರಾವ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಶ್ರೀಜಿ.ಮಾದೇಗೌಡರು ಅರಣ್ಯ ಮಂತ್ರಿಗಳಾಗಿದ್ದರು. ಶ್ರೀ ಗುಂಡುರಾವ್‌ರವರು ಸಭೆ ಮುಗಿಸಿಕೊಂಡು ಬಂದರು. ಅವರು ಎಲ್ಲಾ ಶಾಸಕರನ್ನು ಮೈಸೂರು ಮತ್ತು ಬಂಡೀಪುರಕ್ಕೆ ಕರೆದುಕೊಂಡು ಹೊರಟಿದ್ದರು. ಶ್ರೀ ಜಿ.ಮಾದೇಗೌಡರು ಎಂಥದ್ದೋ ಹರಕು ಕೋಟ್‌ನ್ನು ಹಾಕಿಕೊಂಡಿದ್ದನ್ನು ಗಮನಿಸಿದ ಸನ್ಮಾನ್ಯ ಮುಖ್ಯಮಂತ್ರಿಗಳು 'ಏನ್ರೀ ಗೌಡರೇ, ನೀವು ಎಂಥ ಮಂತ್ರಿ, ಏನು ಕೋಟ್ ಇದು' ಎಂದು ಕೇಳಿದ್ದಷ್ಟೇ ಅಲ್ಲ, ಹತ್ತು ನಿಮಿಷದಲ್ಲಿ ಅವರಿಗೆ ಎರಡು ಸೂಟ್‌ಗಳನ್ನು ತರಿಸಿಕೊಟ್ಟು, 'ಇದನ್ನು ಹಾಕಿಕೊಂಡು ಬನ್ನಿ' ಎಂದು ಹೇಳಿದರು. ಆಗ ಅವರು ರೂಮ್‌ನಲ್ಲಿ ಹಾಕಿಕೊಂಡು ಬಂದರು. ಆಗ ಆ ರೀತಿ ಇತ್ತು.

(ಮುಂದು)

(109) 20.2.2020 6.20 ಪಿಕೆಪಿ(ಪಿಕೆ) : ಕೆಎಸ್

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಮುಂದುವರೆದಿದೆ)**

ಮಾನ್ಯ ಸಭಾಪತಿಯವರೇ, ಇನ್ನೊಂದು ವಿಷಯ ಸದನದ ಗಮನಕ್ಕೆ ತರಬಯಸುತ್ತೇನೆ. ಒಂದು ಸಲ ಮಾನ್ಯ ಜೆ.ಹೆಚ್.ಪಟೇಲರಿಗೆ ಹುಷಾರು ಇಲ್ಲದೇ ಮನೆಯಲ್ಲಿ ಕುಳಿತುಕೊಂಡಿದ್ದರು. ಆಗ ನಾನು ಮತ್ತು ಮಾನ್ಯ ಆಲ್ಕೋಡ್ ಹನುಮಂತಪ್ಪನವರು ಅವರನ್ನು ನೋಡಲು ಹೋಗಿದ್ದೆವು. ಅವರು ಸೈಟ್‌ಗಳನ್ನು ಅಲಾಟ್ ಮಾಡುತ್ತಿದ್ದರು. 'ಆಲ್ಕೋಡ್ ನಿನಗೆ ಸೈಟ್ ಇದೆಯೇ' ಎಂದು ಕೇಳಿದರು. ಆಲ್ಕೋಡ್ ಹನುಮಂತಪ್ಪನವರು 'ನಮಗೆಲ್ಲಿ ಸೈಟ್ ತೆಗೆದುಕೊಳ್ಳುವುದಕ್ಕಾಗುತ್ತದೆ' ಎಂದು ಹೇಳಿದರು. 'ನೀನು ದಲಿತ, ತಗೋ ಒಂದು ಸೈಟ್ ಎಂದು ಅಲಾಟ್ ಮಾಡಿದರು. ಅಂದರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿನ ಮಂತ್ರಿಗಳು ಶಾಸಕರನ್ನು ತಮ್ಮ ಸಂಬಂಧಿಕರು ಎನ್ನುವ ಭಾವನೆಯಿಂದ ನೋಡುತ್ತಿದ್ದರು. 1984ರಲ್ಲಿ ಮೊಬೈಲ್‌ಗಳು ಇರಲಿಲ್ಲ. ನಾನು ಮತ್ತು ಶ್ರೀ ಗಂಗಾಧರಗೌಡರು ಮಾನ್ಯ ರಾಮಕೃಷ್ಣ ಹೆಗಡೆಯವರನ್ನು ಭೇಟಿ ಮಾಡಲು ಹೋದಾಗ ಅವರು ಎಲ್‌ಹೆಚ್‌ಗೆ ದೂರವಾಣಿ ಮಾಡುತ್ತಿದ್ದರು. ನಾವು ಆಗ ಒಂದು ಟೀ-ಶರ್ಟ್ ಮತ್ತು ಕರಿ ಪ್ಯಾಂಟ್ ಹಾಕಿಕೊಂಡಿದ್ದೆವು. ನಾನು ಅವರಿಗೆ 'ನಮಸ್ಕಾರ ಸಾರ್' ಎಂದೆ. ಅವರು, 'ನೀವು ಯಾರು ಪರಿಚಯ ಆಗಲಿಲ್ಲ, ನಿಮ್ಮ ಹೆಸರು ಹೇಳಿ' ಎಂದು ಹೇಳಿದರು. ನಾವು 'ಏಕೆ ಸಾರ್ ಹೀಗೆ ಮಾತನಾಡುತ್ತಿದ್ದೀರಿ' ಎಂದು ಹೇಳಿದಾಗ ಅವರು, 'ನಿಮಗೆ ನಾಚಿಕೆ ಆಗುವುದಿಲ್ಲವೇ? ಇದು ವಿಧಾನಸಭೆ, ಇಲ್ಲಿಗೆ ಇಂತಹ ಕರಿ ಪ್ಯಾಂಟ್ ಮತ್ತು ಟೀ-ಶರ್ಟ್ ಹಾಕಿಕೊಂಡು ಬರಲು ನಾಚಿಕೆಯಾಗುವುದಿಲ್ಲವೇ?' ಎಂದರು. ಅಲ್ಲದೇ, ತಮ್ಮ ಪಿಎಸ್ ಆಗಿದ್ದ ರಾಮಪ್ಪ ಎನ್ನುವವರ ಜೊತೆಗೆ ಅವಿನ್ಯೂ ರೋಡ್‌ಗೆ ಕಳುಹಿಸಿ 6 ಪೈಜಾಮ ಮತ್ತು 6 ಶರ್ಟ್ ಕೊಡಿಸುವ ವ್ಯವಸ್ಥೆ ಮಾಡಿದರು. ಸಂಬಂಧಗಳು ಅಷ್ಟು ಚೆನ್ನಾಗಿರುತ್ತಿತ್ತು. ಚರ್ಚೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಜಗಳಗಳು ಆಗುತ್ತಿದ್ದರೂ, ನಂತರ ಬಹಳ ಅತ್ಮೀಯತೆಯಿಂದ ನಡೆದುಕೊಳ್ಳುತ್ತಿದ್ದರು. ಆದರೆ ಈಗ ಒಬ್ಬರ ಮುಖ ಒಬ್ಬರು ನೋಡದಿರುವಂತಹ ಸ್ಥಿತಿ ಇದೆ.

ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ 1981ರ ಮಾರ್ಚ್ ತಿಂಗಳಲ್ಲಿ ನಡೆದ ಅಧಿವೇಶನದಲ್ಲಿ ಮಾನ್ಯ ಎಸ್. ವೆಂಕಟರಾಮ್ ಎನ್ನುವವರು ಕಾರ್ಮಿಕರ ಸಮಸ್ಯೆ ಬಗ್ಗೆ ಸುಮಾರು ಮೂರುವರೆ ಗಂಟೆಗಳ ಕಾಲ ಮಾತನಾಡಿದರು. ಆಗ ಮಾನ್ಯ ರಾಜ್‌ಗೋಪಾಲ್, ಮಾನ್ಯ ಎ.ಕೆ.ಸುಬ್ಬಯ್ಯ ಇದ್ದರು. ಒಬ್ಬ ಮಂತ್ರಿಗಳು ಪಿಎಸ್‌ಐ ಸೆಲೆಕ್ಷನ್‌ಗೆಂದು ರೂ. 5 ಸಾವಿರ ತೆಗೆದುಕೊಂಡರು ಎನ್ನುವ ಕಾರಣಕ್ಕೆ ಅವರಿಂದ ರಾಜೀನಾಮೆ ಕೊಡಿಸಿದ್ದರು. ಮಾನ್ಯ ಪೆರುಮಾಳ್, ಮಾನ್ಯ ಚಂದ್ರೇಗೌಡರು ಈ ಮನೆಯ ಸದಸ್ಯರಾಗಿದ್ದರು. ಆಗೆಲ್ಲಾ ವಿಷಯಗಳ ಮೇಲೆ ಚರ್ಚೆ ಆಗುತ್ತಿತ್ತು. ಆವತ್ತಿನ ಶಾಸಕರ ಸಂಬಂಧಗಳು ಉತ್ತಮವಾಗಿತ್ತು. ಆದರೆ ಇವತ್ತು ಒಬ್ಬರ ಮುಖ ಒಬ್ಬರು ನೋಡುವುದಿಲ್ಲ, ಶಾಸಕರು ಒಟ್ಟಾಗಿ ಕುಳಿತು ಮಾತನಾಡುವ ಸ್ಥಿತಿಯಲ್ಲಿ ಇಲ್ಲ. ಹಿಂದಿನವರು ಹೇಗೆ ನಡೆದುಕೊಳ್ಳುತ್ತಿದ್ದರೋ ಅದನ್ನು ಸ್ವಲ್ಪವಾದರೂ ನಾವು ಈಗ ಅನುಸರಿಸಬೇಕು ಎನ್ನುವುದು ನನ್ನ ಕಾಳಜಿಯಾಗಿದೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಸುನೀಲ್‌ರವರು ನಿನ್ನೆ ಮಾತನಾಡುತ್ತಾ 'ನಮ್ಮದು ರಾಜಾಹುಲಿ ಸರ್ಕಾರ' ಎಂದು ಹೇಳಿದರು. ಟಗರು, ಹುಲಿ, ರಾಜಾಹುಲಿ, ಹೆಬ್ಬುಲಿ,

ಬಂಡೆ, ಹಳ್ಳಿಹಕ್ಕಿ, ಗೊಬ್ಬರ, ಡಿಚ್ಚಿ, ಹೋರಿ, ಗುಳ್ಳೇನರಿ ಇಂತಹ ಶಬ್ದಗಳನ್ನು ಬಳಸಿ ನಮ್ಮ ರಾಜಕಾರಣಿಗಳನ್ನು ಗುರುತಿಸುವ ಕೆಲಸಗಳನ್ನು ಮಾಧ್ಯಮದವರು ಮಾಡುತ್ತಾರೆ. ನಾವೂ ಕೂಡ ಅದೇರೀತಿ ಪದಪ್ರಯೋಗವನ್ನು ಮಾಡುತ್ತಿದ್ದೇವೆ. ರಾಜಾಹುಲಿ ಇವತ್ತು ಏನಾಗಿದ್ದಾರೆ? ರಾಜಾಹುಲಿ ಪಂಜರದ ಹುಲಿ ಆಗಿದ್ದಾರೆ. ನಿಮ್ಮ ಕೈಯಲ್ಲಿ ಸಿಕ್ಕಿ ವಿಲಿವಿಲಿ ಒದ್ದಾಡುತ್ತಿದ್ದಾರೆ. ಎಷ್ಟು ಜನರ ಒತ್ತಡವನ್ನು ಅವರು ತಡೆದುಕೊಳ್ಳಬೇಕು? ಒಂದು ಹುಲಿ ಕತೆಯನ್ನು ಹೇಳುತ್ತೇನೆ. ಒಂದು ಸಲ ಇಲಿ ಅಡವಿಗೆ ಹೋಗಿ, ತನ್ನ ತಮ್ಮ ಹುಲಿಯನ್ನು ಮದುವೆ ಮಾಡಿಕೊಳ್ಳಿ ಎಂದು ಒಬ್ಬರಿಗೆ ಮನವಿ ಮಾಡಿಕೊಂಡಿತು. ಆಗ ಅಲ್ಲಿದ್ದ ಆನೆ, 'ನೀನು ಇಲಿ, ಆದರೆ ನೀನು, ನಿನ್ನ ತಮ್ಮ ಹುಲಿ ಎಂದು ಹೇಳುತ್ತಿದ್ದಿಯೇ ಎಂದು ಕೇಳಿತು. ಆಗ ಅದು, ಮದುವೆ ಆಗುವುದಕ್ಕೆ ಮುಂಚೆ ನಾನು ಹಾಗೆಯೇ ಇದ್ದೆ, ಈಗ ಹೀಗಾಗಿದ್ದೇನೆ ಎಂದು ಹೇಳಿತಂತೆ. ಅದೇರೀತಿ ನಿಮ್ಮ ಕೈಯಲ್ಲಿ ಸಿಕ್ಕಿದ ಮೇಲೆ ರಾಜಾಹುಲಿ ಪಂಜರದ ಹುಲಿಯಾಗಿದೆ.

ಮಾನ್ಯ ಸಭಾಪತಿಯವರೇ, ಮುಖ್ಯ ಮಂತ್ರಿಗಳಿಗೆ, ಉಪಮುಖ್ಯಮಂತ್ರಿಗಳಿಗೆ ಅವರ ಸ್ಥಾನಮಾನಕ್ಕೆ ಗೌರವ ಕೊಡಬೇಕು. ಯಾರನ್ನೋ ಎಲ್ಲಿಗೆ ತೆಗೆದುಕೊಂಡು ಹೋಗಿ ಕೂರಿಸಿಬಿಟ್ಟರೆ ಸರಿಹೋಗುವುದಿಲ್ಲ. ನೈತಿಕತೆ ಇರಬೇಕು.

ಮಾನ್ಯ ಸುಧಾಕರ್‌ರವರು ವಿಧಾನಪರಿಷತ್ತಿನ ಸದಸ್ಯರನ್ನು ಆಯ್ಕೆ ಮಾಡುವುದರ ಬಗ್ಗೆ ಹೇಳಿದರು. ಈಗ ತಾವು ಪ್ರತಿಭಾವಂತರನ್ನೇ ಪರಿಷತ್ತಿಗೆ ಆಯ್ಕೆ ಮಾಡಿ ಕಳುಹಿಸುವ ಕೆಲಸ ಮಾಡಿ. ಆದರೆ ನೀವು ಈಗಾಗಲೇ 3 ಜನರನ್ನು ಎಂಎಲ್‌ಸಿ ಆಗಿ ಮಾಡಬೇಕೆಂದು ಸೀಟ್ ರಿಸರ್ವ್ ಮಾಡಿದ್ದೀರಿ. ಹಿಂದೆ ಮಾನ್ಯ ರಾಜ್ಯಪಾಲರಿಗೆ, ಮಾನ್ಯ ವಿ.ಸೋಮಣ್ಣನವರನ್ನು ವಿಧಾನಪರಿಷತ್ತಿನ ಸದಸ್ಯರನ್ನಾಗಿ ಮಾಡಬೇಕೆಂದು ಪ್ರಸ್ತಾವನೆ ಕಳುಹಿಸಿದಾಗ ಅವರು ತಿರಸ್ಕಾರ ಮಾಡಿದ್ದರು. ಈಗಲೂ ಬೇಕಾದರೆ ಹಾಗೆಯೇ ಮಾಡಲಿ. ಈಗ ರಾಜಭವನಗಳು ಕೂಡ ಕೆಟ್ಟು ಹೋಗಿವೆ.

ಇವತ್ತು ರಾಜ್ಯ ಸರ್ಕಾರ ಸುಮಾರು 120-121 ಶಾಸಕರನ್ನು ಇಟ್ಟುಕೊಂಡು ಸುಭದ್ರವಾಗಿದೆ. ಈಗ ನಿಮಗೆ ಯಾರ ಅವಶ್ಯಕತೆಯೂ ಇಲ್ಲ. ರಾಜ್ಯದ ಅಭಿವೃದ್ಧಿ ಕಡೆಗೆ ಹೆಚ್ಚಿನ ಗಮನ ಕೊಡಿ. ರಾಜ್ಯವು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ವಿದ್ಯಾವಂತ ಯುವ ಸಮುದಾಯಕ್ಕೆ ಉದ್ಯೋಗ ನೀಡುವ ಅವಶ್ಯಕತೆ ಇದೆ. ಸರ್ಕಾರಿ ಉದ್ಯೋಗಗಳಾದ ಎಸ್‌ಡಿ/ಎಫ್‌ಡಿ, ಪ್ರಾಧ್ಯಾಪಕರ ಹುದ್ದೆಗೆ ನೇಮಕಾತಿ, ಶಾಲಾ ಶಿಕ್ಷಕರ ನೇಮಕಾತಿಗಳು ತುರ್ತಾಗಿ ಪಾರದರ್ಶಕತೆಯಿಂದ ಆಗಬೇಕಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿ ನೇಮಕಾತಿಯನ್ನು ಆದಷ್ಟುಬೇಗ ಪೂರ್ಣಗೊಳಿಸಿ ನಿರುದ್ಯೋಗ ಸಮಸ್ಯೆಯನ್ನು ಸ್ವಲ್ಪವಾದರೂ ಕಡಿಮೆ ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ರೈತರ ಸಾಲ ಮನ್ನಾ ಸರಿಯಾಗಿ ಜಾರಿಗೊಳ್ಳಬೇಕು. ಇದು ಸರಿಯಾಗಿ ಜಾರಿಯಾಗುತ್ತಿಲ್ಲ. ರೈತರ ಬೆಳೆಗಳಿಗೆ ಒಳ್ಳೆಯ ಮಾರುಕಟ್ಟೆ ಒದಗಿಸುವ ಕೆಲಸ ಆಗಬೇಕು. ಕನ್ನಡನಾಡಿನಲ್ಲಿ ಕನ್ನಡದ ಅಸ್ತಿತ್ವ ಉಳಿಸಲು ಕನ್ನಡಿಗರಿಗೆ ಸರ್ಕಾರಿ ಮತ್ತು ಖಾಸಗಿ ಉದ್ಯೋಗಗಳಲ್ಲಿ ಹೆಚ್ಚು ಮೀಸಲಾತಿ ಸಿಗುವಂತೆ ಸರೋಜಿನಿ ಮಹಿಷಿ ವರದಿಯನ್ನು ಜಾರಿಗೆ ತರಬೇಕು. ಎಲ್ಲಾ ಬಗೆಯ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿಪಡಿಸಬೇಕು. ಇವೆಲ್ಲಾ ಜನಪರ ಕಾರ್ಯಕ್ರಮಗಳು ಆಗಬೇಕು ಎನ್ನುವ ಮನವಿಯನ್ನು ಮಾಡುತ್ತೇನೆ. ನೀವು ಸರ್ಕಾರ ಮಾಡುವುದಕ್ಕೆ ಎಷ್ಟೊಂದು ಕಷ್ಟಪಟ್ಟಿದ್ದೀರಿ, ಆದರೆ ಸರ್ಕಾರ ಆದಮೇಲೆ ಜನರಿಗೆ ಏನು ಮಾಡಿದಿರಿ? ಮಂತ್ರಿ ಸ್ಥಾನ ಕೊಟ್ಟಾಗ ಸುಮ್ಮನೆ ತೆಗೆದುಕೊಂಡು ಕುಳಿತುಕೊಳ್ಳಬೇಕು. ಆದರೆ, ಆ ಖಾತೆ ಬೇಡ, ಈ ಖಾತೆ ಬೇಡ, ಆ ರೂಮ್ ಬೇಡ, ಈ ರೂಮ್ ಬೇಡ ಎಂಬ ನಿಮ್ಮ ಕತೆಗಳನ್ನೇ ಕೇಳುವಂತಾಗಿದೆ. ಸರ್ಕಾರದಲ್ಲಿ ನೀವು ಮಂತ್ರಿಗಳಾಗಿ ಕೆಲಸ ಮಾಡುವುದಕ್ಕೆ ಬಂದಿದ್ದೀರೋ ಅಥವಾ ನಿಮ್ಮ ಸೌಲಭ್ಯಗಳನ್ನು ವಿಸ್ತರಣೆ ಮಾಡಿಕೊಳ್ಳುವುದಕ್ಕೆ ಬಂದಿದ್ದೀರೋ? ಯಾವ ರೂಮ್ ಕೊಡುತ್ತಾರೋ ಅಂತಹ ರೂಮ್ ತೆಗೆದುಕೊಂಡು ಕೆಲಸ ಮಾಡಿ. ತಮಗೆ ಯಾವ ಕಾರ್ ಕೊಡುತ್ತಾರೆ ಎಂದು ನೋಡುವುದಕ್ಕೂ ಹೋಗುತ್ತಾರೆ. ಅಳಿಯ ಹೊಸದಾಗಿ ಬೀಗರ ಮನೆಗೆ ಬರುವ ಹಾಗೆ ನಿಮ್ಮದಾಗುತ್ತಿದೆ. ಕೆಕೆ ಗೆಸ್ಟ್ ಹೌಸ್‌ನಲ್ಲಿ ಕಾರ್‌ಗಳನ್ನು ನೋಡುವುದು, ರೂಮ್‌ಗಳನ್ನು ನೋಡುವುದು ಇದೆಲ್ಲಾ ಎಲ್ಲಿಗೆ ಹೋಗುತ್ತಿದೆ. ಜನ ಏನೆನ್ನುತ್ತಾರೆ? ಇದರ ಬಗ್ಗೆ ನಿಮಗೆ ಏನೂ ಅನಿಸುವುದಿಲ್ಲವೇ?

**ಶ್ರೀ ಮರಿತಿಬ್ಬೇಗೌಡ:-** ‘ಅಳಿಯನ ಊಟಕ್ಕೆ ಮನೆಮಂದಿಯ ಕೋಳಿಯೆಲ್ಲಾ ತೀರಿ ಹೋಯಿತಂತೆ’ ಎಂದು ಹೇಳುವ ಹಾಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ನಾನು ನಿಮ್ಮನ್ನು ಟೀಕೆ ಮಾಡಬೇಕು ಎಂದು ಹೇಳುತ್ತಿಲ್ಲ. ವಿಧಾನ ಪರಿಷತ್ತು ಮಾದರಿ ಸದನವಾಗಿದೆ. ಹಿಂದೆ ಇಲ್ಲಿ ನಡೆದಿರುವಂತಹ ನಡವಳಿಗಳನ್ನು ಓದಿ. 113 ವರ್ಷಗಳ ಇತಿಹಾಸವನ್ನು ಈ ಮನೆ ಹೊಂದಿದೆ. ಬೇರೆ ಬೇರೆ ರಾಜ್ಯಗಳಲ್ಲಿ ವಿಧಾನಪರಿಷತ್ತುಗಳು ರದ್ದಾಗುತ್ತಿವೆ. ಆದರೆ ಕರ್ನಾಟಕದಲ್ಲಿ ಆ ಪ್ರಶ್ನೆ ಬರುವುದಿಲ್ಲ. ಏಕೆಂದರ ವಿಧಾನಪರಿಷತ್ತಿನ ಬಗ್ಗೆ ಜನ ಎಲ್ಲಾ ವಿಚಾರಗಳನ್ನು ತಿಳಿದುಕೊಂಡಿದ್ದಾರೆ. ಮಾನ್ಯ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರೇ, ಸರ್ಕಾರ ತಂದಿರುವ ರಾಜ್ಯಪಾಲರ ವಂದನಾ ನಿರ್ಣಯವನ್ನು ನಾನು ಸ್ವಾಗತ ಮಾಡುತ್ತೇನೆ. ರಾಜ್ಯಪಾಲರ ಬಾಯಲ್ಲಿ ಏನು ಹೇಳಿಸಿದ್ದೀರೋ ಅವುಗಳನ್ನು ಪ್ರಾಮಾಣಿಕವಾಗಿ ಕಾರ್ಯಗತ ಮಾಡುವ ಪ್ರಯತ್ನ ಮಾಡಬೇಕು. ಕರ್ನಾಟಕದಲ್ಲಿ ಕನ್ನಡಕ್ಕೆ ಎಲ್ಲಾ ಕ್ಷೇತ್ರಗಳಲ್ಲಿ ಪ್ರಾಶಸ್ತ್ಯ ಕೊಡುವ ಕೆಲಸ ಮಾಡಬೇಕು. ಚರ್ಚೆ ಮಾಡುವಾಗ ಟೀಕೆಗಳು ಏನು ಬರುತ್ತವೆಯೋ ಅವುಗಳನ್ನು ಸ್ವೀಕರಿಸಿ ಸರಿಪಡಿಸಿಕೊಳ್ಳುವ ಕೆಲಸ ಮಾಡಿದರೆ ಈ ಸದನ ಈ ರಾಜ್ಯಕ್ಕೆ ದೊಡ್ಡ ಕೊಡುಗೆ ಕೊಟ್ಟಂತೆ ಆಗುತ್ತದೆ, ಆ ನಿಟ್ಟಿನಲ್ಲಿ ನಾವೆಲ್ಲರೂ ಕೆಲಸ ಮಾಡೋಣ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಈಗ ಸದನವನ್ನು ದಿನಾಂಕ 2ನೇ ಮಾರ್ಚ್ 2020ರ ಬೆಳಿಗ್ಗೆ 11 ಗಂಟೆಯ ತನಕ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 6 ಗಂಟೆ 29 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 2ನೇ ಮಾರ್ಚ್ ಮಾಹೆ 2020ರ ಸೋಮವಾರ ಬೆಳಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)**

~~~~~~

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~